₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಮಂಗಳವಾರ 07.01.2025 ಸಂಪುಟ: 67 ಸಂಚಿಕೆ: 242 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ಒಂದು ಕ್ಷಣದಲ್ಲಿ ಜೀವನವೇನೂ ಬದಲಾಗುವುದಿಲ್ಲ. ಆದರೆ ಒಂದು ಕ್ಷಣದಲ್ಲಿ ತೆಗೆದುಕೊಂಡ ಒಂದು ನಿರ್ಧಾರದಿಂದ ಇಡೀ ಜೀವನ ಬದಲಾಗಬಹುದು. ಆದ್ದರಿಂದ ಯಾವತ್ತೂ ನಾವು ತೆಗೆದುಕೊಳ್ಳುವ ನಿರ್ಧಾರದ ಸಾಧಕ-ಬಾಧಕಗಳ ಬಗ್ಗೆ ಜಾಗರೂಕರಾಗಿರಬೇಕು.

ವಕ್ರತುಂಡೋಕ್ತಿ

ಗಂಡ-ಹೆಂಡತಿ ಮಧ್ಯೆ ಹೊಂದಾಣಿಕೆ ಇರಬೇಕು. ಗಂಡನದೇ ತಪ್ಪು ಎಂದು ಹೆಂಡತಿ ಹೇಳಿದಾಗ, ಆತ ಅದನ್ನು ಸಮ್ಮತಿಸಬೇಕು.

ಪುಟ ತೆರೆದಂತೆ...

ದರ ಏರಿಕೆಯೆಂಬ ಎರಡು ಅಲಗಿನ ಕತ್ತಿ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ಇಲ್ಲ ಎನ್ನುವ ಕಲೆಯನ್ನು ಕಲಿಯಬೇಕು!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಮ | 7

ಕರ್ನಾಟಕದ ಇಬ್ಬರು ಮಕ್ಕಳು ಸೇರಿ ದೇಶದಲ್ಲಿ ನಾಲ್ವರಿಗೆ ಎಚ್‌ಎಂಪಿ ಸೋಂಕು

ರಾಜ್ಯಾದ್ಯಂತ ನಿಗಾವಹಿಸಲು ಸೂಚನೆ, ವಿದೇಶದಿಂದ ಬರುವವರ ಮೇಲೆ ಕಣ್ಣು

ಮತ್ತೆ ಮುಖಕ್ಕೆ ಮಾಸ್ಕ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರೋನಾದ ಕರಾಳತೆಗೆ ಝರ್ಝರಿತವಾಗಿದ್ದ ವಿಶ್ವಕ್ಕೆ ಮತ್ತೆ ಚೀನಾ ವೈರಸ್ ಕಾಟ ಜೋರಾಗಿದ್ದು, ಕರ್ನಾಟಕದಲ್ಲಿ ಎರಡು, ಗುಜರಾತ್, ಪ.ಬಂಗಾಳದಲ್ಲಿ ತಲಾ 1 ಪ್ರಕರಣ ಸೇರಿದಂತೆ ದೇಶದಲ್ಲಿ ಒಟ್ಟು ನಾಲ್ಕು ಪ್ರಕರಣಗಳು ದಾಖಲಾಗಿರುವುದು ಭಾರಿ ಆತಂಕಕ್ಕೆ ಕಾರಣವಾಗಿದೆ.

ಕರ್ನಾಟಕದಲ್ಲಿ ಇಬ್ಬರು ಮಕ್ಕಳಲ್ಲಿ ಸೋಂಕಿರುವುದು ಪತ್ತೆಯಾಗುತ್ತಿದ್ದಂತೆ ಸೋಮವಾರ ಆರೋಗ್ಯ ಇಲಾಖೆ ತುರ್ತು ಸಭೆ ನಡೆಸಿ ಯಾವ ರೀತಿಯಲ್ಲಿ ಕ್ರಮ ವಹಿಸಬೇಕು ಎನ್ನುವ ಬಗ್ಗೆ ಚರ್ಚೆ ನಡೆಸಿದೆ. ಇದರೊಂದಿಗೆ ಮಾರ್ಗಸೂಚಿ ಬಿಡುಗಡೆಗೊಳಿಸಿರುವ ಆರೋಗ್ಯ ಇಲಾಖೆ, ಮಾಸ್ಕ್, ಸ್ಯಾನಿಟೈಸರ್ ಬಳಕೆಗೆ ಸಲಹೆ ನೀಡಿದೆ. ಮಾಸ್ಕ್ ಧಾರಣೆ ಸದ್ಯಕ್ಕೆ ಕಡ್ಡಾಯಗೊಳಿಸದಿದ್ದರೂ, ಮುಂದಿನ ದಿನಗಳಲ್ಲಿ ವಿಕೋಪಕ್ಕೆ ಹೋದರೆ ಕಡ್ಡಾಯಗೊಳಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಹೊಸ ವೈರಸ್ ಅಲ್ಲ, ಆತಂಕ ಬೇಡ: ಸಭೆಯ ಬಳಿಕ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ರಾಜ್ಯದಲ್ಲಿ ಹ್ಯೂಮನ್ ಮೆಟಾನ್ಯುಮೊ ವೈರಸ್ (ಎಚ್‌ಎಂಪಿವಿ) ಇಬ್ಬರು ಮಕ್ಕಳಲ್ಲಿ ಪತ್ತೆಯಾಗಿದೆ. ಆದರೆ ಇದು ಹೊಸ ವೈರಸ್ ಅಲ್ಲ. ಇದರಿಂದ ಯಾವುದೇ ಪ್ರಾಣಾಪಾಯವಿಲ್ಲ. ಹಾಗಾಗಿ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಎಚ್‌ಎಂಪಿವಿ ಕುರಿತಾಗಿ ಸದ್ಯ ಕೇಂದ್ರದಿಂದಲೂ ಕ್ರಮ ಕೈಗೊಳ್ಳುವ ಬಗ್ಗೆ ಯಾವುದೇ ಸೂಚನೆಗಳಿಲ್ಲ. ಆದರೆ ರಾಜ್ಯ ಸರಕಾರ ಈ ವಿಚಾರವಾಗಿ ಕೇಂದ್ರ ಸರಕಾರದೊಂದಿಗೆ ಸಂಪರ್ಕದಲ್ಲಿದ್ದು, ಐಸಿಎಂಆರ್ ಸೂಚನೆಗಳನ್ನು ಅನುಸರಿಸಲಾಗುವುದು. ಇದು ದೇಶದಲ್ಲಿ ಪ್ರಥಮ ಪ್ರಕರಣ ಎಂದು ಹೇಳುವುದು ಸರಿಯಲ್ಲ. 2001ರಲ್ಲಿ ನೆದರ್‌ಲ್ಯಾಂಡ್‌ನಲ್ಲಿ ಮೊದಲಿಗೆ ಪತ್ತೆಯಾದ ಎಚ್‌ಎಂಪಿ ವೈರಸ್ ಭಾರತ ಸೇರಿ ಎಲ್ಲೆಡೆ ಇದೆ. ಇದರಿಂದ ಯಾವುದೇ ಅಪಾಯ ಇಲ್ಲ. ಹಾಗಾಗಿ ಇದಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಯಾವುದೇ ಕಠಿಣ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿಲ್ಲ. ಇದು ಮಾರಣಾಂತಿಕ ವೈರಸ್ ಅಲ್ಲ. ಹಾಗಾಗಿ ವೈರಾಣು ಕುರಿತು ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ. ಬದಲಿಗೆ ನೆಗಡಿ, ಕೆಮ್ಮು, ಉಸಿರಾಟದ ತೊಂದರೆ ಸೇರಿ ಶೀತ ಸಂಬಂಧಿ ಸಮಸ್ಯೆ ಇರುವವರು, ಮಕ್ಕಳು ಹಾಗೂ ಹಿರಿಯ ನಾಗರಿಕರ ಬಗ್ಗೆ ಎಚ್ಚರ ವಹಿಸಬೇಕು ಎಂದು ಸಲಹೆ ನೀಡಿದರು.

ಸಾಮಾನ್ಯವಾಗಿ ಐಎಲ್‌ಐ ಪ್ರಕರಣಗಳಲ್ಲಿ ಶೇ.1ರಷ್ಟು ಎಚ್‌ಎಂಪಿವಿ ಕಂಡು ಬರುತ್ತದೆ. ಇಂಥಹುದೇ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಮಕ್ಕಳನ್ನು ಹೆಚ್ಚಿನ ಪರೀಕ್ಷೆಗೆ ಒಳಪಡಿಸಿದಾಗ ಎಚ್‌ಎಂಪಿ ವೈರಾಣು ಪತ್ತೆಯಾಗಿದೆ. ಇಬ್ಬರು ಮಕ್ಕಳಲ್ಲಿ ಮೂರು ತಿಂಗಳ ಮಗು ಸಂಪೂರ್ಣ ಗುಣಮುಖವಾಗಿ ಡಿಸೆಂಬರ್‌ನಲ್ಲಿ ಆಸ್ಪತ್ರೆಯಿಂದ ಬಿಡುಗಡೆಯಾಗಿದೆ. ಎಂಟು ತಿಂಗಳ ಮಗು ಬಹುತೇಕ ಗುಣ ಹೊಂದಿದ್ದು, ಒಂದೆರಡು ದಿನಗಳಲ್ಲಿ ಆಸ್ಪತ್ರೆಯಿಂದ ಮನೆಗೆ ತೆರಳಲಿದೆ. ಹಾಗಾಗಿ ಹೆಚ್ಚಿನ ಪರೀಕ್ಷೆ ನಡೆಸುವ ಅಗತ್ಯವಿಲ್ಲ ಎಂದು ಹೇಳಿದರು.

ರೋಗ ಲಕ್ಷಣಗಳೇನು?

- ಜ್ವರ, ಕೆಮ್ಮು, ಮೂಗು ಕಟ್ಟುವಿಕೆ, ಉಸಿರಾಟದ ತೊಂದರೆ
- ಬ್ರಾಂಕೈಟಿಸ್ ಅಥವಾ ನ್ಯುಮೋನಿಯಾದಂತಹ ಸಮಸ್ಯೆ
- ಸೋಂಕಿನ ತೀವ್ರತೆ 2ರಿಂದ 6 ದಿನಗಳವರೆಗೆ ಇರುತ್ತದೆ.
- ಸೋಂಕಿಗೆ ಒಳಗಾದವರಲ್ಲಿ 3-6 ದಿನಗಳ ಬಳಿಕ ಈ ವೈರಸ್‌ನ ರೋಗಲಕ್ಷಣಗಳು ಕಂಡುಬರುತ್ತವೆ.

ಮಾರ್ಗಸೂಚಿಯಲ್ಲಿ ಏನಿದೆ?

ಏನು ಮಾಡಬೇಕು?

- ಮಾಸ್ಕ್ ಧರಿಸಿ, ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರ ಅಥವಾ ಟಿಶ್ಯೂ ಪೇಪರ್ ಬಳಕೆ ಮಾಡಿ
- ಪದೇ ಪದೆ ಕೈಯನ್ನು ಸೋಪ್‌ನಿಂದ ಅಥವಾ ಆಲ್ಕೋಹಾಲ್ ಸ್ಯಾನಿಟೈಸರ್‌ನಿಂದ ತೊಳೆಯಿರಿ
- ನಿಮಗೆ ಜ್ವರ, ಕೆಮ್ಮು ಮತ್ತು ಸೀನುವಿಕೆ ಇದ್ದರೆ ಜನನಿಬಿಡ ಪ್ರದೇಶದಿಂದ ದೂರವಿರಿ
- ನಿಮಗೆ ಹುಷಾರಿಲ್ಲದಿದ್ದರೆ ಮನೆಯಲ್ಲಿ ಇರಿ ಮತ್ತು ಇತರರೊಂದಿಗೆ ಸೀಮಿತ ಸಂಪರ್ಕ ಸಾಧಿಸಿ
- ಸಾಧ್ಯವಾದಷ್ಟು ನೀರು ಮತ್ತು ಪೋಷಕಾಂಶಯುಕ್ತ ಆಹಾರ ಸೇವಿಸಿ

ಇದನ್ನು ಮಾಡಬೇಡಿ

- ಒಮ್ಮೆ ಬಳಸಿದ ಕರವಸ್ತ್ರ ಮತ್ತು ಟಿಶ್ಯೂ ಮರುಬಳಕೆ ಬೇಡ
- ಅನಾರೋಗ್ಯಕ್ಕೆ ಒಳಗಾದ ನಿಮ್ಮ ಹತ್ತಿರದವರ ಟವೆಲ್ ಸೇರಿದಂತೆ ಇತರೆ ವಸ್ತುಗಳ ಬಳಕೆ ಬೇಡ
- ಪದೇ ಪದೆ ಕಣ್ಣು, ಮೂಗು ಮತ್ತು ಬಾಯಿ ಮುಟ್ಟಿಕೊಳ್ಳಬೇಡಿ
- ಸಾರ್ವಜನಿಕ ಸ್ಥಳದಲ್ಲಿ ಉಗಿಯಬೇಡಿ
- ವೈದ್ಯರ ಸಂಪರ್ಕಕ್ಕೆ ಒಳಗಾಗದೇ ಸ್ವಯಂ ಚಿಕಿತ್ಸೆ ಬೇಡ

ರಾಜ್ಯದಲ್ಲಿ ಇಬ್ಬರು ಸೋಂಕಿತರು ಪತ್ತೆ

ಕರ್ನಾಟಕದಲ್ಲಿ ಎರಡು ಎಚ್‌ಎಂಪಿವಿ ಸೋಂಕಿತ ಪ್ರಕರಣಗಳು ಪತ್ತೆಯಾಗಿರುವುದಾಗಿ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ(ಐಸಿಎಂಆರ್) ತಿಳಿಸಿದೆ. ದೇಶಾದ್ಯಂತ ಉಸಿರಾಟದ ಕಾಯಿಲೆಗಳ ಮೇಲ್ವಿಚಾರಣೆಯನ್ನು ಐಸಿಎಂಆರ್‌ನಲ್ಲಿ ನಿರಂತರವಾಗಿ ನಡೆಸಲಾಗುತ್ತಿದ್ದು, ಈ ಮೂಲಕ ಎರಡೂ ಪ್ರಕರಣಗಳನ್ನು ಗುರುತಿಸಲಾಗಿದೆ. ಬೆಂಗಳೂರಿನಲ್ಲಿ ಪತ್ತೆಯಾದ ಮೊದಲ ಪ್ರಕರಣದಲ್ಲಿ, ಎಚ್‌ಎಂಪಿವಿ ಸೋಂಕು ಇರುವ ಹಿನ್ನೆಲೆಯಲ್ಲಿ ನಗರದ ಆಸ್ಪತ್ರೆಗೆ 3 ತಿಂಗಳ ಹೆಣ್ಣು ಶಿಶುವನ್ನು ದಾಖಲಿಸಲಾಗಿತ್ತು. ಮಗುವಿಗೆ ಬ್ರಾಂಕೋಪ್‌ನ ನ್ಯುಮೋನಿಯಾ ಕಂಡುಬಂದಿತ್ತು. ಬಳಿಕ ಚೇತರಿಸಿಕೊಂಡಿದ್ದು ಡಿಸ್ಚಾರ್ಜ್ ಮಾಡಲಾಗಿದೆ. ಎರಡನೇ ಪ್ರಕರಣದಲ್ಲಿ ಜನವರಿ 3ರಂದು 8 ತಿಂಗಳ ಗಂಡು ಶಿಶುವಿನಲ್ಲಿ ಎಚ್‌ಎಂಪಿವಿ ಪಾಸಿಟಿವ್ ವರದಿಯಾಗಿತ್ತು. ಈ ಮಗು ಕೂಡ ಬ್ರಾಂಕೋಪ್‌ನ ನ್ಯುಮೋನಿಯಾನಿಂದ ಖಾಸಗಿ ಆಸ್ಪತ್ರೆಗೆ ದಾಖಲಾಗಿತ್ತು. ಸದ್ಯ ಮಗು ಚೇತರಿಸಿಕೊಳ್ಳುತ್ತಿದೆ. ಎರಡೂ ಶಿಶುಗಳೂ ಕೂಡ ಯಾವುದೇ ಅಂತಾರಾಷ್ಟ್ರೀಯ ಟ್ರಾವೆಲ್ ಹಿಸ್ಟರಿಯನ್ನು ಹೊಂದಿಲ್ಲ ಎಂದು ಐಸಿಎಂಆರ್ ಪ್ರಕಟಣೆ ತಿಳಿಸಿದೆ.

ಗುಜರಾತ್, ಪಶ್ಚಿಮ ಬಂಗಾಳದಲ್ಲಿ ತಲಾ ಒಂದು ಪ್ರಕರಣ: ಗುಜರಾತ್‌ನಲ್ಲಿ 2 ವರ್ಷದ ಮಗು ಮತ್ತು ಪಶ್ಚಿಮ ಬಂಗಾಳದಲ್ಲಿ ಒಬ್ಬರಿಗೆ ಹ್ಯೂಮನ್ ಮೆಟಾಪಿನ್ಯೂಮೊ(ಎಚ್‌ಎಂಪಿ) ವೈರಸ್ ಪ್ರಕರಣ ಪತ್ತೆಯಾಗಿದೆ.

ಏನಿದು ಎಚ್‌ಎಂಪಿ ವೈರಸ್?

ಹ್ಯೂಮನ್ ಮೆಟಾನ್ಯೂಮೋ ಎಂಬುದು ಉಸಿರಾಟಕ್ಕೆ ಸಂಬಂಧಿಸಿದ ವೈರಸ್. ಹೆಚ್ಚಿನ ಜನರಲ್ಲಿ ಕಡಿಮೆ ತೀವ್ರತೆಯ ರೋಗಲಕ್ಷಣಗಳು ಕಂಡುಬರುತ್ತವೆ. ಅಲ್ಲದೆ ಮಕ್ಕಳು, ವೃದ್ಧರು ಮತ್ತು ರೋಗನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಬ್ರಾಂಕೈಟಿಸ್ ಮತ್ತು ನ್ಯುಮೋನಿಯಾದಂತಹ ತೀವ್ರ ಲಕ್ಷಣಗಳು ಕಾಣಿಸುತ್ತವೆ.

ಕುಸಿದ ಸೆನ್ಸೆಕ್ಸ್, ನಿಫ್ಟಿ

ಮುಂಬೈ: ಬೆಂಗಳೂರಿನ ಇಬ್ಬರು ಮಕ್ಕಳಲ್ಲಿ ಎಚ್‌ಎಂಪಿವಿ ವೈರಸ್ ಪತ್ತೆಯಾಗಿದೆ ಎಂಬ ವಿಚಾರ ಷೇರು ಮಾರುಕಟ್ಟೆಗಳಲ್ಲಿಯೂ ತಲ್ಲಣಕ್ಕೆ ಕಾರಣವಾಗಿದೆ. ಪರಿಣಾಮವಾಗಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1100 ಅಂಕಗಳಿಗಿಂತ ಹೆಚ್ಚು ಕುಸಿದರೆ, ನಿಫ್ಟಿ ಶೇ.1 ಕ್ಕಿಂತ ಹೆಚ್ಚು ಕುಸಿತವನ್ನು ದಾಖಲಿಸಿತು. ಮಧ್ಯಾಹ್ನ 12.30 ರ ವೇಳೆಗೆ ಸೆನ್ಸೆಕ್ಸ್ 1,100 ಅಂಕ ಕುಸಿದು 78,065 ಕ್ಕೆ ಇಳಿಕೆಯಾಯಿತು. ನಿಫ್ಟಿ 23,600 ಅಂಕಗಳಿಗೆ ಕುಸಿಯಿತು. ಲೋಹಗಳು, ಸರಕಾರಿ ಸ್ವಾಮ್ಯದ ಬ್ಯಾಂಕ್‌ಗಳು, ರಿಯಲ್ ಎಸ್ಟೇಟ್, ತೈಲ ಮತ್ತು ಅನಿಲ, ಹಣಕಾಸು ಸಂಸ್ಥೆಗಳ ಷೇರುಗಳು ನಕಾರಾತ್ಮಕ ವಹಿವಾಟು ದಾಖಲಿಸಿದವು.

ಚೀನಾದಲ್ಲಿ ಎಚ್‌ಎಂಪಿ ವೈರಸ್ ಕಾಣಿಸಿಕೊಂಡಿದ್ದು, ಕರ್ನಾಟಕದಲ್ಲಿ ಈ ವೈರಸ್ ಪತ್ತೆಯಾಗಿರುವ ಮಾಹಿತಿ ದೊರೆತಿದೆ. ಆದ್ದರಿಂದ ಈ ವೈರಸ್ ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಆರೋಗ್ಯ ಇಲಾಖೆಗೆ ಸೂಚನೆ ನೀಡಲಾಗಿದೆ. ಆರೋಗ್ಯ ಸಚಿವರು ಈಗಾಗಲೇ ಸಭೆ ನಡೆಸಿದ್ದಾರೆ. ವೈರಸ್ ತಡೆಗೆ ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗಳು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಿದೆ.

- ಸಿದ್ದರಾಮಯ್ಯ ಮುಖ್ಯಮಂತ್ರಿ

2001ರಲ್ಲಿ ನೆದರ್‌ಲ್ಯಾಂಡ್‌ನಲ್ಲಿ ಮೊದಲಿಗೆ ಪತ್ತೆಯಾದ ಎಚ್‌ಎಂಪಿ ವೈರಸ್ ಭಾರತ ಸೇರಿ ಎಲ್ಲೆಡೆ ಇದೆ. ಇದರಿಂದ ಯಾವುದೇ ಅಪಾಯ ಇಲ್ಲ. ಹಾಗಾಗಿ ಇದಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಯಾವುದೇ ಕಠಿಣ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿಲ್ಲ. ಇದು ಮಾರಣಾಂತಿಕ ವೈರಸ್ ಅಲ್ಲ. ಹಾಗಾಗಿ ವೈರಾಣು ಕುರಿತು ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ.

- ದಿನೇಶ್ ಗುಂಡೂರಾವ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ

ಎಚ್‌ಎಂಪಿವಿ ಹೊಸ ವೈರಸ್ ಅಲ್ಲ ಎಂದು ಆರೋಗ್ಯ ತಜ್ಞರು ಸ್ಪಷ್ಟಪಡಿಸಿದ್ದಾರೆ. ಚಳಿಗಾಲದಲ್ಲಿ ಮತ್ತು ವಸಂತಕಾಲದ ಆರಂಭದಲ್ಲಿ ಈ ವೈರಸ್ ಹೆಚ್ಚು ಹರಡುತ್ತದೆ. ಪರಿಸ್ಥಿತಿ ಅವಲೋಕಿಸಲು ಸಭೆ ನಡೆಸಲಾಗಿದೆ. ಭಾರತದ ಆರೋಗ್ಯ ಮತ್ತು ಕಣ್ಗಾವಲು ಜಾಲ ಜಾಗರೂಕವಾಗಿದೆ ಮತ್ತು ಯಾವುದೇ ತುರ್ತು ಪರಿಸ್ಥಿತಿಗೆ ಸ್ಪಂದಿಸಲು ಸಿದ್ಧವಾಗಿದೆ.

- ಜೆ.ಪಿ.ನಡ್ಡಾ ಕೇಂದ್ರ ಆರೋಗ್ಯ ಸಚಿವ

ಡಿ ಗ್ಯಾಂಗ್ ವಿರುದ್ಧ ಸುಪ್ರೀಂಗೆ ಅಪೀಲು

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್, ಪವಿತ್ರಾ ಗೌಡ ಸೇರಿ ಇತರೆ ಆರೋಪಿಗಳಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ಪೊಲೀಸರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ.

ಹಿರಿಯ ವಕೀಲ ಅನಿಲ್ ನಿಶಾನಿ ಅವರು ಅರ್ಜಿ ಸಲ್ಲಿಸಿದ್ದು, ವಿಚಾರಣೆ ದಿನಾಂಕ ಇನ್ನೂ ನಿಗದಿಯಾಗಿಲ್ಲ ಎಂದು ತಿಳಿದುಬಂದಿದೆ. ಕೆಳ ಹಂತದ ನ್ಯಾಯಾಲಯ ನೀಡಿರುವ ಜಾಮೀನು ಅರ್ಜಿಯನ್ನು ಸುಪ್ರಿಂ ರದ್ದುಗೊಳಿಸಿದರೆ ಆರೋಪಿಗಳನ್ನು ಮತ್ತೆ ಬಂಧಿಸಬಹುದಾಗಿದೆ.

ನಕ್ಸಲರ ಅಟ್ಟಹಾಸ: 10 ಯೋಧರು ಹುತಾತ್ಮ

ರಾಯ್‌ಪುರ: ಛತ್ತೀಸಗಢದಲ್ಲಿ ನಕ್ಸಲರು ಸೋಮವಾರ ಅಟ್ಟಹಾಸ ಮೆರೆದಿದ್ದಾರೆ. ಬಿಜಾಪುರ ಜಿಲ್ಲೆಯ ಬೆದ್ರೆ-ಕುತ್ರು ರಸ್ತೆಯಲ್ಲಿ ಭದ್ರತಾ ಸಿಬ್ಬಂದಿ ಹೋಗುತ್ತಿದ್ದ ವಾಹನವನ್ನು ಸುಧಾರಿತ ಸ್ಫೋಟಕ ಸಾಧನಗಳನ್ನು ಬಳಸಿ ಸ್ಫೋಟಿಸಿದ್ದಾರೆ. ದಾಂತೇವಾಡ ಡಿಆರ್‌ಜಿಯ 9 ಯೋಧರು ಹಾಗೂ ಒಬ್ಬ ಚಾಲಕ ಹುತಾತ್ಮರಾಗಿದ್ದಾರೆ. ಭದ್ರತಾ ಸಿಬ್ಬಂದಿ ದಾಂತೇವಾಡ, ನಾರಾಯಣಪುರ ಹಾಗೂ ಬಿಜಾಪುರದಲ್ಲಿ ಜಂಟಿ ಕಾರ್ಯಾಚರಣೆ ಮುಗಿಸಿ ವಾಪಸ್ ಆಗುತ್ತಿದ್ದ ವೇಳೆ ಘಟನೆ ಸಂಭವಿಸಿದೆ.

ದೇಶದಲ್ಲಿ ಸದ್ಯವೇ ಬುಲೆಟ್ ರೈಲು

ದೆಹಲಿ: ಕಳೆದ ದಶಕದಲ್ಲಿ ರೈಲ್ವೆ ಕ್ಷೇತ್ರದಲ್ಲಿ ಭಾರಿ ಬದಲಾವಣೆಗಳಾಗಿದ್ದು, ಇದು ಐತಿಹಾಸಿಕ ಪರಿವರ್ತನೆಯಾಗಿದೆ.

ಭಾರತದಲ್ಲಿ ಬುಲೆಟ್ ರೈಲು ಸಂಚರಿಸುವ ಸಮಯ ದೂರ ಉಳಿದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಭರವಸೆ ನೀಡಿದ್ದಾರೆ. ಜಮ್ಮು ಸೇರಿದಂತೆ ದೇಶದ ವಿವಿಧ ರೈಲು ಯೋಜನೆಗಳಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿ, ಮಾತನಾಡಿದ ಅವರು, ದೇಶದಲ್ಲಿ ಮೂಲಸೌಕರ್ಯಗಳನ್ನು ಆಧುನೀಕರಣಗೊಳಿಸುವ ಮೂಲಕ ಭಾರತದ ಉದ್ದಗಲಕ್ಕೂ ಸಂಪರ್ಕ ವ್ಯವಸ್ಥೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸಿ, ಆ ಮೂಲಕ ಉದ್ಯೋಗವಕಾಶಗಳನ್ನು ಸೃಷ್ಟಿಸುವ ನಿಟ್ಟಿನಲ್ಲಿ ಸರಕಾರ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಗೃಹಲಕ್ಷ್ಮಿ ಮಾದರಿಯಲ್ಲಿ 'ಪ್ಯಾರಿ ದೀದಿ ಯೋಜನೆ' ದೆಹಲಿ ಚುನಾವಣೆಗೆ ಕಾಂಗ್ರೆಸ್ ಗ್ಯಾರಂಟಿ ಭರವಸೆ
ಸುದ್ದಿ

ಮುಂಡಗಾರು ಲತಾ ಸೇರಿ 6 ಮಂದಿ ನಾಳೆ ಶರಣಾಗತಿ

ನಕ್ಸಲರ ಶರಣಾಗತಿಗೆ ಡೇಟ್ ಫಿಕ್ಸ್

ಚಿಕ್ಕಮಗಳೂರು: ಕಾಡಿನಲ್ಲಿ ಉಳಿದಿರುವ ನಕ್ಸಲರನ್ನು ಮರಳಿ ಮುಖ್ಯವಾಹಿನಿಗೆ ತರುವ ಪ್ರಕ್ರಿಯೆ ಆರಂಭವಾಗಿದ್ದು, ಮುಂಡಗಾರು ಲತಾ ಸೇರಿ ಆರು ಜನ ಜನವರಿ 8ರಂದು ಮುಖ್ಯವಾಹಿನಿಗೆ ಬರಲಿದ್ದಾರೆ.

ಮುಂಡಗಾರು ಲತಾ, ಸುಂದರಿ ಕುಲ್ಲೂರು, ವನಜಾಕ್ಷಿ ಬಾಳೆಹೊಳೆ, ಮಾರೆಪ್ಪ ಅರೋಲಿ, ಕೆ.ವಸಂತ, ಟಿ.ಎನ್. ಜೀಶ್ ಮುಖ್ಯ ವಾಹಿನಿಗೆ ಬರಲು ಒಪ್ಪಿದ್ದಾರೆ.

ಮುಖ್ಯವಾಹಿನಿಗೆ ಬರುವ ಪ್ರಕ್ರಿಯೆಗಳು ಘನತೆಯುತವಾಗಿ ನಡೆಯಬೇಕು. ಅವರ ಆತ್ಮಗೌರವಕ್ಕೆ ಧಕ್ಕೆಯಾಗಬಾರದು. ಹೋರಾಟದ ಮಾರ್ಗ ಬದಲಿಸಿ ಪ್ರಜಾತಾಂತ್ರಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳಲು ತಡೆಯಾಗಬಾರದು ಎಂಬ ಮನವಿಯನ್ನು ಸರಕಾರವೂ ಒಪ್ಪಿದೆ.

ಎಲ್ಲ ಮೊಕದ್ದಮೆಗಳನ್ನು ವಿಶೇಷ ನ್ಯಾಯಾಲಯದಲ್ಲಿ ಇತ್ಯರ್ಥಪಡಿಸಲು ಸಹಕಾರ ನೀಡಲಾಗುವುದು. ಪ್ರವರ್ಗ-ಎ ವರ್ಗಕ್ಕೆ ಸೇರಿದವರಿಗೆ ₹7.50 ಲಕ್ಷ, ಪ್ರವರ್ಗ-ಬಿ ವರ್ಗಕ್ಕೆ ₹4 ಲಕ್ಷ ಆರ್ಥಿಕ ನೆರವನ್ನು ಮೂರು ಹಂತಗಳಲ್ಲಿ ನೀಡಲಾಗುವುದು. ಕೌಶಲ ತರಬೇತಿ ನೀಡಲಾಗುವುದು. ಕೇರಳ, ಕರ್ನಾಟಕ, ತಮಿಳುನಾಡು ಸೇರಿ ಎಲ್ಲ ಸರಕಾರಗಳೂ ನಕ್ಸಲರ ಬಗ್ಗೆ ಅನುಕಂಪದಿಂದಲೇ ವರ್ತಿಸುತ್ತವೆ ಎಂಬ ಭರವಸೆಯನ್ನು ಸರಕಾರ ನೀಡಿದೆ.

ಮುಖ್ಯವಾಹಿನಿಗೆ ಬರುವವರು ಯಾರ‍್ಯಾರು?

- ಮುಂಡಗಾರು ಲತಾ
- ಸುಂದರಿ ಕುತ್ಲೂರು
- ವನಜಾಕ್ಷಿ ಬಾಳೆಹೊಳೆ
- ಮಾರೆಪ್ಪ ಅರೋಲಿ
- ಕೆ.ವಸಂತ
- ಟಿ.ಎನ್.ಜೀಶ್

ರಿಮ್ಸ್‌ನಲ್ಲಿ ಮತ್ತೊಬ್ಬ ಬಾಣಂತಿ ಸಾವು

ರಾಯಚೂರು: ಜಿಲ್ಲೆಯಲ್ಲಿ ಬಾಣಂತಿಯರ ಸರಣಿ ಸಾವು ಮುಂದುವರಿದಿದ್ದು, ನಗರದ ರಿಮ್ಸ್ ಆಸ್ಪತ್ರೆಯಲ್ಲಿ ಮತ್ತೊಬ್ಬ ಬಾಣಂತಿ ಮೃತಪಟ್ಟಿದ್ದಾರೆ.

ದೇವದುರ್ಗ ತಾಲೂಕಿನ ಹದ್ದಿನಾಳ ಗ್ರಾಮದ ಸರಸ್ವತಿ (24) ಸಾವಿಗೀಡಾಗಿದ್ದಾರೆ. ಜನವರಿ 2ರಂದು ರಿಮ್ಸ್ ಆಸ್ಪತ್ರೆಯಲ್ಲಿ ಸಿಸೇರಿಯನ್ ಮೂಲಕ ಹೆರಿಗೆ ಮಾಡಿಸಲಾಗಿತ್ತು. ಅಧಿಕ ರಕ್ತದೊತ್ತಡ ಸಮಸ್ಯೆಯಿಂದ ಭಾನುವಾರ ಮೃತಪಟ್ಟಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಮೂರು ತಿಂಗಳಲ್ಲಿ ಮೃತಪಟ್ಟ ಬಾಣಂತಿಯರ ಸಂಖ್ಯೆ 13ಕ್ಕೆ ಏರಿಕೆಯಾಗಿದೆ. ರಿಮ್ಸ್ ಆಸ್ಪತ್ರೆಯಲ್ಲಿ ಮೂರು ತಿಂಗಳಲ್ಲಿ ಐವರು ಬಾಣಂತಿಯರು ಮೃತಪಟ್ಟಿದ್ದಾರೆ.

ಇಸ್ರೋ ಡಾಕಿಂಗ್ ಯೋಜನೆ ಮುಂದಕ್ಕೆ

ಬೆಂಗಳೂರು: ಇಸ್ರೋದ ಮಹಾತ್ವಾಕಾಂಕ್ಷೆಯ ಸ್ಪೇಸ್ ಡಾಕಿಂಗ್ ಮಿಷನ್‌ನ ಡಾಕಿಂಗ್ ಪ್ರಯೋಗವನ್ನು ಜನವರಿ 9ಕ್ಕೆ ಮುಂದೂಡಲಾಗಿದೆ. ಈ ಮೊದಲು ಜನವರಿ 7ರಂದು ಈ ಪ್ರಯೋಗ ನಡೆಸಲು ಇಸ್ರೋ ನಿರ್ಧರಿಸಿತ್ತು. ಡಾಕಿಂಗ್ ಕಾರ್ಯಕ್ಕೆ ಮತ್ತಷ್ಟು ಸಿದ್ಧತೆ ಬೇಕಾಗಿದೆ ಎಂದು ತಿಳಿದುಬಂದ ಕಾರಣ ಎರಡು ದಿನ ಮುಂದಕ್ಕೆ ಹಾಕಲಾಗಿದೆ ಎಂದು ಇಸ್ರೋ ಮಾಹಿತಿ ನೀಡಿದೆ.

ದೆಹಲಿಯಲ್ಲಿ ಸೋಮವಾರ ಡಿ.ಕೆ.ಶಿವಕುಮಾರ್ ಸುದ್ದಿಗೋಷ್ಠಿ ನಡೆಸಿದರು. ದೆಹಲಿ ಅಧ್ಯಕ್ಷ ದೇವೇಂದ್ರ ಯಾದವ್, ಉಸ್ತುವಾರಿ ಖಾಜಿ ನಿಜಾಮುದ್ದೀನ್, ಮಹಿಳಾ ಘಟಕ ನಾಯಕಿಯರು ಹಾಜರಿದ್ದರು.

ಪ್ಯಾರಿ ದೀದಿ ಸ್ಕೀಮ್ ಘೋಷಣೆ ಮಾಡಿದ ಡಿಸಿಎಂ ಡಿಕೆಶಿ

ದೆಹಲಿಯಲ್ಲೂ ಗೃಹಲಕ್ಷ್ಮಿ ಸ್ಕೀಮ್

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿ ವಿಧಾನಸಭೆ ಚುನಾವಣೆಗೆ ಸಜ್ಜಾಗುತ್ತಿದೆ. ಚುನಾವಣೆ ಆಯೋಗದಿಂದ ಇನ್ನಷ್ಟೇ ದಿನಾಂಕ ಘೋಷಣೆಯಾಗಬೇಕಿದೆ. ಆದರೆ, ಅದಕ್ಕೂ ಮುನ್ನವೇ, ಬಿಜೆಪಿ, ಎಎಪಿ, ಕಾಂಗ್ರೆಸ್ ಪಕ್ಷಗಳು ಭರ್ಜರಿ ಸಿದ್ಧತೆ ನಡೆಸಿವೆ.

ಅರವಿಂದ್ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷವಂತೂ ಅದಾಗಲೇ ಸಾಲು ಸಾಲು ಉಚಿತ ಗ್ಯಾರಂಟಿಗಳನ್ನು ಪ್ರಕಟಿಸಿದೆ. ಕಾಂಗ್ರೆಸ್ ಪಕ್ಷವೂ ತಾನೇನೂ ಕಡಿಮೆ ಇಲ್ಲ ಎನ್ನುವಂತೆ ಗ್ಯಾರಂಟಿಗಳನ್ನು ಘೋಷಿಸುತ್ತಿದೆ. ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಮಹಿಳೆಯರಿಗೆ ಮಾಸಿಕ 2,500 ರು. ಆರ್ಥಿಕ ನೆರವು ನೀಡುವ 'ಪ್ಯಾರಿ ದೀದಿ ಯೋಜನೆ'ಯನ್ನು ಜಾರಿಗೆ ತರುವುದಾಗಿ ಸೋಮವಾರ ಘೋಷಿಸಿದೆ.

ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೋಮವಾರ ದೆಹಲಿ ಪ್ರವಾಸದಲ್ಲಿದ್ದು, ಪಕ್ಷದ ಪರ ಚುನಾವಣಾ ಪ್ರಚಾರ ಕೈಗೊಂಡಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಕೈಗೊಂಡ ಮಾದರಿಯಲ್ಲೇ ದೆಹಲಿ ವನಿತೆಯರಿಗೂ ಮಾಸಿಕ 2,500 ರು. ಆರ್ಥಿಕ ನೆರವು ನೀಡಲಾಗುವುದು. ಕಾಂಗ್ರೆಸ್ ದೆಹಲಿಯಲ್ಲಿ ಅಧಿಕಾರಕ್ಕೆ ಬಂದರೆ 'ಪ್ಯಾರಿ ದೀದಿ ಯೋಜನೆ' ಜಾರಿಯಾಗಲಿದೆ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದ್ದಾರೆ.

ದೆಹಲಿ ಕಾಂಗ್ರೆಸ್ ಘಟಕ ಮುಖ್ಯಸ್ಥ ದೇವೇಂದ್ರ ಯಾದವ್, ಪಕ್ಷದ ದೆಹಲಿ ಉಸ್ತುವಾರಿ ಖಾಜಿ ನಿಜಾಮುದ್ದೀನ್ ಸುದ್ದಿಗೋಷ್ಠಿಯಲ್ಲಿದ್ದರು.

70 ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಫೆಬ್ರವರಿಯಲ್ಲಿ ಚುನಾವಣೆ ನಡೆಯಲಿದೆ.

ಪ್ಯಾರಿ ದೀದಿ ಯೋಜನೆಗೆ ಚಾಲನೆ ನೀಡಲೆಂದೇ ಇಲ್ಲಿಗೆ ಬಂದಿದ್ದೇನೆ. ದೆಹಲಿಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ. ಬಳಿಕ ಮೊದಲ ಸಚಿವ ಸಂಪುಟ ಸಭೆಯಲ್ಲೇ ಈ ಯೋಜನೆ ಜಾರಿಗೆ ಅಂಕಿತ ಬೀಳುತ್ತದೆ.

-ಡಿ.ಕೆ.ಶಿವಕುಮಾರ್ ಡಿಸಿಎಂ

ಮಾರ್ಚ್ 2ನೇ ವಾರದಲ್ಲಿ ಪ್ರಸಕ್ತ ಸಾಲಿನ ಬಜೆಟ್ ಮಂಡನೆ ಸಾಧ್ಯತೆ | ಇಲಾಖಾವಾರು ಸಭೆ ಆರಂಭಿಸಿದ ಸಿಎಂ

ಬಜೆಟ್ 4 ಲಕ್ಷ ಕೋಟಿ ದಾಟುವ ಸಾಧ್ಯತೆ

ಬೆಂಗಳೂರು: ದಾಖಲೆಯ ಬಜೆಟ್‌ಗಳನ್ನು ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 16ನೇ ಬಜೆಟ್ ಮಂಡಿಸಲು ಸಿದ್ಧತೆ ನಡೆಸಿಕೊಂಡಿದ್ದು, ಈ ಬಾರಿ ಒಟ್ಟಾರೆ ಬಜೆಟ್‌ನ ಮೊತ್ತ ನಾಲ್ಕು ಲಕ್ಷ ಕೋಟಿ ದಾಟುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಕಳೆದ ವರ್ಷದ ಬಜೆಟ್‌ನಲ್ಲಿ ಗ್ಯಾರಂಟಿ ಯೋಜನೆಗಳಿಗೆ ಬಜೆಟ್‌ನ ಬಹುಪಾಲು ಅನುದಾನ ಮೀಸಲಿಡಲಾಗಿತ್ತು. ಆದರೆ ಈ ಬಾರಿ ಗ್ಯಾರಂಟಿ ಯೋಜನೆಗಳೊಂದಿಗೆ, ಅಭಿವೃದ್ಧಿ ಕಾರ್ಯ ಹಾಗೂ ಶಾಸಕರ ಕ್ಷೇತ್ರಾಭಿವೃದ್ಧಿಗೆ ಅನುದಾನ ನೀಡುವ ಒತ್ತಡವಿದೆ. ಆದ್ದರಿಂದ ಈ ಎಲ್ಲ ಒತ್ತಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವ ರೀತಿ ನಿಭಾಯಿಸಲಿದ್ದಾರೆ ಎನ್ನುವ ಕುತೂಹಲ ಮೂಡಿದೆ.

ಮಾರ್ಚ್ ಎರಡನೇ ವಾರದಲ್ಲಿ 2025-26ನೇ ಸಾಲಿನ ರಾಜ್ಯ ಬಜೆಟ್ ಮಂಡನೆಯಾಗುವ ಸಾಧ್ಯತೆಯಿದೆ. 16 ಬಾರಿ ಬಜೆಟ್‌ಗಳನ್ನು ಮಂಡಿಸಿರುವ ಸಿದ್ದರಾಮಯ್ಯ ಅವರು, ಈ ಬಾರಿ ಬಜೆಟ್ ಗಾತ್ರವನ್ನು ನಾಲ್ಕು ಲಕ್ಷ ಕೋಟಿ ರು.ಗೆ ಏರಿಸುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ವಿವಿಧ ಇಲಾಖೆಗಳೊಂದಿಗೆ ಬಜೆಟ್ ಸಂಬಂಧಿ ಸಭೆಗಳು ಆರಂಭಗೊಂಡಿವೆ.

ಸೋಮವಾರದಿಂದ ವಿವಿಧ ಇಲಾಖೆಗಳೊಂದಿಗೆ ಸಭೆ ಆರಂಭಿಸಿದ ಸಿದ್ದರಾಮಯ್ಯ ಅವರು, ಯಾವೆಲ್ಲ ಯೋಜನೆಗಳನ್ನು ಜಾರಿಗೊಳಿಸಬೇಕು? ಎಷ್ಟೆಷ್ಟು ಅನುದಾನ ಅಗತ್ಯವಿದೆ ಎನ್ನುವ ಬಗ್ಗೆ ಚರ್ಚೆ ನಡೆಸಿದ್ದಾರೆ. ಸಮಾಜ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಆಹಾರ ಮತ್ತು ನಾಗರಿಕ ಸರಬರಾಜು, ಉನ್ನತ ಶಿಕ್ಷಣ, ವೈದ್ಯಕೀಯ ಶಿಕ್ಷಣ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸೇರಿದಂತೆ ಪ್ರಮುಖ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ. ಸೋಮವಾರ ಮುದ್ರಾಂಕ ಹಾಗೂ ನೋಂದಣಿ ಇಲಾಖೆಗೆ ಸಂಬಂಧಿಸಿದಂತೆ ಸಭೆ ನಡೆದಿದೆ.

ಪ್ರಣಾಳಿಕೆಯ ಕೆಲ ಘೋಷಣೆಗಳು ಜಾರಿಗೆ: ಕಳೆದ ವರ್ಷ ಗ್ಯಾರಂಟಿ ಯೋಜನೆಗಳಿಗೆ ಇಡೀ ಬಜೆಟ್ ಸೀಮಿತವಾಗಿತ್ತು. ಆದರೆ ಈ ಬಾರಿ ಗ್ಯಾರಂಟಿ ಯೋಜನೆ ಹೊರತಾಗಿ ಪ್ರಣಾಳಿಕೆಯಲ್ಲಿ ಪ್ರಕಟಿಸಿರುವ ವಿವಿಧ ಯೋಜನೆಗಳನ್ನು ಜಾರಿಗೊಳಿಸುವ ಬಗ್ಗೆ ಗಂಭೀರ ಚಿಂತನೆ ನಡೆಸಲಿದ್ದಾರೆ. ಸೋಮವಾರದಿಂದ ಆರಂಭವಾಗಿರುವ ಸಭೆಯಲ್ಲಿ ಕೆಲ ದಿನ ರಾಜ್ಯದ ಆರ್ಥಿಕ ಕಾರ್ಯಕ್ಷಮತೆಯನ್ನು ಪರಿಶೀಲಿಸಲಿದ್ದಾರೆ. ಸಭೆಯಲ್ಲಿ ಆದಾಯ ಉತ್ಪಾದನೆ ಮತ್ತು ತೆರಿಗೆ ತಂತ್ರಗಳನ್ನು ರೂಪಿಸಲಿದ್ದು, ತಜ್ಞರ ಅಭಿಪ್ರಾಯವನ್ನೂ ಮುಖ್ಯಮಂತ್ರಿಗಳು ಸಂಗ್ರಹಿಸಲಿದ್ದಾರೆ. ಬಳಿಕ ಯಾವ ಇಲಾಖೆಗೆ ಎಷ್ಟು ಅನುದಾನ, ಯಾವೆಲ್ಲ ಯೋಜನೆ ಜಾರಿ ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚೆನಡೆಸಲಿದ್ದಾರೆ ಎಂದು ತಿಳಿದುಬಂದಿದೆ.

ವಾಲಾ ದಾಖಲೆ ಸರಿಗಟ್ಟಲು ಎರಡೇ ಬಜೆಟ್ ಅಗತ್ಯ

ದೇಶದಲ್ಲಿ ಅತಿಹೆಚ್ಚು ಬಜೆಟ್ ಮಂಡಿಸಿರುವ ಕೀರ್ತಿ ಗುಜರಾತ್‌ನ ಮಾಜಿ ಹಣಕಾಸು ಸಚಿವ, ಕರ್ನಾಟಕದ ಮಾಜಿ ರಾಜ್ಯಪಾಲ ವಜೂಬಾಯಿ ವಾಲಾ ಅವರ ಹೆಸರಲ್ಲಿದೆ. ಅವರು 18 ಬಾರಿ ಬಜೆಟ್ ಮಂಡಿಸಿರುವ ದಾಖಲೆಯಿದೆ. ಸಿದ್ದರಾಮಯ್ಯ ಅವರು ಈ ಬಾರಿ ಮಂಡಿಸಿದರೆ 16ನೇ ಬಜೆಟ್ ಆಗುವುದರಿಂದ ವಾಲಾ ಅವರ ದಾಖಲೆ ಸರಿಗಟ್ಟಲು ಇನ್ನೆರೆಡು ಬಜೆಟ್ ಮಂಡಿಸಬೇಕಾಗುತ್ತದೆ. ಐದು ವರ್ಷ ಮುಖ್ಯಮಂತ್ರಿಯಾಗಿದ್ದರೆ ವಾಲಾ ಅವರ ದಾಖಲೆಯನ್ನು ಮೀರಿಸುವುದು ಸ್ಪಷ್ಟ.

ಸಮಾಚಾರ ಸಣ್ಣದಲ್ಲ

ಸಹಕಾರಿ ಬ್ಯಾಂಕ್‌ನ 9ನೇ ಶಾಖೆ ಉದ್ಘಾಟನೆ

ಗೋಕಾಕ: ಸಹಕಾರ ಬ್ಯಾಂಕಿಂಗ ಸೇವೆಯಲ್ಲಿ 118 ವರ್ಷ ಪೂರೈಸಿರುವ ದಿ.ಗೋಕಾಕ ಅರ್ಬನ್ ಕೋ ಆಪ್ ಕ್ರೆಡಿಟ್ ಬ್ಯಾಂಕ ಬೆಳಗಾವಿ ನಗರದ ಮಹಾತ್ಮಾ ಫುಲೆ ರಸ್ತೆ ದತ್ತ ಮಂದಿರದ ಹತ್ತಿರದ ಶಹಾಪೂರದಲ್ಲಿ 9ನೇ ಶಾಖೆಯನ್ನು ದಿ.7ರ ಮಂಗಳವಾರದಂದು ಮುಂಜಾನೆ 11ಗಂಟೆಗೆ ಗದಗಿನ ಜಗದ್ಗುರು ಡಾ.ತೋಂಟದಸಿದ್ಧರಾಮ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷ ಬಸವರಾಜ ಕಲ್ಯಾಣಶೆಟ್ಟಿ ವಹಿಸುವರು. ಬ್ಯಾಂಕಿನ ಹಿತೈಷಿಗಳು, ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರಧಾನ ವ್ಯವಸ್ಥಾಪಕ ಎಸ್ ಎಸ್ ಪಾಟೀಲ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಗ್ರಾಪಂ ಅಧ್ಯಕ್ಷರಾಗಿ ಮಹಾಂತೇಶ ಆಯ್ಕೆ

ಗೋಕಾಕ: ತಾಲೂಕಿನ ಸುಲಧಾಳ ಗ್ರಾಮ ಪಂಚಾಯತ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶನಿವಾರ ಜರುಗಿದ ಚುನಾವಣೆಯಲ್ಲಿ ಶಾಸಕ ರಮೇಶ ಜಾರಕಿಹೊಳಿ ಅವರ ನೇತ್ರತ್ವದಲ್ಲಿ ಕಾರ್ಮಿಕ ಮುಖಂಡ ಅಂಬಿರಾವ ಪಾಟೀಲ ಹಾಗೂ ಯುವನಾಯಕ ಅಮರನಾಥ ಜಾರಕಿಹೊಳಿ ಅವರ ಮಾರ್ಗದರ್ಶನದಲ್ಲಿ ನೂತನ ಅಧ್ಯಕ್ಷರಾಗಿ ಮಹಾಂತೇಶ ಬಿಚಗತ್ತಿ ಉಪಾಧ್ಯಕ್ಷರಾಗಿ ಶ್ರೀಮತಿ ಕಲಾವತಿ ಎಸ್ ಸೋಮನಟ್ಟಿ ಅವಿರೋಧವಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಶಾಸಕರ ಆಪ್ತಸಹಾಯಕ ಭೀಮಗೌಡ ಪೋಲಿಸಗೌಡರ, ಬಸವರಾಜ ದಾಸನವರ, ಮುನ್ನಾ ದೇಸಾಯಿ, ವೀರುಪಾಕ್ಷಿ ಅಂಗಡಿ, ನಟರಾಜ ಸತ್ತೆನ್ನವರ, ಮಾರುತಿ ನಾರಿ ಹಾಗೂ ಗ್ರಾಮ ಪಂಚಾಯತಿ ಸದಸ್ಯರು, ಗ್ರಾಮದ ಹಿರಿಯರು ಇದ್ದರು. ಚುನಾವಣಾ ಅಧಿಕಾರಿಯಾಗಿ ನೀರಾವರಿ ಇಲಾಖೆಯ ರಾಜಾಪೂರ ಕಾರ್ಯನಿರ್ವಹಿಸಿದರು.

ಎಥೆನಾಲ್ ಘಟಕ ಮಾರ್ಚ್‌ನಲ್ಲಿ ಆರಂಭ

ಕೆರೂರ: ಕೇದಾರನಾಥ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಗೋವಿನ ಜೋಳ ಮತ್ತು ಅಕ್ಕಿ ಬಳಸಿ ಎಥೆನಾಲ್ ಉತ್ಪಾದಿಸುವ ಹೊಸಘಟಕದ ನಿರ್ಮಾಣ ಕೆಲಸ ತ್ವರಿತ ಗತಿಯಲ್ಲಿ ನಡೆದಿದೆ.ಘಟಕ ಇದೇ ಮಾರ್ಚ್ ತಿಂಗಳಲ್ಲಿ ಉತ್ಪಾದನೆ ಆರಂಭಿಸಲಿದೆ ಎಂದು ನಿರಾಣಿ ಸಮೂಹದ ಸಂಸ್ಥಾಪಕ ಅಧ್ಯಕ್ಷ ಡಾ. ಮುರುಗೇಶ ನಿರಾಣಿ ಹೇಳಿದ್ದಾರೆ. ಸಮೀಪದ ಕೆರಕಲಮಟ್ಟಿ ಗ್ರಾಮದ ಕೇದಾರನಾಥ್ ಕಾರ್ಖಾನೆಯಲ್ಲಿ ಎಥಿನಾಲ್ ಘಟಕದ ಪ್ರಗತಿ ಪರಿಶೀಲಿಸಿ ಮಾತನಾಡಿದ ಅವರು ಘಟಕ ಪ್ರತಿದಿನ ಮೂರು ಲಕ್ಷ ಲೀಟರ್ ಎಥೆನಾಲ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಪ್ರತಿದಿನ 400 ಟನ್ ಅಕ್ಕಿ ಅಥವಾ ಗೋವಿನ ಜೋಳ ಬಳಸಬೇಕಾಗುತ್ತದೆ. ಹೊಸ ಘಟಕದಿಂದ ನೇರವಾಗಿ ಸುಮಾರು ಸಾವಿರ ಜನರಿಗೆ ಉದ್ಯೋಗ ಸೌಲಭ್ಯ ದೊರೆಯಲಿದೆ. ಗೋವಿನ ಜೋಳದ ಕೃಷಿಗೆ ಅವಕಾಶ ಸಿಗಲಿದೆ ಎಂದು ಅವರು ಹೇಳಿದರು. ಕಾರ್ಖಾನೆ ಅಧಿಕಾರಿಗಳಾದ ಆನಂದ್ ಕದಂ,ಬಿ.ಎಸ್. ಬಂದಿ, ಸುಳಿಕೇರಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಚ್ ಆರ್ ಪಾಟೀಲ್, ಪ್ರಭು ದುದ್ದಗಿ ಇದ್ದರು.

ಎಲ್ಲ ಪ್ರಕಾರದ ಸಾಹಿತ್ಯಗಳಲ್ಲಿ ಜನಪದವಿದೆ

ರಬಕವಿ-ಬನಹಟ್ಟಿ: ಜಾನಪದ ಕಾರ್ಯಕ್ರಮಗಳಲ್ಲಿ ಔಪಚಾರಿಕತೆ ಕಡಿಮೆಯಿಂದ ಕೂಡಿ ಕಲೆಗಳ ಬಗ್ಗೆ ಹೆಚ್ಚಿನ ಒತ್ತು ನೀಡಬೇಕಾದ ಅನಿವಾರ್ಯತೆಯಿದೆ ಎಂದು ಸಾಹಿತಿ ಬಿ.ಆರ್. ಪೊಲೀಸ್ ಪಾಟೀಲ ತಿಳಿಸಿದರು. ರಬಕವಿಯ ಶಿವದಾಸಿಮಯ್ಯ ಸಮುದಾಯ ಭವನದಲ್ಲಿ ಜರುಗಿದ ಜಾನಪದ ಸಂಭ್ರಮ ಕಾರ್ಯಕ್ರಮದಲ್ಲಿ ಕನ್ನಡ ಜಾನಪದ ಪರಿಷತ್ತಿನ ತಾಲೂಕಾ ಘಟಕ, ಪದಗ್ರಹಣ ಉದ್ಘಾಟನೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಬದುಕಿನಲ್ಲಿ ನಡೆಯುವ ದೈನಂದಿನ ಹಾಡುಗಳೇ ಹಂತಿ ಪದಗಳಾಗಿವೆ. ಎಲ್ಲ ಪ್ರಕಾರದ ಸಾಹಿತ್ಯಗಳನ್ನು ಜನಪದ ಒಳಗೊಂಡಿದೆ. ಪುಸ್ತಕ, ಕ್ಯಾಸೆಟ್‌ಗಳ ಬದಲಾಗಿ ಜನರ ಮಧ್ಯ ತಂಡ ಕಟ್ಟಿಕೊಂಡು ತೆರಳುವದರಿಂದ ಜನಪದ ಪ್ರಚಾರಕ್ಕೆ ಅನುಕೂಲವೆಂದು ಸಲಹೆ ನೀಡಿದರು.

ಅಗಲಿದ ಜೀವ

ಯಶವಂತ ಬೀರನಗಡ್ಡಿ

ಗೋಕಾಕ: ಇಲ್ಲಿಯ ಸಮೀಪದ ಪ್ರಭಾ ಶುಗರ ಕಾರ್ಖಾನೆಯ ನಿವಾಸಿ ಯಶವಂತ ದುಂಡಪ್ಪಾ ಬೀರನಗಡ್ಡಿ 39 ಬುಧವಾರದಂದು ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

{ ದಿನೇಶ್ ಗುಂಡೂರಾವ್ } ಸಚಿವ

ರಾಜ್ಯದಲ್ಲಿ ಇಬ್ಬರು ಮಕ್ಕಳಲ್ಲಿ ಪತ್ತೆಯಾಗಿರುವ ಹ್ಯೂಮನ್ ಮೆಟಾನ್ಯುಮೊ ವೈರಸ್ (ಎಚ್‌ಎಂಪಿವಿ) ಹೊಸದಲ್ಲ. ಇದು 2001ರಿಂದ ನಮ್ಮ ದೇಶದಲ್ಲಿದೆ. ಇದರಿಂದ ಯಾವುದೇ ಅಪಾಯವಿಲ್ಲ. ರಾಜ್ಯದಲ್ಲಿ ಆರೋಗ್ಯ ಇಲಾಖೆ ಯಾವುದೇ ಕಠಿಣ ಕ್ರಮಗಳನ್ನು ಕೈಗೊಳ್ಳುವುದಿಲ್ಲ. ಕೇಂದ್ರದಿಂದಲೂ ಕ್ರಮ ಕೈಗೊಳ್ಳುವ ಬಗ್ಗೆ ಯಾವುದೇ ಸೂಚನೆಗಳಿಲ್ಲ.

ಗಡಿನಾಡು ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆ। ಸರ್ವಾಧ್ಯಕ್ಷೆ ಡಾ.ಸುರೇಖಾ ಹೊರ್ತಿಕರ ಅಭಿಮತ

ಸರಕಾರ ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸಲಿ

ಅಥಣಿ: ಭಾಷಾವಾರು ಪ್ರಾಂತಗಳ ವಿಂಗಡಣೆಯ ಸಂದರ್ಭದಲ್ಲಿ ಕನ್ನಡಿಗರು ಇರುವ ಅನೇಕ ಗ್ರಾಮಗಳು ಹೊರನಾಡಿನಲ್ಲಿ ಉಳಿದುಕೊಂಡರೂ ಇಂದಿಗೂ ಕನ್ನಡತನವನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ರಾಜ್ಯ ಸರಕಾರ ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಗಡಿನಾಡು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷೆ ಡಾ. ಸುರೇಖಾ ಹೊರ್ತಿಕರ ಹೇಳಿದರು.

ಸಮೀಪದ ಜತ್ತ ತಾಲೂಕಿನ ಉಮರಾಣಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ಗಡಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಮಾತಾಜಿ ಅಕ್ಕಮಹಾದೇವಿ ಜ್ಞಾನ ಯೋಗಶ್ರಮ, ಉಮರಾಣಿ ಇವರ ಸಹಯೋಗದಲ್ಲಿ ರವಿವಾರ ಆಯೋಜಿಸಲಾಗಿದ್ದ ಗಡಿನಾಡು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ನಮ್ಮ ಕನ್ನಡ ಭಾಷೆ ಮತ್ತು ಸಾಹಿತ್ಯ,ಕಲೆ, ಸಂಸ್ಕೃತಿಯ ಶ್ರೀಮಂತಿಕೆಯ ಬಗ್ಗೆ ನಾವೆಲ್ಲರೂ ಹೆಮ್ಮೆ ಪಡಬೇಕು. ನಾವೆಲ್ಲರೂ ಸ್ಥಾನಿಕವಾಗಿ ಮಹಾರಾಷ್ಟ್ರದಲ್ಲಿ ನೆಲೆಸಿದರು ಕೂಡ ನಮ್ಮ ಭಾಷಾ ಬಾಂಧವ್ಯ ಮತ್ತು ಭಾವನೆಗಳು ಎಂದೆಂದಿಗೂ ಕನ್ನಡಮಯವಾಗಿದೆ. ರಾಜ್ಯ ಸರಕಾರ ಮತ್ತು ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಕನ್ನಡಿಗರ ಭಾವನೆಗಳಿಗೆ ಮತ್ತು ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಅಭಿವೃದ್ಧಿಯ ಕಾರ್ಯಗಳನ್ನು ಮಾಡಬೇಕು ಎಂದರು.

ನಂತರ ಜರುಗಿದ ಚಿಂತನಾಗೋಷ್ಠಿ ಕಾರ್ಯಕ್ರಮದಲ್ಲಿ ಕನ್ನಡ ಪ್ರಾಧ್ಯಾಪಕ ಅರ್ಜುನ ಕಾಂಬಳೆ ಕನ್ನಡ ವಚನ ಸಾಹಿತ್ಯದ ಮೂಲಕ ನಡೆದ ಸಾಮಾಜಿಕ ಚಿಂತನೆಗಳ ಬಗ್ಗೆ ಉಪನ್ಯಾಸ ನೀಡಿದರು. ಗಡಿನಾಡಿನಲ್ಲಿ ಕನ್ನಡ ಜಾಗೃತಿ ಅವಶ್ಯಕತೆ ಕುರಿತು ಉಪನ್ಯಾಸಕ ಅರವಿಂದ ಕರಡಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಮತ್ತು ಕನ್ನಡ ಶಾಲೆಗಳ ಪುನಶ್ಚೇತನಕ್ಕಾಗಿ ಪ್ರಾಮಾಣಿಕ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಗಡಿನಾಡಿನ ಆದರ್ಶ ಶಿಕ್ಷಕ ಎಂಬ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಚಿಕ್ಕಪಡಸಲಗಿಯ ಮಾತೋಶ್ರೀ ಅಭಿನವ ಅಕ್ಕಮಹಾದೇವಿ ಸಮಾರಂಭದ ದಿವ್ಯ ಸಾನಿಧ್ಯವನ್ನು ಆಶೀರ್ವಚನ ನೀಡಿದರು.

ಗಡಿನಾಡು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸರ್ವಾಧ್ಯಕ್ಷೆ ಡಾ. ಸುರೇಖಾ ಹೊರ್ತಿಕರ ಅವರು ಉದ್ಘಾಟಿಸಿದರು.

> **ಗಡಿ ಭಾಗದ ಈ ಪುಟ್ಟ ಗ್ರಾಮದಲ್ಲಿ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಕನ್ನಡ ಹಬ್ಬವನ್ನು ಆಯೋಜಿಸುವುದರ ಜೊತೆಗೆ ಗಡಿನಾಡು ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಿರುವುದು ಬಹಳ ಸಂತಸದ ವಿಚಾರ. ಮಠಮಾನ್ಯಗಳು ಜನರಿಗೆ ಧಾರ್ಮಿಕ ಸಂಸ್ಕಾರ ನೀಡುವುದರ ಜೊತೆಗೆ ಕನ್ನಡ ಭಾಷೆ ಸಂಸ್ಕೃತಿಯನ್ನು ಉಳಿಸಿ ಬೆಳೆಸುತ್ತಿರುವ ಕಾರ್ಯ ಶ್ಲಾಘನೀಯ.**
> ಅಪ್ಪಾಸಾಹೇಬ ಅಲಿಬಾದಿ, ಹಿರಿಯ ಸಾಹಿತಿ

ಈ ವೇಳೆ ನಿಕಟಪೂರ್ವ ಸಮ್ಮೇಳನದ ಸರ್ವಾಧ್ಯಕ್ಷ ಹಾಗೂ ಹಿರಿಯ ಸಾಹಿತಿ ಶ್ರೀಶೈಲ ಅವಟಿ, ಸಾಹಿತಿ ಎಂ ಜಿ ಕಾರಜನಗಿ, ಮಲ್ಲೇಶ ಕತ್ತಿ, ಮಲ್ಲಿಕಾರ್ಜುನ ಗದಗ, ಸಂತೋಷ ಗಡದಿ, ಭಾರತಿ ಅಲಿಬಾದಿ, ಕನ್ನಡಪರ ಹೋರಾಟಗಾರ ಮಲಿಕ ಜಾನಶೇಕ, ಅಣ್ಣಾಸಾಹೇಬ ತೆಲಸಂಗ, ಕಲ್ಲಿ ಮೊಹಮ್ಮದ್ ಅಪರಾಧ, ಚನ್ನಪ್ಪ ಸುತಾರ, ಮಾಣಿಕ ಪ್ರಭು ಬಡಿಗೇರ, ಸಂದೀಪ ಮಾಂಗ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಭಗವಂತನ ಅನ್ವೇಷಣೆ ನಿತ್ಯ ನಿರಂತರ

ಬೆಳಗಾವಿ: ನಗರದಲ್ಲಿ 5 ರಂದು ವೈಎಸ್‌ಎಸ್ ಮಂಡಳಿಯು ತಮ್ಮ ಗುರುಗಳ ಶ್ರೀಶ್ರೀ ಪರಮಹಂಸ ಯೋಗಾನಂದರ 132ನೇ ಜನೋತ್ಸವವನ್ನು ಭಕ್ತಿಗೌರವಗಳೊಂದಿಗೆ ಆಚರಿಸಲಾಯಿತು.

ಶ್ರೀಯೋಗಾನಂದರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ನಮ್ಮ ಪ್ರಿಯ ಗುರುಗಳಾದ, ಶ್ರೀಶ್ರೀಪರಮಹಂಸ ಯೋಗಾನಂದರು, ಮಾನವ ಜೀವನದ ಅತ್ಯುನ್ನತ ಉದ್ದೇಶ ಭಗವಂತನನ್ನು ಅರಸುವುದು. ಬೇರೆಲ್ಲವೂ ಕಾಯಬಲ್ಲದು ಆದರೆ ಒಬ್ಬನ ಭಗವಂತನ ಅನ್ವೇಷಣೆ ಮಾತ್ರ ಕಾಯಲಾರದು ಎಂದು ಯೋಗದಾ ಸತ್ಸಂಗ ಧ್ಯಾನ ಮಂಡಳಿಯ ಹಿರಿಯ ಸದಸ್ಯರಾದ ಸದಾಶಿವ ಮುನ್ನೋಳಿ ಅವರು ತಿಳಿಸಿದರು.

ಯೋಗಾನಂದಜಿಯವರು ಜ್ಞಾನಪ್ರಭಾ ಹಾಗೂ ಭಗವತಿಚರಣ್ ಘೋಷ್ ಎಂಬ ದೈವಭಕ್ತ ಮಾತಾಪಿತರಿಗೆ, 5ನೇ ತಾರೀಖು ಜನವರಿ 1893 ರಂದು ಘೋರಖ್‌ಪುರದಲ್ಲಿ ಜನಿಸಿದರು. ಜ್ಞಾನಪ್ರಭಾ ತಮ್ಮ ತೋಳುಗಳಲ್ಲಿದ್ದ ಮಗು ಮುಕುಂದನೊಂದಿಗೆ, ತಮ್ಮಗುರುಗಳಾದ ಲಾಹಿರಿಮಹಾಶಯರನ್ನು ಭೇಟಿಯಾದಾಗ, ಆ ಮಹಾನ್ ಸಂತರು ಆಕೆಯನ್ನು ಆಶೀರ್ವದಿಸಿದರು. ಹೇಮಾತೆ, ನಿನ್ನ ಮಗ ಒಬ್ಬ ಯೋಗಿಯಾಗುತ್ತಾನೆ. ಆಧ್ಯಾತ್ಮಿಕ ಎಂಜಿನ್ ಆಗಿ ಅನೇಕ ಆತ್ಮಗಳನ್ನು ಭಗವಂತನ ಸಾಮ್ರಾಜ್ಯಕ್ಕೆ ಕರೆದೊಯ್ಯುತ್ತಾನೆ. ಕಾಲಾಂತರದಲ್ಲಿ ಆ ಪವಿತ್ರವಾಣಿ ಸತ್ಯವಾಯಿತು ಎಂದು ಹೇಳಿದರು.

1917 ರಲ್ಲಿ, ರಾಂಚಿಯಲ್ಲಿ ಯೋಗದಾ ಸತ್ಸಂಗ ಸೊಸೈಟಿ ಆಫ್ ಇಂಡಿಯಾ (ವೈಎಸ್‌ಎಸ್) ಹಾಗೂ 1920ರಲ್ಲಿ ಲಾಸ್ ಏಂಜಲಿಸ್‌ನಲ್ಲಿ ಸೆಲ್ಫ್-ರಿಯಲೈಝೇಷನ್ ಫೆಲೋಷಿಪ್ (ಎಸ್‌ಆರ್ ಎಫ್) ಅನ್ನು ಸ್ಥಾಪಿಸಿದರು. ಈ ಎರಡು ಸಂಸ್ಥೆಗಳ ಮೊದಲ ಆದ್ಯತೆ ಪ್ರಾಚೀನ ಆಧ್ಯಾತ್ಮಿಕ ವಿಜ್ಞಾನವಾದ 'ಕ್ರಿಯಾಯೋಗ' ಧ್ಯಾನತಂತ್ರವನ್ನು ಪ್ರಸಾರ ಮಾಡಿ, ಜೀವನದ ಅಂತಿಮ ಉದ್ದೇಶವಾದ ಪರಮಾತ್ಮನೊಂದಿಗೆ ಆತ್ಮನ ಐಕ್ಯವನ್ನು ಅರಿಯುವಂತೆ ಮಾಡುವುದು ಎಂದ ಅವರು,

ಅಮೇರಿಕೆಯಲ್ಲಿ ಇರುವಾಗಲೇ, ಯೋಗಾನಂದಜಿಯವರು ಭಾರತೀಯ ಪ್ರಾಚೀನ ಧ್ಯಾನಯೋಗ ತಂತ್ರಗಳನ್ನು ಮತ್ತು ಬಾಬಾಜಿ ಅವರಿಂದ ಪುನರುಜ್ಜಿವನಗೊಂಡ ಕ್ರಿಯಾ ಯೋಗವನ್ನು ಹರಡಲು ಅವಿಶ್ರಾಂತವಾಗಿ ಕೆಲಸ ಮಾಡಿದರು. ಅದು ಚೆನ್ನಾಗಿ ಸ್ವೀಕರಿಸಲ್ಪಟ್ಟಿತು ಹಾಗೂ ಪ್ರಶಂಸಿಲ್ಪಟ್ಟಿತು. ಭಗವಂತನ ಅನ್ವೇಷಣೆಯನ್ನು ಹಂಚಿಕೊಳ್ಳುವ ಹಂಬಲದಿಂದ ಉತ್ತೇಜಿತರಾಗಿ, ಅತೀವ ಮೆಚ್ಚುಗೆಗೆ ಪಾತ್ರವಾದ ಮೇರುಕೃತಿ 'ಯೋಗಿಯ ಆತ್ಮಕಥೆ'ಯನ್ನು ಬರೆಯಲು ತೊಡಗಿದರು, 3 ಪುಸ್ತಕವು ಜಗತ್ತಿನಾದ್ಯಂತ ಅಗಣಿತ ವ್ಯಕ್ತಿಗಳ ಮೇಲೆ ಗಾಢಪ್ರಭಾವವನ್ನು ಬೀರಿತು, ಅಲ್ಲದೇ 50 ಕ್ಕಿಂತ ಹೆಚ್ಚು ಭಾಷೆಗಳಿಗೆ ತರ್ಜುಮೆ ಆಯಿತು ಹೊಂದಿದವರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಶಿಕಾಂತ ಚುನಮರಿ, ರವೀಂದ್ರ ಪಟ್ಟಣಶೆಟ್ಟಿ, ಕರ್ನಲ್ ಮಾರನ ಬಸರಿ, ರಾಮಚಂದ್ರ ಉಪ್ಪಿನ, ಶ್ರೀನಿವಾಸ ಕೋರ್ಪಡೆ, ದೇವನಾಳ, ಸದಾಶಿವ ಮುನ್ನೋಳಿ, ಮಂಜುಳಾ ಚುನಮರಿ, ಶೈಲಜಾ ಕೋರಿಶೆಟ್ಟಿ ಹಾಗೂ ಇತರರು ಇದ್ದರು.

ಶ್ರೀಯೋಗಾನಂದರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು

> **ಈಗ ಗೌರವಾನ್ವಿತ ಜಗದ್ಗುರುವನ್ನು ಜಗತ್ತಿನಾದ್ಯಂತ ಭಾರತದ ಪ್ರಾಚೀನ ಬೋಧನೆಗಳ ಪ್ರಭಾವಶಾಲಿ ರಾಯಭಾರಿ ಎಂದು ಪರಿಗಣಿಸಲಾಗಿದೆ. ಅವರ ಜೀವನ ಹಾಗೂ ಬೋಧನೆಗಳು ಜೀವನದ ಎಲ್ಲಾ ವರ್ಗದ ಜನರಿಗೆ ಅವರ ಜಾತಿ, ಸಂಸ್ಕೃತಿ, ನಂಬಿಕೆಗಳನ್ನು ಮೀರಿ, ಸ್ಫೂರ್ತಿ ಹಾಗೂ ಉತ್ತೇಜನಗಳ ನಿರಂತರ ಸೆಲೆಯಾಗಿ ಸೇವೆ ಸಲ್ಲಿಸುತ್ತಿವೆ.**
> ಸದಾಶಿವ ಮುನ್ನೋಳಿ, ಧ್ಯಾನ ಮಂಡಳಿಯ ಹಿರಿಯ ಸದಸ್ಯ

ಟಿಆರ್‌ಪಿ ಮಾನದಂಡವಾಗದಿರಲಿ

ಬೆಳಗಾವಿ: ತಿಂಗಳಿಗೊಮ್ಮೆ ಭ್ರಷ್ಟ ರಾಜಕಾರಣ, ದುರಾಡಾಳಿತ ನೀಡುವ ಅಧಿಕಾರಿಗಳು, ಭೂಗತ ಜಗತ್ತಿನಿಂದ ಬೆದರಿಕೆ ಕರೆಗಳು ಬಂದಾಗಲೆ ನಾನು ಚೆನ್ನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ ಎಂಬ ಸಮಾಧಾನ ನನಗೆ ಉಂಟಾಗುತ್ತದೆ. ಪದೇ ಪದೇ ಎದುರಾಗುವ ಬೆದರಿಕೆಗಳು ಪತ್ರಕರ್ತರಿಗೆ ಪ್ರಶಸ್ತಿ ಮತ್ತು ಸನ್ಮಾನ ಪತ್ರವಿದ್ದಂತೆ ಎಂದು ಹಿರಿಯ ಪತ್ರಕರ್ತ ಅಜಿತ ಹನುಮಕ್ಕನವರ ಹೇಳಿದರು.

ಬೆಳಗಾವಿಯ ಪ್ರಬುದ್ಧ ಭಾರತ ಮತ್ತಜ್ಜರುಗಿದಿಚನ್ನಮ್ಮ ವಿಶ್ವವಿದ್ಯಾಲಯ ದೀನದಯಾಳ ಪೀಠದ ಸಹಯೋಗದಲ್ಲಿ ಕೆಎಲ್‌ಇ ಸೆಂಟನರಿ ಕನವೆನ್ಷನ್ ಸೆಂಟರ್‌ದಲ್ಲಿ ಶುಕ್ರವಾರ ಜರುಗಿದ, ಎರಡು ದಿನದ ಏಕಾತ್ಮ ಮಾನವ ದರ್ಶನ ವಿಷಯದ ವಿಚಾರ ಸಂಕಿರಣದಲ್ಲಿ ಅವರು ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಪತ್ರಿಕೋದ್ಯಮ ವಿಷಯದ ಕುರಿತಾಗಿ ಮಾತನಾಡುತ್ತಾ ಹೇಳಿದರು.

ಸಮಾಜದಲ್ಲಿ ಮಾಧ್ಯಮದ ವರದಿಯಿಂದಾಗುವ ಅವಮಾನ ಮತ್ತು ಅಪಪ್ರಚಾರಕ್ಕೆ ಹೆದರಿ, ಯಾವುದೆ ಜನವಿರೋಧಿ ಮತ್ತು ಅಕ್ರಮಕ್ಕೆ ಅವಕಾಶ ನೀಡಿದೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದು ಮಾಧ್ಯಮದ ಉಪಯುಕ್ತತೆ ಎನ್ನಬಹುದು ಎಂದರು.

ಇತ್ತೀಚೆಗೆ ಕಾರ್ಯಾಂಗ ಮತ್ತು ನ್ಯಾಯಾಂಗ ವ್ಯವಸ್ಥೆಗಳನ್ನು ಭ್ರಷ್ಟರು ಇಂದು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿರುವುದು ವಿಪರ್ಯಾಸ ಸಂಗತಿ. ಅವರ ವಿರುದ್ಧ ವರದಿ ಮಾಡಲು ಕೂಡಾ ಸಾಧ್ಯವಾಗುವುದಿಲ್ಲ, ಏಕೆಂದರೆ ಅವರು ನ್ಯಾಯಾಲಯಗಳ ಮೂಲಕ ವರದಿ ಪ್ರಸಾರಕ್ಕೆ ನಿರ್ಬಂಧ ಮತ್ತು ಕೆವಿಟ್ ಆದೇಶವನ್ನು ಪಡೆದಿರುತ್ತಾರೆ. ನ್ಯಾಯಾಲಯದ ಈ ಬಗೆಯ ಆದೇಶಗಳು ಮಾಧ್ಯಮಗಳ ಕಾರ್ಯನಿರ್ವಹಿಸಲು ದೊಡ್ಡ ತಡೆ ಉಂಟುಮಾಡುತ್ತಿವೆ ಎಂದರು.

ಮಾಧ್ಯಮಗಳು ಇತ್ತೀಚೆಗೆ ಟಿಆರ್‌ಪಿಯ ಜಾಲದಲ್ಲಿ ಕಳೆದು ಹೋಗಿವೆ. ಟಿಆರ್‌ಪಿ ಕಾರಣದಿಂದ ಮಾಧ್ಯಮಗಳು ಯಾವ ಬಗೆಯ ಕಾರ್ಯಕ್ರಮ ಪ್ರಸಾರ ಮಾಡಬೇಕು ಮತ್ತು ಪ್ರಸಾರ ಮಾಡಬಾರದು ಎಂದು ನಿರ್ಧರಿತವಾಗುತ್ತದೆ. ಕಾರ್ಯಕ್ರಮ ವಿಕ್ಷಣೆ ಕುರಿತಾದ ಜನರ ಬಯಕೆ ಮತ್ತು ಅವರ ವೀಕ್ಷಣೆ ಈ ಎರಡು ಸಂಗತಿಗಳು ವೈರುಧ್ಯದಿಂದ ಕೂಡಿವೆ. ಹಾಗಾಗೀ ವಾಹಿನಿ ಸಂಸ್ಥೆಗಳಿಗೆ ಯಾವ ಬಗೆಯ ಕಾರ್ಯಕ್ರಮ ನಿರ್ಮಾಣ ಮಾಡಬೇಕು ಎಂಬುದು ಟಿಆರ್‌ಪಿಯೆ ಮಾನದಂಡವಾಗಿರುವುದು ಸೋಜಿಗದ ಸಂಗತಿ ಎಂದರು.

ಜಸ್ಟಿಸ್ ಅರವಿಂದ ಪಾಶ್ಚಾಪುರೆ ಮಾತನಾಡಿ, ನ್ಯಾಯಾಂಗದಿಂದ ದೊರೆಯುವ ಕೆವಿಟ್ ಆದೇಶ ಬಗ್ಗೆ ಮಾಧ್ಯಮದಲ್ಲಿ ವರದಿ ಮಾಡಲು ಸಾಧ್ಯವಾಗುವುದಿಲ್ಲ, ನ್ಯಾಯಾಂಗದ ಪ್ರಕಾರ ಆರೋಪ ಸಿದ್ಧವಾಗಿ ಅಪರಾಧಿ ಆದಾಗ ಮಾತ್ರ ಕೆವಿಟ್ ಆದೇಶ ಬಿದ್ದು ಹೋಗುವುದು. ನ್ಯಾಯಾಂಗ ವ್ಯವಸ್ಥೆಯು ಕೂಡಾ ಬ್ರಿಟಿಷರ ಕಾಲದಲ್ಲಿನ ಅನೇಕ ಪದ್ಧತಿಗಳನ್ನು ಪರಿಷ್ಕರಣೆಗೆ ಒಳಪಡಿಸಿ, ಭಾರತೀಯ ನ್ಯಾಯ ಪದ್ಧತಿ ಜಾರಿಗೆ ತರುವ ಅವಶ್ಯಕತೆಯಿದೆ ಎಂದರು.

ಪತ್ರಕರ್ತ ಅಜಿತ ಹನುಮಕ್ಕನವರ ಅವರಿಗೆ ಯಂಗ್ ಅಚಿವರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

> **ನ್ಯಾಯ್ಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗದಂತೆ ಪತ್ರಿಕಾರಂಗವು ಸಮಾಜದ ಉನ್ನತಿಗೆ ಶ್ರಮಿಸುತ್ತದೆ. ಆದರೆ ಕೆಲ ಬಾರಿ ಶಾಸಕಾಂಗ ಮತ್ತು ಕಾರ್ಯಾಂಗ ತಪ್ಪು ದಾರಿಯಲ್ಲಿ ಸಾಗುತ್ತಿರಬೇಕಾದರೆ ಚುರುಕು ಮುಟ್ಟಿಸುವ ಜವಾಬ್ದಾರಿ ಪತ್ರಿಕಾ ರಂಗದ್ದಾಗಿದೆ.**
> ಅಜಿತ ಹನುಮಕ್ಕನವರ, ಹಿರಿಯ ಪತ್ರಕರ್ತ

ಬಾಣಂತಿಯರು, ಶಿಶುಗಳ ಸಾವಿನ ಮಾಹಿತಿ ಕಲೆ

ಬೆಳಗಾವಿ: ರಾಜ್ಯದ ಜನರಿಗೆ ಕಾಂಗ್ರೆಸ್ ಸರಕಾರ ಸಾವಿನ ಭಾಗ್ಯ ನೀಡಿದೆ. ಬಾಣಂತಿಯರು ಹಾಗೂ ಶಿಶು ಮರಣ ಪ್ರಮಾಣ ನಿರಂತರವಾಗಿ ಸಾಗಿದ್ದು, ಈ ಕುರಿತು ಬಿಜೆಪಿ ಸತ್ಯಶೋಧನಾ ಸಮಿತಿ ರಾಜ್ಯದ ವಿವಿಧ ಭಾಗಗಳಿಂದ ಮಾಹಿತಿ ಕಲೆ ಹಾಕಿದೆ ಎಂದು ಶಿರಹಟ್ಟಿ ಶಾಸಕ ಚಂದ್ರು ಲಮಾಣಿ ಅಭಿಪ್ರಾಯಪಟ್ಟರು.

ಸೋಮವಾರ ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಇವರು. ರಾಜ್ಯದ ಜನರಿಗೆ ಸರಕಾರ ಆತ್ಮಹತ್ಯೆ ಭಾಗ್ಯ ನೀಡಿದೆ. ಆರೋಗ್ಯ ಇಲಾಖೆಯಲ್ಲಿ ಭ್ರಷ್ಟಾಚಾರ ಹಾಗೂ ಕಳಪೆ ಔಷಧ ಪೂರೈಕೆಯಿಂದ ಶಿಶು ಹಾಗೂ ಬಾಣಂತಿಯರ ಸಾವು ಸಂಭವಿಸುತ್ತಿವೆ. ಕೇಂದ್ರ ಸರಕಾರ ಬಾಣಂತಿಯರಿಗೆ ಜಾರಿಗೆ ತಂದಿರುವ ಯೋಜನೆಗಳನ್ನು ಸಮರ್ಪಕವಾಗಿ ತಲುಪಿಸಲು ರಾಜ್ಯ ಸರಕಾರ ವಿಫಲವಾಗಿದ್ದು ಯೋಜನೆ ಹಣವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದರು.

ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಸತ್ಯಶೋಧನಾ ಸಮಿತಿ ಬಾಣಂತಿಯರ ಸಾವು ಹಾಗೂ ಶಿಶು ಮರಣದ ಕುರಿತು ರಾಜ್ಯಾದ್ಯಂತ ಆಸ್ಪತ್ರೆ ಸೇರಿದಂತೆ ಮೃತರ ಕುಟುಂಬಗಳಿಗೆ ಭೇಟಿನೀಡಿ ಅವರ ನೋವು ಆಲಿಸುವ ಕೆಲಸ ಮಾಡಿದೆ. ಮರಣ ಹೊಂದಿನ ಬಾಣಂತಿಯರ ಕುಟುಂಬಕ್ಕೆ ಸರಕಾರ 25 ಲಕ್ಷ ಪರಿಹಾರ ನೀಡಬೇಕು. ತಾಯಿಯನ್ನು ಕಳೆದುಕೊಂಡ ಅನಾಥ ಮಕ್ಕಳನ್ನು ದತ್ತು ಪಡೆದುಕೊಳ್ಳುವ ನಿಯಮ ರೂಪಿಸಬೇಕು ಎಂದರು.

ಬಾಣಂತಿಯರ ಸಾವಿನ ನೈತಿಕ ಹೊಣೆ ಹೊತ್ತು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕೂಡಲೇ ರಾಜೀನಾಮೆ ಸಲ್ಲಿಸಬೇಕು. ಬಾಣಂತಿಯರ ಸಾವಿನ ಪ್ರಕರಣ ಕುರಿತು ಹೈಕೋರ್ಟ್ ನ್ಯಾಯಾಧೀಶ ನೇತೃತ್ವದಲ್ಲಿ ತನಿಖೆ ನಡೆಸಬೇಕು. ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುವ ನೌಕರರಿಗೆ ಸರಿಯಾದ ವೇತನ ನೀಡುವಂತೆ ಸಮಿತಿ ಆಗ್ರಹಿಸಿದೆ.

ಈ ಸಂದರ್ಭದಲ್ಲಿ ರಾಜ್ಯ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಾ. ಶೋಭಾ ನಿಸಿಮಗೌಡರ, ರಾಜ್ಯ ಉಪಾಧ್ಯಕ್ಷೆ ಡಾ. ವಿಜಯಲಕ್ಷ್ಮಿ ತುಂಗಳ, ರಾಜ್ಯ ಕಾರ್ಯದರ್ಶಿ ಸೋನಾಲಿ ಸರ್ನೋಬತ್, ಸಾಮಾಜಿಕ ಜಾಲತಾಣ ರಾಜ್ಯ ಸಹ ಸಂಚಾಲಕ ಪ್ರದೀಪ್ ಕದಾಡಿ, ರಾಜ್ಯ ಸಾಮಾಜಿಕ ಜಾಲತಾಣ ಸಮಿತಿ ಸದಸ್ಯ ನಿತಿನ್ ಚೌಗಲೆ, ಜಿಲ್ಲಾ ಮಾಧ್ಯಮ ಪ್ರಮುಖ ಸಚಿನ್ ಕಡಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಶಿಲ್ಪಾ ಕೆಕರೆ, ಸಾಮಾಜಿಕ ಜಾಲತಾಣ ಜಿಲ್ಲಾ ಸಂಚಾಲಕ ಸುಭಾಷ್ ಸಣ್ಣವೀರಪ್ಪನವರ,ಮನೋಜ್ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬಿಜೆಪಿ ಸತ್ಯಶೋಧನಾ ಸಮಿತಿ ವತಿಯಿಂದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಶಾಸಕ ಚಂದ್ರು ಲಮಾಣಿ

> **ಬಾಣಂತಿಯರು ಹಾಗೂ ಶಿಶು ಸಾವಿಗೆ ರಾಜ್ಯ ಸರಕಾರದ ನಿರ್ಲಕ್ಷ್ಯ ಧೋರಣೆ ಪ್ರಮುಖ ಕಾರಣ. ಕೇಂದ್ರ ಸರ್ಕಾರ ಬಾಣಂತಿಯರಿಗೆ ನೀಡುವ ಯೋಜನೆಗಳು ಸಮರ್ಪಕವಾಗಿ ತಲುಪುತ್ತಿಲ್ಲ. ಈ ಪ್ರಕರಣದ ಕುರಿತು ಸೂಕ್ತ ತನಿಖೆ ನಡೆಸಿ ಆರೋಪಿಗಳಿಗೆ ಶಿಕ್ಷೆ ನೀಡಬೇಕು ಹಾಗೂ ಮೃತರ ಕುಟುಂಬಕ್ಕೆ ಪರಿಹಾರ ಒದಗಿಸಬೇಕು.**
> ಡಾ. ಸೋನಾಲಿ ಸರ್ನೋಬತ್, ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಕಾರ್ಯದರ್ಶಿ

ಮರಿಯಪ್ಪಗೋಳಗೆ ಸತ್ಕಾರ



ಮರಿಯಪ್ಪ ಮರಿಯಪ್ಪಗೋಳ ಅವರು ಸಮಾಜ ಸೇವಕ ಪ್ರಶಸ್ತಿ ಸ್ವೀಕರಿಸಿದ ಪ್ರಯುಕ್ತ ಡಿ. ಎಸ್. ಎಸ್ ಮುಖಂಡರು ಸತ್ಕರಿಸಿ ಗೌರವಿಸಿದರು.

ಮೂಡಲಗಿ: ಬೆಂಗಳೂರಿನ ನಿತ್ಯೋತ್ಸವ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘದಿಂದ ಪಟ್ಟಣದ ಮರಿಯಪ್ಪ ಮರಿಯಪ್ಪಗೋಳ ಅವರು ಸಮಾಜ ಸೇವಕ ಪ್ರಶಸ್ತಿ ಸ್ವೀಕರಿಸಿದ ಪ್ರಯುಕ್ತ ಇಲ್ಲಿಯ ಸೆಂಟ್ ಮೇರಿ ಶಾಲೆ ಹಾಗೂ ಡಿ. ಎಸ್. ಎಸ್ ಮುಖಂಡರು ಸತ್ಕರಿಸಿ ಗೌರವಿಸಿದರು.

ಡಿ.ಎಸ್.ಎಸ್ ಮುಖಂಡರಾದ ಎಬಿನೇಜರ ಕರಬರನವರ್ ಮತ್ತು ಸತ್ತೇಪ್ಪ ಕರವಾಡಿ ಹಾಗೂ ರಮೇಶ ಮಾದರ ಮಾತನಾಡಿ, ಮೂಡಲಗಿ ಹಾಗೂ ಅರಭಾವಿ ಕ್ಷೇತ್ರದಲ್ಲಿ ತಮ್ಮದೇ ಆದ ರೀತಿಯಲ್ಲಿ ಸಮಾಜ ಸೇವೆ ಮಾಡುತ್ತಿರುವ ಮೂಡಲಗಿ ಪಟ್ಟಣ ಮರೇಪ್ಪಾ ಮರಿಯಪ್ಪಗೋಳ ಅವರ ಸಾಧನೆಗಳನ್ನು ಗುರುತಿಸಿ ಪ್ರಶಸ್ತಿ ನೀಡಿರಿವುದು ಸಂತದ ವಿಷಯ ಎಂದ ಅವರು ಮರಿಯಪ್ಪಗೋಳ ಅವರಿಗೆ ದೇವರು ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಶಕ್ತಿ ನೀಡಲಿ ಎಂದು ಹಾರೈಸಿದರು. ಈ ಸಮಯದಲ್ಲಿ ಸೆಂಟ್ ಮೇರಿಸ್ ಶಾಲೆಯ ಅಧ್ಯಕ್ಷ ಡ್ಯಾನಿಲ್ ಸರ್ವಿ, ಕಿರಣ್ ಮದರ್, ಯಾಕೋಬ ಮತ್ತಿತರು ಉಪಸ್ಥಿತರಿದ್ದರು.

ಭೋವಿ ಜನಜಾಗೃತಿ ಸಮಾವೇಶ ಜ.12ಕ್ಕೆ

ಗೋಕಾಕ: ಅಖಿಲ ಕರ್ನಾಟಕ ಭೋವಿ ಯುವ ವೇದಿಕೆ ಬೆಳಗಾವಿ ಜಿಲ್ಲಾ ಘಟಕದಿಂದ ಜ.12ರ ರವಿವಾರದಂದು ಮುಂಜಾನೆ 10.30ಕ್ಕೆ ನಗರದ ನಗರಸಭೆ ಸಮುದಾಯ ಭವನದಲ್ಲಿ ಜಿಲ್ಲಾ ಮಟ್ಟದ ಸ್ವಾಭಿಮಾನಿ ಭೋವಿ ಜನಜಾಗೃತಿ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ತಾಲೂಕಾಧ್ಯಕ್ಷ ಮಾರುತಿ ಮನವಡ್ಡರ ಹೇಳಿದರು. ಅವರು, ರವಿವಾರದಂದು ಸಂಜೆ ನಗರದಲ್ಲಿ ಕರೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತ, ಸಮಾರಂಭದ ದಿವ್ಯ ಸಾನಿಧ್ಯವನ್ನು ಇಲ್ಲಿಯ ಶೂನ್ಯ ಸಂಪಾದನ ಮಠದ ಶ್ರೀಮುರುಘರಾಜೇಂದ್ರ ಮಹಾಸ್ವಾಮಿಗಳು ವಹಿಸಲಿದ್ದು, ಉದ್ಘಾಟಕರಾಗಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಆಗಮಿಸಲಿದ್ದಾರೆ. ಅಧ್ಯಕ್ಷತೆಯನ್ನು ಅಖಿಲ ಕರ್ನಾಟಕ ಭೋವಿ ಯುವ ವೇದಿಕೆಯ ರಾಜ್ಯಾಧ್ಯಕ್ಷ ವೈ ಕೋಟ್ರೇಶ ವಹಿಸುವರು. ಈ ಸಮಾವೇಶದಲ್ಲಿ ಜಿಲ್ಲೆಯ ಸಂಸದರು, ಶಾಸಕರು, ವಿಧಾನ ಪರಿಷತ ಸದಸ್ಯರು ಆಗಮಿಸಲಿದ್ದು ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಮಾವೇಶವನ್ನು ಯಶಸ್ವಿಗೊಳಿಸುವಂತೆ ಕೋರಿದರು. ಪತ್ರಿಕಾಗೋಷ್ಠಿಯಲ್ಲಿ ವೇದಿಕೆಯ ಜಿಲ್ಲಾಧ್ಯಕ್ಷ ಮಾನಿಂಗ ಬಂಡಿವಡ್ಡರ, ಸಂಘಟನಾ ಕಾರ್ಯದರ್ಶಿ ಪರಶುರಾಮ ವಡ್ಡರ, ಉತ್ತರ ಕರ್ನಾಟಕ ಅಧ್ಯಕ್ಷ ಬಸವರಾಜ ಬಂಡಿವಡ್ಡರ, ಗೋಕಾಕ ತಾಲೂಕು ಉಪಾಧ್ಯಕ್ಷ ಬಸವರಾಜ ವಡ್ಡರ, ವಿವಿಧತಾಲೂಕುಗಳ ಅಧ್ಯಕ್ಷರುಗಳಾದ ಅಶೋಕ ಬಂಡಿವಡ್ಡರ, ಪ್ರಕಾಶ ಕೊಟಬಾಗಿ, ಭೀಮಪ್ಪ ಬಂಡಿವಡ್ಡರ ಇದ್ದರು.

ಶಿವಕುಮಾರ್ ಸಂಬರಗಿಮಠ ಸೇವೆ ಅದ್ವಿತೀಯ

ಬೆಳಗಾವಿ; ಲಿಂಗೈಕ್ಯ ಶಿವಕುಮಾರ್ ಸಂಬರಗಿಮಠ ಅವರು ಎಸ್ ಜಿ ಬಾಳೆಕುಂದ್ರಿ, ತಾಂತ್ರಿಕ ಮಹಾವಿದ್ಯಾಲಯ ಸ್ಥಾಪನೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದರು ಎಂದು ಗದುಗಿನ ಜಗದ್ಗುರು ಡಾ.ತೋಂಟದ ಸಿದ್ಧರಾಮ ಶ್ರೀಗಳು ಹೇಳಿದರು. ಅವರಿಂದು ಬೆಳಗಾವಿಯಲ್ಲಿ ಎಸ್ ಜಿ ಬಾಳೆಕುಂದ್ರಿ ತಾಂತ್ರಿಕ ಮಹಾ ವಿದ್ಯಾಲಯದ ಶಿವಕುಮಾರ ಸಂಬರಗಿಮಠ ಸಭಾಭವನವನ್ನು ಲೋಕಾರ್ಪಣೆಗೊಳಿಸಿ ಆಶೀರ್ವಚನ ನೀಡುತ್ತಿದ್ದರು. ನಾಗನೂರು ರುದ್ರಾಕ್ಷಿ ಮಠದ ಉತ್ತರಾಧಿಕಾರಿಗಳ ನೇಮಕದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದು ಶಿವಕುಮಾರ್ ಸಂಬರಗಿಮಠ ಅವರು ನೆನಪಿಸಿಕೊಂಡರು. ಅಂದು ರಾಜ್ಯದಲ್ಲಿ ಮೊದಲ ಬಾರಿ ಪ್ರತಿನಿಧಿಗಳಲ್ಲದೆ ಕನ್ನಡ ಸಮ್ಮೇಳನಕ್ಕೆ ಆಗಮಿಸಿದ್ದ ಎಲ್ಲರಿಗೂ ಊಟ ಉಪಹಾರದ ವ್ಯವಸ್ಥೆ ಬೆಳಗಾವಿಯಲ್ಲಿ ಮಾಡಲಾಗಿತ್ತು ಅದೆಲ್ಲವೂ ಸಾರ್ವಜನಿಕರ ವಂತಿಗೆಯಿಂದಲೇ ಆಗಿತ್ತು. ನಂತರದ ವರ್ಷಗಳಲ್ಲಿ ಕನ್ನಡ ಸಮ್ಮೇಳನ ಗಳಿಗೆ ಸರಕಾರ ಹಣ ನೀಡಲಾರಂಬಿಸಿತು ಅಲ್ಲಿ ಸಾರ್ವಜನಿಕರ ಒಳಗೊಳ್ಳುವಿಕೆ ಕಡಿಮೆಯಾಗಿ ಸರ್ಕಾರಿ ಕಾರ್ಯಕ್ರಮವಾಗಿ ಹೋಯಿತು ಎಂದವರು ವಿಷಾದಿಸಿದರು.

ಕಾರ್ಯಕ್ರಮದ ನೇತೃತ್ವವನ್ನು ನಾಗನೂರು ರುದ್ರಾಕ್ಷಿ ಮಠದ ಪೀಠಾಧಿಕಾರಿ ಡಾ.ಅಲ್ಲಮ ಪ್ರಭು ಮಹಾಸ್ವಾಮಿಗಳು ವಹಿಸಿದ್ದರು. ಎಸ್ ಜಿ ಬಿ ಐ ಟಿ ಮಹಾ ವಿದ್ಯಾಲಯದ ಕಾರ್ಯಾಧ್ಯಕ್ಷ ಡಾ. ಎಫ್. ವಿ. ಮಾನ್ವಿ ಅಧ್ಯಕ್ಷತೆ ವಹಿಸಿದ್ದರು .ಪ್ರಾಚಾರ್ಯ ಬಿ.ಆರ್ .ಪಟಗುಂದಿ ಸ್ವಾಗತಿಸಿದರು. ಸಿದ್ದರಾಮೇಶ್ವರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಸ್.ಪಿ.ಹಿರೇಮಠ ಮತ್ತು ಶ್ರೀಮತಿ ರಾಜೇಶ್ವರಿ ಶಿವಕುಮಾರ್ ಸಂಬರಗಿಮಠ, ಬಸವರಾಜ ರೊಟ್ಟಿ, ಅವರು ಉಪಸ್ಥಿತರಿದ್ದರು. ಪ್ರೊ. ಮಂಜುನಾಥ್ ಶರಣಪ್ಪನವರ್ ಕಾರ್ಯಕ್ರಮ ನಿರ್ವಹಿಸಿದರು. ಪ್ರೊ. ಶ್ರದ್ಧಾ ಹಿರೇಮಠ ಪ್ರಾರ್ಥನೆ ಸಲ್ಲಿಸಿದರು.ಪ್ರೊ. ಅನಿತಾ ಪಾಟೀಲ್ ವಂದಿಸಿದರು.

ಶಿವಕುಮಾರ ಸಂಬರಗಿಮಠ ಸಭಾಭವನವನ್ನು ಗದುಗಿನ ಜಗದ್ಗುರು ಡಾ.ತೋಂಟದ ಸಿದ್ದರಾಮ ಶ್ರೀಗಳು ಲೋಕಾರ್ಪಣೆಗೊಳಿಸಿ ಆಶೀರ್ವಚನ ನೀಡಿದರು.

> **ಮಿತ ಭಾಷಿಯಾಗಿದ್ದ ಶಿವಕುಮಾರ್ ಅವರ ಹಣಕಾಸು ನಿರ್ವಹಣೆ ಅದ್ವಿತೀಯವಾಗಿತ್ತು. ಬೆಳಗಾವಿಯಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಮೂಲಧನ ಉಳಿಯುವಂತೆ ಮಾಡಿದ್ದು ಶಿವಕುಮಾರ್ ಸಂಬರಗಿಮಠ ಅವರು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಉಳಿತಾಯವಾಗಿದ್ದ 24 ಲಕ್ಷ ರೂಪಾಯಿಗಳನ್ನು ಕನ್ನಡ ಭವನಕ್ಕೆ ಸಿಗುವಂತೆ ಮಾಡಿದ್ದು ಸಂಬರಗಿಮಠ.**
> ಡಾ.ತೋಂಟದ ಸಿದ್ದರಾಮಶ್ರೀಗಳು, ಗದುಗಿನ ಜಗದ್ಗುರು

ಮಾಲಾಧಾರಿಗಳ ಸಾವು ಪರಿಹಾರಕ್ಕೆ ಮನವಿ

ಮೂಡಲಗಿ: ಹುಬ್ಬಳ್ಳಿ ನಗರದಲ್ಲಿ ಅಯ್ಯಪ್ಪ ಮಾಲಾಧಾರಿಗಳು ಮೃತಪಟ್ಟಿರುವ ಹಿನ್ನೆಲೆ ಮೃತರ ಕುಟುಂಬಗಳಿಗೆ ರಾಜ್ಯ ಸರಕಾರದಿಂದ 5 ಲಕ್ಷ ರು. ಕ್ಕಿಂತ ಹೆಚ್ಚಿಗೆ ಪರಿಹಾರ ಘೋಷಣೆ ಮಾಡಬೇಕೆಂದು ಆಗ್ರಹಿಸಿ ಪಟ್ಟಣದಲ್ಲಿ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳು ರವಿವಾರದಂದು ತಹಶೀಲ್ದಾರ ಕಚೇರಿಯ ಸಿಬ್ಬಂದಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಈ ವೇಳೆ ಮಾತನಾಡಿದ ಮೂಡಲಗಿ ಪಟ್ಟಣ ಅಯ್ಯಪ್ಪ ಸ್ವಾಮಿ ಸನ್ನಿಧಾನದ ರವಿ ನೇಸೂರ ಗುರುಸ್ವಾಮಿ ಮಾತನಾಡಿ, ಡಿಸೆಂಬರ್ 22ರಂದು ಹುಬ್ಬಳ್ಳಿಯ ಅಚ್ಚವ್ವನ ಕಾಲೋನಿಯಲ್ಲಿ ಸಿಲಿಂಡರ್ ಸ್ಫೋಟಗೊಂಡು 9 ಮಂದಿ ಅಯ್ಯಪ್ಪ ಮಾಲಾಧಾರಿಗಳು ಗಂಭೀರ ಗಾಯಗೊಂಡಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ 8 ಮಂದಿ ಅಯ್ಯಪ್ಪ ಮಾಲಾಧಾರಿಗಳು ಕೊನೆಯುಸಿರೆಳೆದಿದ್ದಾರೆ. ಸರಕಾರ ಕುಟುಂಬಗಳ ಏಳಿಗೆಗಾಗಿ 5ಲಕ್ಷ ಕ್ಕಿಂತ ಹೆಚ್ಚಿನ ಪರಿಹಾರ ಧನ ನೀಡಬೇಕೆಂದು ಆಗ್ರಹಿಸಿದರು. ಈ ಸಂಧರ್ಭದಲ್ಲಿ ಬಾಳಯ್ಯ ಹಿರೇಮಠ, ದಾದು ಜಂಡೇಕುರುಬರ, ಕೃಷ್ಣ ಗಿರೆಣ್ಣವರ, ಗುರು ಗಂಗನ್ನವರ, ವಿನೋದ ಎಮ್ಮಿ, ಸಂಜು ಕಮತೆ, ಬಸವರಾಜ ಕಬ್ಬೂರ್, ಶಿವು ಮೆಣಸಿ, ಸಂಜು ಕಮತೆ, ಶ್ರೀಶೈಲ್ ವಂಟಗೋಡಿ, ಮೌನೇಶ್ ಬಡಿಗೇರ್, ಹೊಳೆಪ್ಪ ಶಿವಾಪೂರ, ಪ್ರಜ್ವಲ್ ಪುಟಾಣಿ, ಸದಾಶಿವ ಗುಡ್ಲಮನಿ, ರಾಘುವೀರ ಕಪ್ಪಲಗುದ್ದಿ, ಬಸವರಾಜ ತೇಲಿ, ಚಂದ್ರು ಜಂಡೆಕುರುಬರ, ಸುರೇಶ್ ಮೆಳವಕಿ, ಚಿಟ್ಟೆ ಬಾಬು ಹಾಗೂ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಅಕ್ಕಮಹಾದೇವಿ ಕಾಲೇಜಿನ ವಿದ್ಯಾರ್ಥಿನಿಯರ ಸಾಧನೆ

ಬಾಗಲಕೋಟೆ: ಬಿವಿವಿ ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಸಸ್ಯಶಾಸ್ತ್ರ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಾದ ಮಹಿಮಾ ರಾಜಪುರೋಹಿತ್ ಹಾಗೂ ಹೀನಾ ಕಮತರ್ ಅವರು ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಕ್ರಮವಾಗಿ ಮೂರು ಹಾಗೂ ನಾಲ್ಕನೇ ಸ್ಥಾನ ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ. ಈ ವಿದ್ಯಾರ್ಥಿನಿಯರಿಗೆ ಸಂಘದ ಕಾರ್ಯಾಧ್ಯಕ್ಷ ಡಾ. ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಆಡಳಿತಾಧಿಕಾರಿಗಳಾದ ಡಾ. ವಿ.ಎಸ್.ಕಟಗಿಹಳ್ಳಿಮಠ ಅಭಿನಂದನೆ ಸಲ್ಲಿಸಿದ್ದಾರೆ.

ಬನಶಂಕರಿದೇವಿ ಜಾತ್ರೆ 17ರವರೆಗೆ

ಬಾದಾಮಿ: ದಕ್ಷಿಣ ಭಾರತದಲ್ಲಿಯೇ ಸುಪ್ರಸಿದ್ಧ ಸಮೀಪದ ಸುಕ್ಷೇತ್ರ, ಬನಶಂಕರಿ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ 2025 ರಲ್ಲಿ ಜಾತ್ರಾ ಮಹೋತ್ಸವದಲ್ಲಿ ಜ.6 ರಿಂದ 17 ರ ವರೆಗೆ ನಡೆಯಲಿದೆ. ಸೋಮವಾರ ಪೌಷ್ಯ ಶುದ್ಧ ಅಷ್ಟಮಿ ನವರಾತ್ರಿ ಆರಂಭ, ಘಟಸ್ಥಾಪನೆ, ಧ್ವಜಾರೋಹಣ, ಜ.9 ಬುಧವಾರ ರಿಂದ 12 ರವಿವಾರದ ವರೆಗೆ ಹೋಮ ಹವನಾದಿಗಳು, ವಾಹನೋತ್ಸವ ಮತ್ತು ಅಷ್ಟಾವಧಾನ, ಜ.12 ರಂದು ರವಿವಾರ ಪೌಶ್ಯ ಶುದ್ದ ಚತುರ್ದಶಿ ಪಲ್ಲೇದಹಬ್ಬ, ಜ.13 ರಂದು ಸೋಮವಾರ ಪೌಷ್ಯ ಶುದ್ಧ ಪೌರ್ಣಿಮೆ ಸಾಯಂಕಾಲ 5 ಗಂಟೆಗೆ ಮಹಾರಥೋತ್ಸವ ಜರುಗಲಿದ್ದು, ಜ.17 ರಂದು ಶುಕ್ರವಾರ ಪೌಷ್ಯ ಕೃಷ್ಣ ಚತುರ್ಥಿ ಸಾಯಂಕಾಲ 5 ಗಂಟೆಗೆ ಕಳಸ ಇಳಿಯುವುದು. ಈ ರೀತಿ ವಿವಿದ ಕಾರ್ಯಕ್ರಮಗಳು ಜರುಗಲಿದ್ದು, ಭಕ್ತರು ದೇವರ ದರ್ಶನ ಪಡೆದು ಪುನಿತರಾಗಬೇಕೆಂದು ಬನಶಂಕರಿ ದೇವಸ್ಥಾನ ಟ್ರಸ್ಟ್ ಕಮಿಟಿ ಚೇರಮನ್ ವೆಂಕಟಭಟ್ ಪೂಜಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಸಿದ್ಧೇಶ್ವರ ಶ್ರೀಗಳ ಬದುಕು ಕುರಿತು ಪ್ರವಚನ

ರಬಕವಿ-ಬನಹಟ್ಟಿ: 7 ರಂದು ಸಂಜೆ 6 ಕ್ಕೆ ಸಮೀಪದ ಹೊಸೂರಿನ ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಜ್ಞಾನಯೋಗಿ ಸಿದ್ಧೇಶ್ವರ ಸ್ವಾಮೀಜಿಯವರ ಬದುಕು ಅನುಭವಗಳ ಪ್ರವಾಹ ಕುರಿತು ಕಾರ್ಯಕ್ರಮ ನಡೆಯಲಿದೆ. ಸಾನ್ನಿಧ್ಯವನ್ನು ವಿಜಯಪುರ ಜ್ಞಾನಯೋಗಾಶ್ರಮದ ಬಸವಲಿಂಗ ಸ್ವಾಮೀಜಿ ಮತ್ತು ಹಳೇ ಹುಬ್ಬಳ್ಳಿಯ ವೀರಭಿಕ್ಷಾವರ್ತಿ ಮಠದ ಶಿವಶಂಕರ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ. ನೇತೃತ್ವವನ್ನು ಹೊಸೂರಿನ ಪರಮಾನದ ಸ್ವಾಮೀಜಿ, ಹುಳ್ಯಾಳದ ಗುರುದೇವಾಶ್ರಮದ ಹರ್ಷಾನಂದ ಸ್ವಾಮೀಜಿ, ಮೈಗೂರಿನ ಶಿವಾನಂದ ಮಠದ ಗುರುಪ್ರಸಾದ ಸ್ವಾಮೀಜಿ ವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಬೆಂಗಳೂರಿನ ಆಧ್ಯಾತ್ಮಿಕ ಚಿಂತಕಿ ವೀಣಾ ಬನ್ನಂಜೆ ಅನುಭಾದ ನುಡಿಗಳನ್ನಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕನಕಗುರುಪೀಠ ಸಮಿತಿ ತಾಲೂಕಾಧ್ಯಕ್ಷರ ನೇಮಕ

ಬಾದಾಮಿ: ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರುಪೀಠ ಸಮಿತಿಯ ಕಲಬುರ್ಗಿ ವಿಭಾಗದ ವತಿಯಿಂದ ಬಾಗಲಕೋಟೆ ಜಿಲ್ಲೆಯ ಎಲ್ಲ ತಾಲೂಕಿನ ಅಧ್ಯಕ್ಷರನ್ನು ನೇಮಕ ಮಾಡಲಾಗಿದ್ದು, ಬಾದಾಮಿ ತಾಲೂಕಿನ ಅಧ್ಯಕ್ಷರನ್ನಾಗಿ ಯುವಮುಖಂಡ, ನಗರ ಯೋಜನಾ ಪ್ರಾಧಿಕಾರದ ಸದಸ್ಯ, ರಾಜ್ಯ ಪ್ರದೇಶ ಕುರುಬರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಹನಮಂತ ಅಪ್ಪನ್ನವರ ಅವರನ್ನು ನೇಮಕ ಮಾಡಿ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಮಹಾಸ್ವಾಮಿಗಳಾದ ಶ್ರೀ ಸಿದ್ದರಾಮಾನಂದ ಸ್ವಾಮೀಜಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆನಂದದ ಆಲ್ಬಂ
ವಿವಾಹ್
ಪ್ರತಿ ಬುಧವಾರ

{ಡಾ.ಪ್ರಭಾ ಮಲ್ಲಿಕಾರ್ಜುನ್ } ಸಂಸದೆ

ಯುವ ಜನತೆ ದೇಶದ ಶಕ್ತಿ, ದೇಶದ ಭವಿಷ್ಯ ಯುವಕರ ಕೈಯಲಿದೆ. ಚುನಾವಣೆಯಲ್ಲಿ ಒಮ್ಮೆ ಓಟು ಮಾಡಿದರೆ ಸಾಲದು, ಐದು ವರ್ಷ ಸರಕಾರ ರೂಪಿಸುವ ನೀತಿ ನಿರೂಪಣೆ ಅವಲೋಕಿಸುವ ದೃಷ್ಟಿಕೋನ ಬೆಳಸಿಕೊಳ್ಳಬೇಕು.

ವಾರ್ಡ್ ಸಂಖ್ಯೆ 1ರಲ್ಲಿ ಪ್ರಾರ್ಥನಾ ಮಂದಿರ ನಿರ್ಮಾಣಕ್ಕೆ ವಿರೋಧ | ನಗರಸಭೆ ಸಾಮಾನ್ಯ ಸಭೆಯಲ್ಲಿ ಗದ್ದಲ

ಬಿಜೆಪಿ-ಕಾಂಗ್ರೆಸ್ ಸದಸ್ಯರ ನಡುವೆ ವಾಗ್ವಾದ

ಬಾಗಲಕೋಟೆ: ಹಳೇ ಬಾಗಲಕೋಟೆಯ ವಾರ್ಡ್ ಸಂಖ್ಯೆ 1ರ ಕಾಂಟ್ರ್ಯಾಕ್ಟರ್ ಬಡಾವಣೆಯಲ್ಲಿ ಪ್ರಾರ್ಥನಾ ಮಂದಿರ ನಿರ್ಮಿಸುವ ಪ್ರಸ್ತಾವನೆ ಬಿಜೆಪಿ-ಕಾಂಗ್ರೆಸ್ ಸದಸ್ಯರ ನಡುವೇ ತೀವ್ರ ಜಟಾಪಟಿಗೆ ಕಾರಣವಾಯಿತು.

ಇಲ್ಲಿನ ನಗರಸಭೆ ಸಭಾ ಭವನದಲ್ಲಿ ನಗರಸಭೆ ಅಧ್ಯಕ್ಷೆ ಸವಿತಾ ಲೆಂಕಣ್ಣವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡಿದ್ದ ನಗರಸಭೆ ಸಾಮಾನ್ಯ ಸಭೆಯಲ್ಲಿ ಮಸೀದಿ ನಿರ್ಮಾಣಕ್ಕೆ ಬಿಜೆಪಿ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು. ಇದಕ್ಕೆ ಕಾಂಗ್ರೆಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ್ದರಿಂದ ಎರಡು ಪಕ್ಷದ ಸದಸ್ಯರ ನಡುವೆ ವಾಗ್ವಾದ ಜೋರಾಯಿತು.

ಮಸೀದಿ ವಿಷಯ ಪ್ರಸ್ತಾಪವಾಗುತ್ತಿದ್ದಂತೆ ವಾರ್ಡ್ ನಂಬರ್ 1 ಬಿಜೆಪಿ ಸದಸ್ಯೆ ಶೀವಲೀಲಾ ಪಟ್ಟಣಶೆಟ್ಟಿ ಮಾತನಾಡಿ, ಕಾಂಟ್ರ್ಯಾಕ್ಟರ್ ಕಾಲೋನಿಯಲ್ಲಿ ಮಸೀದಿ ನಿರ್ಮಾಣದಿಂದ ಸಮಸ್ಯೆ ಉಂಟಾಗಲಿದೆ. ಅಕ್ಕ ಪಕ್ಕ ಶಾಲಾ, ಕಾಲೇಜು, ಆಸ್ಪತ್ರೆಗಳು ಇವೆ. ದಿನಕ್ಕೆ 5 ರಿಂದ 6 ಸಾರಿ ನಮಾಜ್ ಮಾಡುವುದರಿಂದ ಕಿರಿ ಕಿರಿ ಉಂಟಾಗಲಿದೆ. ಜತೆಗೆ ಅಲ್ಲಿ ಒಂದೇ ಸಮಾಜದ ಜನರಿಲ್ಲ. ಬೇರೆ ಬೇರೆ ಸಮಾಜದವರು ಇದ್ದಾರೆ. ಅವರೂ ಈಗಾಗಲೇ ಆಯುಕ್ತರಿಗೆ ಆಕ್ಷೇಪನೆ ಸಲ್ಲಿಸಿದ್ದಾರೆ. ಈ ವಿಷಯದಲ್ಲಿ ಬಿಜೆಪಿ ಎಲ್ಲ ಸದಸ್ಯರ ವಿರೋಧವಿದೆ ಎಂದು ಸ್ಪಷ್ಟಪಸಿದರು.

ನಗರಸಭೆ ಸದಸ್ಯ ಬಸವರಾಜ ಅವರಾದಿ ಮಾತನಾಡಿ, 2021ರಲ್ಲಿ ನಗರಸಭೆ ಸಾಮಾನ್ಯ ಸಭೆಯಲ್ಲಿ ಸರ್ವ ಸದಸ್ಯರ ಒಪ್ಪಿಗೆ ಮೇರೆಗೆ ಛತ್ರಪತಿ ಶಿವಾಜಿ ಮಹಾರಾಜ ಪುತ್ಥಳಿ, ಅಣ್ಣ ಬಸವೇಶ್ವರ ಪುತ್ಥಳಿ ಸ್ಥಾಪನೆಗೆ ಠರಾವು ಮಾಡಲಾಗಿತ್ತು. ಎಲ್ಲ ಇಲಾಖೆಗಳ ಪರವಾನಿಗೆ ಕೂಡಾ ಸಿಕ್ಕಿತ್ತು. ಆದರೂ ಸಹ ಪುತ್ಥಳಿ ಸ್ಥಾಪನೆಗೆ ಜಿಲ್ಲಾಧಿಕಾರಿಗಳು ಅನುಮತಿ ನೀಡಲಿಲ್ಲ. ಇದೀಗ ಮಸೀದಿ ನಿರ್ಮಾಣಕ್ಕೆ ಹೇಗೆ ಅವಕಾಶ ನೀಡುತ್ತೀರಿ? ಇದು ನ್ಯಾಯವಲ್ಲ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಬಾಗಲಕೋಟೆಯ ನಗರಸಭೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಕಾಂಗ್ರೆಸ್ ಸದಸ್ಯ ಲಕ್ಷ್ಮಣ ಮುಚಖಂಡಿ ಮಾತನಾಡಿದರು.

ಇನ್ನೋರ್ವ ಸದಸ್ಯ ಶ್ರೀನಾಥ ಸಜ್ಜನ ಇದಕ್ಕೆ ಧ್ವನಿಗೂಡಿಸಿ, ಮಸೀದಿಗೆ ಅನುಮತಿ ನೀಡಲು ತರಾತುರಿ ಮಾಡುವ ಇವರು ಶಿವಾಜಿ, ಬಸವೇಶ್ವರ ಪುತ್ಥಳಿ ನಿರ್ಮಾಣದ ಬಗ್ಗೆ ಏಕೆ ಮಾತನಾಡವುದಿಲ್ಲ? ಇದೀಗ ಇಲ್ಲದ ಕಾರಣ ಹೇಳುತ್ತಿದ್ದಾರೆ. ಯಾವುದೇ ಕಾರಣಕ್ಕೆ ಅನುಮತಿ ನೀಡಬಾರದು. ಬಿಜೆಪಿ ಸದಸ್ಯರ ವಿರೋಧವಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರಾದ ಹಾಜಿಸಾಬ್ ದಂಡಿನ, ಖಾಜಿಸಾಬ್ ಹೊನ್ಯಾಳ, ಚನ್ನವೀರ ಅಂಗಡಿ ಮಾತನಾಡಿ, ನಾವು ಶಿವಾಜಿ, ಬಸವೇ ಶ್ವರ ಪುತ್ಥಳಿ ಸ್ಥಾಪನೆಗೆ ವಿರೋಧ ಮಾಡಲಿಲ್ಲ. ಸಾಮಾನ್ಯ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದೇವೆ. ಇದೀಗ ಆರೋಪ ಮಾಡುವುದು ಸರಿಯಲ್ಲ. ಹಿಂದಿನ ಶಾಸಕರು ಸರಕಾರದಿಂದ ಅನುಮತಿ ಪಡೆದುಕೊಳ್ಳಲಿಲ್ಲ. ಪರಿಣಾಮ ಪುತ್ಥಳಿ ಸ್ಥಾಪನೆಗೆ ಹಿನ್ನಡೆಯಾಗಿದೆ. ಅದಕ್ಕೂ ಇದಕ್ಕೂ ಸಂಬಂಧ ಕಲ್ಪಿಸುವುದು ಎಷ್ಟು ಸರಿ? ಅಲ್ಲಿ ಅಲ್ಪಸಂಖ್ಯಾತರಿಗೆ ಪ್ರಾರ್ಥನೆ ಸಲ್ಲಿಸಲು ಯಾವುದೇ ಮಸೀದಿಗಳಿಲ್ಲ. ಅನ್ಯ ಸಮಾಜದವರು ಇಲ್ಲ. ಒಂದೇ ಸಮಾಜದವರು ಇದ್ದಾರೆ. ಇದಕ್ಕೆ ವಿರೋಧ ಮಾಡಬಾರದು. ಧರ್ಮ, ಜಾತಿ ಎಳೆತಂದು ಸಮಾಜದ ಸಾಮರಸ್ಯ ಹದಗೆಡಿಸಬಾರದು ಎಂದರು.

ಸಭೆಯಲ್ಲಿ ಸಭಾಪತಿ ಯಲ್ಲಪ್ಪ ನಾರಾಯಣಿ, ಸದಸ್ಯರಾದ ವಿ.ವಿ.ಶಿರ ಗಣ್ಣವರ್, ನಾಗರತ್ನಾ ಹೆಬ್ಬಳ್ಳಿ, ಸ್ಮಿತಾ ಪವಾರ್, ಶಶಿಕಲಾ ಮಜ್ಜಗಿ, ಅಂಬಾಜಿ ಜೋಶಿ, ಲಕ್ಷ್ಮಣ ಮುಚಖಂಡಿ, ಚನ್ನ ಯ್ಯ ಹಿರೇಮಠ, ಭುವನೇಶ್ವರಿ ಕುಪ್ಪಸ್ತ, ಶಿವಬಸಪ್ಪ ಬಳ್ಳಾರಿ, ಶಾಂತಾ ಹನಮಕ್ಕನವರ್, ರತ್ನಾ ಕೆರೂರ, ಲಕ್ಷ್ಮೀ ಚವ್ಹಾಣ್, ಸಾಗರ ಬಂಡಿ, ಸೀಮಾ ಕೌಸರ್ ನದಾಫ, ದ್ಯಾಮವ್ವ ಸೂಳಿಭಾವಿ, ರಮೇಶ ಕೋಟಿ ಇದ್ದರು.

ಕೌನ್ಸಿಲ್ ನಿರ್ಣಯವೇ ಅಂತಿಮ

ಈ ಜಟಾಪಟಿ ನಡೆಯುವ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಸವಿತಾ ಲಂಕೆಣ್ಣವರ, ಉಪಾಧ್ಯಕ್ಷೆ ಶೋಭಾರಾವ ದಿವ್ಯ ಮೌನ ವಹಿಸಿದ್ದರಿಂದ ಆಡಳಿತರೂಢ ಸದಸ್ಯರಲ್ಲಿ ತೀವ್ರ ಅಸಮಾಧಾನ ಉಂಟು ಮಾಡಿತು. ಕೊನೆಗೆ ಆಯುಕ್ತ ಆರ್. ವಾಸಣ್ಣ ಮಾತನಾಡಿ, ನಗರಸಭೆ ಕೌನ್ಸಿಲ್ ಒಪ್ಪಿಗೆ ನೀಡಿದರೇ ಮಾತ್ರ ನಾವು ಪರವಾನಿಗೆ ನೀಡುತ್ತೇವೆ. ಆದರೇ ಇದಕ್ಕೆ ನಾವು ಸಲಹೆ, ಸೂಚನೆ ನೀಡಲು ಸಾಧ್ಯವಿಲ್ಲ. ಕೌನ್ಸಿಲ್ ನಿರ್ಣಯವೇ ಅಂತಿಮ ಎಂದು ಸ್ಪಷ್ಟಪಡಿಸಿ ಜಟಾಪಟಿಗೆ ತೆರೆ ಎಳೆದರು.

ಸಾರ್ವಜನಿಕರಿಂದ ಛೀಮಾರಿ

ಮುಳಗಡೆ ಪ್ರದೇಶದಲ್ಲಿ ಅಂಗನವಾಡಿ ನಿರ್ಮಾಣ, ಸ್ವಚ್ಛತೆ, ಒಳಚರಂಡಿ ಅವ್ಯವಸ್ಥೆ, ನೀರು ಸರಬರಾಜಿನಲ್ಲಿ ವ್ಯತ್ಯಯ ಕುರಿತು ಪ್ರಶ್ನೆ ಮಾಡಿದ ಸರ್ವ ಸದಸ್ಯರು ನಗರಸಭೆ ಅಧಿಕಾರಿಗಳು, ಸಿಬ್ಬಂದಿಗಳ ಕಾರ್ಯವೈಖರಿಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ವಾರ್ಡ್‌ನಲ್ಲಿ ಜನರಿಗೆ ಉತ್ತರ ನೀಡಲು ಆಗುತ್ತಿಲ್ಲ. ಸುಖಾಸುಮ್ಮನೇ ಕೆಲಸ ಮಾಡುವುದು ಸರಿಯಿಲ್ಲ. 5-6 ತಿಂಗಳಿಂದ ಸ್ವಚ್ಛತೆ ಮಾಡಿಲ್ಲ. ಜನ ನಮಗೆ ಛೀ ಮಾರಿ ಹಾಕುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ಸಹಕಾರಿ ಸಂಘದ ಅಧ್ಯಕ್ಷರಾಗಿ ಪಠಾಣ ಆಯ್ಕೆ

ಗುಳೇದಗುಡ್ಡ: ಪಟ್ಟಣದ ಜಿಂದೇಶಾ ಮದಾರ(ಜೆ.ಎಂ.) ಅಲ್ಪಸಂಖ್ಯಾತರ ಪತ್ತಿನ ಸಹಕಾರಿ ಸಂಘದ ನೂತನ ಅಧ್ಯಕ್ಷರಾಗಿ ಅನ್ವರಖಾನ ಪಠಾಣ ಹಾಗೂ ಉಪಾಧ್ಯಕ್ಷರಾಗಿ ಲಾಲಸಾಬ ಬಾಗವಾನ ಆಯ್ಕೆಯಾಗಿದ್ದಾರೆ.

ಶನಿವಾರ ನಡೆದ ಸಂಘದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಂದೊಂದು ನಾಮಪತ್ರಗಳು ಸಲ್ಲಿಕೆಯಾಗಿದ್ದರಿಂದ ಅಧ್ಯಕ್ಷರಾಗಿ ಅನ್ವರಖಾನ ಪಠಾಣ ಹಾಗೂ ಉಪಾಧ್ಯಕ್ಷರಾಗಿ ಲಾಲಸಾಬ ಬಾಗವಾನ ಅವಿರೋಧವಾಗಿ ಆಯ್ಕೆಯಾದರು ಎಂದು ಚನಾವಣಾಧಿಕಾರಿ ಆರ್.ಎನ್.ಗಡ್ಡಿ ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಆಯ್ಕೆಯಾದ ಅನ್ವರಖಾನ ಪಠಾಣ ಮಾತನಾಡಿ, ಸಂಘದ ಆಡಳಿತ ಮಂಡಳಿಯ ಸದಸ್ಯರು ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದು, ಸಂಘದ ಅಭಿವೃದ್ಧಿಗೆ ಎಲ್ಲರೂ ಕೂಡಿ ಶ್ರಮಿಸೋಣ, ಗ್ರಾಹಕರಿಗೆ ಹೆಚ್ಚಿನ ಅನುಕೂಲ ಒದಗಿಸೋಣ ಎಂದರು.

ಈ ಸಂದರ್ಭದಲ್ಲಿ ಸದಸ್ಯರಾದ ಅಕೀದಅಹ್ಮದ ಅತ್ತಾರ, ಇಬ್ರಾಹಿಂಸಾಬ ಬಾಗವಾನ, ಖಾಜಾಅಮೀನ ಬಾಗವಾನ, ಚಾಂದಸಾಬ ಪೆಂಡಾರಿ, ಮಾಬೂಷಾ ಮಕಾಂದಾರ, ರಾಜಮಹ್ಮದ ಕುದರಿ, ಖಾದಿರಶಾ ಮಕಾಂದಾರ, ಇಮಾಂಬಿ ಮಕಾಂದಾರ, ರಾಜಾಬಿ ಕೌಂಟಿಗೌಡ್ರ, ಹಾಗೂ ಕಾನೂನು ಸಲಹೆಗಾರ ಕೆ.ಆರ್. ರಾಯಚೂರ, ಬುಡ್ನೆಸಾಬ ಬಾಗವಾನ, ಹುಸೇನಸಾಬ ಬಾಗವಾನ, ಎಂ.ಎಂ. ಮಕಾಂದಾರ, ಲಾಲಸಾಬ ಅತ್ತಾರ, ಬಾಷಾಸಾಬ ಸಾದನಿ, ಖಲೀಲ ಕೊತ್ತಲ, ಸಲೀಮ ಇಲಕಲ್ಲ, ಚಂದ್ ಹನಮಸಾಗರ, ಅಕ್ತರಹುಸೇನ ಅಫಘಾನ, ಎಚ್.ಎಂ. ಮಕಾನದಾರ, ಇಸ್ಮಾಯಿಲ್‌ಸಾಬ ಬಾಗವಾನ, ಲಾಲ್‌ಸಾಬ ಕೌಂಟಿಗೌಡ್ರ ಮತ್ತಿತರರು ಇದ್ದರು.

ಗುಳೇದಗುಡ್ಡದ ಜಿಂದೇಶಾ ಸಹಕಾರಿ ಸಂಘದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು.

ಫೆ.22ರಿಂದ ರನ್ನ ವೈಭವ ಆಚರಿಸಲು ನಿರ್ಧಾರ

ಬಾಗಲಕೋಟೆ: ಹಲವು ವರ್ಷಗಳಿಂದ ಸ್ಥಗಿತಗೊಂಡಿದ್ದ ಮುಧೋಳ ರನ್ನವೈಭವವನ್ನು ಫೆಬ್ರವರಿ 22, 23 ಹಾಗೂ 24 ರಂದು ಮೂರು ದಿನಗಳ ಕಾಲ ಹಮ್ಮಿಕೊಳ್ಳಲು ಜಿಲ್ಲಾಡಳಿತ ನಿರ್ಧರಿಸಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ಇಲ್ಲಿನ ಜಿಲ್ಲಾಡಳಿತ ಭವನದಲ್ಲಿ ರನ್ನ ವೈಭವ ಆಚರಣೆ ಕುರಿತಂತೆ ಪೂರ್ವಭಾವಿಯಾಗಿ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲಾಡಳಿತ, ಜಿಪಂ, ರನ್ನ ಪ್ರತಿಷ್ಠಾನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿಯಾಗಿ ರನ್ನ ವೈಭವ-2025ನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದೆ. ಕಾರ್ಯಕ್ರಮ ರೂಪುರೇಷೆ ತಯಾರಿಸಲು ವಿವಿಧ ರೀತಿಯ ಸಮಿತಿಗಳನ್ನು ರಚಿಸಲಾಗುತ್ತಿದ್ದು, ಪ್ರತಿಯೊಂದು ಸಮಿತಿಯವರು ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸಬೇಕು ಎಂದರು.

ರನ್ನ ವೈಭವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಜತೆಗೆ ಕ್ರೀಡೆಗಳನ್ನು ಸಹ ಆಯೋಜನೆ ಮಾಡಲಾಗುತ್ತಿದೆ. ಅಧಿಕಾರಿಗಳು ತಮಗೆ ಯಾವುದರ ಮೇಲೆ ಆಸಕ್ತಿ ಇರುವುದು ಅಂತಹ ಸಮಿತಿಗಳಲ್ಲಿ ತೊಡಗಿಸಿಕೊಂಡು ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಸಲು ಸನ್ನದ್ದರಾಗಬೇಕು. ಆಚರಣೆ ಸಂಬಂಧಿಸಿದಂತೆ ಸಾಂಸ್ಕೃತಿಕ ಕಾರ್ಯಕ್ರಮ, ಕವಿಗೋಷ್ಠಿ, ವಿಚಾರಗೋಷ್ಠಿ ಸೇರಿದಂತೆ ಇತರೆ ವಿಷಯಗಳ ಕುರಿತು ಸಾರ್ವಜನಿಕರು, ಕಲಾ ಆಸಕ್ತರು, ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಜಿಪಂ ಸಿಇಒ ಶಶಿಧರ ಕುರೇರ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ಹಾಗೂ ಶ್ವೇತಾ ಬೀಡಿಕರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ವಿವೇಕಾನಂದ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಜಶೇಖರ ಪಟ್ಟಣಶೆಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ ಜೈನಾಪೂರ ಸೇರಿದಂತೆ ಇತರರಿದ್ದರು.

ಬಾಗಲಕೋಟೆಯ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಅಧ್ಯಕ್ಷತೆಯಲ್ಲಿ ರನ್ನ ವೈಭವ ಪೂರ್ವಭಾವಿ ಸಭೆ ಜರುಗಿತು.

ಹೊಸ ತಾಲೂಕು ಘೋಷಣೆವರೆಗೆ ಹೋರಾಟ ನಿಲ್ಲದು: ಸಂಗಪ್ಪ ಹಲ್ಲಿ

ಮಹಾಲಿಂಗಪುರ ಸ್ಥಳೀಯ ರಾಣಿ ಚನ್ನಮ್ಮ ವೃತ್ತದಲ್ಲಿ ತಾಲೂಕಾ ಹೋರಾಟಗಾರರು ಮಾನವ ಸರಪಳಿ ನಿರ್ಮಿಸಿ,ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಮಹಾಲಿಂಗಪುರ: ಸತತ ಒಂದು ಸಾವೀರದಿನಗಳನ್ನು ಪೂರೈಸಿದ ತಾಲೂಕಾ ಹೋರಾಟ ಸಮೀತಿಯು ಎಲ್ಲ ಸೌಕರ್ಯವುಳ್ಳ ಮಹಾಲಿಂಗಪುರವನ್ನು ತಾಲೂಕಾಗಿ ಘೋಷಿಸಬೇಕೆಂದು ಸೋಮವಾರ ಸ್ಥಳೀಯ ಬಸವೇಶ್ವರ ವೃತ್ತದಿಂದ ಪ್ರತಿಭಟನಾ ಪಾದಯಾತ್ರೆ ಮೂಲಕ ಡಬಲ್ ರಸ್ತೆ, ನಡುಚೌಕಿ, ಜವಳೀ ಬಜಾರ, ಗಾಂಧಿ ವೃತ್ತದ ಮೂಲಕ ರಾಣೀ ಚನ್ನಮ್ಮ ವೃತ್ತ ತಲುಪಿ ಅಲ್ಲಿ ಮಾನವ ಸರಪಳಿ ನಿರ್ಮಿಸಿ ಸ್ವಲ್ಪ ಸಮಯ ಪ್ರತಿಭಟನೆ ನಡೆಸಿ, ರಸ್ತೆ ತಡೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ತಾಲೂಕಾ ಹೋರಾಟ ಸಮೀತಿ ಅಧ್ಯಕ್ಷ ಸಂಗಪ್ಪ ಹಲ್ಲಿ ಮಾತನಾಡಿ ಯಾವುದೇ ಸರಕಾರಗಳು ಬರೀ ಮಾತಿನಲ್ಲಿ ಹೇಳುತ್ತಲೆ ಇವೆ ಆದರೆ ಕೃತಿಯಲ್ಲಿ ಮಾತ್ರ ಏನು ಮಾಡುತ್ತಿಲ್ಲ, ಆದರಂತೆ ಜಿಲ್ಲಾಧಿಕಾರಿಗಳು ಕೂಡಾ ಒಂದು ಬಾರಿಯೂ ಸಹ ಹೋರಾಟ ಸ್ಥಳಕ್ಕೆ ಬಂದಿಲ್ಲ, ನಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸಿಲ್ಲ, ಇನ್ನಾದರು ಜಿಲ್ಲಾಧಿಕಾರಿಗಳು ಹೋರಾಟ ಸ್ಥಳಕ್ಕೆ ಬಂದು ನಮ್ಮ ತಾಲೂಕಿನ ಬಗ್ಗೆ ಸರಕಾರಕ್ಕೆ ಕಳಿಸಿರುವ ವರದಿಯನ್ನು ತಿಳಿಸಲು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಮಖಂಡಿ ಅಸಿಸ್ಟೆಂಟ್ ಕಮೀಷನರ್ ಸ್ವೇತಾ ಬೀಡಿಕರ ನಾವು ಮತ್ತು ತಹಸೀಲ್ದಾರ್ ಸೇರಿ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮಹಾಲಿಂಗಪುರ ತಾಲೂಕಾಗಲು ಪ್ರಸ್ತಾವನೆ ಕಳಿಸಿದ್ದೇವೆ, ಕಾರಣ ಚಿಕ್ಕ ಪುಟ್ಟ ಸಮಸ್ಯೆಗಳಿರುವುದರಿಂದ ಸ್ವಲ್ಪ ತಡವಾಗಿದೆ ಕಾರಣ. ಈ ವಿಷಯ ಕುರಿತು ಡಿಸಿ ಸಭೆ ಕರೆದಿದ್ದಾರೆ. ಅವರೊಂದಿಗೆ ಎಲ್ಲತರಹದ ವಿಚಾರ ಮಾಡಿ ಮುಂದಿನ ಎರಡು ದಿನಗಳಲ್ಲಿ ಜಿಲ್ಲಾದಿಕಾರಿಗಳನ್ನು ಇಲ್ಲಿ ಕರೆದುಕೊಂಡು ಬಂದು ನಿಮ್ಮೊಂದಿಗೆ ಚರ್ಚಿಸುವ ಪ್ರಮಾಣಿಕ ಪ್ರಯತ್ನ ಮಾಡುತ್ತೇವೆ ಎಂದರು.

ಎ.ಸಿಯವರ ಮಾತಿಗೆ ಬೆಲೆಕೊಂಡು ಪ್ರತಿಭಟನೆಯನ್ನು ಶುಕ್ರವಾರದ ತನಕ ತಡೆಹಿಡಿದ ಪ್ರತಿಭಟನಾಕಾರರು, ಮುರು ದಿನ ಕಾಯ್ದು ಜಿಲ್ಲಾಧಿಕಾರಿಗಳ ಬೇಟಿಯ ನಂತರ ಮುಂದಿನ ಪ್ರತಿಭಟನೆಯ ಸ್ವರೂಪವನ್ನು ತಿಳಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ರಾಜಕೀಯ ಮುಖಂಡರು, ರೈತರು, ಅಂಗಡಿಕಾರರು, ಹೋರಾಟಗಾರು ಸೇರಿದಂತೆ ಹಲವರು ಇದ್ದರು.

ಚಳಿಯಲ್ಲೂ ಪತ್ರಿಕಾ ವಿತರಕರ ನಿಲ್ಲದ ಕಾಯಕ

ಚಳಿಗೆ ಹೊರಬಾರದ ಜನತೆ

ಹುಚ್ಚೇಶ ಯಂಡಿಗೇರಿ ಗುಳೇದಗುಡ್ಡ

ಕಳೆದ ಒಂದುವಾರದಿಂದ ಗುಳೇದಗುಡ್ಡ ಪಟ್ಟಣ ದಲ್ಲಿ ಚಳಿ ಆವರಿಸಿದೆ. ಪಟ್ಟಣದ ಜನತೆ ಬೆಳಿಗ್ಗೆ ಉರಿಹಚ್ಚಿ ಕೈಕಾಲುಗಳುನ್ನು ಕಾಯಿಸಿಕೊಳ್ಳುತ್ತಿರುವ ದೃಶ್ಯ ಈಗ ಸಾಮಾನ್ಯವಾಗಿದೆ. ಬೇಸಿಗೆಯಲ್ಲಿ ಉರಿ ಬಿಸಿಲಿಗೆ ನಲುಗಿದ್ದ ಪಟ್ಟಣದ ಜನರು ಈಗ ಚಳಿಚಳಿಗೆ ತತ್ತರಿಸುತ್ತಿದ್ದಾರೆ.

ಕಳೆದ ಒಂದುವಾರದಿಂದ ತಾಲೂಕಿನನಲ್ಲಿ ದಿನದಿಂದ ದಿನಕ್ಕೆ ಚಳಿ ಹೆಚ್ಚಾಗುತ್ತಿದೆ. ಬೆಳಿಗ್ಗೆ ಮಂಜಿನಿಂದ ಆವೃತವಾಗಿದೆ. ಮುಂದಿನ ದಿನಗಳಲ್ಲಿ ಚಳಿ ಇನ್ನೂ ಹೆಚ್ಚಾಗಲಿದೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಹೊರ ಬಂದ ಬೆಚ್ಚಗಿನ ಉಡುಪುಗಳು: ಕಳೆದ ಚಳಿಗಾಲ ಮುಗಿದ ಬಳಿಕ ತೊಳೆಯಿಸಿಕೊಂಡು ಮೂಲೆ ಸೇರಿದ್ದ ಸ್ವೆಟರ್, ಜಾಕೇಟ್, ಮಂಕಿಕ್ಯಾಪ್ ಸೇರಿದಂತೆ ಅನೇಕ ಬೆಚ್ಚನೆಯ ಬಟ್ಟೆಗಳನ್ನು ಬಳಸುತ್ತಾರೆ.

ಸಂಜೆ ಸೂರ್ಯ ಮುಳುಗುತ್ತಿದ್ದಂತೆಯೇ ಮತ್ತೆ ಬೆಚ್ಚಗಿನ ಬಟ್ಟೆಗಳಿಗೆ ಮೊರೆ ಹೋಗುತ್ತಿರುವ ದೃಶ್ಯ ಸಾಮಾನ್ಯವಾಗಿದೆ. ಬೆಚ್ಚನೆಯ ಉಡುಪುಗಳ ಮಾರಾಟ ಜೋರಾಗಿ ನಡೆಯುತ್ತಿದೆ.

ಗುಳೇದಗುಡ್ಡದ ಪಟ್ಟಣದಲ್ಲಿ ಬೆಳಿಗ್ಗೆ ಊರಿ ಕಾಯಿಸುತ್ತಿರುವ ಸಾರ್ವಜನಿಕರು

ಚಳಿಗಾಳಿಮಳೆ ಲೆಕ್ಕಿಸದೇ ಪತ್ರಿಕಾವಿತರಕರು ನಿತ್ಯ ಬೆಳಗಿನಜಾವ ಮನೆ ಮನೆಗೆ ಪತ್ರಿಕೆಗಳನ್ನು ವಿತರಿಸುತ್ತಿರುವರ ಕಾರ್ಯ ಅನನ್ಯವಗಿದ್ದು, ಇಂತ ಕಾಯಕ ಜೀವಿಗಳಿಗೆ ಸರಕಾರ ಆರೋಗ್ಯ ವಿಮೆಯೋಜನೆ ಸೇರಿದಂತೆ ಅನೇಕ ಸರಕಾರ ಸೌಲಭ್ಯ ನೀಡಬೇಕು.

– ರವಿ ಅಂಗಡಿ, ಕರವೇ ಅಧ್ಯಕ್ಷರು, ಗುಳೇದಗುಡ್ಡ ತಾಲೂಕು

ಒಂದು ವಾರದಿಂದ ಅಧಿಕ ಚಳಿ ಇದ್ದು, ಚಿಕ್ಕಮಕ್ಕಳಿಗೆ ಕಫ ಗಟ್ಟಿ ಗೊಂಡು ಕಾಯಿಲೆಗೆ ತುತ್ತಾಗುತ್ತಾರೆ, ಕೆಮ್ಮು, ನೆಗಡಿ ಬರುವು. ಆದ್ದರಿಂದ ಮಕ್ಕಳಿಗೆ ಹಿರಿಯ ನಾಗರಿಕರಿಗೆ ಬೆಚ್ಚಗಿನ ಬಟ್ಟೆ ಹಾಕಿ, ಹೆಚ್ಚಾಗಿ ಹೊರಗೆ ಬರದಂತೆ ನೋಡಿಕೊಳ್ಳಿ. ಆರೋಗ್ಯದ ಮೇಲೆ ನಿಗಾ ಇರಲಿ.

-ಡಾ. ನಾಗರಾಜ ಕುರಿ. ಮುಖ್ಯವೈದ್ಯದಿಕಾರಿಗಳು

ಮಕ್ನೋದ ಕಮುಯೂ ಕೇಂದ್ರ ಕಚೇರಿಗೆ ಭೇಟಿ

ಇಳಕಲ್ಲ: ಕರ್ನಾಟಕ ರಾಜ್ಯದ ಧರ್ಮಗುರು ಮೌಲಾನಾ ಇಮ್ರಾನ್ ಮಕ್ನೋದ ಅವರು ನಗರದ ಕರ್ನಾಟಕ ಮುಸ್ಲಿಂ ಯೂನಿಟಿ ಕೇಂದ್ರ ಕಚೇರಿಗೆ ಭೇಟಿ ನೀಡಿ ಸನ್ಮಾನ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ರಾಜ್ಯಧ್ಯಕ್ಷ ಜಬ್ಬಾರ್ ಕಲಬುರ್ಗಿ ರಾಜ್ಯದ ಜ್ವಲಂತ ಸಮಸ್ಯೆಗಳ ಕುರಿತು ಚರ್ಚೆ ನಡೆಸಿದರು. 2ಬಿ ಮಿಸಲಾತಿ ವಿಷಯ ಸರಕಾರದ ಗಮನಕ್ಕೆ ತರುವಲ್ಲಿ ಉಲೇಮಾಗಳು ಕಾಳಜಿ ವಹಿಸುವಂತೆ ಮನವಿ ಮಾಡಿದರು.

ಈ ವಿಷಯಕ್ಕೆ ಸಂಬಂಧಿಸದಂತೆ ಶ್ರೀಗಳು ಕರ್ನಾಟಕ ಮುಸ್ಲಿಂ ಯೂನಿಟಿ ನಡೆಸುತ್ತಿರುವ ಹೋರಾಟ ಸಮಾಜದ ಕಾಳಜಿಯಿಂದ ಕೂಡಿದ್ದಾಗಿದೆ. ಸದಾ ನಿಮ್ಮ ಹೋರಾಟದೊಂದಿಗೆ ನಾನು ಇದ್ದೇನೆ. ಬೇಗನೆ ನಿಮ್ಮ ಹೋರಾಟಕ್ಕೆ ಜಯ ಸಿಗಲಿದೆ ಎಂದು ಹಾರೈಸಿದರು

ಈ ಸಂದರ್ಭದಲ್ಲಿ ಜಿಲ್ಲಾ ವಕ್ಫ ಅಧ್ಯಕ್ಷ ಮಹಬೂಬ ಸರಕಾವಸ, ಮುಫ್ತಿ ಇರ್ಫಾನ್ ವೆಂಕಟಾಪೂರ, ಇಮಾಮಹುಸೇನ ಲಟಗೇರಿ ರಫೀಕ್ ನದಾಫ಼, ಹಾಮಿದ ರೇಶ್ಮಿ, ರಂಜಾನ್ ಭನ್ನು, ಅಬ್ದುಲ್ ಮೆದಿಕಿನಾಳ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮಕ್ಕಳಿಗೆ ಪಾಠದ ಜತೆಗೆ ಕ್ರೀಡೆ ಮುಖ್ಯ

ಬೀಳಗಿ: ಪ್ರಾಥಮಿಕ ವಿಭಾಗದಲ್ಲಿ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಬಗ್ಗೆ ರಸಪ್ರಶ್ನೆ ಮೂಲಕ ಅರಿವು ಮೂಡಿಸುತ್ತಿರುವ ರೊಳ್ಳಿಯ ಕರ್ನಾಟಕ ಪಬ್ಲಿಕ ಶಾಲೆ ಶಿಕ್ಷಕರ ಕಾರ್ಯ ಶ್ಲಾಘನೀಯವಾದುದು ಎಂದು ಭಾರತೀಯ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ ವಿರುಪಾಕ್ಷಯ್ಯ ಹಿರೇಮಠ ಪ್ರಂಶಸೆ ವ್ಯಕ್ತಪಡಿಸಿದರು. ತಾಲೂಕಿನ ರೊಳ್ಳಿ ಗ್ರಾಮದ ಕರ್ನಾಟಕ ಪಬ್ಲಿಕ ಶಾಲೆಯಲ್ಲಿ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳಿಗೆ ಏರ್ಪಡಿಸಿದ ರಸಪ್ರಶ್ನೆ ಹಾಗೂ ಬಿಲ್ಲು ಹಬ್ಬ ಬಯಲು ಕಿರು ನಾಟಕೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದರು. ಈಗ ಸರಕಾರಿ ಉದ್ಯೋಗ ಪಡೆಯಬೇಕಾದರೆ ಪ್ರತಿಯೊಬ್ಬರು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬೇಕಾಗಿದ್ದು ಈಗಿನಿಂದಲೇ ರಸಪ್ರಶ್ನೆ ಕಾರ್ಯಕ್ರಮ ಸಹಾಯಕವಾಗಲಿದೆ ಪ್ರತಿ ಶನಿವಾರಕೊಮ್ಮೆ ನಡೆಯುತ್ತಿರುವದು ಮಕ್ಕಳ ವಿದ್ಯಾರ್ಜನೆಗೆ ಅನೂಕೂಲವಾಗಲಿದೆ, ಆರೋಗ್ಯದ ಹಿತದೃಷ್ಟಿಯಿಂದ ಮಕ್ಕಳಿಗೆ ಪಾಠದ ಜೊತೆಗೆ ಕ್ರೀಡೆಯಲ್ಲಿ ತೊಡಗಿಸಿಕೊಳ್ಳವಲ್ಲಿ ಶಿಕ್ಷಕರು ಶ್ರಮಿಸಬೇಕು ಎಂದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯಗುರುಗಳಾದ ಎಸ್ ವೈ ಬಜಂತ್ರಿ ವಹಿಸಿದ್ದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಮಂಜುನಾಥ ಹಮನಿ,ಎಂ.ಕೆ ಗಲಗಲಿ,ಟಿ ವಾಯ್ ರಾಥೋಡ, ಮುತ್ತಯ್ಯ ವಿಭೂತಿ ಸಂಗಮೇಶ ಕುಬಕಡ್ಡಿ, ಜಗದೀಶ ಹಳ್ಳೂರ, ಶಿಕ್ಷಕಿಯರಾದ ರೇಣುಕಾ ತಳವಾರ,ಮಹಾದೇವಿ ಜ್ಯಾಲಿ,ಪ್ರೀತಿ ಪಾಟೀಲ, ಅಕ್ಷತಾ ಕುಂಬಾರ,ಕಾವ್ಯ ಬಜಂತ್ರಿ ಇದ್ದರು.

ಪುನರ್ವಸತಿ ಕೇಂದ್ರಕ್ಕೆ ಸೌಕರ್ಯ ಕಲ್ಪಿಸಿ: ಶಾಸಕ

ಬೀಳಗಿ: ಮತಕ್ಷೇತ್ರದಲ್ಲಿರುವ ಎಲ್ಲ ಪುನರ್ವಸತಿ ಕೇಂದ್ರಗಳಿಗೆ ಸಂಪೂರ್ಣ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಯೋಜನೆಯನ್ನು ರೂಪಿಸಲಾಗದ್ದು ಬರಲಿರುವ ದಿನಗಳಲ್ಲಿ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವದು ಎಂದು ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷ, ಶಾಸಕ ಜೆ.ಟಿ.ಪಾಟೀಲ ಹೇಳಿದರು.

ತಾಲೂಕಿನ ಯಳ್ಳಿಗುತ್ತಿ, ಹೆರಕಲ್ಲ, ಕಂದಗಲ್ಲ, ರೊಳ್ಳಿ, ಗೋವಿನದಿನ್ನಿ, ಟಕ್ಕಳಕಿ, ಪುನರ್ವಸತಿ ಕೇಂದ್ರಗಳಲ್ಲಿ ಕೃಷ್ಣಾ ಮೆಲ್ದಂಡೆ ಯೋಜನೆ ಪುನರ್ವಸತಿ ಉಪವಿಭಾಗ 5ರ ಕೆಬಿಜೆಎನ್ ಎಲ್ ವಿಶೇಷ ಅನುದಾನದಡಿಯಲ್ಲಿ ಅಂತರಿಕ ರಸ್ತೆ ಡಾಂಬರೀಕರಣ ನಿರ್ಮಾಣ, ಶಾಲಾ ಶೌಚಾಲಯಗಳು ಕಟ್ಟಡ ನಿರ್ಮಾಣ, ಚರಂಡಿ ನಿರ್ಮಾಣ, ಸಾರ್ವಜನಿಕ ಸ್ತಳಗಳ ಅಭಿವೃದ್ಧಿ, ಸ್ಮಶಾನಗಳಲ್ಲಿ ತಂಗುದಾನ, ಚಿತಾಗಾರ ಕಟ್ಟಡ, ನೂತನ ಶಾಲಾ ಕಟ್ಟಡ ಕಾಮಗಾರಿ ಸೇರಿದಂತೆ 6 ಕೋಟಿ 10 ಲಕ್ಷ ರು. ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಸಂಬಂದ್ಧಪಟ್ಟ ಅಧಿಕಾರಿಗಳು ಕಟ್ಟು ನಿಟ್ಟಾಗಿ ನಿಗಧಿತ ಅವಧಿಯಲ್ಲಿ ಗುಣಮಟ್ಟದ ಕಾಮಗಾರಿಯಾಗುವಂತೆ ನಿಗಾವಹಿಸಿ ಕಾಮಗಾರಿ ಕಳಪೆಯಾಗದಂತೆ ನಿಗಾವಹಿಸಬೇಕು ಜತೆಗೆ ಗ್ರಾಮಸ್ಥರು ಕಾಮಗಾರಿಗಳ ಕುರಿತಾಗಿ ಕಾಳಜಿ ವಹಿಸಿ ಅಧಿಕಾರಿಗಳ ಹಾಗೂ ನನ್ನ ಗಮನಕ್ಕೆ ತರಬೇಕು ಎಂದರು.

ಸಂದರ್ಭದಲ್ಲಿ ಕೊರ್ತಿ ಗ್ರಾಪಂ ಅಧ್ಯಕ್ಷೆ ಪ್ರೇಮಾ ಮಾದರ, ಬ್ಲಾಕ ಕಾಂಗ್ರೆಸ ಅಧ್ಯಕ್ಷ ಹಣಮಂತ ಕಾಖಂಡಕಿ, ತಾಪಂ ಮಾಜಿ ಅಧ್ಯಕ್ಷ ಶ್ರೀಶೈಲ ಸೂಳಿಕೇರಿ, ಮಾಜಿ ಜಿಪಂ ಸದಸ್ಯ ಯಮನಪ್ಪ ರೊಳ್ಳಿ, ಟಿ ಆರ್ ಪಾಟೀಲ,ನಾಗಪ್ಪ ಬಿರಾದಾರ, ಸಿದ್ದು ಸಾರಾವರಿ, ಬಿಇಓ ಆರ್ ಎಸ್ ಆದಾಪೂರ, ಗುತ್ತಿಗೆದಾರರು ಕೆಬಿಜೆಎನ್‌ಎಲ್ ಇಲಾಖೆ ಅಧಿಕಾರಿಗಳು ಮತ್ತಿತರರು ಇದ್ದರು.

ಪುನರ್ವಸತಿ ಕೇಂದ್ರಗಳಲ್ಲಿ ಶೇ 50ಕ್ಕೂ ಹೆಚ್ಚು ಜನಸಂಖ್ಯೆ ವಾಸವಾಗಿದ್ದಾರೋ ಅಂತಹ ಪುಕೆಗಳ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗಿದ್ದು ಬರುವ ಬಜೆಟ್‌ನಲ್ಲಿ ಪಟ್ಟಣ ಮತ್ತು ಗ್ರಾಮೀಣ ಭಾಗಗಳಲ್ಲಿ ಆಗಬೇಕಿರುವ ಅಭಿವೃದ್ಧಿ ಕೆಲಸ ಜತೆಗೆ ಹೊಸ ನೀರಾವರಿ ಯೋಜನೆಗಳನ್ನು ಸಿದ್ದ ಮಾಡಿ ಅವುಗಳನ್ನು ಜಾರಿಗೆ ತರಲಾಗುವುದು.

-ಜೆ.ಟಿ.ಪಾಟೀಲ ಶಾಸಕರು ಬೀಳಗಿ

ಮೂರು ಬೈಕ್ ಕಳವು ಆರೋಪಿ ಬಂಧನ

ಬಾದಾಮಿ: ಇತ್ತಿಚಿಗೆ ವಾಹನಗಳ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪೊಲೀಸ್ ಸಿಬ್ಬಂದಿ ಅನಿರೀಕ್ಷಿತ ಕಾರ್ಯಾಚರಣೆ ಮಾಡುವಾಗ ಸಂಶಾಯಸ್ಪದ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ, ಬೈಕ್ ಕಳ್ಳ ಪೊಲೀಸರ ಕೈಗೆ ಸಿಕ್ಕಿ ಬಿದ್ದಿದ್ದಾನೆ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಬಿಜಕಲ್ಲ ಗ್ರಾಮದ ಮಂಜುನಾಥ ಹಿರೇಯಮನೂರಪ್ಪ ವಡ್ಡರ ಎಂಬ ಆರೋಪಿಯನ್ನು ಬಂಧಿಸಲಾಗಿದ್ದು, ಆರೋಪಿಯಿಂದ 1ಲಕ್ಷ 40 ಸಾವಿರ ಮೌಲ್ಯದ ಮೂರು ಬೈಕ್ ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪಿ.ಎಸ್.ಐ(ಅ.ವಿ)ವಿಜಯಕುಮಾರ ರಾಠೋಡ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಸಿಪಿಐ ಕರೆಪ್ಪ ಬನ್ನೆ, ಪಿ.ಎಸ್.ಐ.ವಿಠ್ಠಲ ನಾಯಕ ಮತ್ತು ಸಿಬ್ಬಂದಿಗಳು ಹಾಜರಿದ್ದರು. ಬಾದಾಮಿ ಪೋಲಿಸರ ಕಾರ್ಯಕ್ಕೆ ಬಾಗಲಕೋಟ ವರಿಷ್ಠಾಧಿಕಾರಿಗಳು ಹರ್ಷ ವ್ಯಕ್ತಪಡಿಸಿದ್ದಾರೆ

ರಾಜ್ಯದ 250ಕ್ಕೂ ಹೆಚ್ಚು ಆಸ್ಪತ್ರೆಗಳೊಂದಿಗೆ ಒಡಂಬಡಿಕೆ | 3 ತಿಂಗಳಲ್ಲಿ ಉಳಿದ ಮೂರು ನಿಗಮದಲ್ಲಿಯೂ ಜಾರಿ | ನಗದುರಹಿತ ವೈದ್ಯಕೀಯ ಚಿಕಿತ್ಸೆಗೆ ಚಾಲನೆ

ಸಾರಿಗೆ ನಿಗಮ ನೌಕರರಿಗೆ ಸಿಹಿ ಸುದ್ದಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆಎಸ್‌ಆರ್‌ಟಿಸಿ ಸೇರಿದಂತೆ ಸಾರಿಗೆ ನಿಗಮದ ನೌಕರರಿಗೆ ರಾಜ್ಯ ಸರಕಾರ ಸಿಹಿ ಸುದ್ದಿ ನೀಡಿದ್ದು, ಇನ್ನು ಮುಂದೆ ಸಿಬ್ಬಂದಿ ಹಾಗೂ ಕುಟುಂಬ ಸದಸ್ಯರಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸೆಗೆ ರಾಜ್ಯ ಸರಕಾರ ಚಾಲನೆ ನೀಡಿದೆ.

ವಿಧಾನಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರೋಗ್ಯ ಯೋಜನೆಗೆ ಚಾಲನೆ ನೀಡಿದ ಬಳಿಕ ಮಾತನಾಡಿದ ಸಿದ್ದರಾಮಯ್ಯ ಅವರು, ಈ ಯೋಜನೆಯಲ್ಲಿ ಒಡಂಬಡಿಕೆ ಮಾಡಿಕೊಂಡಿರುವ ಎಲ್ಲಾ ಆಸ್ಪತ್ರೆಗಳು ಕೆಎಸ್‌ಆರ್‌ಟಿಸಿ ನೌಕರರು ಮತ್ತು ಕುಟುಂಬದವರು ಆಸ್ಪತ್ರೆಗೆ ಬಂದಾಗ ಅವರನ್ನು ಗೌರವಯುತವಾಗಿ ಹಾಗೂ ಮಾನವೀಯತೆಯಿಂದ ಚಿಕಿತ್ಸೆ ನೀಡಬೇಕು ಎಂದು ತಿಳಿಸಿದರು.

ಈ ಯೋಜನೆಯಲ್ಲಿ ಸಾರಿಗೆ ಸಂಸ್ಥೆಯ ಎಲ್ಲ ನೌಕರರು, ಅವರ ತಂದೆ-ತಾಯಿ ಮತ್ತು ಪತ್ನಿ-ಮಕ್ಕಳಿಗೆ ಖರ್ಚಿನ ಮಿತಿಯಿಲ್ಲದ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಸಿಗಲಿದೆ. ಈ ಯೋಜನೆ ಅನುಷ್ಠಾನಕ್ಕಾಗಿ ರಾಜ್ಯಾದ್ಯಂತ ಇರುವ ಸರಕಾರಿ ಆಸ್ಪತ್ರೆಗಳು ಸೇರಿದಂತೆ 250 ಖಾಸಗಿ ಆಸ್ಪತ್ರೆಗಳೊಂದಿಗೆ ಒಡಬಂಡಿಕೆ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದರು.

ವಿಧಾನಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರೋಗ್ಯ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು.

ದೇಶದಲ್ಲೇ ಮೊದಲ ಬಾರಿಗೆ ಸಾರಿಗೆ ನಿಗಮದಲ್ಲಿ ಆರೋಗ್ಯ ಸೇವೆ ಸೌಲಭ್ಯ ನೀಡುತ್ತಿದೆ. ರಾಜ್ಯದ 250 ಆಸ್ಪತ್ರೆಯಲ್ಲಿ ಸಾರಿಗೆ ನೌಕರರು ಆರೋಗ್ಯ ಕಾರ್ಡ್ ಬಳಸಿ ನಗದು ರಹಿತವಾಗಿ ಚಿಕಿತ್ಸೆ ಪಡೆದುಕೊಳ್ಳಬಹುದು. ಈ ಯೋಜನೆಯ ಮೂಲಕ ಸೂಪರ್ ಸ್ಪೆಷಾಲಿಟಿ, ಮಲ್ಟಿ ಸ್ಪೆಷಾಲಿಟಿ ಸೇರಿದಂತೆ ಸಾಮಾನ್ಯ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆ ಪಡೆಯಬಹುದಾಗಿದೆ. ಡ್ರೈವರ್, ಕಂಡಕ್ಟರ್ ಸೇರಿದಂತೆ ಸಿಬ್ಬಂದಿಗೆ ನಗದು ರಹಿತ ಚಿಕಿತ್ಸೆ ದೊರೆಯಲಿದೆ. ಯಾವುದೇ ಕಾಯಿಲೆಗೆ, ಸಂಪೂರ್ಣ ಚಿಕಿತ್ಸೆ ವೆಚ್ಚ ನೀಡಲಾಗುವುದು. ಸಾರಿಗೆ ನೌಕರರ ಮನೆಯ ಆರು ಜನರು ಈ ಕಾರ್ಡ್ ಬಳಸಿ ಚಿಕಿತ್ಸೆ ಪಡೆದುಕೊಳ್ಳಬಹುದು ಎಂದರು.

ಸಿಬ್ಬಂದಿಗಳಿಗೆ ಅನುಕೂಲ: ಈ ಯೋಜನೆ ಜಾರಿಗೊಳಿಸಲು ಕಾರ್ಮಿಕ ನಾಯಕರು, ನೌಕರರು ಬಹಳ ದಿನದಿಂದ ಈ ಬೇಡಿಕೆ ಇಟ್ಟಿದ್ದರು. ಈ ಯೋಜನೆಯಿಂದ ಬಹಳಷ್ಟು ಉಪಯೋಗವಾಗಲಿದೆ. ಯಾವ ಯಾವ ಸ್ಥಳದಲ್ಲಿದ್ದಾರೋ ಅಲ್ಲೇ ಆರೋಗ್ಯ ಸೇವೆ ಪಡೆಯಬಹುದು. ಕೆಎಸ್‌ಆರ್‌ಟಿಸಿ ಮಾತ್ರ ಯೋಜನೆಯನ್ನು ಇಂದು ಜಾರಿಗೆ ತಂದಿದೆ, ಉಳಿದ ನಿಗಮಗಳು ಮೂರು ತಿಂಗಳೊಳಗಾಗಿ ಯೋಜನೆ ಜಾರಿ ಮಾಡಲಿವೆ ಎಂದರು. ಈ ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಟಿಸಿ ನೌಕರರು ಅಪಘಾತದಲ್ಲಿ ಮೃತಪಟ್ಟ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ನೀಡಲಾಗುವ ಒಂದು ಕೋಟಿ ರು. ಹಾಗೂ ಸೇವೆಯಲ್ಲಿರುವ ಮೃತಪಟ್ಟ ನೌಕರರ ಕುಟುಂಬಕ್ಕೆ ನೀಡಲಾಗುವ 10 ಲಕ್ಷ ರು. ಪರಿಹಾರದ ಚೆಕ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿತರಿಸಿದರು.

ಯೋಜನೆಯ ವಿಶೇಷತೆ?

- 34,000 ಸಿಬ್ಬಂದಿ ಹಾಗೂ 1.50 ಲಕ್ಷ ಅವಲಂಬಿತರು ಯೋಜನೆಗೆ ಅರ್ಹರು
- ರಾಜ್ಯದ ಸುಮಾರು 275ಕ್ಕೂ ಹೆಚ್ಚಿನ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ
- ಕಣ್ಣು ಹಾಗೂ ದಂತ ಚಿಕಿತ್ಸಾ ವೆಚ್ಚವೂ ಯೋಜನೆಯಲ್ಲಿ ಒಳಗೊಂಡಿರುತ್ತದೆ.
- ಒಳರೋಗಿ ಚಿಕಿತ್ಸಾ ವೆಚ್ಚಕ್ಕೆ ಯಾವುದೇ ಗರಿಷ್ಠ ಮೊತ್ತ ನಿಗದಿಯಿಲ್ಲ.
- ಆಯುರ್ವೇದ, ಪ್ರಕೃತಿ, ಯುನಾನಿ ಹೋಮಿಯೋಪತಿ ಚಿಕಿತ್ಸೆಗೂ ನೆರವು.

ಸುಮಾರು 20 ವರ್ಷಗಳಿಂದ ಈ ವಿಚಾರವಾಗಿ ಬೇಡಿಕೆ ಇತ್ತು. 250 ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು. ಇನ್ನೂ 50 ಆಸ್ಪತ್ರೆಗಳನ್ನು ಸೇರ್ಪಡೆ ಮಾಡಲಾಗುತ್ತದೆ. ಮುಂದೆ ಸರಕಾರದ ಆಸ್ಪತ್ರೆಗಳನ್ನು ಸಹ ಸೇರಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಅನೇಕ ನೌಕರರ ಕನಸು ನನಸಾದ ದಿನವಿದು.

-ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಆರೋಗ್ಯ ಕಾರ್ಡ್‌ಗಾಗಿ ನೌಕರರು ಪ್ರತಿ ತಿಂಗಳು 650 ರು. ಪಾವತಿ ಮಾಡಬೇಕಾಗುತ್ತದೆ. ಕೆಎಸ್‌ಆರ್‌ಟಿಸಿ ನಿಗಮ 600 ರು. ಪಾವತಿ ಮಾಡುತ್ತದೆ. ಇದರಿಂದ ವರ್ಷಕ್ಕೆ ಒಟ್ಟು 46 ಕೋಟಿ ಸಂಗ್ರಹವಾಗುತ್ತದೆ. ಈ ಹಿಂದೆ ಕೆಎಸ್‌ಆರ್‌ಟಿಸಿ ನೌಕರರ ಆರೋಗ್ಯಕ್ಕಾಗಿ ಪ್ರತಿ ವರ್ಷ 16 ಕೋಟಿ ರುಪಾಯಿ ವೆಚ್ಚ ಮಾಡುತ್ತಿತ್ತು. ರಾಜ್ಯದ ಆಯುರ್ವೇದಿಕ್ ಆಸ್ಪತ್ರೆ ಸೇರಿದಂತೆ 250ಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ನಗದು ರಹಿತವಾಗಿ ಚಿಕಿತ್ಸೆ ಪಡೆದುಕೊಳ್ಳಬಹುದು.

-ಅನ್ಬು ಕುಮಾರ್, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ

ವಾಹನ ಪಲ್ಟಿಯಾದ ಪ್ರಕರಣ: ಇಬ್ಬರು ಶಿಕ್ಷಕರು ಅಮಾನತು

ಕೊರಟಗೆರೆ: ಟಾಟಾ ಏಸ್ ವಾಹನ ಪಲ್ಟಿಯಾಗಿ 15 ಮಕ್ಕಳು ಗಾಯಗೊಂಡಿದ್ದ ಪ್ರಕರಣಕ್ಕೆ ಸಂಬಂಧಿಸಿ ಶಾಲೆಯ ಮುಖ್ಯ ಶಿಕ್ಷಕ ಹಾಗೂ ಸಹ ಶಿಕ್ಷಕನನ್ನು ಕೊರಟಗೆರೆ ಕ್ಷೇತ್ರ ಶಿಕ್ಷಣಾಧಿಕಾರಿ ನಟರಾಜು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಕೊರಟಗೆರೆ ತಾಲೂಕಿನ ಹೊಳವನಹಳ್ಳಿ ಹೋಬಳಿಯ ಚಿಂಪುಗಾನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜ.3 ರಂದು 99 ಮಕ್ಕಳನ್ನು ಹೊರಸಂಚಾರ ಎಂದು ಶಾಲೆಯ ಮಕ್ಕಳನ್ನು ದೊಡ್ಡಸಾಗ್ಗೆರೆ ಬಳಿ ಇರುವ ಮಿನಿ ಲಾಲ್ ಬಾಗ್ಗೆ ಕರೆದುಕೊಂಡು ಹೋಗಲಾಗಿತ್ತು ಬಳಿಕ ವಾಪಾಸ್ ಬರುವ ಸಂದರ್ಭದಲ್ಲಿ ಚಾಲಕನ ನಿಯಂತ್ರಣ ತಪ್ಪಿ ಟಾಟಾ ಏಸ್ ವಾಹನ ಪಲ್ಟಿಯಾಗಿದೆ ಪರಿಣಾಮ ಹದಿನೈದು ಮಕ್ಕಳಿಗೆ ಗಾಯಗಳಾಗಿ ತುಮಕೂರು ಜಿಲ್ಲಾ ಸ್ಪತ್ರೆಗೆ ಸೇರಿಸಲಾಗಿತ್ತು. ಮಕ್ಕಳನ್ನು ಹೊರ ಸಂಚಾರಕ್ಕೆ ಕರೆದೊಯ್ಯುವ ವಿಚಾರವಾಗಿ ಶಿಕ್ಷಣ ಇಲಾಖೆಯಿಂದ ಯಾವುದೆ ಅನುಮತಿ ಪಡೆಯದೆ ಇರುವ ಕಾರಣ ಕ್ಷೇತ್ರ ಶಿಕ್ಷಣಾಧಿಕಾರಿಯಾದ ನಟರಾಜು ಅವರು ಕರ್ನಾಟಕ ಸಿವಿಲ್ ಸೇವಾ (ವರ್ಗಿಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಾಮವಳಿಗಳು 1957 ರ ನಿಯಮ 10 (1) ಎ ರನ್ವಯ ಮುಖ್ಯಶಿಕ್ಷಕ ಹನುಮಂತರಾಯಪ್ಪ ಹಾಗೂ ಅನಂತರಾಮು ಅವರನ್ನು ಶಿಕ್ಷಣ ಇಲಾಖೆಯ ನಿಯಮಾನುಸಾರ ಸಸ್ಪೆಂಡ್ ಮಾಡಿ ಆದೇಶ ಹೊರಡಿಸಿದ್ದಾರೆ.

ಚರಂಡಿಯಲ್ಲಿ ನವಜಾತ ಶಿಶು ಪತ್ತೆ

ಮೈಸೂರು: ಎಚ್.ಡಿ. ಕೋಟೆ ತಾಲೂಕಿನ ರಾಜೇಗೌಡನ ಹುಂಡಿ ಗ್ರಾಮದಲ್ಲಿನ ಚರಂಡಿಯಲ್ಲಿ ನವಜಾತ ಶಿಶುವೊಂದು ಸೋಮವಾರ ಪತ್ತೆಯಾಗಿದೆ. ಮಗುವನ್ನು ರಕ್ಷಣೆ ಮಾಡಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಸರಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ. ಸೋಮವಾರ ಬೆಳಗ್ಗೆ ಗ್ರಾಮಸ್ಥರು ತಮ್ಮ ಹೊಲಗಳಿಗೆ ಹೋಗುವ ಸಂದರ್ಭದಲ್ಲಿ ಚರಂಡಿಯಿಂದ ಮಗುವೊಂದು ಅಳುವ ಶಬ್ಧ ಕೇಳಿಸಿದೆ. ಗ್ರಾಮಸ್ಥರು ಸ್ಥಳೀಯ ಆಶಾ ಕಾರ್ಯಕರ್ತರಿಗೆ ಈ ವಿಚಾರ ತಿಳಿಸಿದ್ದಾರೆ. ನಂತರ ಮಗುವನ್ನು ಎಚ್.ಡಿ. ಕೋಟೆ ಸರಕಾರಿ ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ.

ಉಪನಿರ್ದೇಶಕರ ಕಛೇರಿ (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಕೊಪ್ಪಳ.

ಸಂಖ್ಯೆ:ಯೋವಿ4:ಅದಾ:ಪಾಪರಿಕರಗಳ ಖರೀದಿ/ಟೆಂಡರ್/ಇಪ್ರತೆ/41/2023–24/2024–25/673 ದಿನಾಂಕ: 04.01.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2019–20ನೇ ಸಾಲಿಗೆ KKRDB ಅನುದಾನದಡಿಯಲ್ಲಿ ಅಕ್ಷರ ದಾಸೋಹದ ಪಾತ್ರೆ ಪರಿಕರಗಳ ಖರೀದಿಗಾಗಿ ಕರೆಯಲಾಗುತ್ತಿರುವ ಇ–ಟೆಂಡರ್‌ಗಳನ್ನು ಅರ್ಹ ಸಂಸ್ಥೆ / ಏಜೆನ್ಸಿಯವರಿಂದ ಅಲ್ಪಾವಧಿ ಇ–ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕೆ.ಟಿ.ಪಿ.ಪಿ ಅಧಿನಿಯಮ 1999 ಮತ್ತು ನಿಯಮಗಳು 2000 ರಡಿಯಲ್ಲಿ ಸ್ಪರ್ಧಾತ್ಮಕ ದರಗಳಿಗೆ https://kppp.karnataka.gov.in ಮೂಲಕ ಟೆಂಡರ್ ಅರ್ಜಿ ಅಹ್ವಾನಿಸಿದೆ. ಸದರಿ ಇ–ಟೆಂಡರ್ ಫೈಲ್ ನ ಹೆಸರುಗಳು ಈ ಕೆಳಗಿನಂತಿದೆ

DPI/2024-25/IND0355/Call-3 ಟೆಂಡರಿನ ಮೊತ್ತ: ರೂ.105.20 (ರೂ. ಲಕ್ಷಗಳಲ್ಲಿ)

ಅರ್ಹ ಹಾಗೂ ಆಸಕ್ತ ಟೆಂಡರ್‌ದಾರರು ದಿನಾಂಕ: **07.01.2025 ರಿಂದ 16.01.2025ರ ಸಂಜೆ 05.00** ಗಂಟೆಯು ಒಳಗಾಗಿ https://kppp.karnataka.gov.in ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಅರ್ಜಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ, ಕೊಪ್ಪಳ ಇವರ ಕಛೇರಿಯನ್ನು ಸಂಪರ್ಕಿಸುವುದು. **(ದೂರವಾಣಿ ಸಂಖ್ಯೆ: 08539–221303, 9448999346)**

ಸಹಿ/–ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಕೊಪ್ಪಳ.

ವಾ.ಸಾ.ಇ/ಕೊಪ್ಪಳ/647/ದೇಶಪಾಂಡೆಪಬ್ಲಿಸಿಟಿ/2024–25

4 ಬಿಲ್ಡಿಂಗ್, 3 ಕಾರು, 6 ದ್ವಿಚಕ್ರವಾಹನಗಳಿಗೆ ಹಾನಿ

ಸಿಲಿಂಡರ್ ಸ್ಫೋಟ: ಕಟ್ಟಡ ಛಿದ್ರ

ಆನೇಕಲ್: ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಕಟ್ಟಡದ ಒಂದು ಮಹಡಿ ಸಂಪೂರ್ಣ ಛಿದ್ರವಾಗಿರುವ ಘಟನೆ ಬೊಮ್ಮಸಂದ್ರ ಸಮೀಪದ ಕಿತ್ತಗಾನ ಹಳ್ಳಿಯಲ್ಲಿ ನಡೆದಿದೆ.

ಗಾಯಾಳುಗಳನ್ನು ಕೇರಳ ಮೂಲದ ವಿಶ್ವ ಹಾಗೂ ತಮಿಳುನಾಡು ಮೂಲದ ಸುನೀಲ್ ಜಾದವ್ ಎಂದು ಗುರುತಿಸಲಾಗಿದ್ದು, ನಾರಾಯಣ ಹೃದಯಾಲಯದಲ್ಲಿ ಕೆಲಸ ಮಾಡುತ್ತಿದ್ದರು. ಮನೆಯಲ್ಲಿದ್ದ ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಸೋಮವಾರ 8:30ರ ಸುಮಾರಿಗೆ ಈ ಅವಘಡ ಸಂಭವಿಸಿದೆ. ಜಯನಗರ ಮೂಲದ ಸುನಿಲ್ ಎಂಬುವವರಿಗೆ ಸೇರಿದ್ದ ಕಟ್ಟಡದಲ್ಲಿ ಇಬ್ಬರು ವಾಸವಾಗಿದ್ದರು. ಕೆಲಸಕ್ಕೆ ಹೋಗಲು ಒಬ್ಬರು ಸ್ನಾನ ಮಾಡುತ್ತಿದ್ದರಂತೆ. ಇದೇ ವೇಳೆ ಸಿಲಿಂಡರ್ ಸ್ಫೋಟಗೊಂಡಿದ್ದು, ಇನ್ವೋರ್ವ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಎರಡನೇ ಅಂತಸ್ತಿನಿಂದ ಕೆಳಗೆ ಬಿದ್ದಿದ್ದಾನೆ. ಸ್ಫೋಟದ ತೀವ್ರತೆಗೆ ಕಟ್ಟಡದ ಹಾಲೋ ಬ್ಲಾಕ್‌ಗಳು ಹಾರಿಹೋಗಿವೆ. ಬಿಲ್ಡಿಂಗ್ ನಾಲ್ಕು ಪಿಲ್ಲರ್‌ಗಳು ಕೂಡ ಛಿದ್ರಗೊಂಡಿವೆ. ಇದರ ಪರಿಣಾಮ ನಾಲ್ಕು ಬಿಲ್ಡಿಂಗ್, 3 ಕಾರು, 6 ದ್ವಿಚಕ್ರವಾಹನಗಳು ಹಾನಿಗೊಳಗಾಗಿವೆ. ಸದ್ಯ ಗಾಯಾಳುಗಳನ್ನು ಸ್ಥಳೀಯ ನಾರಾಯಣ ಹೃದಯಾಲಯಕ್ಕೆ ಶಿಫ್ಟ್ ಮಾಡಲಾಗಿದೆ. ಬೆಳಗ್ಗೆ ಲೈಟ್ ಹಾಕಿದಾಗ ಸ್ಫೋಟ ಆಗಿರಬಹುದು ಎಂದು ಶಂಕಿಸಲಾಗಿದೆ. ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳ, 15ಕ್ಕೂ ಹೆಚ್ಚು ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಸಿಲಿಂಡರ್ ಸ್ಫೋಟಕ್ಕೆ ಕಟ್ಟಡ ಛಿದ್ರವಾಗಿರುವುದು.

ಮಗುವಿಗೆ ಜನ್ಮ ನೀಡಿದ ತಾಯಿಯೊಂದಿಗೆ ವೈದ್ಯರ ತಂಡ.

ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಅಪರೂಪದ ಜನನ

4 ಮಕ್ಕಳಿಗೆ ಜನ್ಮ ನೀಡಿದ ಮಹಾತಾಯಿ

ಮಂಗಳೂರು: ನಗರದ ಕಂಕನಾಡಿ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ನಾಲ್ಕು ಮಕ್ಕಳಿಗೆ ಮಹಿಳೆಯೊಬ್ಬರು ಜನ್ಮ ನೀಡಿದ್ದಾರೆ. ವೈದ್ಯರ ತಂಡ ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ ಮಾಡಿಸಿದ್ದು, ತಾಯಿ ಮಕ್ಕಳು ಆರೋಗ್ಯವಾಗಿದ್ದಾರೆ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ತೆಲಂಗಾಣ ರಾಜ್ಯದ ತೇಜ ಎಂಬವರ ಪತ್ನಿ ಬಾನೋತ್ ದುರ್ಗಾ ಅವರು ನಾಲ್ವರು ಮಕ್ಕಳಿಗೆ ಜನ್ಮ ನೀಡಿದವರು. ಈ ನಾಲ್ವರು ಮಕ್ಕಳಲ್ಲಿ ಎರಡು ಗಂಡು, ಎರಡು ಹೆಣ್ಣು ಮಕ್ಕಳಿಗೆ ಅವರು ಜನ್ಮ ನೀಡಿದ್ದಾರೆ. ಈ ನಾಲ್ಕು ಮಕ್ಕಳೂ ಈಗ ಆರೋಗ್ಯವಾಗಿದ್ದಾರೆ. ಈ ಮಕ್ಕಳು ಕ್ರಮವಾಗಿ 1.1 ಕೆಜಿ, 1.2 ಕೆಜಿ, 800 ಗ್ರಾಂ, 900 ಗ್ರಾಂ ತೂಕ ಹೊಂದಿವೆ. ಆದರೆ ಇದು 30 ವಾರಗಳ ಹೆರಿಗೆಯಾಗಿದ್ದು, ಪ್ರಸವ ಪೂರ್ವ ಜನನವಾದ್ದರಿಂದ ಸದ್ಯ ಮಕ್ಕಳಿಗೆ ಎನ್‌ಐಸಿಯುವಿನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಅಪರೂಪದ ಹೆರಿಗೆ

ನಾಲ್ಕು ಮಕ್ಕಳ ಜನನ ಬಹಳ ಅಪರೂಪವಾಗಿದ್ದು, ಇದು 7 ಲಕ್ಷ ಗರ್ಭಧಾರಣೆಗಳಲ್ಲಿ ಒಂದರಲ್ಲಿ ಮಾತ್ರ ಸಂಭವಿಸುತ್ತವೆ. ಸ್ತ್ರೀರೋಗತಜ್ಞೆ, ಡಾ. ಜೋಯ್ಲೀನ್ ಡಿಅಲ್ಮೇಡಾ ಗರ್ಭಿಣಿಯ ಪ್ರಸವಪೂರ್ವ ಆರೈಕೆ ಮಾಡಿದರು. ಹೆರಿಗೆ ಸಂದರ್ಭ ಆಸ್ಪತ್ರೆಯ ಹೆರಿಗೆ ಮತ್ತು ಮಕ್ಕಳ ವಿಭಾಗದ ವೈದ್ಯಕೀಯ ತಂಡ ಮುತುವರ್ಜಿಯಿಂದ ಕಾರ್ಯನಿರ್ವಹಿಸಿ ತಾಯಿ-ಮಕ್ಕಳಿಗೆ ಆರೈಕೆ ಮಾಡಿದೆ. ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದಲ್ಲಿ ಇದೊಂದು ಅಪರೂಪದ ಹೆರಿಗೆ ಪ್ರಕರಣವಾಗಿದೆ.

ಬಾಂಗ್ಲಾ ವಲಸಿಗರಿಂದ ಕಲ್ಲು ತೂರಾಟ

ಚಿಕ್ಕಮಗಳೂರು: ಎಸ್ಟೇಟ್ ಮ್ಯಾನೇಜರ್ ಮೇಲೆ ಅಕ್ರಮ ಬಾಂಗ್ಲಾ ವಲಸಿಗರು ಕಲ್ಲು ತೂರಾಟ ನಡೆಸಿದ ಘಟನೆ ಕೊಪ್ಪ ತಾಲೂಕಿನ ಹೂವಿನಗುಂಡಿ ಗ್ರಾಮದಲ್ಲಿ ನಡೆದಿದೆ.

ಅಕ್ರಮ ಬಾಂಗ್ಲಾ ವಲಸಿಗರಿಂದ ಕಲ್ಲು ತೂರಾಟಕ್ಕೊಳಗಾದ ಎಸ್ಟೇಟ್ ಮ್ಯಾನೇಜರ್‌ನನ್ನು ಕೀರ್ತಿರಾಜ್ ಎಂದು ಗುರುತಿಸಲಾಗಿದೆ. ಇಷ್ಟೇ ಅಲ್ಲದೇ ಮರದ ದಿಮ್ಮೆಯಿಂದ ಹಲ್ಲೆಗೆ ಯತ್ನಿಸಲಾಗಿದೆ. ಸುಮಾರು 50 ಜನರಿಂದ ಕಲ್ಲು ತೂರಾಟ ನಡೆದಿದೆ ಎಂದು ಆರೋಪಿಸಿದ್ದಾರೆ.

ಕೀರ್ತಿರಾಜ್ ಹಾಗೂ ಭದ್ರಾ ಎಸ್ಟೇಟ್ ಮಧ್ಯೆ ಜಮೀನು ವಿವಾದ ಇತ್ತು. 50 ವರ್ಷದ ವಿವಾದ ಹೈಕೋರ್ಟಿನಲ್ಲಿ ಸುಬ್ಬಣ್ಣ ಅವರ ಪರ ಆಗಿತ್ತು. ಸುಬ್ಬಣ್ಣ ಅವರ ಮಗ ಕೀರ್ತಿರಾಜ್ ತೋಟಕ್ಕೆ ಹೋದಾಗ ಕಲ್ಲು ತೂರಾಟ ನಡೆದಿದೆ. ಕಲ್ಲೇಟಿನಿಂದ ಗಾಯಗೊಂಡಿರುವ ಕೀರ್ತಿರಾಜ್ ಅವರನ್ನು ಜಯಪುರ ಆಸ್ಪತ್ರೆಗೆ ದಾಖಲಿಸಲಾಗಿದೆ. ಜಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಪ್ರಕರಣ ನಡೆದಿದೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in

ಟೆಂಡರ್ ಪ್ರಕಟಣೆ

ಉಲ್ಲೇಖ:– **No: EE/ KNNL/ BCD-5/DVG/PB/2701/2024-25/1948 Date:- 03.01.2025**

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಉಲ್ಲೇಖಿತ ಟೆಂಡರ್ ಪ್ರಕಟಣೆಗಳಲ್ಲಿ ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿನ ಕಾಮಗಾರಿಗೆ ಏಕ ಲಕೋಟೆ ಪದ್ಧತಿಯಡಿ ಕೆಪಿಪಿಪಿ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಅಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಕೆಪಿಪಿಪಿ–ಪೋರ್ಟಲ್ ವೆಬ್‌ಸೈಟ್ (https://kppp.karnataka.gov.in) ಮುಖಾಂತರವೇ ದಿ: 04.01.2025 ರಿಂದ ಡೌನಲೋಡ್ ಮಾಡಿಕೊಂಡು ದಿ: 13.01.2025 ರ ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ ದಿನಾಂಕ: 10.01.2025 ರಂದು 4.00 ಘಂಟೆವರೆಗೆ, ಪ್ರಿ ಬಿಡ್ ಸಭೆ ದಿ: 10.01.2025 ರಂದು ಬೆಳ್ಳಿಗ್ಗೆ 11.00 ಘಂಟೆಗೆ ಈ ಕೆಳಗೆ ಸಹಿ ಮಾಡಿದ ಕಛೇರಿಯಲ್ಲಿ ನೆರವೇರಿಸಲಾಗುದು ಮತ್ತು ತಾಂತ್ರಿಕ/ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 15.01.2025 ರಂದು ಸಂಜೆ 5.10 ಘಂಟೆ. **ಒಟ್ಟು ಕಾಮಗಾರಿ ಸಂಖ್ಯೆ :– 2 ಸಂಖ್ಯೆಗಳು.**

(1) KNNL/2024-25/IW/WORK_INDENT 1215/CALL-2
ರೂ 111.67 ಲಕ್ಷಗಳು (ಜಿ.ಎಸ್.ಟಿ. ಒಳಗೊಂಡಂತೆ)
(2) KNNL/2024-25/IW/WORK_INDENT 1233/CALL-2
ರೂ 172.75 ಲಕ್ಷಗಳು (ಜಿ.ಎಸ್.ಟಿ. ಒಳಗೊಂಡಂತೆ)

ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ–ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ವಾಸಾಇ/ಡಿವಿಜಿ/628/ ಕೆಎಸ್‌ಎಂಸಿಎ/2024–25

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ
ದೂರವಾಣಿ: 08384–226381 ಇ–ಮೇಲ್: ee_zpedsirsi@yahoo.co.in
ಕ್ರ.ಸಂ::ಪಂ.ರಾ.ಇಂ/ವಿಶಿ/ಪಿ.ಬಿ–3/MGNREGA/ಶಾಸ್ಥಪ್ರಯೋ/ಟೆಂಡರ್–29/2024–25/1666 ದಿನಾಂಕ: 03–01–2025

ಟೆಂಡರ್ ಪ್ರಕಟಣೆ 29 (ಸಾಮಗ್ರಿ ಪೂರೈಕೆ)/2024–25 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನವಿಕೃತ ನೊಂದಾಯಿತ 2019–20 ನೇ ಸಾಲಿನ ನವಿಕೃತ ನೊಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ MGNREGA & ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನಂತೆ KG-I ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ http://www.kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿ ಹೆಸರು: **(1) RDPR/2024-25/IND5935 2) RDPR/2024-25/IND6233 (3) RDPR/2024-25/IND5880 (4) RDPR/2023-24/IND1175/CALL-4**

(1) ಭರ್ತಿ ಮಾಡಿದ ಟೆಂಡರ್‌ಗಳನ್ನು Online ನಲ್ಲಿ ಸ್ವೀಕರಿಸುವ ಕೊನೆಯ ದಿನಾಂಕ: 15–01–2025 ರ ಸಂಜೆ 16.00 ಘಂಟೆವರೆಗೆ (2) ಟೆಂಡರನ್ನು ತೆರೆಯುವ ದಿನಾಂಕ: 16–01–2025 ಸಂಜೆ 16.30 ಘಂಟೆಗೆ (ಸಾಧ್ಯವಾದಲ್ಲಿ) ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟಿನಲ್ಲಿ ಅಥವಾ ಈ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ.
ಉತ್ತರ ಕನ್ನಡ ಜಿಲ್ಲೆ.

DIPR/ADK//KSMCA/706/24-25 Dt: 06.01.2025

ಮೊಬೈಲ್ ಎಸೆಯಲು ಯತ್ನಿಸಿದವ ಅರೆಸ್ಟ್

ಮಂಗಳೂರು: ಕಾರಾಗೃಹದೊಳಗೆ ಮೊಬೈಲ್ ಮತ್ತು ಸಿಗರೇಟ್ ಎಸೆಯಲು ಯತ್ನಿಸಿದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ. ಪಂಜಿಮೊಗರಿನ ಪ್ರಜ್ವಲ್ (21) ಬಂಧಿತ ಆರೋಪಿ. ಭಾನುವಾರ ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಕೆನರಾ ಕಾಲೇಜಿನ ಮುಖ್ಯದ್ವಾರದ ಒಳಗೆ ಪ್ರವೇಶಿಸಿದ ಆರೋಪಿ ಅಲ್ಲಿಂದ ಕಾರಾಗೃಹದ ಒಳಗೆ ಕೆಂಪು ಬಣ್ಣದ ಗಮ್‌ಟೇಪ್‌ನಿಂದ ಸುತ್ತಿದ ಪೊಟ್ಟಣಗಳನ್ನು ಎಸೆಯಲು ಪ್ರಯತ್ನಿಸುತ್ತಿದ್ದ. ಇದನ್ನು ಗಮನಿಸಿದ ಗಸ್ತು ಕರ್ತವ್ಯದಲ್ಲಿದ್ದ ಕೆಎಸ್‌ಐಎಸ್‌ಎ–ಸಿಬಂದಿ ಆರೋಪಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಪೊಟ್ಟಣದೊಳಗೆ 2 ಕೀ ಪ್ಯಾಡ್ ಮೊಬೈಲ್ ಮತ್ತು 2 ಪ್ಯಾಕೆಟ್ ಸಿಗರೇಟ್ ಇತ್ತು. ಬರ್ಕೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಂಚನಾಮೆ ಪ್ರಕ್ರಿಯೆ ಮೊದಲು ತಿಳಿಸಲಿ, ಆ ಬಳಿಕ ಅನುಮತಿ ನಿರ್ಧಾರ: ಹೊರಟ್ಟಿ

ಧಾರವಾಡ: ಸಿ.ಟಿ. ರವಿ ಹಾಗೂ ಲಕ್ಷ್ಮೀ ಹೆಬ್ಬಾಳ್ಕರ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಧಾನ ಪರಿಷತ್‌ನಲ್ಲಿ ಪಂಚನಾಮೆ ಹೇಗೆ ಮಾಡುತ್ತೇವೆ ಎಂದು ಸಿಐಡಿ ತಿಳಿಸಿ ದರೆ ಅದಕ್ಕೆ ಅನುಮತಿಸುವ ಬಗ್ಗೆ ಮುಂದೆ ತೀರ್ಮಾನ ಮಾಡುತ್ತೇವೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಹೇಳಿದ್ದಾರೆ. ನಗರದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ವಿಧಾನ ಪರಿಷತ್‌ನಲ್ಲಿ ಸ್ಥಳ ಮಹಜರು ಮಾಡಲು ನಾವು ಇನ್ನೂ ಅನುಮತಿ ಕೊಟ್ಟಿಲ್ಲ. ಪರಿಷತ್‌ನಲ್ಲಿ ಈ ಹಿಂದೆ ಯಾವತ್ತೂ ಹೀಗೆ ಆಗಿಲ್ಲ, ಈಗ ಆಗಿದೆ. ಏನು ಮಾಡಲು ಆಗುವುದಿಲ್ಲ, ಆಗಿದ್ದನ್ನು ಎದರು ಸುತ್ತಿದ್ದೇವೆ ಎಂದರು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮನವಿ ಬಗ್ಗೆ ಮಾತನಾಡಿದ ಅವರು, ಈ ಸಂಬಂಧ ಸೆಕ್ರೆಟರಿ ಹಂತದಲ್ಲಿ ಸಭೆ ಮಾಡಿ ಬಳಿಕ ತೀರ್ಮಾನ ಕೈಗೊಳ್ಳುತ್ತೇವೆ. ಪ್ರಕರಣ ವನ್ನು ಸರ್ಕಾರ ಸಿಐಡಿಗೆ ತನಿಖೆಗೆ ಕೊಟ್ಟಿದೆ. ನಮ್ಮನ್ನು ಕೇಳಿ ಸರಕಾರ ಪ್ರಕರಣವನ್ನು ಸಿಐಡಿ ತನಿಖೆಗೆ ಕೊಟ್ಟಿಲ್ಲ. ಸಿಐಡಿ ತನಿಖೆಗೂ ನಮಗೂ ಸಂಬಂಧ ಇಲ್ಲ, ಸಿ.ಟಿ. ರವಿ ಬಂಧನಕ್ಕೂ ಮುಂಚೆ ಬಂಧಿಸುತ್ತಿರುವುದಾಗಿ ತಿಳಿಸಬೇಕಿತ್ತು ಎಂದು ಹೇಳಿದರು. ಸಿಐಡಿ, ಪರಿಷತ್‌ನ ಒಳಗೆ ಹೇಗೆ ಪಂಚನಾಮೆ ಮಾಡುತ್ತದೆ ಎಂಬ ಬಗ್ಗೆ ಮಾಹಿತಿ ಬೇಕಿದೆ. ಅವರು ಹೇಗೆ ಪಂಚನಾಮೆ ಮಾಡುತ್ತಾರೆ ಎಂದು ನನಗೆ ಅರ್ಥವಾಗುತ್ತಿಲ್ಲ, ನಮ್ಮಲ್ಲಿ ಯಾವುದೇ ರೆಕಾರ್ಡ್ ಇಲ್ಲ. ಹೇಗೆ ಪಂಚನಾಮೆ ಮಾಡುತ್ತೇವೆ ಎಂದು ಸಿಐಡಿ ತಿಳಿಸಿದ ಮೇಲೆ ಅವಶ್ಯಕತೆ ಇದೆಯೋ, ಇಲ್ಲವೋ ಎಂದು ನೋಡಿ ಕೊಂಡು ಅನುಮತಿಸುವ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಲಾರಿ ಪಲ್ಟಿ: ಇಬ್ಬರು ಸಾವು

ಕಾರವಾರ: ಚಾಲಕನ ನಿಯಂತ್ರಣ ತಪ್ಪಿ ಲಾರಿಯೊಂದು ಪಲ್ಟಿಯಾದ ಪರಿಣಾಮ ಇಬ್ಬರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡ ಘಟನೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಗೇರುಸೊಪ್ಪ ಸಾಗರ ರಸ್ತೆಯ ಸುಳಿಮುರ್ಖಿ ತಿರುವು ಬಳಿ ನಡೆದಿದೆ. ಲಾರಿ ಕಬ್ಬಿಣದ ಆಟದ ಸಾಮಾನುಗಳನ್ನು ತುಂಬಿಕೊಂಡು ಸಾಗರ ಭಾಗದಿಂದ ಹೊನ್ನಾವರ ಕಡೆ ಬರುತಿತ್ತು. ಅತಿ ವೇಗದ ಚಾಲನೆಯೇ ಲಾರಿ ಪಲ್ಟಿಯಾಗಲು ಕಾರಣ ಎಂದು ಮೇಲ್ನೋಟಕ್ಕೆ ತಿಳಿದುಬಂದಿದೆ. ಮೃತರು ಮತ್ತು ಗಾಯಳುಗಳು ಮೂಲತಃ ಬಿಹಾರದವರು ಎಂದು ತಿಳಿದುಬಂದಿದೆ. ಗಾಯಾಳುಗಳಿಗೆ ಹೊನ್ನಾವರ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆ ಸಂಬಂಧ ಹೊನ್ನಾವರ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354–235042, ಇ–ಮೇಲ್: bgkeezpe@yahoo.com

ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿ.ಜಿ.ಕೆ./ಪಿಬಿ–1,2,3/ಟೆಂಡರ್/2024–25/3797 ದಿನಾಂಕ : 18–12–2024

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಏಕ & ದ್ವಿ-ಲಕೋಟೆ) ಕೆ.ಡಬ್ಲ್ಯೂ. 1, 2 & 3 ಬಿಡ್ ಡಾಕ್ಯುಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ **2023–24 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ : 5054 ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಗೆ ಮುಧೋಳ ವಿಧಾನಸಭಾ ಕ್ಷೇತ್ರಕ್ಕೆ ರೂ. 4.78 ಕೋಟಿ ಅನುದಾನದ ಹಾಗೂ 2023–24 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ : 5054 ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳ ರೂ. 7.50 ಕೋಟಿ ಅನುದಾನದಡಿ ಅನುದಾನದಡಿ ಯೋಜನೆಯಡಿ ಬಾಗಲಕೋಟೆ ಜಿಲ್ಲೆ ಮುಧೋಳ & ಬಾಗಲಕೋಟೆ ತಾಲೂಕು ವ್ಯಾಪ್ತಿಯ ಕಾಮಗಾರಿಗಳಿಗೆ** ಈ ಕೆಳಗಿನ ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ. – 1, 2 & 3 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999 – 2000 ರ ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆ ಕಾಮಗಾರಿಗಳ ಇಂಡೆಂಟ್ ನಂ. : RDPR/2024-25/RD/WORK_INDENT11237, ಹಾಗೂ ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆ ಕಾಮಗಾರಿಗಳ ಇಂಡೆಂಟ್ ನಂ. : RDPR/2024-25/RD/WORK_INDENT 11293 ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ. 15.00 ದಿಂದ 100.00 ಲಕ್ಷಗಳ ಮಿತಿಗೊಳಪಟ್ಟು), ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 07–01–2025 ರ ಸಂಜೆ 5.30 ಗಂಟೆವರೆಗೆ, 2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 09–01–2025 ರ ಬೆಳಿಗ್ಗೆ 11.00 ಗಂಟೆಯ ನಂತರ, 3) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ : **https://kppp.karnataka.gov.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/415/ಮಣಿಪಾಲ್/2024–25

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕು ಕ ಅಧಿಕಾರಿಗಳ ಕಾರ್ಯಲಯ, ಕಲಬುರಗಿ ತಾ.ಜಿ. ಕಲಬುರಗಿ
ಇ–ಮೇಲ್ : dhogulbarga@gmail.com, ಫೋನ ಸಂಖ್ಯೆ : 08472–278619

ಕಡತಸಂಖ್ಯೆ:/ಉಗ್ರಾಣ/ಸಿಆರ್/31/32/33/34/43/2024 ದಿನಾಂಕ:–04.01.2025

"ಅಲ್ಪಾವದಿ ಟೆಂಡರ ಪ್ರಕಟಣೆ"

ಟೆಂಡರ್ ಮಾಹಿತಿ ಈ ಕೆಳಗಿನಂತಿದೆ. (ವೆಬ್‌ಸೈಟ್: http:/ http:/kppp.karnataka.gov.in)

1) ಕಡತ ಸಂಖ್ಯೆ : **ಉಗ್ರಾಣ/ಸಿಆರ್/31/2024–25,** ಲೆಕ್ಕ ಶಿರ್ಷಿಕೆ : 2210–00–103–0–26, ಟೆಂಡರ್ ವಿವರ : ಅಧೀನದಲ್ಲಿ ಬರುವ ಆರೋಗ್ಯ ಸಂಸ್ಥೆಗಳಿಗೆ ಉಪಕರಣಗಳು ಮತ್ತು ವೈದ್ಯಕೀಯ ಉಪಕರಣಗಳನ್ನು ಖರಿದಿಸುವ ಕುರಿತು, ಟೆಂಡರ್ ಮೊತ್ತ : **70 ಲಕ್ಷ**
2) ಕಡತ ಸಂಖ್ಯೆ : **ಉಗ್ರಾಣ/ಸಿಆರ್/33/2024–25,** ಲೆಕ್ಕ ಶಿರ್ಷಿಕೆ : 2210–00–103–0–26, ಟೆಂಡರ್ ವಿವರ : ಜಿಲ್ಲೆಯ ಅಧೀನದಲ್ಲಿ ಬರುವ ಆರೋಗ್ಯ ಸಂಸ್ಥೆಗಳಿಗೆ ಪ್ರಯೋಗಾಲಯಕ್ಕೆ ಬೇಕಾಗಿರುವ ಮತ್ತು ಔಷಧಿ ಸಾಮಾಗ್ರಿಗಳನ್ನು ಖರಿದಿಸುವ ಕುರಿತು, ಟೆಂಡರ್ ಮೊತ್ತ : **22 ಲಕ್ಷ**
3) ಕಡತ ಸಂಖ್ಯೆ : **ಉಗ್ರಾಣ/ಸಿಆರ್/43/2024–25,** ಲೆಕ್ಕ ಶಿರ್ಷಿಕೆ : 2210–00–103–0–26, ಟೆಂಡರ್ ವಿವರ : ಜಿಲ್ಲೆಯ ಅಧೀನದಲ್ಲಿ ಬರುವ ಆರೋಗ್ಯ ಸಂಸ್ಥೆಗಳಿಗೆ ಪ್ರಯೋಗಾಲಯಕ್ಕೆ ಬೇಕಾಗಿರುವ ಮತ್ತು Hb Strips For Hb Meter ಸಾಮಾಗ್ರಿಗಳನ್ನು ಖರಿದಿಸುವ ಕುರಿತು, ಟೆಂಡರ್ ಮೊತ್ತ : **08 ಲಕ್ಷ**
4) ಕಡತ ಸಂಖ್ಯೆ : **ಉಗ್ರಾಣ/ಸಿಆರ್/32/2024–25,** ಲೆಕ್ಕ ಶಿರ್ಷಿಕೆ : 2210–00–106–0–02, ಟೆಂಡರ್ ವಿವರ : ಜಿಲ್ಲೆಯ ಅಧೀನದಲ್ಲಿ ಬರುವ ಆರೋಗ್ಯ ಸಂಸ್ಥೆಗಳಿಗೆ ವೈದ್ಯಕೀಯ ಉಪಕರಣಗಳನ್ನು ಖರಿದಿಸುವ ಕುರಿತು, ಟೆಂಡರ್ ಮೊತ್ತ : **25.27 ಲಕ್ಷ**
5) ಕಡತ ಸಂಖ್ಯೆ:**ಉಗ್ರಾಣ/ಸಿಆರ್/34/2024–25,** ಲೆಕ್ಕ ಶಿರ್ಷಿಕೆ: 2210–00–106–0–03, ಟೆಂಡರ್ ವಿವರ: ಜಿಲ್ಲೆಯ ಅಧೀನದಲ್ಲಿ ಬರುವ ಆರೋಗ್ಯ ಉಪಕೇಂದ್ರಗಳಿಗೆ ಉಪಕರಣಗಳನ್ನು ಖರಿದಿಸುವ ಕುರಿತು, ಟೆಂಡರ್ ಮೊತ್ತ : **22 ಲಕ್ಷ**
6) ಷರಾ : –

1) ಟೆಂಡರ್ ಸಲ್ಲಿಸುವ ಪ್ರಾರಂಭ ದಿನಾಂಕ: **06.01.2025,** 2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **15.01.2025 ಸಾಯಂಕಾಲ 04.00 ಗಂಟೆಗೆ,** 3) ಟೆಂಡರ್ ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ: **16.01.2025 ಸಾಯಂಕಾಲ 04.10 ಗಂಟೆಗೆ,** 4) ಟೆಂಡರ್ ಆರ್ಥಿಕ ಬಿಡ್: ತಾಂತ್ರಿಕ ಬಿಡ್ಡಿನಲ್ಲಿ ಅರ್ಹರಿರುವ ಗುತ್ತಿಗೆದಾರರ ಆರ್ಥಿಕ ಬಿಡ್ಡುಗಳನ್ನು ಮಾತ್ರ **17.01.2025** ಪರಿಶೀಲಿಸುವುದು. 6) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಕಲಬುರಗಿ. ದೂರವಾಣಿ ಸಂಖ್ಯೆ : 08472–278619
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕೆಳಕಂಡ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/812/ಕೆ.ಎಸ್.ಎಂ.ಸಿ.&ಎ/2024–25

ಬಾಕಿ ಬಿಲ್ ಪಾವತಿಸಿ, ಇಲ್ಲವೇ ದಯಾಮರಣ ನೀಡಿ: ತೀರ್ಥಹಳ್ಳಿ ಗುತ್ತಿಗೆದಾರರಿಂದ ಸಿಎಂಗೆ ಮನವಿ ಪತ್ರ

ಶಿವಮೊಗ್ಗ: ಇಲ್ಲಿನ ತೀರ್ಥಹಳ್ಳಿಯ ಗುತ್ತಿಗೆದಾರರು ಸಿಎಂ ಸಿದ್ದರಾಮಯ್ಯನವರಿಗೆ ಪತ್ರವೊಂದನ್ನು ಬರೆದಿದ್ದು, ಅದರಲ್ಲಿ ತಮಗೆ ದಯಾಮರಣಕ್ಕೆ ಅವಕಾಶ ನೀಡುವಂತೆ ಕೋರಿ ಮನವಿ ಮಾಡಿದ್ದಾರೆ. ಪೂರ್ಣಗೊಂಡ ಕಾಮಗಾರಿಗಳಿಗೆ ಬಿಲ್ ಪಾವತಿ ಆಗದ ಹಿನ್ನೆಲೆಯಲ್ಲಿ ನೊಂದು ಈ ರೀತಿ ಮಾಡಿದ್ದು, ಅದರ ಪ್ರತಿಯನ್ನು ಮಾಜಿ ಗೃಹಸಚಿವ, ತೀರ್ಥಹಳ್ಳಿ ಹಾಲಿ ಶಾಸಕ ಆರಗ ಜ್ಞಾನೇಂದ್ರ ಅವರಿಗೂ ಈ ಪತ್ರ ರವಾನಿಸಿದ್ದಾರೆ.

ತೀರ್ಥಹಳ್ಳಿಯ ತಾಲೂಕಿನಲ್ಲಿ ತಾವು ಗುತ್ತಿಗೆ ಪಡೆದಿದ್ದ ಹಲವಾರು ಕಾಮಗಾರಿಗಳು ಪೂರ್ಣಗೊಂಡಿದ್ದರೂ, 2ರಿಂದ 3 ವರ್ಷವಾದರೂ ಸಂಬಂಧಪಟ್ಟ ಇಲಾಖೆಯಿಂದ ಹಣ ಬಿಡುಗಡೆ ಆಗಿಲ್ಲ ಅಂತ ಗುತ್ತಿಗೆದಾರರು ಬೇಸರ ವ್ಯಕ್ತಪಡಿಸಿದ್ದಾರೆ.

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಗುತ್ತಿಗೆದಾರರಾಗಿ ಕೆಲಸ ಮಾಡುತ್ತಿರುವ ನಾವುಗಳು ಹಿಂದಿನ ವರ್ಷಗಳಲ್ಲಿ ಹಲವಾರು ಸರ್ಕಾರಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಅವುಗಳಿಂದ ಸಾರ್ವಜನಿಕರಿಗೆ ಅನುಕೂಲವಾಗಿರುತ್ತವೆ. ಆದರೆ ಕಾಮಗಾರಿ ಪೂರ್ಣವಾಗಿ ಎರಡು–ಮೂರು ವರ್ಷಗಳು ಕಳೆದರೂ ಕೆಲಸ ಮಾಡಿದ ನಮಗೆ ಹಣ ಸಂದಾಯವಾಗಿರುವುದಿಲ್ಲ ಅಂತ ಸಿ.ಎಂ.ಗೆ ಬರೆದ ಪತ್ರದಲ್ಲಿ ತಮ್ಮ ಬೇಸರವನ್ನು ತೋಡಿಕೊಂಡಿದ್ದಾರೆ.

ಪತ್ರದಲ್ಲೇನಿದೆ?

ಗುತ್ತಿಗೆ ಕೆಲಸವನ್ನೇ ಮಾಡಿಕೊಂಡಿರುವ ನಮಗೆ ಹಣ ಬಾರದಿರುವುದರಿಂದ ಜೀವನ ನಿರ್ವಹಣೆಗೆ ತೊಂದರೆಯಾಗುತ್ತಿದೆ. ಸರಕಾರದಿಂದ ಬರಬೇಕಾದ ಕಾಮಗಾರಿ ವೆಚ್ಚದ ಹಣವನ್ನು ಕೂಡಲೇ ಪಾವತಿಸುವಂತೆ ಪ್ರಾರ್ಥಿಸುತ್ತೇವೆ. ಇನ್ನಾದರೂ ಹಣ ಪಾವತಿಯಾಗದೇ ಇದ್ದಲ್ಲಿ ನಮಗೆಲ್ಲರಿಗೂ ದಯಾ ಮರಣ ಅವಕಾಶವನ್ನು ಕಲ್ಪಿಸಿ ಕೊಡುವಂತೆ ವಿನಂತಿಸುತ್ತೇವೆ ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಭಂಡತನದಲ್ಲಿ ಸಿಎಂ siddaramaiah ಅವರನ್ನೇ ಮೀರಿಸುತ್ತಾರೆ TrollMinister PriyankKharge ಅವರು!! ಗುತ್ತಿಗೆದಾರ ಸಚಿನ್ ಪಾಂಚಾಳ್ ಅವರ ಕೊಲೆ ನಡೆದು 10 ದಿನಗಳಾದರೂ, ಕೊಲೆಗಾರರಾದ ಪ್ರಿಯಾಂಕ್ ಖರ್ಗೆ ಅವರ ಆಪ್ತರನ್ನು ಇದುವರೆಗೂ ಪೊಲೀಸರು ಬಂಧಿಸದಿರುವುದು ಇದು INCKarnataka ಸರಕಾರದ ಪ್ರಾಯೋಜಿತ ಕೊಲೆ ಎಂಬುದಕ್ಕೆ ಸಾಕ್ಷಿ!!
ಸುಪಾರಿ ಕಿಲ್ಲರ್ ಪ್ರಿಯಾಂಕ್ ಖರ್ಗೆ ಅವರೆ ನಿಮ್ಮ ಕುಚಿಕು ರಾಜು ಕಪನೂರು ಮತ್ತವರ ಗ್ಯಾಂಗ್ ಅನ್ನು ಎಲ್ಲಿ ಬಚ್ಚಿಟ್ಟಿದ್ದಿರಿ..?? ಅವರಿಗೆ ಚಹಾ-ಎಳನೀರಿನ ವ್ಯವಸ್ಥೆ ಆಗಿದೆಯೋ..?.

ಮಾಧವ್ ಎಚ್.ಎ

ಖರ್ಗೆ ಆಪ್ತರು ಪವರ್ ಫುಲ್ ಇರಬೇಕು ಅದಕ್ಕೆ ಆರೆಸ್ಟ್ ಮಾಡೋಕೆ ಸರಕಾರಕ್ಕೆ ಅಸ್ತಿತ್ವದ ಪ್ರಶ್ನೆ ಎದುರಾಗ ಬಹುದು.

ವಿಶ್ವವಾಣಿ ಕ್ಲಬ್ ಹೌಸ್
ಕಾರ್ನರ್ 07.01.2025
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಶ್ರೀ ನವೀನ್ ಎಲ್ಲಂಗಳ
ವಿಷಯ
ಗೀತೆ ಕಲಿಸಿದ ಪಾಠಗಳು
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- ಸ್ಥಳ : ತುಮಕೂರು

ಸಮಸ್ಯೆಯೇನು..?

- ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಹೊನ್ನವಳಿ ಗ್ರಾಮಕ್ಕೆ ಸಾರಿಗೆ ಸಮಸ್ಯೆ.
- **ಪರಿಹಾರ:** ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಹೊನ್ನವಳಿ ಗ್ರಾಮದಲ್ಲಿ ವಿದ್ಯಾರ್ಥಿಗಳಿಗೆ ಸಾರಿಗೆ ಸಮಸ್ಯೆಯ ಬಗ್ಗೆ ಗಮನಕ್ಕೆ ಬಂದಿದ್ದು, ಶಾಲಾ, ಕಾಲೇಜು ಸಮಯಕ್ಕೆ ಹೆಚ್ಚುವರಿ ಸುತ್ತುವಳಿ ಕಾರ್ಯಾಚರಣೆ ಮಾಡಲು ಕ್ರಮವಹಿಸಲಾಗಿದೆ

ಸಮಾಚಾರ ಸಣ್ಣದಲ್ಲ

ವಿದ್ಯುತ್ ಶಾಕ್‌ಗೆ ಮಗು ಬಲಿ

ದಾವಣಗೆರೆ: ವಿದ್ಯುತ್ ಶಾಕ್ ಹೊಡೆದು ಒಂದೂವರೆ ವರ್ಷದ ಮಗು ಸಾವನ್ನಪ್ಪಿದ ಘಟನೆ ಹೊನ್ನಾಳಿಯ ಸೊರಟೂರು ಗ್ರಾಮದಲ್ಲಿ ನಡೆದಿದೆ. ಮೃತ ಮಗುವನ್ನು ಗ್ರಾಮದ ಆಂಜನೇಯ ಎಂಬುವರ ಪುತ್ರ ಮಂಜು ಎಂದು ಗುರುತಿಸಲಾಗಿದೆ. ಮಗುವಿನ

ತಾಯಿ ಮನೆಯಲ್ಲಿ ಮೋಟರ್ ಆನ್ ಮಾಡಿ ನೀರು ತುಂಬಿಸುವಾಗ ಈ ಘಟನೆ ನಡೆದಿದೆ. ಆಟವಾಡುತ್ತಿದ್ದಾಗ ಮಗು ನೀರಿನ ಮೋಟರ್ ಹಿಡಿದು ಕೊಂಡಿದೆ. ಇದರಿಂದ ಮಗುವಿಗೆ ವಿದ್ಯುತ್ ಶಾಕ್ ಹೊಡೆದಿದ್ದು, ಮಗು ಸ್ಥಳದಲ್ಲೇ ಸಾವಿಗೀಡಾಗಿದೆ. ಮಗುವಿನ ಸಾವಿನಿಂದ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ.

ಇಂದು ಶ್ರೀಸಾನ್ನಿಧ್ಯ ಉದ್ಘಾಟನೆ

ಬೆಳ್ತಂಗಡಿ: ನಾಡಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ' ಉಪರಾಷ್ಟ್ರಪತಿ ಜಗದೀಪ್ ಧನ್ಕರ್ ಜ.7ರಂದು ಭೇಟಿ ನೀಡಲಿದ್ದಾರೆ. ಶ್ರೀಕ್ಷೇತ್ರದಲ್ಲಿ ನೂತನವಾಗಿ ನಿರ್ಮಾಣವಾಗಿರುವ 'ಶ್ರೀಸಾನಿಧ್ಯ' ಅತ್ಯಾಧುನಿಕ ಸರತಿ ಸಾಲು ವ್ಯವಸ್ಥೆಯ ಕಟ್ಟಡವನ್ನು ಭಕ್ತರ ಅನುಕೂಲಕ್ಕಾಗಿ ಉಪರಾಷ್ಟ್ರಪತಿ ಅವರು ಲೋಕಾರ್ಪಣೆ ಮಾಡಲಿದ್ದಾರೆ. ದೇವರ ದರ್ಶನಕ್ಕಾಗಿ ಕಾಯುವ ಸಮಯ ಮತ್ತು ವಿಧಾನವನ್ನು ಸರಳೀಕರಿಸಬೇಕು ಎನ್ನುವ ಯೋಚನೆಯಿಂದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಹೊಸ ಮಾದರಿಯ, ಅತ್ಯಾಧುನಿಕ ಸೌಲಭ್ಯಗಳುಳ್ಳ ನೂತನ ಕ್ಯೂ ಕಾಂಪ್ಲೆಕ್ಸ್ ನಿರ್ಮಿಸುವ ಯೋಜನೆ ರೂಪಿಸಿದರು. ಇದು ಇಂದು ಸಾಕಾರಗೊಂಡಿದ್ದು ಲೋಕಾರ್ಪಣೆಗೊಳ್ಳಲಿದೆ.

ವಿದೇಶದಿಂದ ವಾಪಸಾಗುತ್ತಿದ್ದಂತೆ ಹೈಕಮಾಂಡ್ ಭೇಟಿ | ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚಿಸಿದ ಡಿಕೆಶಿ

ದಿಲ್ಲಿಗೆ ರಾಜ್ಯ ಕೈ ನಾಯಕರ ಪರೇಡ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನೂತನ ವರ್ಷಾಚರಣೆಗೆ ಕುಟುಂಬ ಸಮೇತ ವಿದೇಶಕ್ಕೆ ತೆರಳಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್ ಭಾರತಕ್ಕೆ ವಾಪಸಾಗುತ್ತಿದ್ದಂತೆ ರಾಜ್ಯ ಕಾಂಗ್ರೆಸ್ ನಾಯಕರು ದೆಹಲಿ ಪರೇಡ್ ನಡೆಸಲು ಸಿದ್ಧತೆ ನಡೆಸಿದ್ದಾರೆ.

ವಿದೇಶದಿಂದ ವಾಪಸಾಗುತ್ತಿದ್ದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೆಹಲಿಯಲ್ಲಿ ಪಕ್ಷದ ನಾಯಕರನ್ನು ಭೇಟಿಯಾಗಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ. ಇದಕ್ಕೆ ಠಕ್ಕರ್ ಕೊಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಸಚಿವರುಗಳು ದೆಹಲಿಗೆ ತೆರಳಲು ಸಿದ್ಧತೆ ನಡೆಸಿಕೊಂಡಿದ್ದಾರೆ.

ನೂತನ ವರ್ಷಾಚರಣೆಗೆ ಕುಟುಂಬ ಸಮೇತ ವಿದೇಶಕ್ಕೆ ತೆರಳಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೋಮವಾರ ಮಧ್ಯಾಹ್ನ ದೆಹಲಿಗೆ ಬಂದಿಳಿದರು. ಅಲ್ಲಿಂದ ನೇರವಾಗಿ ದೆಹಲಿ ನಾಯಕರನ್ನು ಭೇಟಿಯಾಗಿ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ಚರ್ಚಿಸಿದ್ದಾರೆ ಎಂದು ತಿಳಿದುಬಂದಿದೆ.

ಡಿಕೆ ವಿದೇಶದಲ್ಲಿದ್ದಾಗ ಕರ್ನಾಟಕದಲ್ಲಿ ಸತೀಶ್ ಜಾರಕಿಹೊಳಿ ನೇತೃತ್ವದಲ್ಲಿ ಹಲವು ನಾಯಕರು ಡಿನ್ನರ್ ಪಾರ್ಟಿ ಮಾಡಿದ್ದರು. ಈ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಭಾಗವಹಿಸಿದ್ದರು. ಈ ಔತಣಕೂಟ ರಾಜ್ಯ ರಾಜಕೀಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಔತಣಕೂಟದಲ್ಲಿ ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲವೆಂದು ನಾಯಕರು ಹೇಳಿದರೂ, ಡಿಕೆ ವಿದೇಶದಲ್ಲಿರುವಾಗ ಈ ಸಭೆ ನಡೆದಿದ್ದು ಹಲವು ಅನುಮಾನಗಳಿಗೆ ಕಾರಣವಾಗಿತ್ತು.

ಈ ಚರ್ಚೆಗಳ ನಡುವೆಯೇ ಡಿ.ಕೆ.ಶಿವಕುಮಾರ್ ಬೆಂಗಳೂರಿಗೆ ಆಗಮಿಸದೇ, ನೇರವಾಗಿ ಹೈಕಮಾಂಡ್ ಭೇಟಿಯಾಗಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ. ಇದರೊಂದಿಗೆ ದೆಹಲಿ ಕಾಂಗ್ರೆಸ್‌ನ ಗ್ಯಾರಂಟಿ ಘೋಷಣೆಯನ್ನು ಡಿಕೆ ಕಡೆಯಿಂದ ಮಾಡಿಸಿರುವುದು ಮತ್ತಷ್ಟು ಕುತೂಹಲವನ್ನು ಮೂಡಿಸಿದೆ.

ಸಚಿವ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀರ್ಮಾನಿಸಲಿದ್ದಾರೆ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಹೈಕಮಾಂಡ್ ತೀರ್ಮಾನಿಸಲಿದೆ. ಈ ಬಗ್ಗೆ ಯಾವ ಚರ್ಚೆಯೂ ನಡೆದಿಲ್ಲ. ಮಾಧ್ಯಮದವರಿಗೆ ಯಾರೋ ತಪ್ಪು ಮಾಹಿತಿ ನೀಡಿ, ನಿಮಗೆ ಬಿಡುವು ಸಿಗದಂತೆ ನೋಡಿಕೊಳ್ಳುತ್ತಿದ್ದಾರೆ.
-ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ನಾನೂ ಔತಣಕೂಟಕ್ಕೆ ಕರೆಯುವೆ : ಡಿಕೆ

ಡಿಕೆ ಶಿವಕುಮಾರ್ ವಿದೇಶದಲ್ಲಿರುವಾಗ ಕೆಲ ಸಚಿವರು ನಡೆಸಿರುವ ಡಿನ್ನರ್ ಮೀಟಿಂಗ್‌ಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಡಿಕೆಶಿ, ನಿಮ್ಮ ಮನೆಗೆ ನಾವು, ನಮ್ಮ ಮನೆಗೆ ನೀವು ಬರುವುದು ರಾಜಕೀಯದಲ್ಲಿ ಸಾಮಾನ್ಯ. ನಾನೂ ಸಹ ಆಗಾಗ್ಗೆ ಔತಣಕೂಟ, ಸಭೆ ಕರೆಯುತ್ತಿರುತ್ತೇನೆ. ಔತಣಕೂಟಕ್ಕೆ ಏಕೆ ರಾಜಕಾರಣ ಬೆರೆಸುತ್ತೀರಿ? ಇದಕ್ಕೆ ಇಲ್ಲಸಲ್ಲದ ಅರ್ಥವನ್ನು ಏಕೆ ಕಲ್ಪಿಸುತ್ತೀರಿ? ನಾನು ಕಳೆದ ನಾಲ್ಕೈದು ವರ್ಷಗಳಿಂದ ಕುಟುಂಬದವರೊಂದಿಗೆ ಎಲ್ಲಿಯೂ ಹೋಗಿರಲಿಲ್ಲ. ಆದ ಕಾರಣಕ್ಕೆ ವಿದೇಶಿ ಪ್ರವಾಸಕ್ಕೆ ತೆರಳಿದ್ದೆ. ಅನೇಕ ಮಂತ್ರಿಗಳು ಸಹ ಕುಟುಂಬದವರ ಜೊತೆ ವಿದೇಶಿ ಪ್ರವಾಸ ಹೋಗಿದ್ದರು. ಬೆಂಗಳೂರಿನಲ್ಲಿ ಇದ್ದವರು ಒಂದು ಸಂಜೆ ಒಟ್ಟಿಗೆ ಸೇರಿದ್ದಾರೆ. ಇದರಲ್ಲಿ ತಪ್ಪೇನಿದೆ? ಎಂದು ಪ್ರಶ್ನಿಸಿದರು.

ಸಿದ್ದು ಬೆಂಬಲಿಗರೂ ದೆಹಲಿಗೆ?

ಡಿಕೆಶಿ ದೆಹಲಿ ವರಿಷ್ಠರನ್ನು ಭೇಟಿಯಾದ ಬೆನ್ನಲ್ಲೇ ಸಿದ್ದರಾಮಯ್ಯ ಆಪ್ತ ಸಚಿವರು ಪ್ರತ್ಯೇಕವಾಗಿ ದೆಹಲಿ ನಾಯಕರನ್ನು ಭೇಟಿಯಾಗಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ. ಸಚಿವ ಸತೀಶ್ ಜಾರಕಿಹೊಳಿ, ಮಹದೇವಪ್ಪ ಸೇರಿ ಹಲವು ಸಚಿವರು, ಕೆಲ ಹಿರಿಯ ಶಾಸಕರು ವರಿಷ್ಠರನ್ನು ಭೇಟಿಯಾಗಿ ಕೆಪಿಸಿಸಿ ಅಧ್ಯಕ್ಷ ಸ್ಥಾನ, ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸಬೇಕೆಂಬ ಬೇಡಿಕೆ ಕುರಿತು ತಮ್ಮ ನಿಲುವು ತಿಳಿಸಲು ಮುಂದಾಗಿದ್ದಾರೆ. ಮುಂದಿನ ವಾರ ದೆಹಲಿಗೆ ತೆರಳಲು ಸಿದ್ಧತೆ ನಡೆಸಿಕೊಂಡಿರುವ ನಾಯಕರು, ಪ್ರಮುಖವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಳಿ ಉಪ ಮುಖ್ಯಮಂತ್ರಿ ಹುದ್ದೆಯೊಂದಿಗೆ ಜಲಸಂಪನ್ಮೂಲ ಮತ್ತು ಬೆಂಗಳೂರು ಅಭಿವೃದ್ಧಿ ಖಾತೆಗಳಿವೆ. ಒಬ್ಬರಿಗೆ ಒಂದೇ ಹುದ್ದೆ ಎನ್ನುವುದು ಪಕ್ಷದ ನೀತಿ. ಹೀಗಾಗಿ, ಈ ವಿಷಯವೂ ಸೇರಿದಂತೆ ಹಲವು ವಿಚಾರಗಳ ಕುರಿತು ವರಿಷ್ಠರಿಗೆ ತಮ್ಮ ನಿಲುವು ವ್ಯಕ್ತಪಡಿಸಲು ಸಚಿವರು ತೀರ್ಮಾನಿಸಿದ್ದಾರೆ ಎಂದು ಹೇಳಲಾಗಿದೆ. ಇದರೊಂದಿಗೆ ಜಾತಿವಾರು ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸಬೇಕು ಹಾಗೂ ಡಿ.ಕೆ.ಶಿವಕುಮಾರ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಮುಕ್ತಗೊಳಿಸಬೇಕು ಎನ್ನುವ ಬೇಡಿಕೆ ಮುಂದಿಡುವ ಸಾಧ್ಯತೆಯಿದೆ.

ವೈರಸ್ ತಡೆಯಲು ಆರೋಗ್ಯ ಇಲಾಖೆ ಸನ್ನದ್ಧ: ಸಚಿವ ಡಾ.ಶರಣಪ್ರಕಾಶ್ ಪಾಟೀಲ್

ಎಚ್‌ಎಂಪಿ ವೈರಸ್ ಬಗ್ಗೆ ಆತಂಕ ಬೇಡ



ಕಲಬುರಗಿ: ಹೊಸದಾಗಿ ಹರಡುತ್ತಿರುವ ಹ್ಯೂಮನ್ ಮೇಟಾನ್ಯುಮೋ ವೈರಸ್ ನಿಂದಾಗಿ ರಾಜ್ಯದ ಜನರು ಭಯ ಪಡುವ ಅಗತ್ಯವಿಲ್ಲ ಎಂದು ವೈದ್ಯಕೀಯ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಎರಡು ಪ್ರಕರಣಗಳು ಪತ್ತೆಯಾಗಿವೆ, ಅದರಲ್ಲಿ 3 ತಿಂಗಳ ಮಗು ಈಗಾಗಲೇ ಡಿಸ್ಚಾರ್ಜ್ ಆಗಿದೆ, 8 ತಿಂಗಳ ಮಗು ಚೇತರಿಸಿಕೊಳ್ಳುತ್ತಿದೆ, ಹಾಗಾಗಿ ವೈರಸ್ ಹರಡುವುದಕ್ಕಿಂತ ಮುಂಚೆಯೇ ಅದನ್ನು ತಡೆಯಲು ನಾವು ಎಲ್ಲಾ ರೀತಿಯಲ್ಲಿ ತಯಾರಿಯಲ್ಲಿದ್ದೇವೆ. ಸಣ್ಣ ಪ್ರಮಾಣದ ಸೋಂಕಿನ ಲಕ್ಷಣಗಳು ಕಂಡು ಬಂದಲ್ಲಿ ಸಮೀಪದ ಆಸ್ಪತ್ರೆಗೆ ಹೋಗಬೇಕು ಎಂದು ಹೇಳಿದರು.

ವೈರಸ್ ತಡೆಗಟ್ಟಲು ಮುಂಜಾಗೃತೆಗಾಗಿ ಈಗಾಗಲೇ ಸಭೆಗಳನ್ನು ಮಾಡಲಾಗಿದೆ, ತುರ್ತು ಪ್ರಕರಣಗಳು ಕಂಡುಬಂದಲ್ಲಿ ಮಲ್ಟಿಪ್ಲೆಕ್ಸ್ ಪಿಸಿಆರ್ ಟೆಸ್ಟ್ ಮಾಡುವುದಕ್ಕೂ ನಮ್ಮಲ್ಲಿ ಸೌಲಭ್ಯವಿದೆ. ಅವಶ್ಯಕತೆ ಇದ್ದಲ್ಲಿ ಮಾತ್ರ ಈ ಪರೀಕ್ಷೆ ನಡೆಸಲಾಗುವುದು. ಇದಕ್ಕೆ ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೂ ಸನ್ನದ್ಧವಾಗಿದೆ ಎಂದರು.

ನೆಗಡಿ, ಕೆಮ್ಮು ಮತ್ತಿತರ ಪ್ರಾಥಮಿಕ ಸೋಂಕಿನ ಲಕ್ಷಣಗಳು ಇದ್ದವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಸೋಂಕಿತರು ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಹೋಗುವುದನ್ನು ಕಡಿಮೆ ಮಾಡಬೇಕು. ಮನೆಯಲ್ಲಿ ಚಿಕಿತ್ಸೆ ಪಡೆಯಬೇಕು. ಮಕ್ಕಳು ಮತ್ತು ವೃದ್ಧರು ಬಹಳಷ್ಟು ಜಾಗರೂಕತೆಯಿಂದ ಇರಬೇಕು.
-ಡಾ. ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವ

ಲೋಕೋಪಯೋಗಿ ಸತೀಶ್ ಸತೀಶ್ ಜಾರಕಿಹೊಳಿ ಹೇಳಿಕೆ

ಮುಂದಿನ ಅವಧಿಗೆ ನಾನೇ ಸಿಎಂ

ರಾಯಚೂರು: ಸದ್ಯಕ್ಕೆ ಮುಖ್ಯಮಂತ್ರಿಗಳು ಇದ್ದಾರೆ. ಸಿಎಂ ಬದಲಾವಣೆ ವಿಚಾರ ಬರುವುದಿಲ್ಲ. 2028ಕ್ಕೆ ನಾನೇ ಸಿಎಂ ಅಭ್ಯರ್ಥಿ ಎಂದು ಹೇಳಿದ್ದೇನೆ. ಕಾದು ನೋಡಬೇಕು ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿ, ರಹಸ್ಯ ಸಭೆ ಏನು ಇರಲಿಲ್ಲ. ಎಲ್ಲರೂ ಕೂಡಿಯೇ ಸಭೆ ಮಾಡಿದ್ದು, ರಹಸ್ಯ ಸಭೆ ಎನ್ನುವ ಪ್ರಶ್ನೆಯೇ ಇಲ್ಲ. ಅದು ಊಟದ ಸಭೆ ಅಷ್ಟೇ. ಸಭೆಯಲ್ಲಿ ಅಂಥದ್ದೇನು ಚರ್ಚೆ ಯಾವುದು ಆಗಿಲ್ಲ. ಸಂಪುಟ ವಿಸ್ತರಣೆಯೂ ಇಲ್ಲ ಸ್ಪಷ್ಟಪಡಿಸಿದರು.

ಹಿಂದಿನ ಸರಕಾರ ಬಜೆಟ್ ಸಪೋರ್ಟ್ ಇಲ್ಲದೆ ಕೆಲಸ ಮಾಡಿದ್ದಾರೆ. ಈಗ ಆ ಕಾಮಗಾರಿಗೆ ದುಡ್ಡು ಕೊಡಬೇಕು ಅಂದರೆ ಎಲ್ಲಿಂದ ಹಣ ಕೊಡಬೇಕು. ಈ ರೀತಿಯ ಇಂಬ್ಯಾಲೇಸ್ ಆಗಲು ಏನು ಕಾರಣ. 1000 ಕೋಟಿ ಬಜೆಟ್ ಇದೆ. ಸಾವಿರ ಕೋಟಿ ಕೆಲಸ ಆಗಿದ್ದರೆ ಅದು ಬಿಡುಗಡೆ ಮಾಡಬೇಕು. 1000 ಕೋಟಿ ಬಜೆಟ್ ಇಟ್ಟುಕೊಂಡು 3 ಸಾವಿರ ಕೋಟಿ ಕೆಲಸ ಮಾಡಿದ್ದರೆ ಹೇಗೆ ಆಗುತ್ತದೆ. ಫೈನಾನ್ಸ್ ಸಪೋರ್ಟ್ ಇಲ್ಲದೆ ಕೆಲಸ ಮಾಡಿದ್ದಾರೆ. ಹೀಗಾಗಿ ಬಿಲ್ ಗಳು ಕೊಡಲು ತಡವಾಗುತ್ತಿದೆ ಎಂದರು.

ನಮ್ಮ ಸರಕಾರ ಬಂದ ಬಳಿಕ ಅಭಿವೃದ್ಧಿ ಕೆಲಸಗಳು ನಡೆದಿವೆ. ರಾಜ್ಯದಲ್ಲಿ ಶೇ.60ರಷ್ಟು ಪರ್ಸೆಂಟ್ ಸರಕಾರ ಎಂದು ಬಿಜೆಪಿಯವರು ಆರೋಪ ಮಾಡುತ್ತಾರೆ. ಬರೀ ಆರೋಪ ಮಾಡುವುದಲ್ಲ. ಅದನ್ನು ಸಾಬೀತು ಮಾಡಬೇಕು. ಸುಮ್ಮನೇ ಹೇಳುವುದು ಆಗುವುದಿಲ್ಲ ಎಂದರು.

ಕಾಂಗ್ರೆಸ್ ಪಾರ್ಟಿಯಲ್ಲಿ ಸದ್ಯಕ್ಕೆ ಎಲ್ಲವೂ ಸರಿಯಿದೆ. ಅದರಂತೆ ಸಿಎಂ, ಡಿಸಿಎಂ ಬದಲಾವಣೆ ಸೇರಿ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯೂ ಸಹ ಹೈಕಮಾಂಡ್ ವಿಚಾರಕ್ಕೆ ಬಿಟ್ಟ ವಿಷಯ. ಸರಕಾರದಲ್ಲಿ ಆ ತರಹದ ಬದಲಾವಣೆಯಾದರೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳೇ ಉತ್ತರ ನೀಡುತ್ತಾರೆ. ಅಧ್ಯಕ್ಷರ ಬದಲಾವಣೆ ಹೈ ಕಮಾಂಡ್ ಅವರಿಗೆ ಬಿಟ್ಟ ವಿಷಯ.
ಸತೀಶ್ ಜಾರಕಿಹೊಳಿ, ಸಚಿವ

ಸಚಿವರು ನೇರವಾಗಿ ಹೊಣೆಗಾರರು ಆಗಲ್ಲ

ಪತ್ರದಲ್ಲಿ ಪ್ರಿಯಾಂಕ್ ಖರ್ಗೆ ಆಪ್ತನ ಹೆಸರಿದೆ. ಈಶ್ವರಪ್ಪನದ್ದು ನೇರವಾಗಿ ಪತ್ರದಲ್ಲಿ ಹೆಸರು ಉಲ್ಲೇಖವಾಗಿತ್ತು. ಆಪ್ತರು, ಪಿಎಗಳ ಹೆಸರು ಇದ್ದರೆ ಸಚಿವರು ನೇರವಾಗಿ ಹೊಣೆಗಾರರು ಆಗಲ್ಲ. ತನಿಖೆ ನಡೆಯುತ್ತಿದೆ ನಡೆಯಲಿ.ಬಸ್ ದರ ಏರಿಕೆಗೆ ಬಿಜೆಪಿಯವರು ಪ್ರತಿಭಟನೆ ನಡೆಸಿದ್ದಾರೆ. ಕೇಂದ್ರ ಹಣಕಾಸು ಸಚಿವ ಹಳೆಗಾಡಿಗಳಿಗೆ ಶೇ.18ರಷ್ಟು ಜಿಎಸ್ ಟಿ ಹಾಕಿದ್ದಾರೆ ಅದರ ಬಗ್ಗೆ ಪ್ರತಿಭಟನೆ ಇಲ್ಲ. ಬರೀ ರಾಜ್ಯದ ಬಸ್ ದರ ಒಂದೇ ನೋಡಿದರೆ ಹೇಗೆ ಎಂದು ಸಚಿವ ಸತೀಶ ಜಾರಕಿಹೊಳಿ ಪ್ರಶ್ನಿಸಿದರು.

ಹೃದಯಾಘಾತದಿಂದ ವಿದ್ಯಾರ್ಥಿನಿ ಸಾವು

ಚಾಮರಾಜನಗರ: 3ನೇ ತರಗತಿ ವಿದ್ಯಾರ್ಥಿನಿ ಯೊಬ್ಬಳು ಕುಸಿದುಬಿದ್ದು ಮೃತಪಟ್ಟ ಘಟನೆ ಚಾಮರಾಜನಗರದ ಖಾಸಗಿ ಶಾಲೆಯೊಂದರಲ್ಲಿ ನಡೆದಿದೆ. ಮೃತ ಬಾಲಕಿಯನ್ನು ಬದನ ಗುಪ್ಪೆಯ ಗ್ರಾಮದ ಲಿಂಗರಾಜು, ಶೃತಿ ದಂಪತಿಯ ಪುತ್ರಿ ತೇಜಸ್ವಿನಿ (8) ಎಂದು ಗುರುತಿಸಲಾಗಿದೆ. ಬಾಲಕಿ ಬೆಳಗ್ಗೆ ಶಾಲೆಗೆ ಹೋಗಿದ್ದಳು. ತರಗತಿಯಲ್ಲಿ ಶಿಕ್ಷಕರಿಗೆ ನೋಟ್ಸ್ ತೋರಿಸಲು ಹೋಗುತ್ತಿದ್ದಂತೆ ವಿದ್ಯಾರ್ಥಿನಿ ಹೃದಯ ಸ್ತಂಭನದಿಂದ ಕುಸಿದು ಬಿದ್ದಿದ್ದಾಳೆ. ಕುಸಿದು ಬಿದ್ದ ವಿದ್ಯಾರ್ಥಿನಿ ಯನ್ನು ಶಿಕ್ಷಕರು ತಕ್ಷಣ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆಸ್ಪತ್ರೆಗೆ ಅಷ್ಟರಲ್ಲಿ ವಿದ್ಯಾರ್ಥಿನಿ ಕೊನೆಯುಸಿರೆಳೆದಿದ್ದಾಳೆ.

ಜಿಲ್ಲಾಸ್ಪತ್ರೆ, ಮೃತರ ಮನೆಗೆ ಬಿಜೆಪಿ ತಂಡ ಭೇಟಿ | ಸಚಿವರ ವಿರುದ್ಧ ಕಿಡಿ

ಬಾಣಂತಿ ಸಾವು ಪ್ರಕರಣ: ಸತ್ಯ ಶೋಧನಾ ತಂಡದಿಂದ ಪರಿಶೀಲನೆ

ಕೊಪ್ಪಳ: ನಗರದ ಜಿಲ್ಲಾಸ್ಪತ್ರೆಯಲ್ಲಿ ಬಾಣಂತಿ ರೇಣುಕಾ ಸಾವು ಪ್ರಕರಣದ ಹಿನ್ನೆಲೆ ಬಿಜೆಪಿ ಸತ್ಯ ಶೋಧನಾ ಸಮಿತಿ ತಂಡ, ಮೃತಳ ಮನೆ ಮತ್ತು ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿ ಪರಿಶೀಲಿಸಿತು.

ಬೀದರ್ ದಕ್ಷಿಣ ಶಾಸಕ ಶೈಲೇಂದ್ರ ಬೆಲ್ದಾಳೆ ನೇತೃತ್ವದ ತಂಡ, ಕುಕನೂರು ತಾಲೂಕು ಆಡೂರು ಗ್ರಾಮದ ಮೃತ ರೇಣುಕಾ ಮನೆಗೆ ಭೇಟಿ ನೀಡಿ ಮಾಹಿತಿ ಪಡೆದು, ಕುಟುಂಬಕ್ಕೆ ಸಾಂತ್ವನ ಹೇಳಿದರು. ನಂತರ ರೇಣುಕಾ ಮೃತಪಟ್ಟಿದ್ದ ಕೊಪ್ಪಳ ಕಿಮ್ಸ್ ನ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿ, ವೈದ್ಯರಿಂದ ಮಾಹಿತಿ ಪಡೆದರು.

ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗದ ಎಚ್ ಒಡಿ ಡಾ.ಬಿ.ಎಚ್. ನಾರಾಯಣಿ ಅವರು ಆಸ್ಪತ್ರೆಗೆ ಭೇಟಿ ನೀಡಿದ್ದ ಬಿಜೆಪಿ ತಂಡಕ್ಕೆ ರೇಣುಕಾ ಸಾವಿನ ಬಗ್ಗೆ ಮಾಹಿತಿ ನೀಡಿ, ಮೃತ ರೇಣುಕಾ ಕುಷ್ಟಗಿಯಿಂದ ರೆಫರ್ ಆಗಿ, ಡಿ.30ರ ರಾತ್ರಿ 11 ಗಂಟೆಗೆ ಕೊಪ್ಪಳ ಜಿಲ್ಲಾಸ್ಪತ್ರೆಗೆ ಬಂದಿದ್ದರು. ಅವರು ಮಗು ಹೊಟ್ಟೆಯಲ್ಲೇ ಮೃತಪಟ್ಟು, ಚಿಂತಾಜನಕ ಸ್ಥಿತಿಯಲ್ಲೇ ಇಲ್ಲಿಗೆ ರೆಫರ್ ಆಗಿದ್ದರು.

ಕೂಡಲೇ ನಮ್ಮ ವೈದ್ಯರು ಸಿಸೇರಿಯನ್ ಮೂಲಕ ಡೆಲಿವರಿ ಮಾಡಿದ್ದಾರೆ. ರಾತ್ರಿ ಒಂದು ಗಂಟೆ ಒಳಗೆ ಅವರನ್ನು ವಾರ್ಡ್ ಗೆ ಶಿಫ್ಟ್ ಮಾಡಲಾಗಿತ್ತು. ಆದರೆ, ಈ ನಡುವೆ ಎರಡು ಬಾರಿ ಕಾರ್ಡಿಯಾಕ್ ಅರೆಸ್ಟ್ ಆಗಿ, ಡಿ. 31ರ ಬೆಳಗ್ಗೆ ಮೃತಪಟ್ಟಿದ್ದಾರೆ. ವೈದ್ಯರು ಮತ್ತು ಸಿಬ್ಬಂದಿಯ ಯಾವುದೇ ನಿರ್ಲಕ್ಷ್ಯ ಇಲ್ಲ ಎಂದು ಮಾಹಿತಿ ನೀಡಿದರು.

ಮೃತಳ ಕುಟುಂಬಸ್ಥರು ಮಾಡಿದ ಕೆಲ ಆರೋಪಗಳ ಬಗ್ಗೆ ಪ್ರಶ್ನಿಸಿ ಉತ್ತರ ಪಡೆದರು. ಬಿಜೆಪಿ ತಂಡದಲ್ಲಿದ್ದ ಡಾ.ಅರುಣಾ, ಡಾ.ನಾರಾಯಣ ಮತ್ತು ಡಾ.ಬಸವರಾಜ ಕ್ಯಾವಟರ್ ಅವರು, ಮೃತ ರೇಣುಕಾ ಆಸ್ಪತ್ರೆಗೆ ಬಂದಾಗ ಇದ್ದ ಸ್ಥಿತಿ, ಆರೋಗ್ಯ ಸ್ಥಿತಿ ಬಗ್ಗೆ ಮಾಹಿತಿ ಪಡೆದರು. ಮರಣೋತ್ತರ ಪರೀಕ್ಷೆ ಮಾಡದೇ ಶವ ಹಸ್ತಾಂತರ ಮಾಡಿರುವುದು ಸರಿಯಲ್ಲ ಎಂದು ಬಿಜೆಪಿ ತಂಡದ ಸದಸ್ಯರು ತಾಕೀತು ಮಾಡಿದರು.

ಕೊಪ್ಪಳದ ಜಿಲ್ಲಾಸ್ಪತ್ರೆಯಲ್ಲಿ ಮೃತ ಬಾಣಂತಿ ರೇಣುಕಾ ಸಾವು ಪ್ರಕರಣದ ಹಿನ್ನೆಲೆ ಬಿಜೆಪಿ ಸತ್ಯ ಶೋಧನಾ ಸಮಿತಿ ತಂಡ ಕೊಪ್ಪಳದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿ ಪರಿಶೀಲಿಸಿತು.

ಬಾಣಂತಿಯರ ಸಾವಿಗೆ ಆರೋಗ್ಯ ಸಚಿವರೇ ನೇರ ಹೊಣೆ. ಔಷಧಿ ಖರೀದಿಯಲ್ಲಿ ಶೇ. 30 ರಿಂದ ಶೇ.40 ರಷ್ಟು ಲಂಚಾವತಾರ ನಡೆಯುತ್ತಿದೆ. ಅದಕ್ಕೆ ಈ ರೀತಿ ಸಾವು ಆಗುತ್ತಿವೆ. ಆರೋಗ್ಯ ಸಚಿವರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಇಷ್ಟು ಜನ ಮೃತಪಟ್ಟರು ಸರಕಾರ ತಿರುಗಿ ನೋಡುತ್ತಿಲ್ಲ. ನಮ್ಮ ವರದಿ ರಾಜ್ಯಾಧ್ಯಕ್ಷರಿಗೆ, ರಾಜ್ಯಪಾಲರಿಗೆ ಮತ್ತು ಮಾನವ ಹಕ್ಕುಗಳ ಆಯೋಗಕ್ಕೆ ಕೊಡುತ್ತೇವೆ.
-ಶೈಲೇಂದ್ರ ಬೆಲ್ದಾಳೆ, ಶಾಸಕ

ಕೇಂದ್ರ ಅಲ್ಪಸಂಖ್ಯಾತರ ಸಚಿವ ಕಿರಣ್ ರಿಜುಜುಗೆ ವರದಿ ಸಲ್ಲಿಕೆ | ಬಿಜೆಪಿ ಭಿನ್ನ ಬಣದ ನಾಯಕರು ದೆಹಲಿಯಲ್ಲಿ

ಯತ್ನಾಳ್ ತಂಡ ಕಾರ್ಯಕ್ಕೆ ರಿಜುಜು ಶ್ಲಾಘನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಕ್ಫ್ ಹಠಾವೋ ದೇಶ ಬಚಾವೋ ಕಾರ್ಯಕ್ರಮದ ಮೂಲಕ ಎರಡನೇ ಹಂತದ ಅಭಿಯಾನ ಮುಗಿಸಿರುವ ಬಿಜೆಪಿಯ ಯತ್ನಾಳ್ ಬಣ ದೆಹಲಿಯಲ್ಲಿದ್ದು, ಸೋಮವಾರ ಕೇಂದ್ರ ಅಲ್ಪಸಂಖ್ಯಾತ ಇಲಾಖೆ ಸಚಿವ ಕಿರಣ್ ರಿಜುಜು ಅವರಿಗೆ ವಕ್ಫ್ ವರದಿಯನ್ನು ಸಲ್ಲಿಸಿದೆ.

ಸೋಮವಾರ ಮಾಜಿ ಸಚಿವ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಕೇಂದ್ರ ಅಲ್ಪಸಂಖ್ಯಾತರ ಸಚಿವ ಕಿರಣ್ ರಿಜೂಜು ಅವರನ್ನು ಭೇಟಿಯಾದ ತಂಡ ವಕ್ಫ್ ಬೋರ್ಡ್‌ಗೆ ಸಂಬಂಧಿಸಿದಂತೆ ವರದಿಯನ್ನು ಸಲ್ಲಿಸಿದೆ.

ಈ ವೇಳೆ ವಕ್ಫ್ ವಿಷಯದಲ್ಲಿ ರಾಜ್ಯ ಬಿಜೆಪಿಯ ನಡೆಯನ್ನು ಕಿರಣ್ ರಿಜುಜು ಶ್ಲಾಘಿಸಿದ್ದು, ಕರ್ನಾಟಕದಲ್ಲಿ ಆರಂಭವಾದ ಈ ಚಳವಳಿಯಿಂದ ಇಡೀ ದೇಶದಲ್ಲಿ ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ಜಾಗೃತಿ ಶುರುವಾಗಿದೆ. ಮುಂದಿನ ದಿನದಲ್ಲಿ ಇದೇ ರೀತಿಯಲ್ಲಿ ಹೋರಾಟವನ್ನು ಮುಂದುವರೆಸುವಂತೆ ಸಲಹೆ ನೀಡಿದರು.

ರಾಜ್ಯದಲ್ಲಿ ವಕ್ಫ್ ಬೋರ್ಡ್ ವಿರುದ್ಧ ಬಳ್ಳಾರಿಯ ಕಂಪ್ಲಿಯಿಂದ ಆರಂಭಗೊಂಡಿದ್ದ ಎರಡನೇ ಹಂತದ ಅಭಿಯಾನ ಮುಕ್ತಾಯಗೊಂಡಿದ್ದು ದಾಖಲೆಗಳನ್ನು ಕ್ರೋಢಿಕರಿಸಿ ಜೆಪಿಸಿ ಮುಂದೆ ನೀಡಲು ಈಗಾಗಲೇ ಸಿದ್ಧರಾಗಿದ್ದಾರೆ. ಈ ಸಂಬಂಧ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ, ರಮೇಶ್ ಜಾರಕಿಹೊಳಿ, ಕುಮಾರ್ ಬಂಗಾರಪ್ಪ , ಮಾಜಿ ಸಂಸದರಾದ ಪ್ರತಾಪ್ ಸಿಂಹ, ಬಿ.ವಿ. ನಾಯಕ್ ಸೇರಿದಂತೆ ಹಲವರು ಕೆಲ ನಾಯಕರು ಸೋಮವಾರ ಸಂಸತ್ ಭವನದಲ್ಲಿ ಕೇಂದ್ರ ಸಚಿವರೊಂದಿಗೆ ಚರ್ಚಿಸಿದ್ದಾರೆ.

ಕೇಂದ್ರ ಸಮಿತಿಗೆ ಮಾಹಿತಿ: ವಕ್ಫ್ ಬೋರ್ಡ್ ಕಿತ್ತು ಹಾಕಬೇಕೆಂದು ಬೀದರ್‌ನಿಂದ ಕಲ್ಯಾಣ ಕರ್ನಾಟಕ ಪ್ರವಾಸ ನಡೆಸಿದ್ದ ಯತ್ನಾಳ್ ಬಣ ಮೊದಲ ಹಂತದ ಹೋರಾಟ ಬಳಿಕ ಜೆಪಿಸಿಗೆ ಡಿಸೆಂಬರ್ ತಿಂಗಳಲ್ಲಿ ಜೆಪಿಸಿಗೆ ವರದಿ ಸಲ್ಲಿಸಿತ್ತು. ಇದಾದ ನಂತರ ರಾಜ್ಯದಲ್ಲಿ ಚಳಿಗಾಲದ ಅಧಿವೇಶನ ಕಳೆದ ನಂತರ ಕಿತ್ತೂರು ಕರ್ನಾಟಕದ ಭಾಗದಲ್ಲಿ ವಕ್ಫ್ ಕುರಿತು ಜನಜಾಗೃತಿ ಮಾಡಿ ದೆಹಲಿಗೆ ತೆರಳಲಿದ್ದಾರೆ. ಸಮಿತಿಯ ಮುಂದೆ ರೈತರ, ಮಠ, ಮಂದಿರದ ಆಸ್ತಿಗಳು ವಕ್ಫ್‌ಗೆ ಬರೆದಿದ್ದಾರೆ ಎನ್ನುವ ಮಾಹಿತಿಯನ್ನು ಕೇಂದ್ರದ ಸಮಿತಿ ಮುಂದೆ ನೀಡಲಾಗುತ್ತಿದೆ. ವಕ್ಫ್ ಕಾಯ್ದೆ 44 ತಿದ್ದುಪಡಿಯ ತರಲು ಕೇಂದ್ರ ಮುಂದಾಗಿದ್ದು, ಲೋಕಸಭೆಯ ಅಧಿವೇಶನದಲ್ಲಿ ಈಗಾಗಲೇ ಮಂಡಿಸಲಾಗಿದೆ.

ಸೋಮವಾರ ಮಾಜಿ ಸಚಿವ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಕೇಂದ್ರ ಅಲ್ಪಸಂಖ್ಯಾತರ ಸಚಿವ ಕಿರಣ್ ರಿಜುಜು ಅವರನ್ನು ಭೇಟಿಯಾದ ತಂಡ ವಕ್ಫ್ ಬೋರ್ಡ್‌ಗೆ ಸಂಬಂಧಿಸಿದಂತೆ ವರದಿಯನ್ನು ಸಲ್ಲಿಸಿದೆ.

ಸಣ್ಣನೀರಾವರಿ ಸಚಿವ ಎನ್.ಎಸ್.ಬೋಸರಾಜು ಆಕ್ರೋಶ

ವಿಜಯೇಂದ್ರ ಒಬ್ಬ ಅನ್ ಮೆಚುರ್ಡ್ ಮ್ಯಾನ್

ರಾಯಚೂರು: ಸಿಎಂ. ಸಿದ್ದರಾಮಯ್ಯ ರಾಜೀನಾಮೆ ಕೊಡುತ್ತಾರೆ ಎಂದು ಪದೇ ಪದೇ ಹೇಳುತ್ತಿರುವ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಒಬ್ಬ ಅನ್ ಮೆಚುರ್ಡ್ ಮ್ಯಾನ್ ಅಂತ ಸಣ್ಣನೀರಾವರಿ ಸಚಿವ ಎನ್.ಎಸ್ .ಬೋಸರಾಜು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ನಾಯಕರು ಮಾಡುತ್ತಿರುವ ಆರೋಪಗಳಲ್ಲಿ ಹುರುಳಿಲ್ಲ, ಅವರ ಮಾತಿಗೆ ಅರ್ಥವೇ ಇಲ್ಲ.

ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಬಿಜೆಪಿ ಒತ್ತಾಯ ಮಾಡುತ್ತಿರುವುದು ಜನ ಪ್ರತಿನಿಧಿಗಳಾಗಿ ಯಾವ ವಿಷಯ ಮಾತನಾಡ ಬೇಕು ಅನ್ನೋವುದೇ ಬಿಜೆಪಿಯವರಿಗೆ ಗೊತ್ತಿಲ್ಲ. ವಿಜಯೇಂದ್ರ ಒಂದು ಪಕ್ಷದ ಅಧ್ಯಕ್ಷನಾಗಿ ಸಿಎಂ ರಾಜೀನಾಮೆ ಕೊಡ್ತಾರೆ ಅಂತ 56 ಸಲ ಹೇಳಿದ್ದಾರೆ. ಸಿಎಂ ರಾಜಿನಾಮೆ ಕೊಡ್ತಾರೆ ಅಂತ ಬಿಜೆಪಿಯವರು ಡೇಟ್ ಕೊಡ್ತಾರೆ ಇದಕ್ಕೆ ಅರ್ಥವಿದೆಯಾ. ವಿಜಯೇಂದ್ರ ಅನ್ ಮೆಚುರ್ಡ್ ಮ್ಯಾನ್. ಅವರ ಪಾರ್ಟಿಯಲ್ಲಿನ ಪರಿಸ್ಥಿತಿ ಸುಧಾರಿಸಿಕೊಳ್ಳಲು ಅವರಿಗೆ ಆಗುತ್ತಿಲ್ಲ ಎಂದು ಹೇಳಿದರು.

ಆರ್. ಅಶೋಕ ಮೇಲೆ ಕೇಸ್ ಇದೆ, ಅಶ್ವತ್ ನಾರಾಯಣ ಮೇಲೆ ಕೇಸ್ ಇದೆ ಅವರು ರಾಜೀನಾಮೆ ನೀಡಿಲ್ಲ. ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ಹೆಸರು ಎಲ್ಲೂ ಇಲ್ಲಾ ಆದರೂ ರಾಜೀನಾಮೆ ಕೇಳುತ್ತಿದ್ದಾರೆ. ಬಿಜೆಪಿ ನಾಯಕರಿಗೆ ನಾಚಿಕೆಯಾಗಬೇಕು.
-ಎನ್.ಎಸ್.ಬೋಸರಾಜು, ಸಚಿವ

ಭದ್ರಾವತಿ ಮೂಲದ ಸೌಹಾರ್ದ ಪಟೇಲ್ ಬಂಧನ

ಬ್ರೇಕಪ್: ವಿಷದ ಸ್ವೀಟ್ ಬಾಕ್ಸ್ ಗಿಫ್ಟ್

ಶಿವಮೊಗ್ಗ: ವಿಧಾನ ಪರಿಷತ್ ಸದಸ್ಯ ಡಾ.ಧನಂಜಯ್ ಸರ್ಜಿ ಹೆಸರಿನಲ್ಲಿ ಮೂರು ಮಂದಿ ಗಣ್ಯರಿಗೆ ಹೊಸ ವರ್ಷಕ್ಕೆ ವಿಷಪೂರಿತ

ಸ್ವೀಟ್ ಬಾಕ್ಸ್ ಕಳುಹಿಸಿದ್ದ ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದೆ. ಆರೋಪಿ ಲವ್ ಬ್ರೇಕಪ್ ಆಗಿದ್ದಕ್ಕೆ ಆರೋಪಿ ಈ ಕೃತ್ಯ ಎಸಗಿರುವುದು ತನಿಖೆ ವೇಳೆ ಬೆಳಕಿಗೆ ಬಂದಿದೆ.

ಪ್ರಕರಣ ಸಂಬಂಧ ಭದ್ರಾವತಿ ಮೂಲದ ಸೌಹಾರ್ದ ಪಟೇಲ್ (26) ಎಂಬಾತನನ್ನು ಪೊಲೀಸರು ಬಂಧಿಸಿದ್ದರು. ಆರೋಪಿ ವೈದ್ಯರೊಬ್ಬರ ಪುತ್ರಿಯನ್ನು ಪ್ರೀತಿಸುತ್ತಿದ್ದ. ಇದು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ನಾಗರಾಜ್ ಎಂಬವರಿಗೆ ಗೊತ್ತಾಗಿ ಆತನ ಪೋಷಕರನ್ನು ಕರೆಸಿ ತಿಳುವಳಿಕೆ ಹೇಳಿದ್ದರು. ಬಳಿಕ ಹುಡುಗಿಯ ಸಹವಾಸ ಬಿಡಿಸಿದ್ದರು.

ಇದೇ ವಿಚಾರಕ್ಕೆ ನಾಗರಾಜ್ ಮೇಲೆ ಆರೋಪಿ ಕೋಪಗೊಂಡಿದ್ದ. ಇದಾದ ನಂತರ ಆರೋಪಿ ಮಾನಸಿಕ ರೋಗದಿಂದ ಬಳಲುತ್ತಿದ್ದ. ಆತನ ಪೋಷಕರು ಮಾನಸಿಕ ತಜ್ಞರಾದ ಡಾ. ಅರವಿಂದ್ ಹಾಗೂ ಡಾ.ಪವಿತ್ರ ಬಳಿ ಚಿಕಿತ್ಸೆ ಕೊಡಿಸಿದ್ದರು. ಚಿಕಿತ್ಸೆ ವೇಳೆ ತನಗೆ ಸಾಕಷ್ಟು ಮಾತ್ರೆ ನುಂಗುವಂತೆ ಮಾಡಿದ್ದಾರೆ ಎಂದು ಆರೋಪಿ ಕೋಪಗೊಂಡಿದ್ದ. ಜೊತೆಗೆ ಈ ಮೂವರು ಗಣ್ಯರಿಗೆ ಎಂಎಲ್ಸಿ ಡಾ.ಧನಂಜಯ್ ಸರ್ಜಿಯವರು ಆಪ್ತರು ಎಂಬ ವಿಷಯ ಮನಗಂಡು ಅವರ ಹೆಸರಿನಲ್ಲಿ ವಿಷ ಪೂರಿತ ಸ್ವೀಟ್‌ನ್ನು ಕೊರಿಯರ್ ಮಾಡಿದ್ದಾನೆ .

ರಾಜ್ಯ ಸರಕಾರದ ವಿರುದ್ಧ ಸಂಸದ ಬಸವರಾಜ ಬೊಮ್ಮಾಯಿ ಆಕ್ರೋಶ

ತಾಯಂದಿರ ಆರೋಗ್ಯ ಕಾಪಾಡುವಲ್ಲಿ ಸರಕಾರ ವಿಫಲ

ಹಾವೇರಿ: ರಾಜ್ಯದಲ್ಲಿ ಗರ್ಭಿಣಿಯರು ಮತ್ತು ತಾಯಂದಿರ ಆರೋಗ್ಯ ಕಾಪಾಡಲೂ ಆಗದ ಬೇಜವಾಬ್ದಾರಿ ಸರಕಾರ ಇದ್ದು, ತನ್ನ ಪ್ರಥಮ ಕರ್ತವ್ಯ ನಿರ್ವಹಣೆ ಮಾಡುವಲ್ಲಿ ವಿಫಲವಾಗಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾನವ ಅಭಿವೃದ್ಧಿ ಸೂಚ್ಯಾಂಕ ಮೊದಲಿನಿಂದಲೂ ಬಹಳಷ್ಟು ಪ್ರಮುಖವಾಗಿದ್ದು. ತಾಯಂದಿರ ಮರಣ ಪ್ರಮಾಣ ಮೊದಲು ಹಿಂದುಳಿದ ಎರಡು ಜಿಲ್ಲೆಯಲ್ಲಿ ಮಾತ್ರ ಇತ್ತು. ರಾಯಚೂರು ಮತ್ತು ಯಾದಗಿರಿಯಲ್ಲಿ ಮಾತ್ರ ಹೆಚ್ಚಿಗೆ ಇತ್ತು. ಆದರೆ ಇಂದಿನ ಸರಕಾರದಲ್ಲಿ ಆರೋಗ್ಯ ನಿರ್ವಹಣೆಯಲ್ಲಿ ಎಡವಿದ್ದರಿಂದ ಪೂರ್ವಭಾವಿ ಕಾಳಜಿ ವಹಿಸದೇ ಇದ್ದಿದ್ದರಿಂದ ತೊಂದರೆ ಆಗುತ್ತಿದೆ. ಜತೆಗೆ ಔಷಧೀಯ ಖರೀದಿಯ ನೀತಿಯಲ್ಲಿ ದೋಷ ಇದ್ದು, ಬಹಳ ಭ್ರಷ್ಟಾಚಾರ ಆಗುತ್ತಿದೆ. ಅಗ್ಗದ ದರದಲ್ಲಿ ಔಷಧಿ ಖರೀದಿ ಮಾಡಲಾಗುತ್ತಿದೆ. ಜೊತೆಗೆ ಲಾಂಗ್ ಟರ್ಮ್ ಔಷಧ ಖರೀದಿ ಮಾಡುತ್ತಿಲ್ಲ. ಲಾಂಗ್ ಟರ್ಮ್ ಔಷಧೀಯ ತೆಗೆದುಕೊಳ್ಳುವ ಪದ್ಧತಿ ಬಿಟ್ಟು, ಈಗ ಪ್ರತಿ ತಿಂಗಳು ಔಷಧಿ ಖರೀದಿ ಮಾಡುತ್ತಿದ್ದಾರೆ. ಹೀಗಾಗಿ ಗುಣಮಟ್ಟ ಪರೀಕ್ಷೆ ಮಾಡಲು ಅವಕಾಶ ಸಿಗುವುದಿಲ್ಲ. ಗುಣಮಟ್ಟ ಇಲ್ಲದ ಔಷಧಿ ಕೊಟ್ಟಿದ್ದರಿಂದ ಬಾಣಂತಿಯರ ಸಾವಿನಂತಹ ಸಮಸ್ಯೆ ಆಗುತ್ತಿವೆ ಎಂದರು.

ಬಳ್ಳಾರಿಯಲ್ಲಿ ಬಾಣಂತಿಯರ ಸಾವಿನ ಪ್ರಕರಣ ನಡೆದು ಒಂದು ತಿಂಗಳು ಕಳೆದರೂ ತನಿಖೆ ವರದಿ ಏನಾಗಿದೆ ಅನ್ನೋದು ಗೊತ್ತಿಲ್ಲ. ಬೆಳಗಾವಿ, ಬಳ್ಳಾರಿ, ರಾಯಚೂರಿನಲ್ಲಿ ಮತ್ತೆ ಗರ್ಭಿಣಿ ಸಾವು ಆಗಿದೆ. ಬೇಜವಾಬ್ದಾರಿಯುತ ಸರಕಾರಕ್ಕೆ ಗರ್ಭಿಣಿಯರ ಮತ್ತು ತಾಯಿಂದರ ಆರೋಗ್ಯವನ್ನು ನೋಡಲು ಆಗುತ್ತಿಲ್ಲ. ತನ್ನ ಪ್ರಥಮ ಕರ್ತವ್ಯವನ್ನ ನಿರ್ವಹಣೆ ಮಾಡುವಲ್ಲಿ ವಿಫಲವಾಗಿದೆ. ಬೇಜವಾಬ್ದಾರಿಯಿಂದ ಅಧಿಕಾರ ನಡೆಸುತ್ತಿದೆ.
ಬಸವರಾಜ ಬೊಮ್ಮಾಯಿ, ಸಂಸದ

ವಿಶ್ವವಾಣಿ

ಸಂಪಾದಕೀಯ

ಅಂಕುರಿಸಿದ್ದು ಅಲಸಂದೆಯಷ್ಟೇ ಅಲ್ಲ..

ಅಮೆರಿಕದ ಗಗನಯಾತ್ರಿ ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ಮೊದಲ ಬಾರಿಗೆ ಕಾಲಿಟ್ಟಾಗ, 'ಇದು ಮನುಷ್ಯನ ಸಣ್ಣಹೆಜ್ಜೆಯೇ ಇರಬಹುದು, ಆದರೆ ಮನುಕುಲದ ಪಾಲಿಗೆ ಇದೊಂದು ದೈತ್ಯಜಿಗಿತ' ಎಂದರಂತೆ. 'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ' (ಇಸ್ರೋ) ಈ ಮಾತನ್ನು ಸಾಬೀತುಮಾಡುತ್ತಲೇ ಇರುವುದು ಭಾರತೀಯರೆಲ್ಲರಿಗೂ ಹೆಮ್ಮೆಯ ಸಂಗತಿಯೇ. ಕಾರಣ, 'ಆ್ಯಪಲ್' ಎಂಬ ಮೊಟ್ಟಮೊದಲ ಸಂವಹನಾ ಉಪಗ್ರಹದ ಉಡಾವಣೆಯ ವೇಳೆ, ಅದನ್ನು ಉಡಾವಣಾ ತಾಣಕ್ಕೆ ರವಾನಿಸುವುದಕ್ಕೂ ಮುಂಚೆ ಅಂತಿಮ ಹಂತದ ಪರೀಕ್ಷೆಯೊಂದನ್ನು ಕೈಗೊಳ್ಳಬೇಕಾಗಿ ಬಂದಿತ್ತು; ಆ ವೇಳೆ ಉಪಗ್ರಹವನ್ನು ಇರಿಸಬೇಕಾದ ತಾಂತ್ರಿಕ ಪರಿಕರದ ಅಲಭ್ಯತೆಯಿಂದಾಗಿ 'ಕಾಂತೀಯತೆ ಇಲ್ಲದ ವೇದಿಕೆ'ಯನ್ನು ಸೃಷ್ಟಿಸುವುದಕ್ಕಾಗಿ ಮರದ ಎತ್ತಿನ ಗಾಡಿಯ ಮೇಲೆ ಅದನ್ನು ಹೇರಿಟ್ಟ ಸ್ಥಿತಿಗೂ ಇಸ್ರೋ ಸಾಕ್ಷಿಯಾಗಿದ್ದಿದೆ. ಆದರೆ ಅಷ್ಟಕ್ಕೇ ಧೃತಿಗೆಡದೆ, ತನ್ನ ವಿವಿಧ ಸ್ತರದ ಬಾಹ್ಯಾಕಾಶ ವಿಜ್ಞಾನಿಗಳ ಸಮರ್ಪಣಾ ಮನೋಭಾವ, ಪರಿಶ್ರಮ, ಪಟ್ಟುಬಿಡದ ಪ್ರಯತ್ನಗಳ ಬಲದಿಂದಾಗಿ ಇಸ್ರೋ ಒಂದೊಂದೇ ವಿಕ್ರಮ ಗಳನ್ನು ಸಾಧಿಸುತ್ತಾ ಹೋಗಿದ್ದು ಈಗ ಜಗಜ್ಜಾಹೀರು. ಮಂಗಳ ಕಕ್ಷಾಯಾನ, ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿದ 'ಚಂದ್ರಯಾನ-3' ಯೋಜನೆ ಸೇರಿದಂತೆ ಇಸ್ರೋದ ಕೀರ್ತಿಕಿರೀಟಕ್ಕೆ ಒಂದೊಂದೇ ಗರಿಗಳು ಸೇರ್ಪಡೆಯಾಗುತ್ತಾ ಹೋಗಿದ್ದು ಈ ಬದ್ಧತೆಯಿಂದಾಗಿಯೇ. ಪ್ರಸ್ತುತ, ಗುರುತ್ವಾಕರ್ಷಣೆ ಇಲ್ಲದ ಬಾಹ್ಯಾಕಾಶದಲ್ಲಿ ಸಸ್ಯಗಳ ಬೆಳವಣಿಗೆ ಹೇಗಿರುತ್ತದೆ ಎಂಬುದನ್ನು ಕಂಡುಕೊಳ್ಳಲು ಇಸ್ರೋ ಕೈಗೊಂಡ ಪ್ರಯೋಗ ಮೊದಲ ಹಂತದಲ್ಲೇ ಯಶಸ್ವಿಯಾಗಿದೆ. ಇಸ್ರೋ ಅಂತರಿಕ್ಷಕ್ಕೆ ಕಳಿಸಿಕೊಟ್ಟಿದ್ದ 8 ಅಲಸಂದೆ ಬೀಜಗಳು ಮೊಳಕೆಯೊಡೆದಿರುವುದು ನಿಜಕ್ಕೂ ಅಪ್ರತಿಮ ಸಾಧನೆ ಮತ್ತು ಸಂಭ್ರಮದ ಬೆಳವಣಿಗೆ. ಒಂದು ಕಾಲಕ್ಕೆ 'ಹಾವಾಡಿಗರ ದೇಶ' ಎಂದು ಪರದೇಶಿಗಳಿಂದ ಗೇಲಿಗೊಳಗಾಗಿದ್ದ ಭಾರತವು ಈಗ ಈ 'ಬಾಹ್ಯಾಕಾಶ ಜೈತ್ರಯಾತ್ರೆ'ಯ ಮೂಲಕ ಅವರೆಲ್ಲರ ಕಂಗಳಿಗೆ ಮುಸುಕಿದ್ದ ಮಂಜನ್ನು ಸರಿಸಿದೆ ಎನ್ನಲಡ್ಡಿಯಿಲ್ಲ. 'ಅಂತರಿಕ್ಷದಲ್ಲಿ ಅಂಕುರಿಸಿದ್ದು ಅಲಸಂದೆ ಒಂದೇ ಅಲ್ಲ, ಭಾರತೀಯರ ಆತ್ಮವಿಶ್ವಾಸ ಕೂಡ' ಎಂದು ನಾವೆಲ್ಲ ಹೆಮ್ಮೆಪಡೋಣ.

ಸೊಂಪಾದಕೀಯ

ಜಾರಿಕೊಂಡ ಜಾಣ

ರಾಜ್ಯದಲ್ಲಿ ಈಗ ಬಸ್ ಪ್ರಯಾಣದರ ಏರಿಕೆಯದ್ದೇ ಮಾತು. ಅದರಲ್ಲೂ ಗಂಡಸರಿಗೆ ಮಾತ್ರ ಎನ್ನುವಂಥ ಈ ದರ ಏರಿಕೆಯಿಂದ ಸೃಷ್ಟಿಯಾಗಿರುವ ಸಮಸ್ಯೆಯನ್ನು 'ಚಿಲ್ಲರೆ ಸಮಸ್ಯೆ' ಅನ್ನೋಕಾಗದೇ ಇದ್ದರೂ, ನಿರ್ವಾಹಕರು ಮತ್ತು ಪ್ರಯಾಣಿಕರ ಮಧ್ಯೆ ಚಿಲ್ಲರೆ ಸಮಸ್ಯೆ ಏರ್ಪಟ್ಟಿರೋದಂತೂ ಸತ್ಯ. ಇಲ್ಲಿ ಬಸ್ ಪ್ರಯಾಣ ದರದ ವಿಷಯ ಕಿರಿಕಿರಿ ಮಾಡುತ್ತಿದ್ದರೆ ಅತ್ತ ದೆಹಲಿಯಲ್ಲಿ ಬಿಜೆಪಿ ನಾಯಕರೊಬ್ಬರ ಹೇಳಿಕೆ ವಿವಾದ ಸೃಷ್ಟಿ ಮಾಡಿದೆ. ಹಿಂದೊಮ್ಮೆ 'ಹೇಮಾಮಾಲಿನಿ ಕೆನ್ನೆಯಂಥ ರಸ್ತೆ ನಿರ್ಮಿಸು ತ್ತೇವೆ' ಅಂತ ಲಾಲು ಪ್ರಸಾದ್ ಯಾದವ್ ಹೇಳಿದ ಮಾತು ದೊಡ್ಡ ಸಂಚಲನ ಸೃಷ್ಟಿಸಿತ್ತು. ಈ ಮಾತಿಗೆ ಮಾತ್ರ ಇನ್ನೂ ಮೈಲೇಜ್ ಇದೆ ಅನ್ನೋದು ಬಿಜೆಪಿ ನಾಯಕ ರಮೇಶ್ ಬಿಧೂರಿ ಅವರ ಹೇಳಿಕೆಯಿಂದ ಪ್ರೂವ್ ಆಗಿದೆ. ಈ ಬಾರಿ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಮುಖ್ಯಮಂತ್ರಿ ಆತಿಶಿ ಮತ್ತು ಕಾಂಗ್ರೆಸ್‌ನ ಅಲ್ಕಾ ಲಂಬಾ ಅವರ ವಿರುದ್ಧ ಸ್ಪರ್ಧೆ ಮಾಡುತ್ತಿರುವ ರಮೇಶ್ ತಮ್ಮ ನಾಲಿಗೆಯನ್ನು ಮಾತ್ರ ಲಂಬಾ, ಚೌಡಾ ಅನ್ನುವಷ್ಟು ಹರಿಬಿಟ್ಟಿದ್ದಾರೆ. ಅವರ ಮಾತಿಗೆ ಉದಾಹರಣೆ ಆಗಿರೋದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಆಲಿಯಾಸ್ ಪ್ರಿಯಾಂಕಾ ವಾದ್ರಾ. 'ನಾನು ಗೆದ್ದು ಅಧಿಕಾರಕ್ಕೆ ಬಂದರೆ ಪ್ರಿಯಾಂಕಾ ಗಾಂಧಿಯ ಕೆನ್ನೆಯಂಥ ರಸ್ತೆ ನಿರ್ಮಾಣ ಮಾಡ್ತೀನಿ' ಅಂತ ಮಾತಾಡಿ ಈಗ ಮುಜುಗರಕ್ಕೆ ಒಳಗಾಗಿದ್ದಾರೆ ರಮೇಶ್. ಆದರೆ ಈ ಮಾತನ್ನು ಕೇಳಿದವರಿಗೆ ಹೇಮಾಮಾಲಿನಿ ಅವರ ಉದಾಹರಣೆ ಕೊಡೋಕೆ ಈಗ ಅವರಿಗೆ ವಯಸ್ಸಾಗಿದೆ ನಿಜ, ಆದರೆ ಆ ಲೆಕ್ಕದಲ್ಲಿ ಪ್ರಿಯಾಂಕಾ ಏನೂ ಹರೆಯದ ಹುಡುಗಿ ಅಲ್ಲ, ಉದಾಹರಣೆ ಕೊಡಬೇಕು ಅಂತಿದ್ರೆ, ದೇಶದಲ್ಲಿ ಫೇಮಸ್ ಆಗಿರೋ ಯುವ ಫೀಮೇಲ್ ಸೆಲೆಬ್ರಿಟಿಗಳು ಬೇಕಾದಷ್ಟು ಇದ್ದರಲ್ಲ ಅಂತ ಅನುಮಾನ ಬಂದ್ರೆ ಅಚ್ಚರಿ ಏನಿಲ್ಲ. ಕಾಂಗ್ರೆಸ್ ನವರು ಪ್ರಿಯಾಂಕಾ ಅವರನ್ನ ಇನ್ನೂ ಯುವನಾಯಕಿ ಅಂತ ಬಿಂಬಿಸುತ್ತಿರೋದರ ಎಫೆಕ್ಟ್ ಇದಿರಬಹುದು. ಆದರೆ ಈ ಮಾತು ವಿವಾದದ ರೂಪ ತಾಳುತ್ತಿದ್ದಂತೆ 'ನನ್ನ ಮಾತನ್ನು ತಪ್ಪಾಗಿ ಅರ್ಥೈಸಲಾಗಿದೆ' ಎಂದಿದ್ದಾರೆ ರಮೇಶ್. ನುಣುಪಾದ ಕೆನ್ನೆ ಮತ್ತು ರಸ್ತೆಯ ಬಗ್ಗೆ ಮಾತಾಡಿದ ರಮೇಶ್ ಅವರು ಅಲ್ಲೇ 'ಜಾರಿಕೊಂಡಿದ್ದಾರೆ' ಅಂತ ಹೇಳಿದ್ರೆ ತಪ್ಪಿಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ತಿನ್ನುವಾಗ ಸದ್ದು ಮಾಡಬಹುದೇ?

ನಮ್ಮ ದೇಶದಲ್ಲಿರಬಹುದು, ಹೊರದೇಶದಲ್ಲಿರಬಹುದು, ನಾವು ಅನ್ಯರೊಂದಿಗೆ ಊಟ-ಉಪಾಹಾರಕ್ಕೆ ಕುಳಿತುಕೊಂಡಾಗ ಟೇಬಲ್ ಮ್ಯಾನರ್ಸ್ ಬಹಳ ಮುಖ್ಯ. ಆಹಾರ ಸೇವಿಸುವಾಗ ಸಪ್ಪಳ ಮಾಡಬಾರದು, ದ್ರವ ಪದಾರ್ಥಗಳನ್ನು ಸೇವಿಸುವಾಗ 'ಸೊರ್.. ಸೊರ್..' ಎಂಬ ಸದ್ದು ಬಾರದಂತೆ ನಿಗಾವಹಿಸಬೇಕು. ಆಹಾರ ಸೇವಿಸುವಾಗ ಅದು ತುಟಿ, ಮುಖಗಳಿಗೆ ಅಂಟದಂತೆ ನೋಡಿಕೊಳ್ಳಬೇಕು.. ಇತ್ಯಾದಿ. ಜಪಾನಿನಲ್ಲಿದ್ದಾಗ ಸ್ಥಳೀಯರು ಆಹಾರ ಸೇವಿಸುವ ರೀತಿ-ವಿಧಾನವನ್ನು ನಾನು ಕುತೂಹಲದಿಂದ ಗಮನಿಸುತ್ತಿದ್ದೆ. ಆದರೆ ಸೂಪ್ ಕುಡಿಯುವಾಗ ಮತ್ತು ನೂಡಲ್ಸ್ ಸೇವಿಸುವಾಗ ಅವರು ವಿಚಿತ್ರವಾಗಿ 'ಸೊರ್..ಸೊರ್' ಎಂದು ಸಪ್ಪಳ ಮಾಡುತ್ತಿದ್ದರು. ಈ ರೀತಿ ಒಂದಿಬ್ಬರು ಮಾಡಿದರೆ ಅದು ಅವರ ವೈಯಕ್ತಿಕ ನಡೆವಳಿಕೆ ಎಂದು ಭಾವಿಸಬಹುದಿತ್ತು. ಆದರೆ ನೂಡಲ್ಸ್ ಮತ್ತು ಸೂಪ್ ಸೇವಿಸುವವರೆಲ್ಲ ಹಾಗೆ ಸಪ್ಪಳ ಮಾಡುತ್ತಿದ್ದರು. ಇದೇನು ಜಪಾನಿಯರಿಗೆ ಆಹಾರವನ್ನು ಶಿಸ್ತಿನಿಂದ ಸೇವಿಸಲು ಬರುವುದಿಲ್ಲವಾ ಎಂಬ ಜಿಜ್ಞಾಸೆ ನನ್ನ ಮನಸ್ಸಿನಲ್ಲಿ ಹಾದುಹೋಗಿದ್ದುಂಟು. ಇದನ್ನು ಒಂದು ರೆಸ್ಟೋರೆಂಟ್‌ನಲ್ಲಿ ಮಾತ್ರ ಗಮನಿಸಿದ್ದಲ್ಲ. ಹತ್ತಾರು ಕಡೆ ಗಮನಿಸಿದಾಗ ಸೂಪ್ ಮತ್ತು ನೂಡಲ್ಸ್ ಸೇವಿಸುವಾಗ ಆ ರೀತಿ ಸದ್ದು ಮಾಡುವುದು ತೀರಾ ಸಾಮಾನ್ಯ ಎನಿಸಿತು. ನಂತರ ವಿಚಾರಿಸಿದಾಗ ಗೊತ್ತಾಗಿದ್ದೇನೆಂದರೆ, ಅವೆರಡನ್ನೂ ಸೇವಿಸುವಾಗ ಕಡ್ಡಾಯವಾಗಿ ಸಪ್ಪಳ ಮಾಡಲೇಬೇಕಂತೆ, ಹೂಂ. ಇಲ್ಲದಿದ್ದರೆ ಅದನ್ನು ಸಿದ್ಧಪಡಿಸಿದ ಅಡುಗೆಭಟ್ಟನಿಗೆ ಅವಮಾನ ಮಾಡಿದಂತೆ. ಸಪ್ಪಳ ಮಾಡಿ ಸೇವಿಸಿದರೆ ಅದನ್ನು ತಯಾರಿಸಿದವರಿಗೆ ಗೌರವ ಸೂಚಿಸಿದಂತೆ. ಇದನ್ನು ಅವರು ನೇಕೋಜಿಟಾ (Nekojita) ಎಂದು ಕರೆಯುತ್ತಾರೆ. ಇದನ್ನು ಇಂಗ್ಲಿಷಿನಲ್ಲಿ ಸ್ಲರ್ಪಿಂಗ್ ಅಂತಾರೆ. ಸೂಪ್ ಕುಡಿಯುವ ಸಾಮರ್ಥ್ಯ, ಜಪಾನಿನ ಆಹಾರ ಸಂಸ್ಕೃತಿಯ ಪ್ರಮುಖ ಅಂಶ. 'ನೇಕೋಜಿಟಾ' ಎಂಬುದು ಜಪಾನಿ ಪದವಾಗಿದ್ದು, ಹಾಗೆಂದರೆ 'ಬೆಕ್ಕಿನ ನಾಲಿಗೆ' ಎಂದರ್ಥ. ಸ್ಲರ್ಪಿಂಗ್ (Slurping) ಅಥವಾ ನೇಕೋಜಿಟಾ ಆಹಾರ ಸೇವನೆಯ ಅತ್ಯುತ್ತಮ ಪದ್ಧತಿ, ಕಲೆ ಎಂದು ಪರಿಗಣಿತವಾಗಿದೆ. ಅಷ್ಟೇ ಅಲ್ಲ, ಅದು ಅಲ್ಲಿನ ಶಿಷ್ಟಾಚಾರದ ಭಾಗವಾಗಿದೆ. ವಿಶೇಷವಾಗಿ ರಾಮನ್, ಸೋಬಾ ಮತ್ತು ಉಡೋನ್ ನೂಡಲ್ಸ್ ಸೇವಿಸುವಾಗ ಮತ್ತು ಹಸಿರು ಚಹಾ ಸೇವಿಸುವಾಗ ಸ್ಲರ್ಪ್ ಮಾಡುವುದುಂಟು. ಜಪಾನಿನ ಭೋಜನ ಸಂಸ್ಕೃತಿಯಲ್ಲಿ, ಆಹಾರವನ್ನು ಸದ್ದು ಮಾಡುತ್ತಾ ಸೇವಿಸುವುದು ಅದನ್ನು ತಯಾರಿಸಿದವರಿಗೆ (ಶೆಫ್‌ಗೆ) ಮತ್ತು ರುಚಿಗೆ ಗೌರವ ವ್ಯಕ್ತಪಡಿಸುವ ವಿಧಾನವಾಗಿ ಬೆಳೆದು ಬಂದಿದೆ. ಬೆಕ್ಕು ಮತ್ತು ನಾಯಿಗಳೂ ದ್ರವ ಆಹಾರವನ್ನು ಸಪ್ಪಳ (ಸ್ಲರ್ಪ್) ಮಾಡಿಯೇ ಸೇವಿಸುತ್ತವೆ. ಹೀಗೆ ಸ್ಲರ್ಪ್ ಮಾಡುವುದರಿಂದ ಬಿಸಿ ಆಹಾರವು ತಕ್ಷಣ ತಣ್ಣಗಾಗುತ್ತದೆ. ಇದರಿಂದ ಆಹಾರವನ್ನು ಬೇಗನೆ ಸೇವಿಸಲು ಅಥವಾ ಕುಡಿಯಲು ಸುಲಭವಾಗುತ್ತದೆ. ಶೀತಗಾಲದಲ್ಲಿ ಬಿಸಿ ಸೂಪ್ ಮತ್ತು ನೂಡಲ್ಸ್ ಸೇವಿಸುವಾಗ, ಸ್ಲರ್ಪಿಂಗ್ ತಂತ್ರವು ಹೆಚ್ಚು ಉಪಯುಕ್ತವಾಗಿದೆ. ಸ್ಲರ್ಪ್ ಮಾಡುವಾಗ ಆಹಾರದೊಂದಿಗೆ ಗಾಳಿ ಮಿಶ್ರಗೊಳ್ಳುವುದರಿಂದ, ಇದು ರುಚಿಯ ವೈವಿಧ್ಯವನ್ನು ಹೆಚ್ಚಿಸುತ್ತದೆ. ಸೂಪ್ ಅಥವಾ ನೂಡಲ್ಸ್ ಬಾಯಿ ಸುಡುವ ಬಿಸಿಯಿದ್ದರೆ, ಅದನ್ನು ಸೇವಿಸುವಾಗ 'ಸೊರ್.. ಸೊರ್' ಎಂದು ಸದ್ದು ಮಾಡಿದರೆ, ಬಾಯಲ್ಲಿ ಗಾಳಿಯಾಡುವುದರಿಂದ ಅವನ್ನು ಸೇವಿಸಲು ಸುಲಭವಾಗುತ್ತದೆ. ಇದರಿಂದ ಚಹಾ ಅಥವಾ ಸೂಪ್‌ನ ಸ್ವಾದವನ್ನು ತ್ವರಿತವಾಗಿ ಅನುಭವಿಸಲು ಅನುಕೂಲವಾಗುತ್ತದೆ. ಅಷ್ಟೇ ಅಲ್ಲ, ಇದು ಆಹಾರದ ತಾಜಾತನ ಮತ್ತು ರುಚಿಯ ಮಟ್ಟವನ್ನು ಬಿಂಬಿಸುತ್ತದೆ. ಜಪಾನಿಯರಿಗೆ ಚಹಾ ಸೇವನೆ ಒಂದು ಧ್ಯಾನಪೂರ್ಣ ಪ್ರಕ್ರಿಯೆಯಾಗಿದ್ದು, ಸ್ಲರ್ಪಿಂಗ್ ಕಲೆ ಶ್ರದ್ಧೆಯ ಸಂಕೇತವೂ ಆಗಿದೆ. ಕುಟುಂಬದ ಸದಸ್ಯರು ಅಥವಾ ಸ್ನೇಹಿತರೊಂದಿಗೆ ಊಟ ಮಾಡುವಾಗ, ಸ್ಲರ್ಪಿಂಗ್ ಮಾಡುತ್ತಾ ಉತ್ಸಾಹ, ಸಂತಸವನ್ನು ಹೆಚ್ಚಿಸಿಕೊಳ್ಳಬಹುದು. ಜಪಾನಿನಲ್ಲಿದ್ದಾಗ ದ್ರವ ಪದಾರ್ಥಗಳನ್ನು ಸೇವಿಸುವಾಗ 'ಸೊರ್.. ಸೊರ್' ಎಂದು ಸದ್ದು ಮಾಡಿದರೆ ತಪ್ಪು ಭಾವಿಸಬಾರದು. ಅದಕ್ಕಿಂತ ಮುಖ್ಯವಾಗಿ ನೀವೂ ಹಾಗೇ ಸದ್ದು ಮಾಡುತ್ತಾ ಅವನ್ನು ಸೇವಿಸಬೇಕು. ಇಲ್ಲದಿದ್ದರೆ ಅಡುಗೆಭಟ್ಟನಿಗೆ ಅವಮಾನ ಮಾಡಿದಂತೆ.

ದರ ಏರಿಕೆಯೆಂಬ ಎರಡು ಅಲಗಿನ ಕತ್ತಿ

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ಭಾರತದಂಥ ದೇಶದಲ್ಲಿ ಅನೇಕ ಸರಕಾರಗಳು ಜನರ ವಿರೋಧ ಕಟ್ಟಿಕೊಳ್ಳುವುದಕ್ಕೆ ಹತ್ತಾರು ಕಾರಣಗಳಿರುತ್ತವೆ. ಈ ಕಾರಣಗಳು ತಿಳಿಯುವ ಮೊದಲೇ ಸರಕಾರಗಳು ಬದಲಾಗಿರುವ ಅದೆಷ್ಟೋ ಉದಾಹರಣೆಗಳು ನಮ್ಮ ಮುಂದಿವೆ. ದೆಹಲಿಯಲ್ಲಿ ಆಲೂಗಡ್ಡೆ, ಈರುಳ್ಳಿ ಬೆಲೆ ಹೆಚ್ಚಳವಾಗಿದೆ ಎಂದು ಸರಕಾರಗಳೇ ಉರುಳಿಹೋಗಿರುವ ಉದಾಹರಣೆಯಿದ್ದರೆ, ಕೆಲವೊಂದಷ್ಟು ಕ್ಷೇತ್ರದಲ್ಲಿ ಶಾಸಕ ಗೌರವ ಕೊಡಲಿಲ್ಲವೆಂದು ಸೋತ ಉದಾಹರಣೆಯಿದೆ. ಆದರೆ ಈ ಎಲ್ಲವನ್ನು ಮೀರಿ, ಸರ್ವೇಸಾಮಾನ್ಯವಾಗಿ ಸರಕಾರಿ ವಿರೋಧಿ ಅಲೆ ಏಳುವುದು 'ದರ ಏರಿಕೆ'ಯ ಕಾರಣಕ್ಕೆ.

ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿರುವ ಕಚ್ಚಾವಸ್ತುಗಳ ದರ, ಜೀವನಶೈಲಿ ಸೇರಿದಂತೆ ವಿವಿಧ ಕಾರಣಕ್ಕೆ ದರ ಏರಿಕೆ ಸಾಮಾನ್ಯವಾಗಿದೆ. ಖಾಸಗಿ ವಲಯದ ಕಂಪನಿಗಳು ಮಾಡುವ ದರ ಏರಿಕೆಗೆ ಪ್ರತಿಭಟಿಸಲಾಗುವುದಿಲ್ಲವೆಂದು ಮೌನವಾಗಿಯೇ ಒಪ್ಪಿಕೊಳ್ಳುವ ಅನೇಕರು, ಸರಕಾರದಿಂದಾಗುವ ದರ ಏರಿಕೆಗೆ ತೀವ್ರ ವಿರೋಧ ವ್ಯಕ್ತಪಡಿಸುತ್ತಾರೆ. ದರ ಏರಿಕೆ ಎನ್ನುವುದು ಅನಿವಾರ್ಯ ಎನ್ನುವುದು ಗೊತ್ತಿದ್ದರೂ ಕೆಲ ವಸ್ತುಗಳ ಮೇಲಿನ ದರ ಏರಿಕೆಗೆ ತೀವ್ರ ವಿರೋಧ ವ್ಯಕ್ತವಾಗುತ್ತದೆ. ಅದರಲ್ಲಿಯೂ ಮೂಲಸೌಕರ್ಯದ ಮೇಲಿನ ದರ ಏರಿಕೆಗೆ ಸಾರ್ವಜನಿಕ ವಲಯದಲ್ಲಿ ಮಾತ್ರವಲ್ಲದೇ, ರಾಜಕೀಯ ವಲಯದಲ್ಲಿಯೂ ತೀವ್ರ ವಿರೋಧ ವ್ಯಕ್ತವಾಗುತ್ತದೆ. ಜನರ ಹಾಗೂ ಪ್ರತಿಪಕ್ಷದ ಟೀಕೆಗೆ ಗುರಿಯಾಗಬಾರದು ಎನ್ನುವ ಕಾರಣಕ್ಕೆ ದರ ಏರಿಕೆ ಮಾಡದೇ, ಮುಂದುವರಿದರೆ ಸರಕಾರಿ ಸಂಸ್ಥೆಗಳು ಬೀದಿಗೆ ನಿಲ್ಲುವ ಪರಿಸ್ಥಿತಿ ಎದುರಾಗುತ್ತದೆ. ಹಾಗೆಂದು ಮಾಡಿದರೆ, ಜನರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಈ ಎರಡರ ನಡುವೆ 'ಹಗ್ಗದ ಮೇಲಿನ ನಡಿಗೆ' ಪ್ರತಿ ಸರಕಾರಗಳಿಗೂ ಅನಿವಾರ್ಯ ಎಂದರೆ ತಪ್ಪಾಗುವುದಿಲ್ಲ.

ದರ ಏರಿಕೆಯಿಂದಾಗಿ ಜನ ಜೀವನ ನಡೆಸುವುದು ಕಷ್ಟ ಎನ್ನುವುದು ಸ್ಪಷ್ಟ. ಆದರೆ ಸರಕಾರಕ್ಕೆ ಬರಬೇಕಿರುವ ವರಮಾನ ಹೆಚ್ಚಿಸಿಕೊಳ್ಳಬೇಕು ಎಂದರೆ ಬೆಲೆ ಏರಿಕೆಯಲ್ಲದೇ ಮತ್ತ್ಯಾವ ಮಾರ್ಗವೂ ಇಲ್ಲ. ಸಾರಿಗೆ, ಆರೋಗ್ಯ, ಶಿಕ್ಷಣ ಸೇರಿದಂತೆ ಹಲವು ಅತ್ಯಗತ್ಯ ಕ್ಷೇತ್ರಗಳಲ್ಲಿ ಲಾಭದ ಉದ್ದೇಶವನ್ನು ಸರಕಾರಗಳು ಹೊಂದಿರಬಾರದು. ಸಾರ್ವಜನಿಕರಿಗೆ ಸೇವೆ ನೀಡುವ ಸಂಸ್ಥೆಗಳಿಂದ ಲಾಭವನ್ನು ನೋಡಬಾರದು ಎನ್ನುವುದು ಬಹುತೇಕರ ವಾದ. ಆದರೆ ಲಾಭಗಳಿಸದಿದ್ದರೂ, ನಷ್ಟವಾಗದಂತೆ ಎಚ್ಚರವಹಿಸಬೇಕಾಗುತ್ತದೆ. ಇಲ್ಲದಿದ್ದರೆ ಸರಕಾರಗಳಿಗೆ ನಷ್ಟದಲ್ಲಿರುವ ಈ ಸಂಸ್ಥೆಗಳು 'ಬಿಳಿಯಾನೆ' ಆಗುವುದರಲ್ಲಿ ಅನುಮಾನವಿಲ್ಲ ಎನ್ನುವುದು ಮತ್ತೊಂದು ವಾದ.

ಸದ್ಯ ಕರ್ನಾಟಕದಲ್ಲಿ ದರ ಏರಿಕೆಯ ಬಿಸಿ ತಟ್ಟಿರುವುದು ಸ್ಪಷ್ಟ. ವರಮಾನ ಹೆಚ್ಚಿಸಿಕೊಳ್ಳುವುದಕ್ಕಾಗಿ ರಾಜ್ಯ ಸರಕಾರ ವಿವಿಧ ತೆರಿಗೆ, ಮದ್ಯದ ಮೇಲಿನ ತೆರಿಗೆ ಸೇರಿದಂತೆ ಲಭ್ಯವಿರುವ ತೆರಿಗೆಗಳನ್ನು ಹೆಚ್ಚಿಸಿದೆ. ಇದರೊಂದಿಗೆ ಹಾಲಿನ ದರ ಏರಿಕೆ ಮಾಡಿದ್ದ ರಾಜ್ಯ ಸರಕಾರ ಹೊಸ ವರ್ಷಕ್ಕೆ ಬಸ್ ಟಿಕೆಟ್ ದರವನ್ನು ಶೇ.15ರಷ್ಟು ಹೆಚ್ಚಿಸಿ ಹೊಸ ಶಾಕ್ ನೀಡಿತ್ತು. ಇದೇ ರೀತಿ ಮುಂದಿನ ದಿನದಲ್ಲಿ ಜಲಮಂಡಳಿಯಿಂದ ಬೆಂಗಳೂರಿನಲ್ಲಿ ನೀರಿನ ದರ, ನಮ್ಮ ಮೆಟ್ರೋದಿಂದ ಟಿಕೆಟ್ ದರ, ಕೆಎಂಎಫ್‌ನಿಂದ ಹಾಲಿನ ದರ, ಇಂಧನ ಇಲಾಖೆಯಿಂದ ವಿದ್ಯುತ್ ದರ ಹೀಗೆ ಸರಣಿ ದರ ಏರಿಕೆಯ ಪ್ರಸ್ತಾವಗಳು ಸರಕಾರದ ಮುಂದಿವೆ. ಸರಕಾರಿ ಬಸ್ ದರ ಏರಿಕೆ ಮಾಡಿರುವ ನಿರ್ಧಾರಕ್ಕೆ ಪರ-ವಿರೋಧ ಚರ್ಚೆಯ ನಡುವೆಯೇ, ದಿನಬಳಕೆಯ ಸೇವೆ ಹಾಗೂ ವಸ್ತುಗಳ ದರ ಏರಿಕೆ ಮಾಡಲು ಸರಕಾರ ಮುಂದಾದರೆ ಸಹಜವಾಗಿಯೇ ಸಾರ್ವಜನಿಕ ವಲಯದಲ್ಲಿ ವಿರೋಧ ವ್ಯಕ್ತವಾಗುತ್ತದೆ. ಹಾಗೆಂದು, ದರ ಪರಿಷ್ಕರಣೆ ಮಾಡದಿದ್ದರೆ ಸಂಸ್ಥೆಗಳೇ ಉಳಿಯಲು ಸಾಧ್ಯವಿಲ್ಲ ಎನ್ನುವ ಸ್ಥಿತಿಗೆ ತಲುಪುತ್ತದೆ.

ಹೊಸವರ್ಷದ ಆರಂಭದಲ್ಲಿ ಕರ್ನಾಟಕದ 4 ಸಾರಿಗೆ ನಿಗಮಗಳ ಟಿಕೆಟ್ ದರವನ್ನು ಏರಿಸಿದ್ದು ಭಾರಿ ಚರ್ಚೆಗೆ ಗ್ರಾಸವಾಯಿತು. ಕಾಂಗ್ರೆಸ್ ನಾಯಕರು, ಹೊರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಟಿಕೆಟ್ ದರ ಕಡಿಮೆಯಿದೆ ಎಂದು ಸಮರ್ಥಿಸಿಕೊಂಡರೆ, 'ಗ್ಯಾರಂಟಿ' ಯೋಜನೆಯ ಕಾರಣಕ್ಕೆ ದರವನ್ನು ಏರಿಸಲಾಗುತ್ತಿದೆ ಎನ್ನುವ ಆರೋಪವನ್ನು ಬಿಜೆಪಿಗರು ಮಾಡಿದರು. ಪ್ರತಿಪಕ್ಷದಲ್ಲಿರುವ ಬಿಜೆಪಿ-ಜೆಡಿಎಸ್‌ನಿಂದ ಈ ರೀತಿಯ ಪ್ರತಿಕ್ರಿಯೆ ಸರ್ವೇಸಾಮಾನ್ಯ. ಹಾಗೆಂದ ಮಾತ್ರಕ್ಕೆ ಬೇಕಾಬಿಟ್ಟಿಯಾಗಿ ದರ ಏರಿಕೆ ಮಾಡುವುದನ್ನು ಒಪ್ಪುವುದಕ್ಕೂ ಸಾಧ್ಯವಿಲ್ಲ.

ಸಾರಿಗೆ ಇಲಾಖೆಯ ಅಥವಾ ಸರಕಾರದ ವಾದವನ್ನು ಗಮನಿಸಿದರೆ, ಬಸ್ ದರ ಏರಿಕೆ 'ಅನಿವಾರ್ಯ'ವಾಗಿತ್ತು ಎನ್ನುವುದು ಸ್ಪಷ್ಟ. ಬಿಎಂಟಿಸಿ ಸಾರಿಗೆ ನಿಗಮದ ಬಸ್ ದರವನ್ನು ದಶಕದ ಹಿಂದೆ ಏರಿಸಿದ್ದರೆ, ಇತರೆ ನಿಗಮಗಳ ಪ್ರಯಾಣ ದರವನ್ನು ಐದು ವರ್ಷದ ಹಿಂದೆ ಏರಿಕೆ ಮಾಡಲಾಗಿತ್ತು. ಜನರ ಆಕ್ರೋಶಕ್ಕೆ ತುತ್ತಾಗುವ ಸಾಹಸಕ್ಕೆ ಕೈಹಾಕುವುದು ಬೇಡ ಎನ್ನುವ ಕಾರಣಕ್ಕೆ ಎಲ್ಲ ಸರಕಾರಗಳೂ, ಟಿಕೆಟ್ ದರ ಏರಿಕೆಯನ್ನು ಮುಂದಕ್ಕೆ ಹಾಕಿಕೊಂಡು ಬಂದ ಪರಿಣಾಮ, ಕರ್ನಾಟಕದ ಸಾರಿಗೆ ನಿಗಮಗಳ ಮೇಲಿನ ಒಟ್ಟು ಸಾಲ 5800 ಕೋಟಿ ರು.ಗಳನ್ನು ಮೀರಿಸುತ್ತಿದೆ. ಹಾಗೆಂದ ಮಾತ್ರಕ್ಕೆ ದರ ಏರಿಕೆಯ ಬೆನ್ನಲ್ಲೇ, ಸಾರಿಗೆ ನಿಗಮಗಳ ಸಂಕಷ್ಟಗಳೆಲ್ಲ ನಿವಾರಣೆಯಾಗಿ, ಸಾಲ ಮುಕ್ತ ನಿಗಮಗಳೂ ಆಗುವುದಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ 'ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎನ್ನುವ ರೀತಿಯಲ್ಲಿದೆ. ಈ ದರ ಏರಿಕೆಯಿಂದ ನಿಗಮಗಳಿಗೆ ಸಹಾಯವಾಗುವುದಿಲ್ಲ ಎನ್ನುವುದು ಎಷ್ಟು ಸತ್ಯವೋ, ಸಾರ್ವಜನಿಕರಿಗೆ ಬಹುದೊಡ್ಡ ಹೊರೆ ಬೀಳಲಿದೆ ಎನ್ನುವುದು ಅಷ್ಟೇ ಸತ್ಯ.

ಬಸ್ ದರ ಏರಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸಿಗರದೊಂದು ವಾದವಿದೆ. ಅದೇನೆಂದರೆ, ಕೇಂದ್ರ ಸರಕಾರ ಡೀಸೆಲ್ ದರವನ್ನು ನಿರಂತರವಾಗಿ ಏರಿಸಿಕೊಂಡು ಬರುತ್ತಿರುವುದರಿಂದ ಇಂದು ನಾವು ದರ ಏರಿಸುವ ಅನಿವಾರ್ಯತೆಗೆ ಸಿಲುಕಿದ್ದೇವೆ. 2020ರಲ್ಲಿ 60 ರು. ಇದ್ದ ಡೀಸೆಲ್ ದರ ಈಗ 90 ರುಪಾಯಿ ಆಗಿದೆ. ಆದರೆ ಬಸ್‌ದರ ಆ ಪ್ರಮಾಣಕ್ಕೆ ಸರಿಯಾಗಿ ಆಗಿಲ್ಲ, ಆದ್ದರಿಂದ ಕಳೆದ ಐದು ವರ್ಷದ ಅವಧಿಯಲ್ಲಿ ಪ್ರತಿನಿತ್ಯ ನಾಲ್ಕು ನಿಗಮಗಳ ಮೇಲೆ ಡೀಸೆಲ್‌ಗಾಗಿಯೇ ಸುಮಾರು ನಾಲ್ಕು ಕೋಟಿ ಹೆಚ್ಚುವರಿ ಹೊರೆ ಬೀಳುತ್ತಿದೆ. ದರ ಏರಿಸಿರುವ ಕೇಂದ್ರ ಸರಕಾರ, ಕನಿಷ್ಠ ಸರಕಾರಿ ಸಾರಿಗೆ ಸಂಸ್ಥೆಗಳಿಗಾದರೂ ಕಡಿಮೆ ಬೆಲೆಗೆ ಡೀಸೆಲ್ ನೀಡಿದ್ದರೆ ನಾಲ್ಕು ಸಾರಿಗೆಗಳ ಮೇಲಿರುವ 5800 ಕೋಟಿ ರು.ಹೊರೆಯ ಸ್ಥಿತಿ ತಲುಪುತ್ತಿರಲಿಲ್ಲ ಎನ್ನುವುದಾಗಿದೆ. ಕಾಂಗ್ರೆಸಿಗರ ಈ ವಾದವನ್ನು ಪೂರ್ಣ ಪ್ರಮಾಣದಲ್ಲಿ ಒಪ್ಪಲು ಸಾಧ್ಯವಿಲ್ಲ. ಅಂತಾರಾಷ್ಟ್ರೀಯ ಕಚ್ಚಾತೈಲ ಬೆಲೆಯಲ್ಲಿನ ಏರಿಳಿತದ ಆಧಾರದಲ್ಲಿ ಪೆಟ್ರೋಲ್-ಡೀಸೆಲ್ ದರ ನಿಗದಿಯಾಗಿರುತ್ತದೆ. ಒಂದು ವೇಳೆ ಸಾರಿಗೆ ಸಂಸ್ಥೆಗಳಿಗೆ ಕಡಿಮೆ ಮೊತ್ತಕ್ಕೆ ಡೀಸೆಲ್ ನೀಡಲು ಮುಂದಾದರೆ, ಅದು ಮತ್ತೊಂದು ಅನುದಾನದ ಮೊತ್ತದಿಂದಲೇ ಭರಿಸಬೇಕು ಎನ್ನುವುದು ಸ್ಪಷ್ಟ.

ಇನ್ನು ದರ ಏರಿಕೆ ಎನ್ನುವುದು ಯಾವುದೇ ಒಂದು ಪಕ್ಷದ ಸರಕಾರ ಅಧಿಕಾರದಲ್ಲಿದ್ದಾಗ ನಡೆಯುವ ಪ್ರಕ್ರಿಯೆಯಲ್ಲ. ಆಯಾ ಸರಕಾರಗಳು, ಅಂದಿನ ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸಿ, ಲಾಭ-ನಷ್ಟದ ಲೆಕ್ಕಾಚಾರದಲ್ಲಿ ತೀರ್ಮಾನಗಳನ್ನು ಮಾಡುತ್ತವೆ. ಹಾಗೆ ನೋಡಿದರೆ, ಬಿಜೆಪಿಯ ಅವಧಿಯಲ್ಲಿ ಬಸ್ ಟಿಕೆಟ್ ಶುಲ್ಕ ವಿವಿಧ ಹಂತದಲ್ಲಿ ಶೇ.48ರಷ್ಟು ಹೆಚ್ಚಾಗಿದೆ. ಒಂದು ವೇಳೆ ಈಗ ಮಾಡಿದ್ದು ತಪ್ಪು ಎನ್ನುವುದಾದರೆ ಆಗ ಬಿಜೆಪಿ ಸರಕಾರ ಕೈಗೊಂಡ ನಿರ್ಣಯವೂ ತಪ್ಪೇ ಅಲ್ಲವೇ? ಆದರೆ ಈ ತರ್ಕಬದ್ಧ ವಾದ ಮಾಡಲು ಯಾವ ಪಕ್ಷಗಳೂ ಸಿದ್ಧವಿರುವುದಿಲ್ಲ, ಈಗ ಬಸ್ ದರ ಏರಿಕೆಯನ್ನು ಸಮರ್ಥಿಸಿಕೊಳ್ಳುತ್ತಿರುವ ಕಾಂಗ್ರೆಸಿಗರು, ಮುಂದೊಂದು ದಿನ ಪ್ರತಿಪಕ್ಷದಲ್ಲಿದ್ದಾಗ ದರ ಹೆಚ್ಚಿಸಿದರೆ ಅದನ್ನು ಸ್ವಾಗತಿಸುವುದಿಲ್ಲ.

ಹಾಗೆ ನೋಡಿದರೆ, ಸರಕಾರದಿಂದ ನಡೆಯುತ್ತಿರುವ ಈ ಸಾರ್ವಜನಿಕ ಸಂಸ್ಥೆಗಳನ್ನು ಲಾಭಕ್ಕಾಗಿ ನಡೆಸಬಾರದು. ಆದರೆ ಸರಕಾರಕ್ಕೆ ಹೊರೆಯೂ ಆಗಬಾರದು. ದರ ಏರಿಕೆಯ ಬಿಸಿ ಯಾವುದೇ ಒಂದು ಸರಕಾರಕ್ಕೆ ಸೀಮಿತವಾಗಿಲ್ಲ, ಆದರೆ ದರ ಏರಿಕೆಗೊಂದು ಮಾರ್ಗಸೂಚಿ ಸಿದ್ಧವಾಗಬೇಕಿದೆ. ಇಲ್ಲದಿದ್ದರೆ ಪ್ರತಿಬಾರಿ ದರ ಏರಿಕೆಯ ಸಮಯದಲ್ಲಿ ಈ ರೀತಿಯ ಗೊಂದಲ, ಗದ್ದಲವಾಗುವುದು ನಿಶ್ಚಿತ.

ಪ್ರತಿಬಾರಿ ದರ ಏರಿಕೆಯಾದಾಗಲೂ ಪ್ರತಿಪಕ್ಷಗಳು ತಮ್ಮದೇ ಆದ ರೀತಿಯಲ್ಲಿ ವಿಶ್ಲೇಷಣೆ ಮಾಡುತ್ತಾ, 'ಸರಕಾರ ಸಾರ್ವಜನಿಕರಿಗೆ ಬರೆ ಎಳೆಯುತ್ತಿದೆ' ಎನ್ನುವ ಆರೋಪವನ್ನು ಮಾಡುವುದು ಸಹಜ. ಆದರೆ ಇಂಥ ಆರೋಪ ಮಾಡುವ ಬಹುತೇಕ ರಾಜಕಾರಣಿಗಳು, ದರ ಏರಿಕೆಯ ವಿಷಯವನ್ನು ಜನರ ಸಮಸ್ಯೆಯಾಗಿ ನೋಡದೇ, ರಾಜಕೀಯವಾಗಿ ಹೋರಾಡಲು ಸಿಗುವ 'ಮತ್ತೊಂದು ಅಸ್ತ್ರ'ದ ರೀತಿಯಲ್ಲಿ ಬಳಸಿಕೊಳ್ಳುತ್ತಾರೆ. ಅನೇಕ ಸಮಯದಲ್ಲಿ ದರ ಏರಿಕೆ ಪ್ರಸ್ತಾವನೆಯನ್ನು ತಮ್ಮ ಸರಕಾರವಿದ್ದಾಗ ಮಾಡಿದ್ದನ್ನು ಸಮರ್ಥಿಸಿಕೊಳ್ಳುವ ನಾಯಕರು, ಪ್ರತಿಪಕ್ಷ ಸ್ಥಾನದಲ್ಲಿ ಕೂರುತ್ತಿದ್ದಂತೆ ವಿರೋಧಿಸಲು ಶುರುಮಾಡುತ್ತಾರೆ. ಸಾರ್ವಜನಿಕರಿಗೆ ಒಳಿತಾಗಲಿ ಎಂಬ ಕಾರಣಕ್ಕೆ ವಿರೋಧಿಸಿದಕ್ಕಿಂತ ಹೆಚ್ಚಾಗಿ, ರಾಜಕೀಯವಾಗಿ ವಿರೋಧಿಸಬೇಕು ಎನ್ನುವ ಕಾರಣಕ್ಕೆ ವಿರೋಧಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ.

ದರ ಏರಿಕೆ ಮಾಡುವುದಕ್ಕೆ ಒಂದೊಂದು ಇಲಾಖೆಯಲ್ಲಿ ಒಂದೊಂದು ರೀತಿಯಲ್ಲಿ ತೀರ್ಮಾನ ಕೈಗೊಳ್ಳಲಾಗುತ್ತದೆ. ಅಂತಿಮವಾಗಿ ಮುಖ್ಯಮಂತ್ರಿಗಳೇ ದರ ಏರಿಕೆಯನ್ನು ತೀರ್ಮಾನಿಸಿದರೂ, ವಿವಿಧ ರೀತಿಯ ನಿರ್ಧಾರದಿಂದ ಹಲವು ಗೊಂದಲಗಳಾಗುತ್ತವೆ. ಇಂಧನ ಇಲಾಖೆಯಲ್ಲಿ ದರ ಏರಿಕೆ ಎನ್ನುವುದು 'ಫಿಕ್ಸ್' ಆಗಿದ್ದು ಪ್ರತಿವರ್ಷ ಇಂತಿಷ್ಟು ಹೆಚ್ಚಿಸಬೇಕು ಎನ್ನುವ ನಿಯಮಾವಳಿಯನ್ನೇ ರೂಪಿಸಲಾಗಿದೆ. ಆದ್ದರಿಂದ ವಿದ್ಯುತ್ ದರ ಏರಿಕೆ ಅಥವಾ ಇಳಿಕೆಯ ಸಮಯದಲ್ಲಿ ಹೆಚ್ಚು ಸದ್ದಾಗುವುದಿಲ್ಲ. ಇಂಧನ ಇಲಾಖೆ ಯಲ್ಲಿರುವ ಈ ನಿಯಮಾವಳಿಗಳನ್ನು ಇತರೆ ಇಲಾಖೆ, ನಿಗಮಗಳಿಗೆ ವಿಸ್ತರಣೆ ಮಾಡುವುದು ಸೂಕ್ತ. ಇದರಿಂದ ಒಂದೇ ಬಾರಿಗೆ ಶೇ.10ರಿಂದ 15ರಷ್ಟು ಏರಿಕೆಯಾಗುವ ಬದಲು ಹಂತ-ಹಂತವಾಗಿ ಏರಿಕೆಯಾಗುತ್ತದೆ. ಈ ರೀತಿ ಮಾಡುವುದರಿಂದ ಸಾರ್ವಜನಿಕರಿಗೂ ದರ ಏರಿಕೆಯ ಹೊರೆ ಒಟ್ಟಿಗೆ ಬೀಳುವುದಿಲ್ಲ. ಸರಕಾರಗಳು ದರ ಏರಿಸುವಾಗ ಎದುರಿಸುವ 'ಟೀಕೆ-ಟಿಪ್ಪಣಿ'ಗಳಿಂದ ಪಾರಾಗಬಹುದು. ಈ ಹಂತದಲ್ಲಿ ಸರಕಾರಗಳು ದರ ಏರಿಕೆಗೆ ನಿರ್ದಿಷ್ಟ ಮಾನದಂಡ ರೂಪಿಸುವುದು ಇಂದಿನ ಅಗತ್ಯ.

ಅವೈಜ್ಞಾನಿಕ ಕಾರ್ಯತಂತ್ರಗಳ ಗೊಡವೆ ಏಕೆ?

ದಾರಿದೀಪ
ಸುರೇಂದ್ರ ಪೈ, ಭಟ್ಕಳ
vveditoped@gmail.com

ವಿದ್ಯಾರ್ಥಿಗಳು ದಸರಾ ರಜೆ ಮುಗಿಸಿ ಶೈಕ್ಷಣಿಕ ವರ್ಷದ ದ್ವಿತೀಯಾರ್ಧಕ್ಕೆ ಕಾಲಿಡುವುದೇ ತಡ, ವಾರ್ಷಿಕ ಪರೀಕ್ಷೆಗಾಗಿ ಸಕಲ ಸಿದ್ಧತೆಗಳು ಶುರುವಾಗುತ್ತವೆ. ಕಳೆದ ಬಾರಿಯ ಬೋರ್ಡ್ ಪರೀಕ್ಷಾ ಫಲಿತಾಂಶದಿಂದ ತೀರಾ ಮುಜುಗರಕ್ಕೆ ಒಳಗಾದ ಶಿಕ್ಷಣ ಇಲಾಖೆಯು ಈ ಬಾರಿ ಉತ್ತಮ ಫಲಿತಾಂಶಕ್ಕಾಗಿ ಹಲವು ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮುಂದಾಗಿದೆ. ಆದರೆ ಇವನ್ನು ಜಾರಿಗೊಳಿಸುವ ಭರದಲ್ಲಿ ಹಲವು ಅವೈಜ್ಞಾನಿಕ ಕಾರ್ಯತಂತ್ರಗಳ ಮೊರೆ ಹೊಕ್ಕಿದೆ. ಇನ್ನೊಂದೆಡೆ ಖಾಸಗಿ ಶಾಲೆಗಳು ಗುಣಮಟ್ಟದ ಫಲಿತಾಂಶಕ್ಕಾಗಿ, ಪ್ರತಿಭಾವಂತ ಮಕ್ಕಳ ಕ್ರಿಯಾಶೀಲ ಪ್ರವೃತ್ತಿಯನ್ನು ಹತ್ತಿಕ್ಕುವಂಥ ಕ್ರಿಯಾಯೋಜನೆಯನ್ನು ಜಾರಿಗೊಳಿಸಿವೆ. ಇವುಗಳ ಬಗ್ಗೆ ಒಂದು ಸಮಗ್ರವಾದ ಅವಲೋಕನದ ಅವಶ್ಯಕತೆಯಿದೆ.

ಶಿಕ್ಷಣ ಇಲಾಖೆಯ ಪ್ರಕಾರ, ಆಯಾ ವರ್ಷದ ಜೂನ್‌ನಿಂದ ಮುಂದಿನ ವರ್ಷದ ಮಾರ್ಚ್ ತನಕ 10 ತಿಂಗಳ ಶಾಲಾ ಅವಧಿ ನಡೆಯಬೇಕು. ಇವುಗಳ ಮಧ್ಯೆ ಏಪ್ರಿಲ್-ಮೇ ಬೇಸಗೆ ರಜೆ ಮತ್ತು ಅಕ್ಟೋಬರ್‌ನ ದಸರಾ ರಜೆ ಪ್ರತ್ಯೇಕ. ಇದು ಮಕ್ಕಳ ಮನೋವೈಜ್ಞಾನಿಕ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ರೂಪಿಸಲಾಗಿರುವ ಪದ್ಧತಿ. ಆದರೆ ಇಂದಿನ ಶೈಕ್ಷಣಿಕ ವ್ಯವಸ್ಥೆಯನ್ನೊಮ್ಮೆ ಅವಲೋಕಿಸಿದರೆ, ಬಹುತೇಕ ಖಾಸಗಿ ಶಾಲೆಗಳಲ್ಲಿ 9ನೇ ತರಗತಿಯ ಪಾಠಗಳನ್ನು ಫೆಬ್ರವರಿಯಲ್ಲೇ ಮುಗಿಸಿ, ಇಲಾಖೆಗೆ ತಿಳಿಯದ ಹಾಗೆ ಒಳಗಿಂದೊಳಗೇ 10ನೇ ತರಗತಿಯನ್ನು ಪ್ರಾರಂಭಿಸಿರುತ್ತಾರೆ. ಇನ್ನು, ಏಪ್ರಿಲ್-ಮೇ ತಿಂಗಳ ಸುಡುಬಿಸಿಲನ್ನೂ ಲೆಕ್ಕಿಸದೆ ಮತ್ತು ಅಕ್ಟೋಬರ್ ದಸರಾ ರಜೆಯಲ್ಲೂ 'ವಿಶೇಷ ತರಗತಿ' ಹೆಸರಲ್ಲಿ ನಿರಂತರವಾಗಿ ಪಾಠ ಮಾಡುತ್ತಾ, ಅಕ್ಟೋಬರ್

ಅಂತ್ಯದ ವೇಳೆಗೇ 10ನೇ ತರಗತಿಯ ಪಠ್ಯಕ್ರಮ ಮುಗಿಸುವವರೂ ಇದ್ದಾರೆ. ಇಲಾಖೆಯ ನಿಯಮಗಳಿಗೆ ಮತ್ತು ಮಗುವಿನ ಮಾನಸಿಕತೆಗೆ ವಿರುದ್ಧವಾಗಿರುವ ಪರಿಪಾಠವಿದು. ಇಂಥ ಕ್ರಮದಿಂದಾಗಿಯೇ, ನಿಧಾನಗತಿಯಲ್ಲಿ ಕಲಿಯುವ ಮಕ್ಕಳಲ್ಲಿ ವಿಷಯದ ಗ್ರಹಿಕೆ ಪರಿಪೂರ್ಣವಾಗಿ ಆಗದೇ, ಕಲಿಕೆ ಕುಂಠಿತವಾಗುತ್ತಿರುವುದು; ಇಲ್ಲಿ ಬೇಸಗೆ ರಜೆ ಮತ್ತು ದಸರಾ ರಜೆಗಳು ಕಡಿತಗೊಂಡಿರುತ್ತವೆ ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು.

ಇಷ್ಟಕ್ಕೇ ಸುಮ್ಮನಾಗದೆ, ಕಳೆದ ಕೆಲವು ವರ್ಷಗಳಿಂದ ಪಾಲಕರ ಅಪೇಕ್ಷೆಯಂತೆ ಸಂಜೆಯ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ. ಅಂದರೆ, ಶಾಲೆ ಬಿಟ್ಟ ನಂತರ ಸುಮಾರು 4 ಗಂಟೆಯಿಂದ ರಾತ್ರಿ 7-8 ಗಂಟೆಯವರೆಗೂ ಪರೀಕ್ಷಾ ತಯಾರಿಯ ಹೆಸರಲ್ಲಿ ನಡೆಯುವ ವಿಶೇಷ ತರಗತಿಗಳು. ಅಲ್ಲಿಗೆ, ನಿತ್ಯವೂ ಬೆಳಗ್ಗೆ 8 ಗಂಟೆಗೆ ಮನೆ ಬಿಟ್ಟ ಮಕ್ಕಳು ರಾತ್ರಿ 7-8ರವರೆಗೆ ಬರೋಬ್ಬರಿ 10-11 ಗಂಟೆಗಳ ಕಾಲ ಪಾಠ-ಪ್ರವಚನಗಳಿಗೆ ಒಡ್ಡಿಕೊಳ್ಳಬೇಕಾದ ನಿರ್ಬಂಧ! ಇಷ್ಟು ಸುದೀರ್ಘ ಅವಧಿಯ ಪರೀಕ್ಷಾ ತಯಾರಿ ನಮ್ಮ ಮಕ್ಕಳಿಗೆ ನಿಜವಾಗಿಯೂ ಬೇಕೇ? ಮಾರ್ಚ್ ಕೊನೆಯ ವಾರದಲ್ಲಿ ಬರುವ ಬೋರ್ಡ್ ಪರೀಕ್ಷೆಯ ತಯಾರಿಗಾಗಿ, ನವೆಂಬರ್‌ನಿಂದ ಬರೋಬ್ಬರಿ 5 ತಿಂಗಳು ಲಭಿಸುತ್ತವೆ. ಈ ಸಮಯದಲ್ಲಿ ನಿತ್ಯವೂ 45 ನಿಮಿಷದ ಏಳು ಪೀರಿಯಡ್‌ಗಳಲ್ಲಿ, ಎಲ್ಲಾ ಕಲಿಕಾ ಹಂತದ ಮಕ್ಕಳನ್ನು ತಿದ್ದಿ ತೀಡಿ ಪರೀಕ್ಷೆಗೆ ಸಜ್ಜುಗೊಳಿಸಲು ಶಿಕ್ಷಕರಿಗೆ ಸಾಕಾಷ್ಟು ಕಾಲಾವಕಾಶ ಲಭಿಸುತ್ತದೆ ಎಂಬುದನ್ನು ಕೆಲವರು ಮನಗಾಣುತ್ತಿಲ್ಲವೇಕೆ?

ಪಾಲಕರಾದ/ಶಿಕ್ಷಕರಾದ ನಾವೆಲ್ಲಾ ನಮ್ಮ ಬಾಲ್ಯವನ್ನು ಎಷ್ಟು ಚೆನ್ನಾಗಿ ಅನುಭವಿಸಿದೆವು. ರಜೆಯಲ್ಲಿ ಅಜ್ಜ-ಅಜ್ಜಿಯ ಮನೆಗೆ ಹೋಗಿ ಆಡುತ್ತಾ, ಕುಣಿಯುತ್ತಾ, ನಲಿಯುತ್ತಾ, ಕೆರೆಯಲ್ಲಿ ಈಜುತ್ತಾ ಕಳೆದ ದಿನಗಳವು. ಹೀಗೆ ಮಕ್ಕಳ ವಯೋಸಹಜ ಮೋಜು ಮತ್ತು ತುಂಟಾಟಕ್ಕೆ ಆಸ್ಪದ ಕೊಡದೇ, ಬಾಲ್ಯವನ್ನು ಆಸ್ವಾದಿಸುವುದಕ್ಕೆ ಬಿಡದೇ, ನಾವು ಹೇಳಿದಂತೆ ಕೇಳಬೇಕೆಂಬ ಧೋರಣೆಯಿಂದ ಮಕ್ಕಳ ಸುಂದರ ಬಾಲ್ಯವನ್ನು ಕಸಿದುಕೊಂಡಾಗಿದೆ. ಇಷ್ಟು ಸಾಲದೆಂಬಂತೆ, ಮಕ್ಕಳ ಪ್ರೌಢಾವಸ್ಥೆಯಲ್ಲೂ ಅದೇ ಧೋರಣೆಯಿಟ್ಟುಕೊಂಡು ಅವರ ಸ್ವಾಭಾವಿಕ ಬೆಳವಣಿಗೆಗೆ ನಾವೇ ಅಡ್ಡಿಪಡಿಸುತ್ತಿದ್ದೇವೆ.

ನಮ್ಮ ಮಕ್ಕಳಿಗೆ ನಿಜಕ್ಕೂ 'ಸಂಜೆಯ ತರಗತಿ'ಗಳು ಬೇಕಿವೆಯೇ? ಆ ಹಣೆಪಟ್ಟಿಯ ಜೈಲಿನಲ್ಲಿ ಮಕ್ಕಳು ಬಂದಿಯಾಗಬೇಕಿರುವ ಅವಶ್ಯಕತೆ ಇದೆಯೇ? ತಮ್ಮ ಶಾಲೆಗೆ ಶೇ.ನೂರರಷ್ಟು ಫಲಿತಾಂಶ ಬರಬೇಕು, ತಮ್ಮ ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ರ‍್ಯಾಂಕ್ ಪಡೆಯುವಂತಾಗಬೇಕು ಎಂಬ ಹಂಬಲ ಪ್ರತಿಯೊಂದು ಶಿಕ್ಷಣ ಸಂಸ್ಥೆಗೂ ಇರುತ್ತದೆ. ಇದು ತಪ್ಪಲ್ಲ ಬಿಡಿ. ಆದರೆ ಇಲ್ಲೊಂದು ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳಬೇಕು. ಒಂದು ತರಗತಿಯಲ್ಲಿ ಬುದ್ಧಿವಂತರು, ನಿಧಾನವಾಗಿ ಕಲಿಯುವವರು, ಮಧ್ಯಮ ಮಟ್ಟದವರು ಹೀಗೆ ಎಲ್ಲ ತೆರನಾದ ವಿದ್ಯಾರ್ಥಿಗಳೂ ಇರುತ್ತಾರೆ. ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಕುರಿತು ಹೆಚ್ಚುವರಿ ಗಮನದ/ಬೋಧನೆಯ ಅಗತ್ಯವಿದೆ ಎಂಬ ಗ್ರಹಿಕೆಯೇನೋ ಒಪ್ಪುವಂಥದ್ದೇ; ಆದರೆ ಶೇ.85-90ಕ್ಕಿಂತ ಹೆಚ್ಚು ಅಂಕ ಪಡೆವ ಸಾಮರ್ಥ್ಯವಿರುವ ಪ್ರತಿಭಾವಂತ ಮಕ್ಕಳಿಗೂ 'ಸಂಜೆಯ ವಿಶೇಷ ತರಗತಿ'ಯೆಂಬ ನಿರ್ಬಂಧವೇಕೆ? ಎಂಬುದು ಅರ್ಥವಾಗದ ಪ್ರಶ್ನೆ.

ಸಂಜೆಯ ತರಗತಿಗಳಲ್ಲೂ ಮಕ್ಕಳಿಗೆ ಸ್ವ-ಅಧ್ಯಯನಕ್ಕೋ, ಓದಿಸುವುದಕ್ಕೋ, ಅವರ ಪ್ರಶ್ನೆಗಳಿಗೆ ವೈಯಕ್ತಿಕವಾಗಿ ಉತ್ತರಿಸುವುದಕ್ಕೋ ಅಥವಾ ಪರೀಕ್ಷೆ ನಡೆಸುವುದಕ್ಕೋ ಅನುವು ಮಾಡಿಕೊಡಲಾಗುತ್ತದೆ. ಇವುಗಳ ಹೊರತಾಗಿ ಅಲ್ಲಿ ಇನ್ನೇನೂ ಸಾಧ್ಯವಿಲ್ಲ, ಇವೆಲ್ಲವೂ ಕಲಿಕೆಯಲ್ಲಿ ತೀರಾ ಹಿಂದುಳಿದ ಮಕ್ಕಳಿಗೆ ಸೂಕ್ತ ಎನ್ನಬಹುದು. ಆದರೆ ಪ್ರತಿಭಾವಂತರನ್ನೂ ಇಂಥ ತರಗತಿಗಳಿಗೆ ಅಟ್ಟುವುದರಿಂದ ಅವರಿಗೆ ಆಗುವುದು ಯಾತನೆಯೇ ವಿನಾ ಬೇರೇನಲ್ಲ, ಜತೆಗೆ ಅವರ ಸಾಮರ್ಥ್ಯವೂ ಪೋಲಾಗುತ್ತದೆ. ಒಳ್ಳೆಯ ಫಲಿತಾಂಶ ದಕ್ಕಬೇಕೆಂಬ ಹಪಹಪಿಯಲ್ಲಿ, ಮಕ್ಕಳಿಗೆ ಹೊರೆಯಾಗುವ ಇಂಥ ಅವೈಜ್ಞಾನಿಕ ವಿಧಾನಕ್ಕೆ ನಾವು ಜೋತುಬೀಳುವುದು ಎಷ್ಟರಮಟ್ಟಿಗೆ ಸರಿ?

Practice makes man perfect ಎಂಬ ಮಾತಿದೆ, ನಿಜ. ಆದರೆ, ವಿಷಯದ ಗ್ರಹಿಕೆಯಾಗದ ಹೊರತು ಮಕ್ಕಳನ್ನು ನಿರಂತರವಾಗಿ ಪರೀಕ್ಷೆಗೆ ಒಡ್ಡುವುದರಿಂದ ಏನನ್ನು ಸಾಧಿಸಲು ಸಾಧ್ಯ? ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಗಳಿಸಬೇಕಾದರೆ ಮೊದಲು ಮಕ್ಕಳಿಗೆ ವಿಷಯದ ಮೇಲೆ ಹಿಡಿತವಿರಬೇಕು. ಅದು ಇದ್ದಲ್ಲಿ, ನಿತ್ಯದ ಏಳು ಪೀರಿಯಡ್‌ಗಳಲ್ಲೇ ಅವರಿಗೆ ಬೇಕಾದ ಪರೀಕ್ಷೆ ನಡೆಸಿದರೆ ಸಾಕಾಗುತ್ತದೆ. ಇನ್ನು ಬಹುತೇಕ ಕಡೆ, ಸಂಜೆಯ ವಿಶೇಷ ತರಗತಿಯ ವೇಳೆ ಯಾವುದೋ ಯುಟ್ಯೂಬ್ ವಿಡಿಯೋ ತೋರಿಸಿ ಸುಮ್ಮನಾಗುತ್ತಾರೆ. ಇದನ್ನು ತೋರಿಸಲು ಈ ತರಗತಿಗಳೇ ಆಗಬೇಕೇ? ಮಕ್ಕಳೇ ಮನೆಯಲ್ಲಿ ಇದನ್ನು ನೋಡಲು ಸಾಧ್ಯವಿಲ್ಲವೇ?

ಗ್ರಾಮೀಣ ಪ್ರದೇಶದ ಬಹುತೇಕ ಪಾಲಕರು, ಗುಣಾತ್ಮಕ ಶಿಕ್ಷಣದ ಹಂಬಲದೊಂದಿಗೆ ಮಕ್ಕಳನ್ನು ತಾಲೂಕು-ನಗರ ಪ್ರದೇಶದ ಶಾಲೆಗಳಿಗೆ ಸೇರಿಸಿರುತ್ತಾರೆ. ಅಂಥ ಮಕ್ಕಳು ಅಲ್ಲಿಗೆ ಹೋಗಿ ಬರಲು ಸರಕಾರಿ ಬಸ್ ಅನ್ನು ಅವಲಂಬಿಸಿರುತ್ತಾರೆ. ಇಂಥ ಬಸ್ಸುಗಳು ಸಂಜೆ 6 ಗಂಟೆಯೊಳಗೆ ಹೊರಡುವುದು ವಾಡಿಕೆ. ಹೀಗಿರುವಾಗ ರಾತ್ರಿ 7-8 ಗಂಟೆವರೆಗೆ ವಿಶೇಷ ತರಗತಿ ಮಾಡಿದರೆ, ಮಕ್ಕಳು ಖಾಸಗಿ ವಾಹನದಲ್ಲೋ ಅಥವಾ ಯಾರದ್ದಾದರೂ ಬೈಕ್‌ನಲ್ಲೋ ಮನೆಗೆ ತಲುಪಬೇಕಾಗುತ್ತದೆ. ಅಷ್ಟರಲ್ಲಿ ರಾತ್ರಿ 9-10 ಗಂಟೆಯಾದರೆ, ದೈಹಿಕ-ಮಾನಸಿಕ ಬಳಲಿಕೆಯಿಂದಾಗಿ ಊಟದ ನಂತರ ನಿದ್ರೆಗೆ ಜಾರುತ್ತಾರೆಯೇ ವಿನಾ ಇನ್ನೇನೂ ಮಾಡಲಾಗದು. ಇದರಿಂದ ಪ್ರತಿಭಾವಂತ ಮಕ್ಕಳಿಗೆ ಮಾನಸಿಕ ಒತ್ತಡ ಉಂಟಾಗದಿರುತ್ತದೆಯೇ?

ಎಲ್ಲಕ್ಕೂ ಮಿಗಿಲಾಗಿ, ಇಂದಿನ ಬಹುತೇಕ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯ ಘಟ್ಟದಲ್ಲೇ, ಪ್ರವೇಶ ಪರೀಕ್ಷೆಯ ಹೆಸರಲ್ಲಿ ಹೆಚ್ಚು ಅಂಕ ಗಳಿಸುವ ಮಕ್ಕಳನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ (10ನೇ ತರಗತಿಯಲ್ಲಿ ಅವರು ಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾಗಿ, ಶಾಲೆಗೆ 100% ಫಲಿತಾಂಶ ಬರಬೇಕಲ್ಲ, ಅದಕ್ಕೆ!). ಹೀಗಿರುವಾಗ ಅವರಿಗೇಕೆ ಸಂಜೆಯ ವಿಶೇಷ ತರಗತಿ? ಇದಕ್ಕೆಲ್ಲ ಬಹುಪಾಲು ಕಾರಣ ಪಾಲಕರೇ. ಅವರಿಗೆ ಸಂಜೆ ವೇಳೆ ಮನೆಯಲ್ಲಿ ಮಕ್ಕಳನ್ನು ನಿಭಾಯಿಸಲು, ಮೊಬೈಲ್‌ನಿಂದ ದೂರವಿರಿಸಲು ಸಾಧ್ಯವಾಗುತ್ತಿಲ್ಲ. ತಮ್ಮ ಕೆಲಸವನ್ನು ನಿಭಾಯಿಸಬೇಕಾದ ಅನಿವಾರ್ಯತೆಯಿಂದಾಗಿ ಅವರಿಂದ ಮಕ್ಕಳಿಗೆ ಸಮಯ ನೀಡಲಾಗುತ್ತಿಲ್ಲ. ಅದಕ್ಕಾಗಿ ಅರ್ಧವರ್ಷ ಟ್ಯೂಷನ್‌ಗೆ, ಇನ್ನರ್ಧ ವರ್ಷ ಸಂಜೆಯ ವಿಶೇಷ ತರಗತಿಗೆ ಮೊರೆಹೋಗುತ್ತಾರೆ.

ಇನ್ನು, ಹೆಚ್ಚುಹೊತ್ತು ಶಾಲೆಯಲ್ಲಿ ಕಳೆದರೆ ಹೆಚ್ಚು ಅಂಕ ಬರುತ್ತದೆ ಎಂಬ ತಪ್ಪುಕಲ್ಪನೆಯಿದೆ ಕೆಲವರಲ್ಲಿ. ಇದನ್ನೇ ಬಂಡವಾಳವಾಗಿಸಿಕೊಳ್ಳುವ ಖಾಸಗಿ ಶಾಲೆಯವರು ಪ್ರತ್ಯೇಕವಾದ 'ಈವ್ನಿಂಗ್ ಕ್ಲಾಸ್ ಶುಲ್ಕ'ವನ್ನು ವಿಧಿಸುತ್ತಾರೆ. ಪಾಲಕರಿಗೆ, 'ನಮ್ಮ ಮಕ್ಕಳು ಕಲಿಯಲಿ ಬಿಡಲಿ, ನೋಡಿಕೊಳ್ಳಲು ಶಿಕ್ಷಕರೆಂಬ ಕಾವಲುಗಾರರೊಬ್ಬರು ಇದ್ದಾರಲ್ಲ' ಎಂಬ ನೆಮ್ಮದಿಯ ಜತೆಗೆ, ಒಂದೊಮ್ಮೆ ಅಂಕಗಳು ಕಡಿಮೆ ಬಂದರೆ, ''ಅರ್ರೀ, ಸಾವಿರಾರು ರುಪಾಯಿ ಶುಲ್ಕ ಕಟ್ಟಿದ್ದೇವೆ, ಬೆಳಗ್ಗೆ 9ರಿಂದ ರಾತ್ರಿ 8ರವರೆಗೆ ಮಕ್ಕಳು ನಿಮ್ಮ ಬಳಿಯೇ ಇರುತ್ತಾರೆ, ನೀವೇನು ಮಾಡಿದ್ರಿ?'' ಎಂದು ಶಾಲೆಯವರನ್ನೇ ರಾಜಾರೋಷವಾಗಿ ಪ್ರಶ್ನಿಸುವ ಅವಕಾಶ ಸಿಕ್ಕಂತಾಗುತ್ತದೆ. ಹೀಗಾಗಿ ಅವರು, ಸಂಜೆ ತರಗತಿಯ ಶುಲ್ಕವನ್ನು ಕಟ್ಟುತ್ತಲೇ ತಮ್ಮ ಜವಾಬ್ದಾರಿಯನ್ನು ಶಾಲಾ ಶಿಕ್ಷಕರ ಮೇಲೆ ಹಾಕಿ ಕೈತೊಳೆದುಕೊಳ್ಳುತ್ತಾರೆ.

ಒಟ್ಟಿನಲ್ಲಿ, ಮಕ್ಕಳ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳದೆಯೇ ಕೇವಲ ಫಲಿತಾಂಶದ ದೃಷ್ಟಿಯಿಂದ ಅನಗತ್ಯ-ಅವೈಜ್ಞಾನಿಕ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುತ್ತಾ, ಮಕ್ಕಳ ನೈಜ ಕಲಿಕೆಗೆ ಅವಕಾಶ ನೀಡದೇ, ಅವರಲ್ಲಿನ ಕ್ರಿಯಾಶೀಲತೆಯೇ ಕುಸಿಯುವಂತೆ ಮಾಡುತ್ತಿರುವ ಇಂದಿನ ಪ್ರೌಢಶಿಕ್ಷಣ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಬೇಕಿದೆ. 'ಪರೀಕ್ಷೆಗಾಗಿ ಮಾತ್ರ ಕಲಿಕೆ' ಎಂಬ ಧೋರಣೆಯ ಬದಲಿಗೆ, 'ಜೀವನಕ್ಕಾಗಿ ಕಲಿಕೆ' ಎಂಬ ತತ್ವವನ್ನು ಒಳಗೊಂಡಿರುವ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕಿದೆ.

(ಶಿಕ್ಷಕರು, ಹವ್ಯಾಸಿ ಬರಹಗಾರರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಯಶಸ್ಸಿನ ದಿಕ್ಸೂಚಿ

ಕ್ಯಾಲೆಂಡರ್ ವರ್ಷ 2025ಕ್ಕೆ ಸ್ವಾಗತ ಕೋರುತ್ತಾ 'ವಿಶ್ವವಾಣಿ'ಯ ಮುಖಪುಟದಲ್ಲಿ ಪ್ರಕಟವಾದ ಎಸ್.ಷಡಕ್ಷರಿ ಅವರ '25 ಯಶಸ್ಸಿನ ಸೂತ್ರಗಳು' ಅತ್ಯಂತ ಪ್ರೇರಣಾದಾಯಿಯಾಗಿದ್ದು, ಓದುಗರಿಗೆ ಪರಿಣಾಮಕಾರಿ ಸ್ವಾಗತವನ್ನು ನೀಡುವಲ್ಲಿ ಯಶಸ್ವಿಯಾಗಿವೆ. ವ್ಯಕ್ತಿಯೊಬ್ಬ ತನ್ನ ಜೀವನದಲ್ಲಿ ಎದುರಿಸುವ ಒಂದಲ್ಲಾ ಒಂದು ಸವಾಲಿನ ಸನ್ನಿವೇಶದಲ್ಲಿ ಈ ಸೂತ್ರಗಳು ಖಂಡಿತವಾಗಿ ಜ್ಞಾನದ ಬೆಳಕನ್ನು ನೀಡುವಂಥವಾಗಿವೆ. ಹೀಗಾಗಿ ಇವುಗಳಲ್ಲಿ ಅಡಕವಾಗಿರುವುದು ಯಶಸ್ಸಿನ ಸೂತ್ರವಷ್ಟೇ ಅಲ್ಲ, ಒಟ್ಟಾರೆಯಾಗಿ ಅದು ಬದುಕಿನ ದಿಕ್ಸೂಚಿ ಎಂದೇ ಹೇಳಬಹುದು. ಇಂಥ ಅರ್ಥಪೂರ್ಣ ಮತ್ತು ವಿನೂತನ ಜ್ಞಾನದೀವಿಗೆಯನ್ನು ಸಮಸ್ತ ಓದುಗರಿಗೆ ತೆರೆದಿಡುವ ಮೂಲಕ ಹೊಸ ವರ್ಷದ ಶುಭಾಶಯ ತಿಳಿಸಿದ ವಿಶ್ವವಾಣಿ ಪತ್ರಿಕಾ ಬಳಗಕ್ಕೆ ಅನಂತ ನಮನಗಳು.

-ಸುರೇಂದ್ರ ಪೈ, ಭಟ್ಕಳ

ಶ್ಲಾಘನೀಯ ಕ್ರಮ

ದಾಣೆಗೆ ದೂರು ಕೊಡಲು ಬಂದ ಮಹಿಳೆಯ ಜತೆ ಅಸಭ್ಯವಾಗಿ ನಡೆದುಕೊಂಡ ಮಧುಗಿರಿಯ ಪೊಲೀಸ್ ಡಿವೈಎಸ್‌ಪಿ ಆ ಇಲಾಖೆಗೇ ಒಂದು ಕಳಂಕ; ಇದು, ಬೆಳೆ ಕಾಯಲು ನಿರ್ಮಿಸಿದ ಬೇಲಿಯೇ ಹೊಲವನ್ನು ಮೇಯಲು ಮುಂದಾಗುವಂಥ ನಿದರ್ಶನ. ಇಂಥ ವೇಳೆ, 'ಹರ ಕೊಲ್ಲಲ್ ಪರ ಕಾಯ್ವನೇ?' ಎಂಬ ಮಾತು ನೆನಪಾಗುತ್ತದೆ. ಈ ಸಂಗತಿ ಬಯಲಾಗುತ್ತಿದ್ದಂತೆ ಸದರಿ ಅಧಿಕಾರಿಯನ್ನು ಅಮಾನತು ಮಾಡಿ ಬಂಧಿಸಿದ್ದು ಶ್ಲಾಘನೀಯ ಬೆಳವಣಿಗೆ. ತಪ್ಪು ನಡೆಯೊಂದು ಬಹಿರಂಗವಾಗುತ್ತಲೇ ತನಿಖೆಯ ಹೆಸರಲ್ಲಿ ವಿಳಂಬ ಮಾಡಿ, ಆಪಾದಿತರಿಗೆ ರಾಜಕೀಯ ಮುಖಂಡರು ರಕ್ಷಣೆ ಒದಗಿಸುತ್ತಿದ್ದಾರೆ ಎನ್ನುವ ಊಹಾಪೋಹಗಳಿಗೂ ಈ ದಿಢೀರ್ ಕ್ರಮ ಕಡಿವಾಣ ಹಾಕಿದೆ. ಇಂಥ ಕ್ರಮಗಳು ಅಧಿಕಾರಿಶಾಹಿಗೆ ಎಚ್ಚರಿಕೆಯ ಗಂಟೆಯಾಗಬಲ್ಲವು. ತನ್ಮೂಲಕ ಅಧಿಕಾರಿ/ಸಿಬ್ಬಂದಿ ವರ್ಗದವರು ತಮ್ಮ ನಡತೆಯನ್ನು ಸುಧಾರಿಸಿಕೊಂಡು, ಮಾನವೀಯ ದೃಷ್ಟಿಯನ್ನು ಬೆಳೆಸಿಕೊಂಡು ಉತ್ತಮ ಸೇವೆ ನೀಡಲು ಮುಂದಾಗುವುದರಿಂದ, ಸರಕಾರದ ಬಗ್ಗೆ ಜನಸಾಮಾನ್ಯರಿಗೆ ಅಭಿಮಾನ ಮೂಡುತ್ತದೆ, ವಿಶ್ವಾಸ ಬೆಳೆಯುತ್ತದೆ.

-ಸತ್ಯಬೋಧ, ಬೆಂಗಳೂರು

ಸಾರಸ್ವತ ನಕ್ಷತ್ರ

ಕನ್ನಡ ಸಾಹಿತ್ಯದ ಆಗಸದಲ್ಲಿ ತಮ್ಮದೇ ಆದ ಪ್ರತಿಭೆಯಿಂದ ಸದಾ ಮಿನುಗುತ್ತಿದ್ದ ನಾ.ಡಿಸೋಜ ಎಂಬ ನಕ್ಷತ್ರ ನಮ್ಮನ್ನು ಅಗಲಿರುವುದು ನೋವಿನ ಸಂಗತಿ. ಪರಿಸರ ಕಾಳಜಿಯುಳ್ಳ ಮಹತ್ವದ ಕಥೆಗಾರ ಎನಿಸಿಕೊಂಡು, ತಮ್ಮೆಲ್ಲ ಕಥೆ-ಕಾದಂಬರಿಗಳ ಮೂಲಕ ಪರಿಸರ ಸಂರಕ್ಷಣೆಯ ಬಗ್ಗೆ ಅರಿವು ತುಂಬುತ್ತ ಬಂದ ಡಿಸೋಜ ಅವರು, ಮಕ್ಕಳ ಸಾಹಿತ್ಯಕ್ಕೂ ಅಪಾರ ಕೊಡುಗೆ ನೀಡಿದ ಸಾಧಕ. ಪರಿಸರ ನಾಶ, ಕ್ರೈಸ್ತ ಜನಾಂಗದ ಹಿನ್ನೆಲೆ, ಹಿಂದುಳಿದ ಬುಡಕಟ್ಟು ಜನಾಂಗದ ಚಿತ್ರಣ ಹೀಗೆ ವೈವಿಧ್ಯಮಯ ವಿಷಯಗಳನ್ನು ಒಳಗೊಂಡ ಇವರ ಕೃತಿಗಳು ಓದುಗರ ಮನಸೂರೆಗೊಂಡಿವೆ.

ಇವರ ಅನೇಕ ಸಾಹಿತ್ಯಿಕ ಪ್ರಸ್ತುತಿಗಳು ಚಲನಚಿತ್ರಗಳಾಗಿಯೂ ಯಶಸ್ವಿಯಾಗಿವೆ. ಸುರೇಶ್ ಹೆಬ್ಳೀಕರ್ ನಿರ್ದೇಶನದ 'ಕಾಡಿನ ಬೆಂಕಿ', ಗಿರೀಶ್ ಕಾಸರವಳ್ಳಿ ನಿರ್ದೇಶನದ 'ದ್ವೀಪ' ಇದಕ್ಕೆ ಒಂದೆರಡು ಉದಾಹರಣೆಗಳು. ಡಿಸೋಜರ ಸಾಕಷ್ಟು ಬರಹಗಳು ಶಾಲಾ-ಕಾಲೇಜಿನ ಪಠ್ಯಪುಸ್ತಕಗಳಲ್ಲಿ ಅಡಕಗೊಂಡು ವಿದ್ಯಾರ್ಥಿ ಸಮೂಹದಲ್ಲಿ ಅರಿವನ್ನು ತುಂಬಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗುಲ್ವಾಡಿ ವೆಂಕಟರಾವ್ ಪ್ರಶಸ್ತಿ ಸೇರಿದಂತೆ ಹಲವಾರು ಪುರಸ್ಕಾರಗಳು ಮತ್ತು ಗೌರವಗಳಿಗೆ ಪಾತ್ರರಾದ ಹೆಗ್ಗಳಿಗೆ ನಾ.ಡಿಸೋಜ ಅವರದ್ದು. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

-ರಾಸುಮ ಭಟ್, ಚಿಕ್ಕಮಗಳೂರು

ಜನರನ್ನು ಹೆದರಿಸದಿರಿ

ಮಹಾಮಾರಿ ಕೋವಿಡ್‌ನ ಕಹಿನೆನಪು ಮರೆಯಾಗುವ ಮುಂಚೆಯೇ, ಚೀನಾದಲ್ಲಿ 'ಎಚ್‌ಎಂಪಿವಿ' ವೈರಸ್ ಜನ್ಮತಳೆದು ಕಣ್ಣು ಮಿಟುಕಿಸುತ್ತಿರುವುದು ಆಘಾತಕಾರಿ ಸುದ್ದಿಯೇ ಹೌದು. ಈ ನಿಟ್ಟಿನಲ್ಲಿ ನಮ್ಮ ದೇಶದಲ್ಲೂ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಜನರೂ ಎಚ್ಚರ ವಹಿಸಬೇಕು ಎಂಬುದೂ ನಿಜವೇ. ಆದರೆ, 'ಇಲಿ ಬಂತು' ಎಂದರೆ 'ಹುಲಿಯೇ ಬಂತು' ಎನ್ನುವಷ್ಟರ ಮಟ್ಟಿಗೆ ಕೆಲವರು ಭಯವನ್ನು ಹುಟ್ಟಿಸುವುದಿದೆ; ನಮ್ಮ ಕೆಲ ದೃಶ್ಯ ಮಾಧ್ಯಮಗಳು ಕೋವಿಡ್‌ಗಿಂತ ಅತಿ ಭಯಂಕರ. ಇತರೆ ವಾಹಿನಿಗಳೊಂದಿಗೆ ಪೈಪೋಟಿಗೆ ಬಿದ್ದವರಂತೆ, ಈ ಹೊಸ ವೈರಸ್ ಕುರಿತಾಗಿ ಕಿಸುಬಾಯಿ ದಾಸರಂತೆ ದಿನವಿಡೀ ಹೇಳಿದ್ದನ್ನೇ ಹೇಳುತ್ತಾ, ಅವು ಜನರಲ್ಲಿ ಭಯ ಮೂಡಿಸುವುದು ಸರಿಯಲ್ಲ, ಇದು ಆರತಿಯ ದೀಪದಲ್ಲೂ ಬೀಡಿ ಹೊತ್ತಿಸಿಕೊಳ್ಳುವ, ಮೈಕಾಯಿಸಿಕೊಂಡು ಟಿಆರ್‌ಪಿ ಹೆಚ್ಚಿಸಿಕೊಳ್ಳುವ ಕಸರತ್ತು ಎನಿಸಿಕೊಳ್ಳುತ್ತದೆಯಷ್ಟೇ. ಇದರಿಂದಾಗಿ, ಪರದೇಶದಿಂದ ಭಾರತಕ್ಕೆ ಬರುವವರಿಗೆ ಮತ್ತು ಇಲ್ಲಿಂದ ಪರದೇಶಕ್ಕೆ ತೆರಳುವವರಿಗೂ ತೊಂದರೆಯಾಗುತ್ತದೆ. ಜನಜಾಗೃತಿಗೂ ಮತ್ತು ಅತಿರೇಕದ ಸಂಚಲನೆ ಸೃಷ್ಟಿಸುವುದಕ್ಕೂ ವ್ಯತ್ಯಾಸವಿದೆ ಎಂಬುದನ್ನು ಈ ವಾಹಿನಿಗಳು ಅರಿತು ಕಾರ್ಯನಿರ್ವಹಿಸಬೇಕು. ಇಲ್ಲವಾದಲ್ಲಿ, ಜನರು 'ದೂರದರ್ಶನ'ವನ್ನು ಮಾತ್ರವೇ ವೀಕ್ಷಿಸುವುದು ಅನಿವಾರ್ಯವಾಗುತ್ತದೆ.

-ಬೆಳ್ಳಿ ಚಂದ್ರಶೇಖರ ಶೆಟ್ಟಿ, ಬೆಂಗಳೂರು

ಅದೊಂದು ಸೋಜಿಗವೇ!

ವಿಶ್ವವಾಣಿ ಪತ್ರಿಕೆಯಲ್ಲಿ ಸುಮಾರು ಒಂದು ತಿಂಗಳಿನಿಂದ ಜಪಾನ್ ದೇಶದ ವಿವಿಧ ಆಯಾಮಗಳ ಬಗೆಗಿನ ಲೇಖನಗಳದ್ದೇ ಸುಗ್ಗಿ! ಸಂಪಾದಕರ ಸದ್ಯಶೋಧನೆ ಮತ್ತು ನೂರೆಂಟು ವಿಶ್ವ ಅಂಕಣಗಳಲ್ಲಿ ಬರೀ ಜಪಾನ್ ಮತ್ತು ಜಪಾನಿಯರ ಕುರಿತಾದ ಮಾತೇ. ಪ್ರತಿ ಬರಹವೂ ವಿಶಿಷ್ಟ, ವಿನೂತನ ಮತ್ತು ಅನನ್ಯ.

ಸೋಜಿಗ ಹುಟ್ಟಿಸುವ, ಬೆರಗುಗೊಳಿಸುವ ಮತ್ತು ಒಂದು ರೀತಿಯಲ್ಲಿ ಸಣ್ಣ 'ಸಾಂಸ್ಕೃತಿಕ ಆಘಾತ' ಕೊಡುವ ಜಪಾನಿನ ಜನರ ಗುಣ-ವಿಶೇಷಗಳನ್ನು ಅರಿಯುತ್ತಾ ಹೋದಂತೆ ನನ್ನಲ್ಲಿ ಆ ದೇಶದ ಬಗ್ಗೆ ಪ್ರೀತಿ ಮತ್ತು ಗೌರವ ಹುಟ್ಟತೊಡಗಿವೆ. ಅಲ್ಲಿನ ಜನರು ನಮ್ಮಂತೆ ಸಾಮಾನ್ಯಜನರಾ ಅಥವಾ ದೇವಲೋಕದ ಜನರಾ? ಎಂದು ನಾವು ಪ್ರಶ್ನಿಸಿಕೊಳ್ಳುವಷ್ಟರ ಮಟ್ಟಿಗೆ ಜಪಾನಿಯರು ಆಪ್ಯಾಯಮಾನರೆನಿಸುತ್ತಿದ್ದಾರೆ. ಸ್ವಚ್ಛತಾ ಪ್ರಜ್ಞೆ, ಇತರರನ್ನು ಗೌರವಿಸುವ ಪರಿ, ಸಾರ್ವಜನಿಕವಾಗಿ ವ್ಯವಹರಿಸುವ ರೀತಿ, ನಿಯಮಗಳನ್ನು ವ್ರತದಂತೆ ಪಾಲಿಸುವ ಶಿಸ್ತು, ತಮಗಿಂತಲೂ ಮೊದಲು ತಮ್ಮ ಸುತ್ತಲಿನವರ ಅನುಕೂಲಕ್ಕೆ ಆದ್ಯತೆ ನೀಡುವ ಮನೋಭಾವ- ಹೀಗೆ ಏನುಂಟು ಏನಿಲ್ಲ ಜಪಾನಿಯರ ವ್ಯಕ್ತಿತ್ವದಲ್ಲಿ! ಅವರ ಬಗ್ಗೆ ಓದಿದಷ್ಟೂ, ಜೀವನದಲ್ಲಿ ಒಮ್ಮೆಯಾದರೂ ಜಪಾನ್ ದೇಶವನ್ನು ನೋಡಿ ಧನ್ಯಳಾಗಬೇಕೆಂಬ ಆಸೆ ಮೂಡುತ್ತಿರುವುದಂತೂ ಸುಳ್ಳಲ್ಲ. ನಾನೇಕೆ ಜಪಾನ್‌ನಲ್ಲಿ ಹುಟ್ಟಲಿಲ್ಲ ಎಂದೂ ಮನಸ್ಸು ಕೇಳುತ್ತಿದೆ. ನಿಜ, ಜಪಾನ್ ಒಂದು ಸೋಜಿಗವೇ!

-ಸುಮನಾ ರಾವ್, ದುಬೈ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- ವಿ.ಹೇಮಂತಕುಮಾರ, ಬೆಂಗಳೂರು
  ಭಟ್ರೇ, ಜಿಲ್ಲೆಯನ್ನು ಆಳುವವಳು ಜಿರಲೆಗೆ ಹೆದರುತ್ತಾಳಲ್ಲ?
  - **ಜಿರಲೆಗೂ ಹೆದರದಿದ್ದರೆ ಗಂಡುಬೀರಿ ಅಂತ ಅಂದುಕೊಂಡಾರು ಎಂಬ ಭಯ!**
- ಎಲ್.ವಿ.ಸತೀಶ, ಮೈಸೂರು
  ಭಟ್ರೇ, ದೆವ್ವಗಳು ಹುಣಸೆ ಮರದಲ್ಲಿಯೇ ನೇತಾಡಲು ಕಾರಣ?
  - **ಆಲದ ಮರದಲ್ಲಿ ನೇತಾಡಲು ಅವುಗಳಿಗೆ ಅಪ್ಪ ಇಲ್ಲವಲ್ಲ?!**
- ಮಹಾನಂದ ಪಾಟೀಲ, (ಇಮೇಲ್ ಮೂಲಕ)
  ಭಟ್ರೇ, ನಿಮ್ಮ ಶಿಷ್ಯ 'ನನ್ನಂಥ ಯಂಗ್ ಬ್ಲಡ್ ರಾಜ್ಯಕ್ಕೆ ಬರಬೇಕಿದೆ' ಎಂದು ಹೇಳಿದ್ದಾನಲ್ಲ?
  - **ಇನ್ನೂ ಬ್ಲಡ್ ಬಗ್ಗೆ ಹೇಳುತ್ತಿರುವುದು ಎಷ್ಟೋ ವಾಸಿ!**
- ವೀರೇಶ ಕಮತಗಿ, ಅಡಗೂರು
  ಭಟ್ರೇ, ನಿನ್ನ ತಪ್ಪುಗಳನ್ನು ಅಪ್ಪಿಕೊಳ್ಳುವ ಮನಸ್ಥಿತಿ ಬೆಳೆಸಿಕೋ ಎಂದು ಹೆಂಡತಿಗೆ ಉಪದೇಶ ಮಾಡಲಾ?
  - **ಆಗ ಆಕೆ ನಿನ್ನನ್ನೇ ಅಪ್ಪಿಕೊಳ್ಳುವ ಅಪಾಯವಿದೆ!**
- ಅರುಣಾಚಲ ಸಿ.ಪಿ., (ಇಮೇಲ್ ಮೂಲಕ)
  ಭಟ್ರೇ, ನಿಮ್ಮ ದೃಷ್ಟಿಯಲ್ಲಿ ಗಂಡಂದಿರ ದೊಡ್ಡ ಸಾಧನೆ ಏನು?
  - **ತನ್ನನ್ನು ಮದುವೆಯಾಗಲು ಹೆಂಡತಿಯನ್ನು ಒಪ್ಪಿಸಿದ್ದು!**
- ರಾಜೀವ ಹುಣಸಿ, ಹುಬ್ಬಳ್ಳಿ
  ಭಟ್ರೇ, ಹೆಂಡತಿ ಹೇಳಿದ್ದಕ್ಕೆ ತಲೆ ಅಲ್ಲಾಡಿಸುವ ಲಾಭವೇನು?
  - **ಆಗ ಜೀವನದಲ್ಲಿ ನೆಮ್ಮದಿಯಿಂದ ಇರಬಹುದು!**
- ಸಂದೇಶ, ಬೆಂಗಳೂರು
- ಭಟ್ರೇ, ನಮ್ಮ ಪಾಸ್‌ವರ್ಡ್ ಹೇಗಿರಬೇಕು?
  - **ಅದು ನಮ್ಮ ಟೂತ್‌ಬ್ರಷ್ ಥರ ಇರಬೇಕು, ಬೇರೆ ಯಾರೂ ಅದನ್ನು ಬಳಸಬಾರದು ಮತ್ತು ಪ್ರತಿ ನಾಲ್ಕು ತಿಂಗಳಿಗೊಮ್ಮೆ ಬದಲಿಸಬೇಕು!**
- ಲತಾ ರಾಮಚಂದ್ರ, ಮೈಸೂರು
  ಭಟ್ರೇ, ಮದುವೆ ಅಂದ್ರೆ ವರ್ಕ್‌ಶಾಪ್ ಅನ್ನೋದನ್ನು ನೀವು ಒಪ್ಪುತ್ತೀರಾ?
  - **ಹೂಂ.. ಗಂಡ ವರ್ಕ್ ಮಾಡುತ್ತಿರಬೇಕು ಮತ್ತು ಹೆಂಡತಿ ಶಾಪ್ ಮಾಡುತ್ತಿರಬೇಕು !**
- ವೇಣುಗೋಪಾಲ ಕಂಚಿತೋಟ, ಕಡೂರು
  ಭಟ್ರೇ, ರಾಜಕಾರಣಿಗಳು ದೇವರ ಮೇಲೆ ಆಣೆ ಹಾಕಬಹುದಾ?
  - **ಇನ್ನು ದೇವರಿಗೆ ಏನು ಕಾದಿದೆಯೋ?!**

ಇಲ್ಲ ಎನ್ನುವ ಕಲೆಯನ್ನು ಕಲಿಯಬೇಕು!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಯೋಚನೆಗಳು ಮನಸ್ಸಿನಲ್ಲಿ ಮಿಂಚಿನಂತೆ ಹುಟ್ಟಿ ಮಾಯವಾಗಿ ಬಿಡುತ್ತವೆ. ಹೌದು, ಬದುಕಿನಲ್ಲಿ ನಿತ್ಯವೂ ಸಾವಿರಾರು ಆಲೋಚನೆಗಳು ಬರುತ್ತವೆ. ಅವುಗಳಲ್ಲಿ ಒಂದು ಪ್ರತಿಶತವಾದರೂ ಕಾರ್ಯರೂಪಕ್ಕೆ ತರಬಲ್ಲ, ಬದುಕಿನ ದಾರಿಯನ್ನು ಬದಲಿಸಬಲ್ಲ ಯೋಚನೆಗಳಾಗಿರುತ್ತವೆ. ಹೊಸ ಹೊಸ ಆಲೋಚನೆಗಳು ನಮ್ಮ ಮಿದುಳಿನಲ್ಲಿ ಸ್ಫುರಿಸುತ್ತಲೇ ಇರುವ ಕಾರಣ, ನಿನ್ನೆಯ ಆಲೋಚನೆಗಳು ಸರಿದುಹೋಗುತ್ತವೆ. ಹೀಗಾಗಿ ಆ ಕ್ಷಣದಲ್ಲಿ ಮೂಡಿದ, ನಮಗೆ ಅಚ್ಚರಿಯೆನ್ನಿಸಿದ ಕೆಲ ಆಲೋಚನೆಗಳನ್ನು ನಾವು ದಾಖಲಿಸಿಡಬೇಕಾದ ಅವಶ್ಯಕತೆಯಿದೆ. ನೆನಪಿರಲಿ – ಬದುಕನ್ನು ಬದಲಿಸಲು ಸಾವಿರ ಯೋಚನೆ ಬೇಕಿಲ್ಲ, ಕೇವಲ ಒಂದು ಸಾಕು.

ನಮ್ಮಲ್ಲಿ ಬಹುತೇಕರಿಗೆ ತಮ್ಮ ಜ್ಞಾಪಕಶಕ್ತಿಯ ಮೇಲೆ ಅಪಾರ ನಂಬಿಕೆ; ಆದರೆ ಒಂದು ದಿನದಲ್ಲಿ ಬರುವ ಆಲೋಚನೆಗಳು, ವಾರ–ತಿಂಗಳು– ವರ್ಷದಲ್ಲಿ ಬಂದುಹೋಗುವ ಆಲೋಚನೆಗಳ ಪಟ್ಟಿ ಮಾಡುತ್ತಾ ಹೋದರೆ ಅವು 50ರಿಂದ 60 ಸಾವಿರವಾಗುತ್ತವೆ. ಅವೆಲ್ಲವೂ ಉತ್ತಮವೆಂದೂ, ಬರೆದಿಡಬೇಕಾದವುಗಳೆಂದೂ ಹೇಳುತ್ತಿಲ್ಲ, ಆದರೆ ಅವುಗಳಲ್ಲಿ ಮುಖ್ಯವಾದವು ಕೂಡ ಇತರ ಆಲೋಚನೆಗಳ ಜತೆಗೆ ಮರೆಯಾಗುತ್ತವೆ. ಮರೆಯುವುದು ಮನುಷ್ಯನ ಸಹಜಗುಣ. ಹೀಗಾಗಿ, ನಮಗೆ

ಒಂದಷ್ಟು ಅಚ್ಚರಿ ಹುಟ್ಟಿಸಿದ ಯೋಚನೆಗಳನ್ನು ಬರೆದಿಡಬೇಕು. ಯಾವ ಪರಿಸ್ಥಿತಿಯಲ್ಲಿ ಮತ್ತು ಯಾವ ಸನ್ನಿವೇಶಕ್ಕೆ ಉಪಯೋಗಕ್ಕೆ ಬರುತ್ತದೆ ಎನ್ನುವುದರ ಆಧಾರದ ಮೇಲೆ ಹುಟ್ಟಿದ ಆ ಆಲೋಚನೆಯನ್ನು ಹಾಗೇ ಬರೆದಿಡಬೇಕು. ಮುಂದೊಂದು ದಿನ ಅದನ್ನು ನೋಡಿದಾಗ ಅದರ ಹುಟ್ಟು ಇತ್ಯಾದಿಗಳ ನೆನಪಾಗುತ್ತದೆ. ನಮ್ಮ ಕನಸುಗಳನ್ನು ಸಾಕಾರಗೊಳಿಸಲು ಮೊದಲ ಹೆಜ್ಜೆಯೆಂದರೆ ಯೋಚನೆಗಳನ್ನು, ಕನಸುಗಳನ್ನು ದಾಖಲಿಸಿಡುವುದು.

People with clear, written goals, accomplish far more in a shorter period of time than people without them could ever imagine ಎನ್ನುತ್ತಾರೆ ಕೆನಡಿಯನ್ ಅಮೆರಿಕನ್ ಮೋಟಿವೇಶನಲ್ ಬರಹಗಾರ ಬ್ರಿಯಾನ್ ಟ್ರೇಸಿ. ಅಂದರೆ, ಯಾರೆಲ್ಲಾ ತಮ್ಮ ಕನಸುಗಳನ್ನು, ಯೋಚನೆಗಳನ್ನು, ಗುರಿಯನ್ನು ಬರೆದಿಟ್ಟುಕೊಳ್ಳುತ್ತಾರೋ ಅವರು ಅಲ್ಪಾವಧಿಯಲ್ಲಿ ಸಾಧಿಸುವ ಕೆಲಸವನ್ನು ಬೇರೆಯವರು ಊಹೆ ಕೂಡ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದರ್ಥ. ನಮಗೇನು ಬೇಕು ಎನ್ನುವುದನ್ನು ಬರೆದಿಟ್ಟುಕೊಳ್ಳುವುದು ಅತಿಮುಖ್ಯ.

ಹೀಗೆ ನಮ್ಮ ಯೋಚನೆ, ಗುರಿಗಳನ್ನು ಬರೆದಿಟ್ಟುಕೊಳ್ಳುವುದು ಮುಖ್ಯ ಎನ್ನುವುದಕ್ಕೆ ಮುಂದೆ ನೀಡಲಾಗಿರುವ ಕಾರಣಗಳು ಇನ್ನಷ್ಟು ಪುಷ್ಟಿ ನೀಡುತ್ತವೆ:

- ನಿಮ್ಮಲ್ಲಿ ಬಂದಿರಬಹುದಾದ 50–60 ಸಾವಿರ ಆಲೋಚನೆಗಳಲ್ಲಿ ಕೆಲವೇ ಕೆಲವು ಬರವಣಿಗೆಯ ರೂಪದಲ್ಲಿವೆ ಎಂದರೆ, ಅವು ಬಹಳ ಮುಖ್ಯವಾದವು ಎನ್ನುವುದು ಎಷ್ಟೇ ಸಮಯದ ನಂತರ ಕೂಡ ಅದನ್ನು ಅವಲೋಕಿಸಿದಾಗ ಗೊತ್ತಾಗುತ್ತದೆ.
- ಹೀಗೆ ಬರೆದಿಟ್ಟುಕೊಂಡ ಚಿಂತನೆಗಳಲ್ಲಿ ಬದುಕನ್ನು ಬದಲಿಸಬಲ್ಲ ಶಕ್ತಿಯಿದೆ ಎನ್ನುವ ನಂಬಿಕೆಯು ಅದನ್ನು ಬರೆಯುವಾಗ ನಿಮ್ಮಲ್ಲಿತ್ತು ಎನ್ನುವುದು ಗೊತ್ತಾಗುತ್ತದೆ. ಇದರರ್ಥ, ನಿಜಕ್ಕೂ ಅವುಗಳನ್ನು ಕಾರ್ಯರೂಪಕ್ಕೆ ತಂದರೆ ಬದುಕು ಬದಲಾಗಬಲ್ಲದು.
- ಹೀಗೆ ಬರೆದಿಟ್ಟಿರುವ ಆಲೋಚನೆಗಳನ್ನು ಒಂದಷ್ಟು ಸಮಯದ ನಂತರ ಅವಲೋಕಿಸುವುದರಿಂದ, ಅವುಗಳಲ್ಲಿ ಯಾವುದು ಉತ್ತಮ ಎನ್ನುವುದನ್ನು ನಿರ್ಧರಿಸಬಹುದು.
- ಮನಸ್ಸಿನಲ್ಲಿ ಆಲೋಚನೆಗಳು ಬದಲಾಗುತ್ತಿರುತ್ತವೆ; ಬರೆದಿಟ್ಟ ಆಲೋಚನೆಗಳು ನಮ್ಮ ಗುರಿಯ ಬಗ್ಗೆ ಪದೇಪದೆ ನಮ್ಮನ್ನು ಎಚ್ಚರಿಸುತ್ತವೆ.
- ನಾವು ಆಯ್ಕೆಮಾಡಿಕೊಂಡ ಗುರಿ, ಆಲೋಚನೆಯ ಮೇಲೆ ಪೂರ್ಣಪ್ರಮಾಣದ ಗಮನ ಹರಿಸಲು ಕೂಡ ಇದು ಸಹಾಯಕ.

'ಹತ್ತು ಬಾರಿ ಓದುವುದಕ್ಕಿಂತ ಒಂದು ಬಾರಿ ಬರೆಯುವುದು ಮೇಲು' ಎನ್ನುವ ಮಾತನ್ನು ನಾವೆಲ್ಲಾ ಚಿಕ್ಕವರಿದ್ದಾಗ ಕೇಳಿಕೊಂಡು ಬೆಳೆದಿದ್ದೇವೆ, ಅಲ್ಲವೇ? ಆ ಸೂತ್ರ ಇಲ್ಲಿಯೂ ಲಾಗೂ ಆಗುತ್ತದೆ. ಮನಸ್ಸಿನ ಭಾವನೆಯನ್ನು, ಚಿಂತನೆಯನ್ನು ಬರೆದಿಡುವುದರಿಂದ ಅದು ನಮ್ಮ ಸುಪ್ತಮನಸ್ಸಿನಲ್ಲಿ ದಾಖಲಾಗುತ್ತದೆ. ಮೇಲ್ನೋಟಕ್ಕೆ ನಾವು ಕೇವಲ ಕಾಗದದ ಮೇಲೆ ಬರೆದಿದ್ದೇವೆ ಅನ್ನಿಸುತ್ತದೆ, ಆದರೆ ನಾವು ಅದನ್ನು ನಮ್ಮ ಮನಸ್ಸಿನ ಆಳಕ್ಕೆ ಇಳಿಸಿರುತ್ತೇವೆ. ಹೀಗಾಗಿ ಬರೆಯಬೇಕು, ಬರೆದದ್ದು ಉಳಿದುಕೊಳ್ಳುತ್ತದೆ.

A dream written down with a date becomes a GOAL ಎನ್ನುವ ಮಾತಿದೆ. ನಾವು ಕೇವಲ ಬರೆದಿಟ್ಟರೆ ಸಾಲದು, ಅದನ್ನು ಎಷ್ಟು ದಿನದಲ್ಲಿ, ತಿಂಗಳಲ್ಲಿ ಅಥವಾ ವರ್ಷದಲ್ಲಿ ಸಾಕಾರಗೊಳಿಸುವ ಇರಾದೆಯಿದೆ ಎಂಬುದನ್ನೂ ಬರೆದಿಟ್ಟುಕೊಳ್ಳಬೇಕಾಗುತ್ತದೆ. ಹೀಗೆ ನಮಗೆ ನಾವು ಡೆಡ್‌ಲೈನ್ ಹಾಕಿಕೊಳ್ಳದಿದ್ದರೆ, ನಮ್ಮ ಕನಸುಗಳು ಕೇವಲ ಕನಸುಗಳಾಗಿಯೇ ಉಳಿದುಕೊಳ್ಳುತ್ತವೆ. ನಾವು ಎಷ್ಟೇ ದೊಡ್ಡ ಕನಸು ಕಾಣಲಿ ಅವೆಲ್ಲವೂ ಸಾಧ್ಯವಾಗುತ್ತವೆ. ದೊಡ್ಡ ಕನಸುಗಳನ್ನು ಸಣ್ಣ ಪುಟ್ಟ ಕನಸುಗಳಾಗಿ, ಸಾಧಿಸಲು ಅನುಕೂಲವಾಗುವಂತೆ ವಿಭಜಿಸಿಕೊಳ್ಳಬೇಕು. ಆಗ ಎಲ್ಲವೂ ಸುಲಭವಾಗುತ್ತವೆ. ಉದಾಹರಣೆಗೆ, ಮುಂದಿನ 10 ವರ್ಷದಲ್ಲಿ ಏನಾಗಿರಬೇಕು ಎನ್ನುವುದು ದೊಡ್ಡ ಕನಸು, 10 ವರ್ಷದಲ್ಲಿ ಆಗುವ ಬದಲಾವಣೆಯನ್ನು ನಾವು ಇಂದೇ ಊಹಿಸಲು ಕೂಡ ಅಸಾಧ್ಯ. ಹೀಗಾಗಿ ಮುಖ್ಯ ಗುರಿಯನ್ನು ಇಟ್ಟುಕೊಂಡು ವಾರ್ಷಿಕ ಯೋಜನೆಗಳನ್ನು ಹಾಕಿಕೊಳ್ಳಬೇಕು. ಅವುಗಳನ್ನು ಮಾಸಿಕ ಯೋಜನೆಗಳ ಅಡಿಯಲ್ಲಿ ಸಾಕಾರಗೊಳಿಸುತ್ತ ಹೋಗಬೇಕು. ಆಗ ದಶಕದಲ್ಲಿ ಏನಾಗಬೇಕು ಎಂದು ನಾವು ಅಂದು ಕೊಂಡಿರುತ್ತೇವೋ ಅದು ಖಂಡಿತ ಆಗಿರುತ್ತದೆ.

ಬರೆಯುವುದು ಉತ್ತಮ ಅಭ್ಯಾಸ, ನಮ್ಮ ಗುರಿಗಳನ್ನು ಸರಳವಾಗಿ ಬರೆದಿಟ್ಟುಕೊಳ್ಳಬೇಕು. ದೀರ್ಘಕಾಲದ ಗುರಿಗಳನ್ನು, ಸಾಧಿಸಲು ಸಾಧ್ಯವಾಗುವಂಥ ಸಣ್ಣಪುಟ್ಟ ಅಲ್ಪಾವಧಿ ಗುರಿಗಳನ್ನಾಗಿ ಮಾರ್ಪಡಿಸಿ ಬರೆದಿಟ್ಟುಕೊಳ್ಳಬೇಕು. ಗುರಿಗಳ ಪಟ್ಟಿಯನ್ನು ನಿತ್ಯವೂ ನೋಡುತ್ತಿರಬೇಕು. ನಾವು ಸದಾ ಏನನ್ನು ಧ್ಯಾನಿಸುತ್ತೇವೋ ಅದೇ ಆಗುತ್ತೇವೆ. ಬರೆದದ್ದು ಹಾಳೆಯ ಮೇಲಾದರೂ ಪರಿಣಾಮ ಆಗುವುದು ಮನಸ್ಸಿನಲ್ಲಿ!

***

ಮನುಷ್ಯ ಸಂಘಜೀವಿ, ಆತ ಒಂಟಿ ಇರಲಾರ. ಕೊನೇಪಕ್ಷ ಕಿತ್ತಾಡಲಾದರೂ ಜನ ಬೇಕಲ್ಲ! ಹೀಗಾಗಿ ಅವನು ಸಂಘಜೀವಿ. ಈ ರೀತಿ ಸಮುದಾಯದಲ್ಲಿ ಬದುಕುವುದನ್ನು ಮನುಷ್ಯ ಬಹಳ ಬೇಗ ಕಲಿತ, ಆದರೆ ಸಹಜೀವಿಗಳೊಂದಿಗೆ ವ್ಯವಹರಿಸುವ ರೀತಿಯನ್ನು ಇನ್ನೂ ಕಲಿಯುತ್ತಲೇ ಇದ್ದಾನೆ, ಕಲಿಯುವ ಹಂತದಲ್ಲಿ ಎಡವುತ್ತಲೇ ಇದ್ದಾನೆ. ತನ್ನ ಬಹುತೇಕ ಸಮಸ್ಯೆಗಳಿಗೆ ಆತನ ಈ ಗುಣವೇ ಕಾರಣ. ಕೈಲಾಗದಕ್ಕೆ ಒಪ್ಪಿಕೊಳ್ಳುವುದು, ದಾಕ್ಷಿಣ್ಯಕ್ಕೆ ಕಟ್ಟುಬಿದ್ದು, ಅವರಿವರು ಏನಂದುಕೊಂಡಾರು ಎನ್ನುವ ಭಯದಿಂದ, ಮುಕ್ಕಾಲು ಪಾಲು ತನಗಿಷ್ಟವಿಲ್ಲದಿದ್ದರೂ 'ನೋ', 'ಸಾಧ್ಯವಿಲ್ಲ' ಎನ್ನುವ ಕಡೆ, 'ಯಸ್', 'ಆಗಲಿ' ಎನ್ನುವ ಮಾತುಗಳನ್ನು ಆಡುತ್ತಾನೆ. ಇದು ಎಂದಿಗೂ ನೋವು ಕೊಡುತ್ತದೆ. 'ಸಾಧ್ಯವಿಲ್ಲ', 'ಬೇಡ', 'ನೋ', 'ನನ್ನ ಕೈಲಿ ಆಗುವುದಿಲ್ಲ' ಎನ್ನುವ ಋಣಾತ್ಮಕ ಮಾತುಗಳನ್ನು ಆಡುವಾಗ ಬಹಳ ಎಚ್ಚರಿಕೆಯನ್ನು ವಹಿಸಬೇಕು. ನಾವು ಇಂಥ ಮಾತುಗಳನ್ನು ಯಾರಿಗೆ ಹೇಳುತ್ತೇವೋ, ಅವರಿಗೆ ಯಾವುದೇ ರೀತಿಯ ನೋವು ಆಗದಂತೆ ಈ ಮಾತುಗಳನ್ನು ಹೇಳಬೇಕಾಗುತ್ತದೆ. 'ಇಲ್ಲ, ಕ್ಷಮೆಯಿರಲಿ' ಎನ್ನುವ ಪದಗುಚ್ಛವನ್ನು ನಮ್ಮದಾಗಿಸಿಕೊಳ್ಳಬೇಕಿದೆ. ಇಲ್ಲವೆನ್ನುವುದನ್ನು ಸರಿಯಾಗಿ ಹೇಳುವುದು ಒಂದು ಕಲೆ, ಆ ಕಲೆಯನ್ನು ನಾವೆಲ್ಲರೂ ಕಲಿಯಬೇಕಿದೆ.

"I don't know the key to success, but the key to failure is trying to please everybody" ಎಂದಿದ್ದಾರೆ ಆಫ್ರಿಕನ್ ಅಮೆರಿಕನ್ ನಟ, ಕಾಮಿಡಿಯನ್ ಬಿಲ್ ಕೊಸ್ಬೈ. ಅಂದರೆ, 'ನನಗೆ ಯಶಸ್ಸಿನ ಕೀಲಿಕೈ ಎಲ್ಲಿದೆ ಎನ್ನುವುದು ಗೊತ್ತಿಲ್ಲ, ಆದರೆ ಸೋಲಿನ ಮೂಲವೆಲ್ಲಿದೆ ಎನ್ನುವುದು ಚೆನ್ನಾಗಿ ಗೊತ್ತಿದೆ; ಎಲ್ಲರನ್ನೂ ಮೆಚ್ಚಿಸಬೇಕು ಎನ್ನುವುದು ಸೋಲಿಗೆ ಕಾರಣ' ಎನ್ನುತ್ತಾರೆ. ಕೆಲವೊಮ್ಮೆ ನಾವು, 'ಕ್ಷಮಿಸಿ, ಸಾಧ್ಯವಿಲ್ಲ' ಎನ್ನುವ ಮಾತನ್ನು ಹೇಳುವುದರಿಂದ, ಒಂದು ವರ್ಗದ ಜನರ ಮನಸ್ಸಿನಲ್ಲಿ ನಾವು ಕೆಟ್ಟವರಾಗಬಹುದು. ಅದು ಸಹಜ. 'ಜನರನ್ನು ಮೆಚ್ಚಿಸಲು ಜನಾರ್ದನನಿಂದಲೂ (ಅಂದರೆ ಭಗವಂತನಿಂದಲೂ) ಸಾಧ್ಯವಿಲ್ಲ' ಎನ್ನುವ ಮಾತಿದೆ. ಹೀಗಾಗಿ ಯಾವಾಗ 'ನೋ' ಎನ್ನಬೇಕೋ ಆ ಸಂದರ್ಭದಲ್ಲಿ 'ನೋ' ಹೇಳುವುದು ಒಳ್ಳೆಯದು.

ನೀವು ಯಾವಾಗ ಕೆಲವು ವಿಷಯಗಳಿಗೆ 'ನೋ' ಎನ್ನುತ್ತೀರಿ, ಆಗ ನಿಮಗೆ ನೀವು 'ಯಸ್' ಎಂದು ಹೇಳಿಕೊಳ್ಳುತ್ತಿದ್ದೀರಿ ಎಂದರ್ಥ. ಗಮನಿಸಿ ನೋಡಿ, 'ನೋ' ಎನ್ನುವ ಕಡೆ 'ಯಸ್' ಎಂದರೆ ಮೊದಲಿಗೆ ನಿಮಗಿಷ್ಟವಿಲ್ಲದ ಕೆಲಸ ಮಾಡಬೇಕಾದ ಸಂದರ್ಭ ಸೃಷ್ಟಿಯಾಗುತ್ತದೆ. ನಿಮ್ಮಿಂದ 'ಯಸ್' ಪಡೆದುಕೊಂಡವರು ಕೂಡ ನಿಮ್ಮ ಶಕ್ತಿಯ ಬಳಕೆಯನ್ನು ಪೂರ್ಣವಾಗಿ ಮಾಡಿಕೊಳ್ಳಲಾಗುವುದಿಲ್ಲ. ಹೀಗಾಗಿ ಫಲಿತಾಂಶ ಎಂದಿಗೂ ಪರಿಪೂರ್ಣವಾಗಿರುವುದಿಲ್ಲ, ಇಬ್ಬರಿಗೂ ಇದರಿಂದ ಸಮಯ ವ್ಯರ್ಥ.

ಅದು ನಾನು ಸ್ಪೇನ್ ದೇಶದ ಬಾರ್ಸಿಲೋನಾ ನಗರದಲ್ಲಿ ಕೆಲಸ ಮಾಡುತ್ತಿದ್ದ ಮೊದಲ ದಿನಗಳು. ಅಲ್ಲಿನ ಜನ, ಸಂಸ್ಕೃತಿಯ ಜತೆಗೆ ಹೊಂದಿಕೊಳ್ಳಬೇಕಾದ ಅವಶ್ಯಕತೆ ನನಗೆ ಹೆಚ್ಚಾಗಿತ್ತು. ಅದನ್ನು ಉತ್ತಮ ರೀತಿಯಲ್ಲಿ ನಿಭಾಯಿಸಬಹುದಿತ್ತು. ಆಗ ನನಗಿನ್ನೂ ಕೇವಲ 23ರ ಹರೆಯ. ಆಗಿನ್ನೂ 'ನೋ' ಹೇಳುವುದನ್ನು ಕಲಿತಿರಲಿಲ್ಲ. ಸಹೋದ್ಯೋಗಿಗಳು ಕೇಳುವ ಎಲ್ಲಕ್ಕೂ ನನ್ನ ಉತ್ತರ 'ಯಸ್' ಆಗಿರುತ್ತಿತ್ತು. ಇದರಿಂದ ನನ್ನ ಮೇಲೆ ಒತ್ತಡ ಹೆಚ್ಚಾಗುತ್ತಾ ಹೋಯಿತು. ಕೊನೆಗೊಂದು ದಿನ, 'ನೋ' ಎನ್ನುವುದನ್ನು ಕಲಿಯದಿದ್ದರೆ ನನಗೇ ನಷ್ಟ ಎನ್ನುವುದು ತಿಳಿಯಿತು. ಏಕೆಂದರೆ, ಎಲ್ಲರಿಗೂ 'ಯಸ್' ಹೇಳುತ್ತಾ ಅದನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲ; ಹೀಗಾಗಿ ಒಂದಲ್ಲಾ ಒಂದು ದಿನ ಅವರು ಬೇಸರ ಮಾಡಿಕೊಳ್ಳುವುದು ಸಹಜ. ಆ ದಿನ ಬೇಗ ಬಂದೇ ಬರುತ್ತದೆ. ಹೀಗಾಗಿ ನಯವಾಗಿ, ''ಸಾರಿ, ಇದು ನನ್ನಿಂದ ಸಾಧ್ಯವಿಲ್ಲ'' ಎನ್ನುವುದನ್ನು ಕಲಿತೆ. ನನ್ನ ಅಚ್ಚರಿಗೆ, ಅವರಾರೂ ನನ್ನ ಬಗ್ಗೆ ಬೇಸರ ಮಾಡಿಕೊಳ್ಳಲಿಲ್ಲ, ಬದಲಿಗೆ ನನ್ನ ನಿಲುವನ್ನು ಒಪ್ಪಿಕೊಂಡರು. ಇದರಿಂದ ಕಲಿತ ಪಾಠವೆಂದರೆ, 'ಅವರಿವರು ಏನಂದುಕೊಂಡಾರು?' ಎನ್ನುವ ಊಹಾಲೋಕದಲ್ಲಿ ನಾವು ಇರುತ್ತೇವೆ. ಯಾರಿಗೂ ನಮ್ಮ ಬಗ್ಗೆ ಹೆಚ್ಚು ಮಾತನಾಡುತ್ತ ಕುಳಿತುಕೊಳ್ಳಲು ಸಮಯವಿಲ್ಲ. ಇನ್ನೊಂದು ವಿಷಯ, ವ್ಯಕ್ತಿ ಸಿಕ್ಕ ನಂತರ ಅಲ್ಲಿಗೆ ಶಿಫ್ಟ್ ಆಗಿಬಿಡುತ್ತಾರೆ. ಹೀಗಾಗಿ ನಮಗನ್ನಿಸಿದ್ದನ್ನು ಹೇಳಲು ಸಂಕೋಚ ಎಂದಿಗೂ ಅಡ್ಡಿ ಬರಬಾರದು. ನಾವು ಇಲ್ಲಿರುವುದು ನಮ್ಮ ಬದುಕನ್ನು ಬದುಕಲು, ಬೇರೆಯವರ ಬದುಕನ್ನು ಬದುಕಲು ಅಲ್ಲ. 'ಗುಂಪಿನಲ್ಲಿ ಗೋವಿಂದ' ಎನ್ನುವ ಬುದ್ಧಿಯಿಂದ ನಾವು ಹೊರಬರಬೇಕು. ನಮ್ಮತನವನ್ನು ಬೆಳೆಸಿಕೊಳ್ಳಬೇಕು. ಸದಾ 'ಯಸ್ ಮ್ಯಾನ್' ಆಗಿರುವುದು, ನಾವು ಬೇರೆಯವರಿಗಿಂತ ನಮಗೆ ಮಾಡಿಕೊಳ್ಳುವ ಮಹಾಮೋಸ. ಹಾಗೆಂದು ಸದಾ 'ನೋ' ಹೇಳಬೇಕಂತಲ್ಲ, ಬದುಕಿನಲ್ಲಿ ಆದ್ಯತೆಗಳ ಪಟ್ಟಿಮಾಡಿಕೊಂಡಿದ್ದಾಗ, ಯಾವುದಕ್ಕೆ 'ಯಸ್' ಎನ್ನಬೇಕು, ಯಾವುದಕ್ಕೆ 'ನೋ' ಎನ್ನಬೇಕು ಎಂಬುದರ ಅರಿವು ನಮಗಾಗುತ್ತದೆ.

'ನೋ' ಹೇಳಬೇಕಾದ ಸನ್ನಿವೇಶದಲ್ಲಿ ಸಂಕೋಚ ಬೇಡ. 'ನೋ' ಎನ್ನುವುದರಿಂದ ಸಮಯ, ಶಕ್ತಿ ಎರಡೂ ಉಳಿತಾಯವಾಗುತ್ತದೆ. ಜತೆಗೆ ನಿಮ್ಮ ನಿಲುವನ್ನು ಒಪ್ಪುವವರು ಸದಾ ನಿಮ್ಮೊಂದಿಗೆ ಇದ್ದೇ ಇರುತ್ತಾರೆ. ಕೇವಲ ನಿಮ್ಮ 'ಯಸ್'ನಿಂದ ಉಪಯೋಗ ಪಡೆದುಕೊಂಡು, ನಿಮ್ಮನ್ನು ಬಳಸಿಕೊಳ್ಳಲು ಬಯಸಿದ್ದವರು ನಿಮ್ಮಿಂದ ದೂರವಾಗುತ್ತಾರೆ. ಅದು ಒಳ್ಳೆಯದೇ ಅಲ್ಲವೇ? ಹೀಗಾಗಿ, 'ಯಸ್' ಮತ್ತು 'ನೋ' ಹೇಳುವ ಮುನ್ನ ನಿಖರತೆಯಿರಲಿ, ಹೇಳುವುದನ್ನು ಇತರರಿಗೆ ನೋವಾಗದಂತೆ ಹೇಳುವುದನ್ನು ನಾವು ಕಲಿಯಬೇಕಿದೆ.

ಚರ್ಚಾವೇದಿಕೆ
ಸಂದೀಪ್ ಶರ್ಮಾ ಮೂಟೇರಿ

ಸರಳ ಜೀವನಕ್ಕೆ ಸುವರ್ಣಸೂತ್ರ

ವಸ್ತುಗಳ ಅತಿಸಂಗ್ರಹ, ಅನಗತ್ಯ ಖರೀದಿ ಮತ್ತು ಭೌತಿಕ ಸಂಪತ್ತಿನ ಮೇಲಿನ ಅವಲಂಬನೆ– ಇವು ಸಮಕಾಲೀನ ಜೀವನದಲ್ಲಿ ನಮ್ಮನ್ನು ಕಾಡುತ್ತಿರುವ ಸಮಸ್ಯೆಗಳಾಗಿವೆ. ಜೀವನದಲ್ಲಿ ಖುಷಿಯಾಗಿರಲು ಹಣವಷ್ಟೇ ಮುಖ್ಯವೇ? ಎಲ್ಲವೂ ಇದ್ದ ಮಾತ್ರಕ್ಕೆ ಖುಷಿಯಾಗಿರಲು ಸಾಧ್ಯವೇ? ಹಾಗಿದ್ದರೆ ಸಂತೋಷದಿಂದ ಬದುಕಲು ಏನೆಲ್ಲಾ ಪೂರೈಕೆಗಳು ಬೇಕು? ಕನಿಷ್ಠತಮ ಅಗತ್ಯದ ಜೀವನಶೈಲಿಯಿಂದ ಖುಷಿಯಾಗಿರಲು ಸಾಧ್ಯವಿಲ್ಲವೇ? ಇಂಥ ಸಾಕಷ್ಟು ಪ್ರಶ್ನೆಗಳಿಗೆ ಉತ್ತರ ಸಿಗದ ಅನೇಕರಿದ್ದಾರೆ. ಜೀವನದಲ್ಲಿ ಖುಷಿಯಾಗಿರಲು ಎಲ್ಲವೂ ಬೇಕೆನ್ನುವ ಜನರು ಒಮ್ಮೆಯಾದರೂ ಈ ಪ್ರಶ್ನೆಗಳನ್ನು ತಮ್ಮಲ್ಲಿ ಕೇಳಿಕೊಂಡಿರುತ್ತಾರೆ.

ಜನರು ಆಧುನಿಕತೆಗೆ ಒಡ್ಡಿಕೊಳ್ಳುತ್ತಾ ಹೋದಂತೆ ತಮ್ಮ ಜೀವನಶೈಲಿಯನ್ನೂ ಬದಲಿಸಿಕೊಳ್ಳುತ್ತಿದ್ದಾರೆ. ಬದಲಾವಣೆಗೆ ಅಂಟಿಕೊಳ್ಳುವ ಆತುರದಲ್ಲಿ ತಮ್ಮನ್ನು ತಾವೇ ಮರೆತು, ನಿಜವಾದ ಸಂತೋಷದಿಂದ ದೂರವಾಗುತ್ತಿದ್ದಾರೆ. ಹೆಚ್ಚು ಹಣವಿದ್ದರೆ ಮಾತ್ರ ಎಲ್ಲವನ್ನೂ ಕೊಂಡುಕೊಳ್ಳಲು ಸಾಧ್ಯ, ಎಲ್ಲವೂ ಇದ್ದರೆ ಮಾತ್ರವೇ ಖುಷಿಯ ಜೀವನ ಎಂಬ ಭ್ರಮೆಯಲ್ಲಿ ಅವರು ಸಿಲುಕಿದ್ದಾರೆ. ಬದುಕಿನ ನಿರ್ವಹಣೆಗೆ ಹಣ ಬೇಕು ಎಂಬುದೇನೋ ನಿಜ, ಆದರೆ ಹಣವೇ ಸರ್ವಸ್ವವಲ್ಲ.

ದಿನದಿಂದ ದಿನಕ್ಕೆ ಅಗತ್ಯ ವಸ್ತುಗಳ ಬೆಲೆಯೇರಿಕೆ ಒಂದೆಡೆಯಾದರೆ, ಆಧುನಿಕ ಜೀವನಶೈಲಿಗೆ ತಕ್ಕಂತೆ ಜನರು ಹೆಚ್ಚುವರಿ 'ಆದಾಯ'ದ ಗಳಿಕೆಯ ಹಿಂದೆ ಬೀಳುವುದು ಸಾಮಾನ್ಯ. ಈ ಧಾವಂತದಲ್ಲಿ ಜನರು ಕನಿಷ್ಠತಮ ಅಗತ್ಯದ ಜೀವನಶೈಲಿಯನ್ನೇ ಮರೆತು ಮುಂದೆ ಸಾಗುತ್ತಿದ್ದಾರೆ. ಜತೆಗೆ, ಇಂದಿನ ಆಧುನಿಕ ಆಚರಣೆಗಳು ನಮ್ಮ ಸಂಸ್ಕೃತಿಯನ್ನೇ ಮರೆಮಾಚುತ್ತಿರುವುದು ಖೇದದ ಸಂಗತಿ. ಹಾಗಿದ್ದರೆ, ಕೋಟಿಗಟ್ಟಲೆ ರೂಪಾಯಿ ಇಲ್ಲದಿದ್ದರೂ ಖುಷಿಯಿಂದ ಬದುಕಲು ಹೇಗೆ ಸಾಧ್ಯ? ಅದು ನೆರವೇರಲು ಏನು ಮಾಡಬೇಕು? ಕನಿಷ್ಠತಮ ಅಗತ್ಯದ ಜೀವನ ಎಂದರೇನು, ಅದರ ಸೂತ್ರಗಳೇನು? ಎಂಬ ಪ್ರಶ್ನೆಗಳನ್ನು ನಮಗೇ ಕೇಳಿಕೊಂಡು ವಿವೇಚನೆಯಿಂದ ಜೀವನ ನಡೆಸಬೇಕಿದೆ.

ಕನಿಷ್ಠತಮ ಅಗತ್ಯದ ಜೀವನ ಎಂದರೆ, ನಮಗೆ ನಿಜವಾಗಿಯೂ ಏನು ಬೇಕು ಎಂಬುದನ್ನು ಅರ್ಥಮಾಡಿಕೊಂಡು, ಅಷ್ಟಕ್ಕೇ ಜೀವನವನ್ನು ಸೀಮಿತಗೊಳಿಸಿಕೊಳ್ಳುವುದು. ನಾವು ಖರೀದಿಸುವ ಪ್ರತಿಯೊಂದು ವಸ್ತುವೂ ನಮ್ಮ ಜೀವನಕ್ಕೆ ಮೌಲ್ಯವನ್ನು ಸೇರ್ಪಡೆ ಮಾಡಬೇಕು; ಇದು ನಮ್ಮನ್ನು ವಿವೇಚನಾಯುತ ಗ್ರಾಹಕರನ್ನಾಗಿ ಮಾಡುತ್ತದೆ. ನಮ್ಮ ಮನೆಯಲ್ಲಿರುವ ಪ್ರತಿಯೊಂದು ವಸ್ತುವೂ ಉದ್ದೇಶಪೂರ್ವಕವೂ ಉಪಯುಕ್ತವೂ ಆಗಿರಬೇಕು, ನಮಗದು ಆನಂದವನ್ನು ನೀಡಬೇಕು. ನಮ್ಮಲ್ಲಿ ಕೋಟಿಗಟ್ಟಲೆ ಹಣವಿಲ್ಲದಿದ್ದರೂ ಖುಷಿಯಿಂದಿರಲು ಸಾಧ್ಯವಿದೆ. ಕನಿಷ್ಠೀಯತಾವಾದವು (ಮಿನಿಮಲಿಸಂ) ವ್ಯಕ್ತಿಯೊಬ್ಬನಿಗೆ ನಿಜಕ್ಕೂ ಅಗತ್ಯವಿರುವ ಸಂಗತಿಗಳನ್ನಷ್ಟೇ ಬೆಂಬಲಿಸುತ್ತದೆ. ಅಂದರೆ, ನಮಗೆ ತೀರಾ ಅಗತ್ಯವಿರುವ ವಸ್ತುಗಳೊಂದಿಗೆ ಮಾತ್ರವೇ ಜೀವನ ಸಾಗಿಸುವ ಪರಿಕಲ್ಪನೆಯಿದು. ನಮ್ಮ ಮನೆಯಲ್ಲಿ ಎಲ್ಲ ಸೌಕರ್ಯ–ಸವಲತ್ತುಗಳು, ವಸ್ತುಗಳು ಇರಬೇಕು ಎಂದು ಬಯಸುವುದು ಸರ್ವೇಸಾಮಾನ್ಯ; ಆದರೆ ಅಗತ್ಯಕ್ಕೆ ತಕ್ಕಂತೆ ಬದುಕುವುದೇ ಕನಿಷ್ಠತಮ ಜೀವನಕ್ರಮವಾಗಿದೆ. ಅಂದರೆ, ಮುಖ್ಯ ವಿಷಯಗಳತ್ತ ಮಾತ್ರವೇ ಗಮನಹರಿಸುವುದು ಮತ್ತು ಅದರಲ್ಲೇ ಸಂತೃಪ್ತಿಯನ್ನು ಹೊಂದುವುದು. ಸ್ಟೀವ್ ಜಾಬ್ಸ್, ಮಾರ್ಕ್ ಜುಕರ್‌ಬರ್ಗ್ ಮುಂತಾದ ಉದ್ದಿಮೆದಾರರು ಮೂಟೆಗಟ್ಟಲೆ ಹಣವನ್ನು ಗಳಿಸಿದರೂ, ಕನಿಷ್ಠತಮ ಅಗತ್ಯದ ಜೀವನಕ್ಕೆ ಒಗ್ಗಿಕೊಂಡಿರುವುದು ಇಲ್ಲಿ ಗಮನಾರ್ಹ.

ಆಧುನಿಕತೆಯ ಜೀವನವು ಹೆಚ್ಚೆಚ್ಚು ಖರ್ಚುಮಾಡುವಂತೆ ಉತ್ತೇಜಿಸಿದರೆ, ಕನಿಷ್ಠತಮ ಅಥವಾ ಸಾಮಾನ್ಯ ಜೀವನವು ದುಂದುವೆಚ್ಚದಿಂದ ದೂರಾಗಿಸುತ್ತದೆ. ಉದಾಹರಣೆಗೆ ಹತ್ತಾರು ಸಾವಿರ ರೂಪಾಯಿ ಬೆಲೆಯ 'ಬ್ರ್ಯಾಂಡೆಡ್' ಷೂಗಳನ್ನು ನೀವು ಖರೀದಿಸಿದರೆ, ನಿಮ್ಮ ಆರ್ಥಿಕ ಹೊರೆ ಹೆಚ್ಚಾಗುತ್ತದೆ. ಇದೊಂಥರಾ, 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು' ಎಂಬ ಧೋರಣೆಯನ್ನು ಬಿಂಬಿಸುವಂಥದ್ದು. ಇಂಥ ದುಬಾರಿ ಷೂಗಳನ್ನು ಧರಿಸಿದರಷ್ಟೇ ಬದುಕು ಚೆಂದ ಎನ್ನುವವರ ಸಂಖ್ಯೆಯೂ ಹೆಚ್ಚೇ! ಆದರೆ ಸಾಮಾನ್ಯ/ಕಡಿಮೆ ಬೆಲೆಯ ಷೂಗಳು ಕೂಡ ಪಾದಗಳನ್ನು ರಕ್ಷಿಸುತ್ತವೆ ಎಂಬುದು ವಾಸ್ತವ. ಅಂದರೆ, ಕನಿಷ್ಠತಮ ಬದುಕಿನಲ್ಲಿ ಅಗತ್ಯದ ನೆರವೇರಿಕೆಗೆ ಒತ್ತು ನೀಡಲಾಗುತ್ತದೆಯೇ ವಿನಾ, ಅರ್ಥವಿಲ್ಲದ ದೊಡ್ಡಸ್ತಿಕೆಗಲ್ಲ! ಮನೆ ಪಕ್ಕದ ಅಂಗಡಿಗಳಲ್ಲೇ ಸಿಗುವ ಸಣ್ಣಪುಟ್ಟ ವಸ್ತುಗಳ ಖರೀದಿಗೂ ಮಾಲ್‌ಗಳು, ಹೈಪರ್ ಮಾರ್ಕೆಟ್‌ಗಳಿಗೆ ಮುಗಿಬೀಳುವವರಿಗೂ ಇದು ಅನ್ವಯವಾಗುವ ಮಾತು. ಇಂಥವರು ಉತ್ತಮ ಜೀವನದ ಸಂತಸವನ್ನು ಹೈಪರ್ ಮಾರ್ಕೆಟ್–ಮಾಲ್‌ಗಳಲ್ಲಿ ಕಾಣಬಯಸುತ್ತಾರೆ; ಇದು ಅವರವರ ಭ್ರಮಾಲೋಕವಷ್ಟೇ. ಸಂತಸ–ನೆಮ್ಮದಿಗಳನ್ನು ಮಾರ್ಕೆಟ್–ಮಾಲ್‌ಗಳಲ್ಲಿ ಖರೀದಿಸಲಾಗುವುದಿಲ್ಲ. 'ಮನೆಯಲ್ಲೊಂದು ಟ್ರೆಡ್‌ಮಿಲ್ ಇದ್ದರೆ ಅನುಕೂಲ, ಅದೊಂದು ಸ್ಟೇಟಸ್ಸು' ಎಂದು ಭಾವಿಸುವವರೂ ಇದ್ದಾರೆ; ಆದರೆ ಕನಿಷ್ಠತಮ ಅಗತ್ಯದ ಬದುಕಿಗೆ ಒಡ್ಡಿಕೊಂಡವರು, ಸದರಿ ಟ್ರೆಡ್‌ಮಿಲ್‌ನಿಂದ ದೊರಕುವ ಪ್ರಯೋಜನ ಅಥವಾ ಆನಂದವನ್ನು, ಹೊರೆಯಲ್ಲದ ಪರ್ಯಾಯ ಮಾರ್ಗಗಳಲ್ಲಿ ಕಂಡುಕೊಳ್ಳುತ್ತಾರೆ.

ಕನಿಷ್ಠೀಯತಾವಾದವು ಸ್ಪಷ್ಟವಾದ ಉದ್ದೇಶವನ್ನು ಹೊಂದಿರುತ್ತದೆ. ಅಗತ್ಯವಿಲ್ಲದಿದ್ದರೂ ದುಬಾರಿ ಸಾಮಗ್ರಿಗಳೆಡೆಗೆ ವಾಲುವ, ಅವುಗಳ ಕುರಿತು ಉದ್ದೇಶಪೂರ್ವಕವಾಗಿ ಪ್ರಚಾರಮಾಡುವ ಮತ್ತು ಅವುಗಳ ದೆಸೆಯಿಂದಾಗಿ 'ಅಗತ್ಯದ/ಅನಿವಾರ್ಯದ' ಬಾಬತ್ತುಗಳಿಂದ ದೂರವಾಗುವ ಪರಿಸ್ಥಿತಿಗಳಿಂದ ಇದು ನಮ್ಮನ್ನು 'ಬಚಾವ್' ಮಾಡುತ್ತದೆ. ನಮ್ಮ ಬದುಕಿನ, ವ್ಯಕ್ತಿತ್ವದ ಎಲ್ಲಾ ಅಂಶಗಳಲ್ಲಿ ಸುಧಾರಣೆ ತರುವಲ್ಲಿ, ಆತ್ಮಾವಲೋಕನಕ್ಕೆ ಒಡ್ಡಿಕೊಳ್ಳುವಲ್ಲಿ ಅದು ನಮಗೆ ನೆರವಾಗುತ್ತದೆ. ವಸ್ತುವೊಂದನ್ನು ನಾವು ಖರೀದಿಸುವುದಕ್ಕೆ ಮುಂದಾದಾಗ, ಅದರ ಅಗತ್ಯ ನಮಗೆಷ್ಟಿದೆ ಎಂಬುದನ್ನು ಸಕಾಲದಲ್ಲಿ ಮನವರಿಕೆ ಮಾಡಿಕೊಡುತ್ತದೆ. ಉದಾಹರಣೆಗೆ, ಒಂದು ಕಾರನ್ನು ಖರೀದಿಸಲು ಬಯಸಿದ್ದೀರಿ ಅಂದುಕೊಳ್ಳೋಣ. ನಿಮ್ಮ ಅಗತ್ಯಕ್ಕೆ ತಕ್ಕಂತಿರುವ ಕಾರು ಹಾಗೂ ಹೆಚ್ಚುವರಿ ವೈಶಿಷ್ಟ್ಯ–ಆಕರ್ಷಣೆಗಳನ್ನು ಒಳಗೊಂಡ ದುಬಾರಿ ಕಾರು ಎರಡೂ ಷೋರೂಮ್‌ನಲ್ಲಿ ಇರುತ್ತವೆ. ಹೆಚ್ಚುಗಾರಿಕೆ ಅಥವಾ ದೊಡ್ಡಸ್ತಿಕೆಯ ಖಯಾಲಿ ಇರುವಾತ ದುಬಾರಿ ಕಾರಿನ ಖರೀದಿಗೆ ಮುಂದಾದರೆ, 'ಕನಿಷ್ಠೀಯತಾವಾದ'ದ ಅರಿವಿದ್ದವರು ತಮ್ಮ ಅಗತ್ಯಕ್ಕೆ ತಕ್ಕಂತಿರುವ, ಹೆಚ್ಚು ಮೈಲೇಜ್ ನೀಡುವ ಕಾರನ್ನಷ್ಟೇ ಖರೀದಿಸುತ್ತಾರೆ. ಇದರಿಂದ ಅನಗತ್ಯ ವೆಚ್ಚ ಅಥವಾ ದುಂದುವೆಚ್ಚ ತಪ್ಪುತ್ತದೆ.

ದೊಡ್ಡಸ್ತಿಕೆಗೆ ಒಡ್ಡಿಕೊಂಡ ಜನರು, ಅದು ಬಯಸುವ ಬಾಬತ್ತುಗಳ ನೆರವೇರಿಕೆಗೆ ಹೆಚ್ಚೆಚ್ಚು ಆದಾಯ ಗಳಿಸುವ ಧಾವಂತಕ್ಕೆ ಬೀಳುತ್ತಾರೆ, ಸಾಲಗಳನ್ನು ಮಾಡಿಕೊಳ್ಳುತ್ತಾರೆ, ಅದರ ಮರುಪಾವತಿಗೆ ಹೆಚ್ಚುವರಿ ಅವಧಿಯವರೆಗೆ ಕೆಲಸ ಮಾಡುತ್ತಾರೆ, ಆ ಕಸರತ್ತಿನಲ್ಲಿ ಒತ್ತಡಕ್ಕೆ ಒಳಗಾಗುತ್ತಾರೆ. ವಿಪರ್ಯಾಸವೆಂದರೆ, ಇಂಥವರು ಪ್ರತಿದಿನವೂ ಸಾಲದ ಶೂಲಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆಯೇ ವಿನಾ, ಪರಿಹಾರವನ್ನು ಹುಡುಕಲು ಯತ್ನಿಸುವುದಿಲ್ಲ ಮತ್ತು ಅನೇಕ ಸವಾಲುಗಳನ್ನು ಎದುರಿಸಿಯೂ ಕೊನೆಗೆ ಏನನ್ನೂ ಸಾಧಿಸುವುದಿಲ್ಲ. ಆದರೆ, ಕನಿಷ್ಠತಮ ಅಗತ್ಯದ ಜೀವನವು ಇಂಥ ಯಾವುದೇ ಪ್ರಲೋಭನೆಯಿಂದ ನಿಮ್ಮನ್ನು ದೂರಮಾಡಿ, ಅದರಿಂದ ಸೃಷ್ಟಿಯಾಗಬಹುದಿದ್ದ ಧಾವಂತದಿಂದ ನಿಮ್ಮನ್ನು ಪಾರುಮಾಡುತ್ತದೆ. ವೇಗದ ಜೀವನಕ್ಕೆ ಒಡ್ಡಿಕೊಳ್ಳಬೇಕು ಎಂಬ ಉನ್ಮಾದದಿಂದ ನಿಮ್ಮನ್ನು ಮುಕ್ತಗೊಳಿಸುತ್ತದೆ. ಇದು, ಅಗತ್ಯವಸ್ತುಗಳನ್ನು ಮಾತ್ರವೇ ನೀವು ಹೊಂದುವಂತಾಗಿ, ಮೌಲ್ಯಯುತ ಜೀವನವನ್ನು ಸಾಗಿಸಲು ನೆರವಾಗುತ್ತದೆ.

''ನನ್ನ ಕುಟುಂಬಕ್ಕೆ ಸಮಯವನ್ನೇ ಕೊಡಲಾಗುತ್ತಿಲ್ಲ'' ಎಂಬುದು ಅನೇಕರ ಮಾತು. ಕಚೇರಿಯಲ್ಲೇ ಅಥವಾ ವ್ಯವಹಾರದಲ್ಲೇ ಹೆಚ್ಚು ಸಮಯ ಕಳೆದುಹೋದಾಗ ಕುಟುಂಬದೊಂದಿಗಿನ ಸಮಯ ಸಹಜವಾಗಿಯೇ ಕಡಿಮೆಯಾಗುತ್ತದೆ. ಇಂಥವರು ಕುಟುಂಬದ ಸುತ್ತ ಒಂದು ಜೀವನ, ಸಹೋದ್ಯೋಗಿಗಳ ಸುತ್ತ ಮತ್ತೊಂದು ಜೀವನ, ನೆರೆಹೊರೆಯವರ ಜತೆ ಇನ್ನೊಂದು ಜೀವನವನ್ನು ನಡೆಸುತ್ತಾರೆ. ಆದರೆ, ಸರಳ ಮತ್ತು ಕನಿಷ್ಠತಮ ಜೀವನಶೈಲಿಗೆ ಒಡ್ಡಿಕೊಂಡವರ ಧೋರಣೆ ಏಕೀಕೃತವೂ ಸ್ಥಿರವೂ ಆಗಿರುತ್ತದೆ, ಇವರಿಗೆ ಶುಕ್ರವಾರದ ಜೀವನಶೈಲಿಯೇ ಭಾನುವಾರವೂ ಇರುತ್ತದೆ, ಸೋಮವಾರಕ್ಕೂ ಮುಂದುವರಿಯುತ್ತದೆ. ಅನಗತ್ಯ ಖರ್ಚುಗಳಿಗೆ ಅಥವಾ ಅನಗತ್ಯ ವಸ್ತುಗಳ ಖರೀದಿಗೆ ಕಡಿವಾಣ ಹಾಕಿಕೊಂಡರೆ, ಆಧುನಿಕತೆಯ–ದೊಡ್ಡಸ್ತಿಕೆಯ–ಧಾವಂತದ ಬದುಕಿನ ಬಿರುಗಾಳಿಯಲ್ಲಿ ನೀವು ಸಿಲುಕುವುದಿಲ್ಲ, ಅದರಲ್ಲಿ ಸಿಲುಕಿದ ತರಗೆಲೆಯಾಗುವುದಿಲ್ಲ. ಆಗ ನೀವು ಕುಟುಂಬಕ್ಕೂ ಹೆಚ್ಚಿನ ಸಮಯ ಮತ್ತು ಪ್ರಾಧಾನ್ಯವನ್ನು ನೀಡಲು ಸಾಧ್ಯವಾಗುತ್ತದೆ. ಕನಿಷ್ಠತಮ ಅಗತ್ಯಗಳ ಜೀವನವೆಂಬುದು ಒಂದು ಪಯಣ, ಇದು ರಾತ್ರೋರಾತ್ರಿ ಸಾಧಿಸಬಹುದಾದ ಗುರಿಯಲ್ಲ. ನಿಧಾನವಾಗಿ, ಒಂದೊಂದೇ ಹೆಜ್ಜೆಯಿಟ್ಟು ಸಾಧಿಸಿಕೊಳ್ಳಬಲ್ಲ ಕೌಶಲವಿದು ಎಂಬುದನ್ನು ಮರೆಯದಿರೋಣ.

(ಲೇಖಕರು ಸಿವಿಲ್ ಎಂಜಿನಿಯರ್)

ಡಾ. ಮನಮೋಹನ್ ಸಿಂಗ್ ಜತೆಗಿನ ಅನುಪಮ ಕ್ಷಣಗಳು

ಸಂಸ್ಮರಣೆ
ಪಿ.ಚಿದಂಬರಂ
vveditoped@gmail.com

ಭಾರತದ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ (92) ಅವರು ಕಳೆದ ಡಿಸೆಂಬರ್ 26ರಂದು ನಮ್ಮಿಂದ ಕಣ್ಮರೆಯಾದರು. ವೈಯಕ್ತಿಕ ನೆಲೆಯಲ್ಲಿ ಹಾಗೂ ರಾಜಕೀಯ ವೃತ್ತಿಜೀವನದ ಹಿನ್ನೆಲೆಯಲ್ಲಿ ಹೇಳುವುದಾದರೆ, 1991ರ ಜೂನ್ 21ರಂದು ದೇಶದ ಹಣಕಾಸು ಸಚಿವರಾಗಿ ಅವರು ಪ್ರಮಾಣ ವಚನ ಸ್ವೀಕರಿಸಿದ ದಿನದಿಂದಲೂ ಅವರೊಂದಿಗೆ ನಾನು ಹೊಂದಿದ್ದ 'ಭಾವತಂತು' ಕಡಿದುಹೋಯಿತು ಎನ್ನಲಡ್ಡಿಯಿಲ್ಲ.

ಅವರೇ ಒಂದೆಡೆ ಹೇಳಿಕೊಂಡಂತೆ, ಮನಮೋಹನ್ ಸಿಂಗ್ 'ಆಕಸ್ಮಿಕವಾಗಿ' ಹಣಕಾಸು ಮಂತ್ರಿಯಾದವರು. ಏಕೆಂದರೆ, ಈ ಬಾಬತ್ತಿಗೆ ಅಂದಿನ ಪ್ರಧಾನಿ ನರಸಿಂಹರಾಯರ ಮೊದಲ ಆಯ್ಕೆಯಾಗಿದ್ದವರು ಓರ್ವ ಗೌರವಾನ್ವಿತ ಶಿಕ್ಷಣತಜ್ಞ ಹಾಗೂ ಅರ್ಥಶಾಸ್ತ್ರಜ್ಞ ಐ.ಜಿ. ಪಟೇಲ್ ಅವರು. ಆದರೆ ಇಂಥದೊಂದು ಹೊಣೆಯ ನೊಗವನ್ನು ಹೆಗಲಿಗೇರಿಸಿಕೊಳ್ಳಲು ಪಟೇಲ್ ನಿರಾಕರಿಸಿದ್ದರ ಜತೆಗೆ, ಮನಮೋಹನ್ ಸಿಂಗ್‌ರ ಹೆಸರನ್ನು ರಾಯರಿಗೆ ಸೂಚಿಸಿದರು.

ತಮಾಷೆಯೆಂದರೆ, ಪ್ರಮಾಣವಚನ ಸ್ವೀಕಾರದ ಸಮಾರಂಭದಂದು, ಹಿರಿಯರಂತೆ ಕಾಣುವ, ನೀಲಿ ಬಣ್ಣದ ಟರ್ಬನ್ ಧರಿಸಿದ್ದ ಸಂಭಾವಿತ ವ್ಯಕ್ತಿಯೊಬ್ಬರು ಮೊದಲ ಸಾಲಿನಲ್ಲೇ ಉಪಸ್ಥಿತರಾಗಿದ್ದುದು ಕಂಡು ಅನೇಕರಿಗೆ ಅಚ್ಚರಿಯಾಗಿತ್ತು. ಅವರು ಸಂಪುಟ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂಬುದು ಸ್ಪಷ್ಟವಾಗಿದ್ದರೂ, ಪ್ರಧಾನ ಮಂತ್ರಿಗಳು ಅವರಿಗೆ ಯಾವ ಖಾತೆಯನ್ನು ನೀಡುತ್ತಾರೆ ಎಂಬುದು ಯಾರಿಗೂ ಗೊತ್ತಿರಲಿಲ್ಲ, ಕೆಲವೇ ಗಂಟೆಗಳಲ್ಲಿ ಅವರು ನಾರ್ತ್ ಬ್ಲಾಕ್‌ನಲ್ಲಿ ಕಾಣಿಸಿಕೊಂಡರು.

ಭಾರತೀಯ ರಿಸರ್ವ್ ಬ್ಯಾಂಕು 1991ರ ಜುಲೈ 1ರಂದು ರುಪಾಯಿಯ ಅಪಮೌಲ್ಯದ ಕುರಿತು ಘೋಷಿಸಿತು. ಜುಲೈ 3ರಂದು ಮುಂಜಾನೆ ನನ್ನನ್ನು ತಮ್ಮ ಕಾರ್ಯಾಲಯಕ್ಕೆ ಕರೆಸಿಕೊಂಡ ಪ್ರಧಾನಿಯವರು, ಸದರಿ ಅಪಮೌಲ್ಯೀಕರಣದ ಕುರಿತಾದ ತಮ್ಮ ಸಂಪುಟ ಸಹೋದ್ಯೋಗಿಗಳ ಅನುಮಾನಗಳನ್ನು (ವಾಸ್ತವವಾಗಿ, ಅವು ಅವರದೇ ಅನುಮಾನಗಳಾಗಿದ್ದವು ಎನ್ನಿ!) ಹಂಚಿಕೊಂಡರು. ಆಗ ನಾನು, ''ರಫ್ತು ಕಾರ್ಯಗಳಿಗೆ ತೊಂದರೆಯಾಗಿದೆ, ವಿದೇಶಿ ವಿನಿಮಯದ ಸಂಗ್ರಹವು ಕುಸಿದಿದೆ, ಭಾರತದಲ್ಲಿ ಹೂಡಿಕೆ ಮಾಡಲು ವಿದೇಶಿ ಹೂಡಿಕೆದಾರರು ಹಿಂದೇಟು ಹಾಕುತ್ತಿದ್ದಾರೆ, ವಿದೇಶಿ ವಿನಿಮಯ ಮಾರುಕಟ್ಟೆಗಳಲ್ಲಿ ರುಪಾಯಿಯ ಮೌಲ್ಯ ಜಾಸ್ತಿಯಾಗಿದೆ'' ಎಂಬಿತ್ಯಾದಿ ಚಿರಪರಿಚಿತ 'ಆಡುಗಬ್ಬದ ಮಾತು'ಗಳನ್ನೇ ಅವರಿಗೆ ವಿವರಿಸಿದೆ. ಆಗ ನರಸಿಂಹರಾಯರು, ''ಸದ್ಯದಲ್ಲೇ ಇನ್ನೊಂದು ಅಪಮೌಲ್ಯೀಕರಣದ ಕಸರತ್ತಿದೆ'' ಎಂದು ಹೇಳಿದ್ದರ ಜತೆಗೆ, ''ನೀವೀಗ ಹಣಕಾಸು ಸಚಿವರ ಬಳಿಗೆ ತೆರಳಿ, ಆ ಎರಡನೇ ಹಂತವನ್ನು ಸ್ಥಗಿತಗೊಳಿಸದಿದ್ದರೂ ಮುಂದೂಡಬಹುದೇ ಅಂತ ಕೇಳಿ'' ಎಂದು ನನಗೆ ಸೂಚಿಸಿದರು. ರಾಯರಿಂದ ಹೀಗೆ ಈ ಕೆಲಸಕ್ಕೆಂದು ನಿಯೋಜಿಸಲ್ಪಟ್ಟ ದೂತ ನಾನೊಬ್ಬನೇ ಅಲ್ಲ ಎಂಬುದು ನನಗೆ ಖಚಿತವಾಗಿತ್ತು. ನನ್ನಲ್ಲಿ ಒಂದಷ್ಟು ಸಂದೇಹಗಳು ಇದ್ದರೂ, ನಾರ್ತ್ ಬ್ಲಾಕ್‌ನೆಡೆಗೆ ತೆರಳಿ ಹಣಕಾಸು ಸಚಿವರ ಕಾರ್ಯಾಲಯದೊಳಗೆ ಪ್ರವೇಶಿಸಿದೆ.

ಅದು ಹಣಕಾಸು ಸಚಿವರೊಂದಿಗಿನ ನನ್ನ ಮೊದಲ ಅಧಿಕೃತ ಭೇಟಿ ಆಗಿತ್ತು; ಅಲ್ಲಿ ನಾನು ಅವರಿಗೆ ರವಾನಿಸಿದ್ದು ಪ್ರಧಾನಿಯವರ ಮನವಿಯನ್ನೇ ವಿನಾ ನಿರ್ದೇಶನವನ್ನಲ್ಲ. ಅದನ್ನು ಕೇಳುತ್ತಿದ್ದಂತೆಯೇ ಡಾ.ಮನಮೋಹನ್ ಸಿಂಗ್ ಗೊಂದಲಕ್ಕೆ ಒಳಗಾದರು, ಅದನ್ನು ಅವರ ಮುಖದಲ್ಲಿ ಕಾಣಬಹುದಾಗಿತ್ತು; ಅವರ ಈ ಗೊಂದಲಕ್ಕೆ ಕಾರಣವಾಗಿದ್ದು ಅವರಿಗೆ ಮುಟ್ಟಿದ ಸಂದೇಶವೋ ಅಥವಾ ಅದನ್ನು ಹೊತ್ತು ತಂದ ಸಂದೇಶವಾಹಕನೋ ಎಂಬುದನ್ನು ವಿಶ್ಲೇಷಿಸಲು ನಾನು ಯತ್ನಿಸುತ್ತಿದ್ದೆ. ನಾನು ರವಾನಿಸಿದ ಸಂದೇಶವನ್ನು ವಿನೀತರಾಗೇ ಕೇಳಿಸಿಕೊಂಡ ಅವರು, ''ಬೆಳಗ್ಗೆ 10 ಗಂಟೆಗೆ ಮಾರುಕಟ್ಟೆಗಳು ತೆರೆದ ಕೆಲವೇ ನಿಮಿಷಗಳಲ್ಲಿ ಎರಡನೇ ಹಂತದ ಕ್ರಮವನ್ನಾಗಲೇ ಕೈಗೊಳ್ಳಲಾಗಿದೆ'' ಎಂದರು. ಈ ಬಾಬತ್ತಿಗೆ ಸಂಬಂಧಿಸಿ, ಭಾರತೀಯ ರಿಸರ್ವ್ ಬ್ಯಾಂಕ್‌ನ ಡೆಪ್ಯುಟಿ ಗವರ್ನರ್ ಡಾ. ಆರ್.ಸಿ.ರಂಗರಾಜನ್ ಅವರೊಂದಿಗೆ ಡಾ. ಮನಮೋಹನ್ ಸಿಂಗ್ ಅವರು 'ಮಾತನಾಡಿದ' ಪರಿ ಹೇಗಿತ್ತು, ಅದಕ್ಕೆ ಡಾ.ರಂಗರಾಜನ್ ಅವರು, ''ಈಗಾಗಲೇ ಕ್ರಮ ಕೈಗೊಂಡಿರುವೆ'' ಎಂದಿದ್ದು ಇವೆಲ್ಲವೂ ಈಗ ಅಪಮೌಲ್ಯೀಕರಣದ ಕಸರತ್ತಿನ ಸುತ್ತ ಗಿರಕಿಹೊಡೆಯುತ್ತಿರುವ ಮಾತುಗಳ ಭಾಗವೇ ಆಗಿಬಿಟ್ಟಿವೆ.

'ಆಕಸ್ಮಿಕ ಅರ್ಥಸಚಿವ' ಎಂದೇ ಹಣೆಪಟ್ಟಿ ಕಟ್ಟಲಾಗಿದ್ದ ಡಾ.ಸಿಂಗ್ ಅವರು ಅದೆಂಥ ಬದ್ಧತೆಯುಳ್ಳ ಕಾರ್ಯಪಟುವಾಗಿದ್ದರು ಎಂಬುದಕ್ಕೆ ಇದೊಂದು ನಿದರ್ಶನವೇ ಸಾಕು; ತಮಗೆ ಸರಿ ಎನಿಸಿದ್ದನ್ನು ಮಾಡುವುದಕ್ಕೆ ಬೇಕಾದ ಸಂಕಲ್ಪಶಕ್ತಿಯನ್ನು ಹೊಂದಿದ್ದ ಓರ್ವ ಸಮರ್ಪಣಾ ಭಾವದ ಹಣಕಾಸು ಮಂತ್ರಿಯಾಗಿದ್ದರು ಡಾ. ಸಿಂಗ್ ಎಂಬುದನ್ನು ಈ ಘಟನೆ ಸಾಬೀತು ಪಡಿಸಿಬಿಟ್ಟಿತ್ತು. ಕೆಲ ವರ್ಷಗಳ ನಂತರ ಸರಕಾರವು ಅಳಿವು–ಉಳಿವಿನ ನಡುವೆ ತೊಯ್ದಾಡುತ್ತಿದ್ದಾಗಲೂ ಸಿಂಗ್ ಇದೇ ಬದ್ಧತೆ, ದೃಢತೆ ಮತ್ತು ಸಂಕಲ್ಪ ಶಕ್ತಿಯನ್ನು ಮತ್ತೊಮ್ಮೆ ಪ್ರದರ್ಶಿಸಿದರು ಎನ್ನಬೇಕು. ಅದು ಭಾರತ ಮತ್ತು ಅಮೆರಿಕ ನಡುವಿನ ಪ್ರಸ್ತಾವಿತ ನಾಗರಿಕ ಪರಮಾಣು ಒಪ್ಪಂದವು ಎಡಪಕ್ಷಗಳ, ಅದರಲ್ಲೂ ವಿಶೇಷವಾಗಿ ಸಿಪಿಐ(ಎಂ)ನ ತೀವ್ರ ವಿರೋಧಕ್ಕೆ ಒಳಗಾದ ಘಟ್ಟವಾಗಿತ್ತು. ಈ ಒಡಂಬಡಿಕೆಗೆ ಅಸ್ತು ಎಂದಿದ್ದೇ ಆದಲ್ಲಿ, ಕೇಂದ್ರದ ಯುಪಿಎ ಸರಕಾರಕ್ಕೆ ನೀಡಲಾಗಿದ್ದ ಬೆಂಬಲವನ್ನು ಹಿಂತೆಗೆದುಕೊಳ್ಳುವುದಾಗಿ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್

ಬೆದರಿಕೆಯೊಡ್ಡಿದ್ದರು. ಅನ್ಯಥಾ ಪ್ರಧಾನ ಮಂತ್ರಿಯವರನ್ನೂ ಮತ್ತು ಈ ಒಪ್ಪಂದವನ್ನೂ ಬೆಂಬಲಿಸುತ್ತಿದ್ದ ಅನೇಕ ಕಾಂಗ್ರೆಸ್ ನಾಯಕರು, ಈ ಬೆಳವಣಿಗೆಯಿಂದಾಗಿ ಒಂದು ವೇಳೆ ಸರಕಾರವು ತನ್ನ ಬಹುಮತವನ್ನು ಕಳೆದುಕೊಂಡಲ್ಲಿ, ಹೇಗಿದ್ದರೂ ಸ್ಥಗಿತಗೊಳ್ಳುವ ಒಂದು ಒಪ್ಪಂದಕ್ಕಾಗಿ ಸರಕಾರವನ್ನು ತ್ಯಾಗ ಮಾಡುವ ಬಗ್ಗೆ ತಮ್ಮದೇ ಆದ ಅನುಮಾನಗಳು, ಗೊಂದಲಗಳು ಅಥವಾ ಅನಿಶ್ಚಿತತೆಗಳನ್ನು ಹೊಂದಿದ್ದರು. ಆದರೆ ಡಾ.ಸಿಂಗ್ ತಮ್ಮ ಪಟ್ಟು ಸಡಿಲಿಸಲು ಸಿದ್ಧರಿರಲಿಲ್ಲ. ಆಗ ಅವರು, ''ಈ ಒಡಂಬಡಿಕೆಯನ್ನು ಕೈಬಿಡುವಂತೆ ಒಂದು ವೇಳೆ ಕಾಂಗ್ರೆಸ್ ಪಕ್ಷವು ನನ್ನನ್ನು ಒತ್ತಾಯಿಸಿದಲ್ಲಿ, ರಾಜೀನಾಮೆ ನೀಡುವುದನ್ನು ಬಿಟ್ಟರೆ ನನಗೆ ಬೇರೆ ದಾರಿಯಿಲ್ಲ'' ಎಂದು ನನ್ನೊಂದಿಗೆ ಹೇಳಿಕೊಂಡರು. ಅವರ ಅಭಿಪ್ರಾಯ/ದೃಷ್ಟಿಕೋನ ಬಲವಾಗಿದೆ, ವಿವೇಚನಾಯುತವಾಗಿದೆ ಎಂದು ನನಗನಿಸಿದರೂ, ಇತರ ಪಕ್ಷಗಳಿಂದ ಬೆಂಬಲ ಪಡೆಯುವ ಆಯ್ಕೆಯನ್ನು ಪರಿಶೀಲಿಸುವಂತೆ ಅವರನ್ನು ಉತ್ತೇಜಿಸಿದೆ.

ಆಗ ಡಾ.ಸಿಂಗ್ ಅವರಿಂದ ಹೊಮ್ಮಿತು ನೋಡಿ 'ಮಾಸ್ಟರ್ ಸ್ಟ್ರೋಕ್'. ಬೆಂಬಲದ ಹೇಳಿಕೆಯನ್ನು ನೀಡುವಂತೆ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂರ ಮನವೊಲಿಸಿದ ಡಾ.ಸಿಂಗ್ ಅವರು, ಮುಲಾಯಂಸಿಂಗ್ ಯಾದವ್ ಮತ್ತು ಸಮಾಜವಾದಿ ಪಕ್ಷದ ಬೆಂಬಲವನ್ನು ಗಳಿಸಲು ಆ ಹೇಳಿಕೆಯನ್ನು ಬಳಸಿಕೊಂಡರು. ಎಡಪಕ್ಷಗಳು ಒಡ್ಡಿದ್ದ ಸವಾಲಿಗೆ ಸರಿಯಾದ ಪ್ರತ್ಯುತ್ತರವೇ ಹೊಮ್ಮಿತು, ಸರಕಾರವು ವಿಶ್ವಾಸ ಮತವನ್ನು ಗೆದ್ದಿದ್ದರ ಜತೆಗೆ, ಅಂದುಕೊಂಡ ಸಮಯದಲ್ಲಿಯೇ ಸದರಿ ಪರಮಾಣು ಒಪ್ಪಂದವನ್ನೂ ಸಂಪನ್ನಗೊಳಿಸಿತು.

ಎಡಪಕ್ಷಗಳು ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡ ನಂತರವೂ, ಡಾ.ಸಿಂಗ್ ಅವುಗಳೆಡೆಗೆ ಕಹಿ ಕಾರಲಿಲ್ಲ ಎಂಬುದು ಅವರ ಮೃದುಸ್ವಭಾವಕ್ಕೆ ದ್ಯೋತಕ; ಆ ಪಕ್ಷಗಳ ನಾಯಕರನ್ನು ಗೌರವಯುತವಾಗಿಯೇ ನಡೆಸಿಕೊಂಡಿದ್ದರ ಜತೆಗೆ ಅವರೊಂದಿಗೆ ಸೌಹಾರ್ದಯುತ ಸಂಬಂಧವನ್ನೂ ಸಿಂಗ್ ಮುಂದುವರಿಸಿದರು. ಸಂದಿಗ್ಧತೆಗೆ ಆಸ್ಪದವೇ ಇಲ್ಲದ ಡಾ.ಸಿಂಗ್ ಅವರ ಸುಸ್ಪಷ್ಟ ಬೆಂಬಲವಿಲ್ಲದೆ ಹೋಗಿದ್ದರೆ, ಯುಪಿಎ ಸರಕಾರದ 'ಹೆಗ್ಗುರುತು' ಎನಿಸಿಕೊಂಡಿರುವ ಪ್ರಮುಖ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದಕ್ಕಾಗಲೀ ಅಥವಾ ಕಾರ್ಯಗತಗೊಳಿಸುವುದಕ್ಕಾಗಲೀ ಸಾಧ್ಯವೇ ಇರಲಿಲ್ಲ ಎಂಬುದು ಕೆಲವರಷ್ಟೇ ಅರಿತಿರುವ ಸಂಗತಿ.

ಇಂಥ ಕಾರ್ಯಕ್ರಮಗಳ ಸಾಕಷ್ಟು ನಿದರ್ಶನಗಳಿವೆಯಾದರೂ ಅವುಗಳ ಪೈಕಿ ಕೃಷಿ ಸಾಲ ಮನ್ನಾ (2008) ಮತ್ತು ರಾಷ್ಟ್ರೀಯ ಆಹಾರ ಭದ್ರತೆ (2013) ಎಂಬೆರಡು ಉಪಕ್ರಮಗಳನ್ನು ಉಲ್ಲೇಖಿಸಬಹುದು. ಡಾ.ಸಿಂಗ್ ಅವರು ಈ ಎರಡೂ ಜನಕಲ್ಯಾಣ ಕಾರ್ಯಕ್ರಮಗಳೆಡೆಗೆ ಬಲವಾದ ಒತ್ತಾಸೆಯನ್ನು ಹೊಂದಿದ್ದರಾದರೂ, ಅವು ವಿತ್ತೀಯ ಕೊರತೆಯ ಮೇಲೆ ಬೀರಬಹುದಾದ ಪ್ರಭಾವದ ಕುರಿತು ಒಂದು ಕಣ್ಣಿಡುವಂತೆ ನನ್ನನ್ನು ಪದೇಪದೆ ಎಚ್ಚರಿಸುತ್ತಿದ್ದರು. ಸ್ಥೂಲ–ಆರ್ಥಿಕ ಸ್ಥಿರತೆಯು ಒಂದೊಮ್ಮೆ ಕೈತಪ್ಪಿದಲ್ಲಿ, ಮಧ್ಯಮಾವಧಿಯಲ್ಲಿ ಅಥವಾ ದೀರ್ಘಾವಧಿಯಲ್ಲಿ ಯಾವ ಜನಕಲ್ಯಾಣ ಕಾರ್ಯಕ್ರಮಗಳನ್ನೂ ಅನುಷ್ಠಾನಕ್ಕೆ ತರಲು ಸಾಧ್ಯವಿಲ್ಲ ಎಂಬ ಸೂಕ್ಷ್ಮ ಸಂಗತಿಯನ್ನು ಅವರು ಬೇರಾವ ರಾಜಕೀಯ ನಾಯಕರಿಗಿಂತಲೂ ಚೆನ್ನಾಗಿ ಅರಿತಿದ್ದರು. ವಿತ್ತೀಯ ಕೊರತೆಯ ಗುರಿಯನ್ನು ಸರಕಾರವು ಪೂರೈಸುತ್ತದೆ ಎಂಬುದು ತಮಗೆ ಖಾತ್ರಿಯಾದಾಗ, ಸದರಿ ಜನಕಲ್ಯಾಣ ಕಾರ್ಯಕ್ರಮಗಳನ್ನು ಸಿಂಗ್ ಅನುಮೋದಿಸಿದರು.

ಡಾ.ಸಿಂಗ್ ಒಬ್ಬ ಸಹಜ ಸುಧಾರಕರಾಗಿದ್ದುದು ಹೌದಾದರೂ, ಬಡಜನರ ಪರವಾಗಿ ಅವರು ಪ್ರಜ್ಞಾಪೂರ್ವಕವಾಗಿ ಒಲವು ತೋರಿದರು ಎನ್ನಬೇಕು. ಬಹುಮುಖಿ ಬಾಹ್ಯವೆಚ್ಚಗಳನ್ನು ಹೊಂದಿದ್ದ ಜನಕಲ್ಯಾಣ ಕಾರ್ಯಕ್ರಮಗಳ ಪ್ರಬಲ ಸಮರ್ಥಕರಾಗಿದ್ದ ಡಾ.ಸಿಂಗ್, ಉದಾರವಾದಿ ಜನಕಲ್ಯಾಣದ ಉಪಕ್ರಮಗಳ ಜತೆಜತೆಗೆ ಆರ್ಥಿಕ ಸುಧಾರಣೆಗಳನ್ನೂ ಕೈಗೂಡಿಸಿಕೊಳ್ಳಬಹುದು ಎಂಬುದನ್ನು ನಮಗೆ ಕಲಿಸಿಕೊಟ್ಟರು. ಇಂದು ನಾವು ಕಾಣುತ್ತಿರುವ ಮಧ್ಯಮ ವರ್ಗವನ್ನು ಸೃಷ್ಟಿಸಿದ್ದು ಡಾ.ಸಿಂಗ್ ಅವರ ಕಾರ್ಯನೀತಿಗಳೇ ಎಂಬ ಮಾತನ್ನೂ ನಾನು ದೃಢವಾಗಿ ನಂಬುತ್ತೇನೆ.

ಇಲ್ಲಿ ಮತ್ತೊಂದು ಸ್ವಾರಸ್ಯಕರ ಸಂಗತಿಯನ್ನು ಹೇಳಬೇಕು. ಒಂದು ಕಾಲಘಟ್ಟದಲ್ಲಿ ಭಾರತವು ಒಂದೇ ಒಂದು ದೂರದರ್ಶನ ವಾಹಿನಿ, ಏಕೈಕ ಕಾರು ತಯಾರಕ ಸಂಸ್ಥೆ, ಒಂದೇ ವಿಮಾನಯಾನ ಸಂಸ್ಥೆ, ಏಕೈಕ ದೂರವಾಣಿ ಸೇವಾದಾತ ಕಂಪನಿಗೆ ಮಾತ್ರವೇ ಸಾಕ್ಷಿಯಾಗಿತ್ತು, ಟ್ರಂಕ್ ಕಾಲ್ ಬುಕ್ ಮಾಡಿ ಕಾಯಬೇಕಾಗಿ ಬರುತ್ತಿತ್ತು, ಪಿಸಿಒ/ಎಸ್‌ಟಿಡಿ/ಐಎಸ್‌ಡಿ ಬೂತ್‌ಗಳ ಎದುರು ಸರತಿಸಾಲು ಬಾಲದಂತೆ ಬೆಳೆದಿರುತ್ತಿತ್ತು, ದ್ವಿಚಕ್ರ ವಾಹನಗಳಿಂದ ಮೊದಲ್ಗೊಂಡು ಟ್ರೇನಿನ ಟಿಕೆಟ್ಟುಗಳು ಮತ್ತು ಪಾಸ್‌ಪೋರ್ಟ್‌ಗಳವರೆಗಿನ ಪ್ರತಿಯೊಂದಕ್ಕೂ ಸುದೀರ್ಘ ಕಾಲದವರೆಗೆ ಕಾಯಬೇಕಾಗಿ ಬರುತ್ತಿತ್ತು ಎಂಬ ಸಂಗತಿಯನ್ನು ಇಂದಿನ ಪೀಳಿಗೆಯವರು (ಅಂದರೆ 1991ರ ನಂತರ ಹುಟ್ಟಿದವರು) ನಂಬುವುದು ಸ್ವಲ್ಪ ಕಷ್ಟವೇ! ಆದರೆ, ಡಾ.ಸಿಂಗ್ ಅವರು ಬದಲಾವಣೆಯ ಬೀಜಗಳನ್ನು ಬಿತ್ತಿದ್ದೇ ಬಿತ್ತಿದ್ದು, ಒಂದಿಡೀ ದೇಶದಲ್ಲೇ ಸುಧಾರಣೆಯ ಕ್ರಾಂತಿಯಾಗಿಬಿಟ್ಟಿತು. ಈ ಸತ್ಯವನ್ನು ಪ್ರಧಾನಿ ಮೋದಿಯವರು ತಡವಾಗಿಯಾದರೂ ಒಪ್ಪಿಕೊಂಡಿದ್ದಾರೆ ಎನ್ನಿ.

ಇತಿಹಾಸವು ಡಾ.ಮನಮೋಹನ್ ಸಿಂಗ್ ಅವರಿಗೆ ದಯೆ ತೋರುತ್ತದೋ ಇಲ್ಲವೋ ಎಂಬುದು ಬೇರೆ ವಿಷಯ; ಆದರೆ, ಇತಿಹಾಸದ ಪುಟಗಳಲ್ಲಿ ಅಳಿಸಲಾಗದ ಎರಡು ಹೆಜ್ಜೆಗುರುತುಗಳನ್ನಂತೂ ಅವರು ಮೂಡಿಸಿದ್ದಾರೆ ಎಂಬುದನ್ನು ನಾನು ದೃಢವಾಗಿ ನಂಬುತ್ತೇನೆ. ಮೊದಲನೆಯದು– ತಮ್ಮ ಹತ್ತು ವರ್ಷಗಳ ಅಧಿಕಾರಾವಧಿಯಲ್ಲಿ ಡಾ.ಸಿಂಗ್ ಅವರು ಸರಾಸರಿ 6.8ರಷ್ಟು ಜಿಡಿಪಿ ಬೆಳವಣಿಗೆ ಮಟ್ಟವನ್ನು ದಾಖಲಿಸಿದರು. ಎರಡನೆಯದು (ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ಪ್ರಕಾರ)– ಈ ಹತ್ತು ವರ್ಷಗಳ ಆಡಳಿತಾವಧಿಯಲ್ಲಿ ಯುಪಿಎ ಸರಕಾರವು ಸುಮಾರು 270 ದಶಲಕ್ಷ ಜನರನ್ನು ಬಡತನದ ಬಿಗಿಮುಷ್ಟಿಯಿಂದ ಹೊರಸೆಳೆದು ಮೇಲಕ್ಕೆತ್ತಿತು. ಈ ಎರಡೂ ಸಾಧನೆಗಳು ಅಭೂತಪೂರ್ವವಾಗಿದ್ದವು ಮತ್ತು ಅಲ್ಲಿಂದೀಚೆಗೆ ಅವುಗಳ ಅನುಸರಣೆಯಾಗಿಲ್ಲ ಎಂಬುದು ಗಮನಾರ್ಹ ಅಂಶ. ಇತಿಹಾಸ ನೀಡಿದ ತೀರ್ಪು ಈಗಾಗಲೇ ನಿಮ್ಮೆದುರಿಗೆ ಸಾಕ್ಷಿಯಾಗಿದೆ ಎಂದಷ್ಟೇ ಹೇಳಬಲ್ಲೆ.

(ಲೇಖಕರು ಹಿರಿಯ ಕಾಂಗ್ರೆಸ್ಸಿಗರು ಮತ್ತು ರಾಜ್ಯಸಭಾ ಸದಸ್ಯರು)

ಅಚ್ಚುಕಟ್ಟು ಪ್ರದೇಶ

RNI no: 3918/59

VISHVAVANI, Printed & Published by : **VISHWESHWAR BHAT**, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**

CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.

ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ

Vol:67, Issue: 243

ಸಮಾಚಾರ ಸಣ್ಣದಲ್ಲ

ಚಳಿಗೆ ಅಗ್ಗಿಷ್ಟಿಕೆ ಹೊತ್ತಿಸಿ ಸಾವಿಗೀಡಾದ ಕುಟುಂಬ

ಬಾರಮುಲ್ಲಾ: ವಿಪರೀತ ಚಳಿ ಎಂದು ಮನೆಯಲ್ಲಿ ಮಲಗುವ ಮುನ್ನ ರಾತ್ರಿ ವೇಳೆ ಅಗ್ಗಿಷ್ಟಿಕೆ ಹೊತ್ತಿಸಿದ್ದ ಜಮ್ಮು-ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಒಂದು ಕುಟುಂಬ, ಮನೆಯಿಡೀ ಹೊಗೆ ತುಂಬಿಕೊಂಡಿದ್ದರಿಂದ ವಿಷಗಾಳಿ ಸೇವಿಸಿ ಸಾಮೂಹಿಕ ಸಾವಿಗೀಡಾಗಿದ್ದಾರೆ. ದಂಪತಿ ಮತ್ತು ಅವರ 3 ಮಕ್ಕಳು ಸೇರಿ ಕುಟುಂಬದ ಐವರು ಮಲಗಿದ್ದಲ್ಲೇ ಸಾವನ್ನಪ್ಪಿದ್ದಾರೆ. ಬಾರಾಮುಲ್ಲಾ ಜಿಲ್ಲೆಯಿಂದ ಬಂದಿದ್ದ ಕುಟುಂಬ ಪಂದ್ರಾಥಾನ್ ಪ್ರದೇಶದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿತ್ತು. ಚಳಿ ತಡೆಯಲಾರದೇ ಅಗ್ಗಿಷ್ಟಿಕೆ ಹೊತ್ತಿಸಿ ಮಲಗಿದ್ದೇ ಸಾವನ್ನು ಆಹ್ವಾನಿಸಿದಂತಾಗಿದೆ. ಮನೆಯಿಡಿ ಹೊಗೆ ತುಂಬಿಕೊಂಡಿದ್ದರಿಂದ ಉಸಿರುಗಟ್ಟಿ ಪ್ರಜ್ಞಾಹೀನರಾದರು. ಬಳಿಕ ನಿದ್ರೆಯಲ್ಲೇ ಅಸುನೀಗಿದರು. ಏಜಾಜ್ ಅಹ್ಮದ್ ಭಟ್(38), ಪತ್ನಿ ಸಲೀಮಾ ಭಟ್ (32) ಮತ್ತು ಅವರ ಮೂವರು ಮಕ್ಕಳಾದ ಆರೀಬ್ (3), ಹಮ್ಜಾ(18 ತಿಂಗಳು) ಮತ್ತು 1 ತಿಂಗಳ ಹಸುಗೂಸು ಮೃತರಾದವರು. ಚಳಿಗಾಲದಲ್ಲಿ ಅಗ್ಗಿಷ್ಟಿಕೆ ಬಳಸುವಾಗ ಅತ್ಯಂತ ಜಾಗ್ರತೆ ವಹಿಸಬೇಕು. ಬಾಗಿಲು, ಕಿಟಕಿ ಎಲ್ಲವನ್ನೂ ಮುಚ್ಚಿ ಅಗ್ಗಿಷ್ಟಿಕೆ ಹೊತ್ತಿಸಬಾರದು. ವಿವೇಚನೆಯಿಲ್ಲದೇ ಬಳಸಬಾರದು ಎಂದು ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಶೋಕ ಸಂದೇಶದಲ್ಲಿ ಅರಿವು ಮೂಡಿಸಲೆತ್ನಿಸಿದ್ದಾರೆ.

ಬಿಜೆಪಿ ಬಿಧುರಿ ನಿಂದನೆ: ಕಣ್ಣೀರ್ಗರೆದ ಸಿಎಂ ಅತಿಷಿ

ದೆಹಲಿ: ದೆಹಲಿ ರಸ್ತೆಗಳನ್ನು ಪ್ರಿಯಾಂಕಾ ವಾದ್ರಾ ಕೆನ್ನೆಗಳ ರೀತಿ ನುಣುಪಾಗಿ ನಿರ್ಮಿಸಲಾಗುವುದು ಎಂದು ಹೇಳುವ ಮೂಲಕ ವಿವಾದ ಸೃಷ್ಟಿಸಿದ್ದ ದೆಹಲಿ ವಿಧಾನಸಭೆ ಚುನಾವಣೆಗೆ ಕಲ್ಕಾಜಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ರಮೇಶ್ ಬಿಧುರಿ, ಎದುರು ಪಕ್ಷದವರ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡುವುದನ್ನು ಮತ್ತೂ ಮುಂದುವರಿಸಿದ್ದಾರೆ. ದೆಹಲಿ ಮುಖ್ಯಮಂತ್ರಿ ಆತಿಷಿ ಅವರ ತಂದೆ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ. ದೆಹಲಿಯಲ್ಲಿ ಸೋಮವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಅತಿಷಿ, ಬಿಧುರಿ ಮಾತುಗಳನ್ನು ಉಲ್ಲೇಖಿಸಿ ಕಣ್ಣೀರು ಹಾಕಿದರು. ಶಿಕ್ಷಕರಾಗಿದ್ದ ತಂದೆ ಬಡ ಮತ್ತು ಕೆಳ ಮಧ್ಯಮ ವರ್ಗದ ಸಾವಿರಾರು ಮಕ್ಕಳಿಗೆ ಪಾಠ ಮಾಡಿದ್ದಾರೆ. ಅವರಿಗೀಗ 80 ವರ್ಷ, ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಅವರಿಗೆ ಬೇರೊಬ್ಬರ ಸಹಾಯವಿಲ್ಲದೆ ನಡೆಯಲು ಸಹ ಸಾಧ್ಯವಿಲ್ಲ. ಚುನಾವಣೆ ರಾಜಕೀಯ ಕಾರಣಕ್ಕೆ ವೃದ್ಧ ತಂದೆಯನ್ನು ಗುರಿಯಾಗಿಸಿ ಬಿಧುರಿ ಮಾತನಾಡುವುದು ಎಷ್ಟು ಸರಿ? ಎಂದು ತೀರಾ ಭಾವುಕರಾಗಿದ್ದ ಅತಿಷಿ ಪ್ರಶ್ನಿಸಿದರು. ರಾಜಕಾರಣ ಇಷ್ಟು ಕೆಳಮಟ್ಟಕ್ಕೆ ಇಳಿಯಬೇಕೆ? 10 ವರ್ಷ ಸಂಸದರಾಗಿದ್ದ ಕಲ್ಕಾಜಿ ತಮ್ಮ ಕ್ಷೇತ್ರಕ್ಕೆ ಏನು ಅಭಿವೃದ್ಧಿ ಮಾಡಿದ್ದಾರೆ ಎಂಬುದನ್ನು ಮೊದಲು ತೋರಿಸಲಿ ಎಂದೂ ಸವಾಲೆಸೆದರು.

ಗೋಮಾಂಸ: ಬ್ರಿಟನ್‌ನಲ್ಲಿ ಪಾಕ್ ರೆಸ್ಟೋರೆಂಟ್‌ಗೆ ದಾಳಿ



ಲಂಡನ್: ಕುರಿ ಮಾಂಸದ ಜತೆ ಗೋಮಾಂಸವನ್ನೂ ಬೆರೆಸಿ ಆಹಾರ ತಯಾರಿಸಿ ಕೊಡುತ್ತಿದ್ದಾರೆ ಎಂದು ಬ್ರಿಟನ್‌ನಲ್ಲಿನ ಪಾಕಿಸ್ತಾನದ ಮಾಲೀಕನ ರೆಸ್ಟೋರೆಂಟ್ ವಿರುದ್ಧ ಸಿಟ್ಟಿಗೆದ್ದ ಭಾರತ ಮೂಲದ ಗ್ರಾಹಕರು, ಸಿಬ್ಬಂದಿಗಳನ್ನು ಥಳಿಸಿ ಪೀಠೋಪಕರಣ ಧ್ವಂಸಗೊಳಿಸಿದ್ದಾರೆ. ಈ ಸಂದರ್ಭದ ವಿಡಿಯೋ ವೈರಲ್ ಆಗಿದೆ. ಗೋವು ಹಿಂದೂಗಳಿಗೆ ಪವಿತ್ರ. ಆದರೆ, ಲಂಡನ್‌ನಲ್ಲಿನ ಶೆಫೀಲ್ಡ್‌ನ ಅಬಾಸೀನ್ ಡೈನರ್ ಹೆಸರಿನ ರೆಸ್ಟೋರೆಂಟ್‌ನಲ್ಲಿ ಗೋಮಾಂಸ ಉಣಬಡಿಸಲಾಗುತ್ತಿದೆ ಎಂದು ಭಾರತೀಯ ಗ್ರಾಹಕರು ಸಿಟ್ಟಿಗೆದ್ದಿದ್ದಾರೆ. ರೆಸ್ಟೋರೆಂಟ್ ಮಾಲೀಕ ಮಹಮ್ಮದ್ ಉಲ್ಲಾ ಮೇಲೆ ಹಲ್ಲೆ ನಡೆಸಿದ್ದಾರೆ. ರೆಸ್ಟೋರೆಂಟ್ ಕಿಟಕಿ, ಕುರ್ಚಿ, ಟೇಬಲ್‌ಗಳನ್ನು ಉರುಳಿಸಿ ಹಾನಿ ಮಾಡಿದ್ದಾರೆ. ಸ್ಥಳೀಯ ಪೊಲೀಸರು ಮಧ್ಯಪ್ರವೇಶಿಸಿ, ಭಾರತೀಯ ಗ್ರಾಹಕರನ್ನು ವಶಕ್ಕೆ ಪಡೆದಿದ್ದಾರೆ. ರೆಸ್ಟೋರೆಂಟ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ, ಲಕ್ಷ ರು. ಪೀಠೋಪಕರಣಗಳಿಗೆ ಹಾನಿ ಮಾಡಿದ್ದಾರೆಂದು ರೆಸ್ಟೋರೆಂಟ್ ಮಾಲೀಕ ದೂರಿದ್ದಾರೆ.

{ ನಿತೀಶ್ ಕುಮಾರ್ } ಬಿಹಾರ ಸಿಎಂ

ಎನ್‌ಡಿಎ ಮೈತ್ರಿಕೂಟವನ್ನು ಸಂಯುಕ್ತ ಜನತಾ ದಳ(ಜೆಡಿಯು) ಎಂದಿಗೂ ತೊರೆಯುವುದಿಲ್ಲ. ಅಂತಹ ಯಾವುದೇ ಸಾಧ್ಯತೆಯೂ ಇಲ್ಲ. ಬಿಜೆಪಿ ಜತೆ ಜೆಡಿಯು ಮೈತ್ರಿ ಬಹುದೀರ್ಘ ಕಾಲದ್ದು. ಆದರೆ, ರಾಷ್ಟ್ರೀಯ ಜನತಾ ದಳ ಮತ್ತು ಕಾಂಗ್ರೆಸ್ ಜತೆಗಿನ ಅಲ್ಪಾವಧಿ ಮೈತ್ರಿ ತಪ್ಪು ನಿರ್ಧಾರ.

ಪೊಲೀಸ್ ವಾಹನ ಸ್ಫೋಟ: 10 ಸಿಬ್ಬಂದಿ ಹುತಾತ್ಮ | ಐವರು ನಕ್ಸಲರ ಹತ್ಯೆಗೆ ಪ್ರತೀಕಾರ

ಛತ್ತೀಸ್‌ಗಢದಲ್ಲಿ ನಕ್ಸಲರಿಂದ ನರಮೇಧ

ಬಿಜಾಪುರ: ಛತ್ತೀಸ್‌ಗಢದ ಬಿಜಾಪುರ ಪ್ರದೇಶ ದಲ್ಲಿ ನಕ್ಸಲರ ಗುಂಪು ಸಂಚು ಹೂಡಿ ಪೊಲೀಸ್ ವಾಹನವನ್ನು ಸೋಮವಾರ ಸ್ಫೋಟಿಸಿದ್ದು, 10 ಪೊಲೀಸ್ ಸಿಬ್ಬಂದಿ ಹುತಾತ್ಮರಾಗಿದ್ದಾರೆ. ಇನ್ನೂ 10 ಪೊಲೀಸರು ಗಾಯಗೊಂಡಿದ್ದಾರೆ.

ಭದ್ರತಾ ಪಡೆಗಳು ಭಾನುವಾರ ನಡೆಸಿದ ಕಾರ್ಯಾಚರಣೆಯಲ್ಲಿ 5 ನಕ್ಸಲರನ್ನು ಕೊಂದು ಹಾಕಿದ್ದಕ್ಕೆ ಪ್ರತೀಕಾರ ತೀರಿಸಿಕೊಂಡಿರುವುದಾಗಿ ನಕ್ಸಲರ ಮೂಲಗಳು ಹೇಳಿರುವುದಾಗಿ ತಿಳಿದು ಬಂದಿದೆ.

ಅಬುಜ್‌ಮದ್ ಪ್ರದೇಶದಲ್ಲಿ ಭಾನುವಾರ ಯಶಸ್ವಿ ನಕ್ಸಲ್ ಧಮನ ಕಾರ್ಯಾಚರಣೆ ನಡೆಸಿ 5 ನಕ್ಸಲರನ್ನು ಕೊಂದ ಬಳಿಕ ಶಿಬಿರಕ್ಕೆ ವಾಪಸಾಗುತ್ತಿದ್ದ ಪೊಲೀಸರ ವಾಹನಗಳನ್ನು ನಕ್ಸಲರು ಸ್ಫೋಟಿಸಿದ್ದಾರೆ. ಮಾವೋವಾದಿ ನಕ್ಸಲರು ಪೊಲೀಸ್ ವಾಹನಗಳನ್ನು ಗುರಿಯಾಗಿಸಿ ಕುಟ್ರು, ಬೆದ್ರೆ ರಸ್ತೆಯಲ್ಲಿ ಐಇಡಿ ಸ್ಫೋಟಕ ಬಳಸಿ ಭೀಕರ ದಾಳಿ ನಡೆಸಿದ್ದಾರೆ. ಸ್ಥಳಕ್ಕೆ ಹೆಚ್ಚಿನ ಭದ್ರತಾ ಪಡೆಗಳು ದಾವಿಸಿವೆ. ನಕ್ಸಲರಿಗಾಗಿ ಪ್ರದೇಶದಲ್ಲಿ ಶೋಧ ನಡೆಸಲಾಗುತ್ತಿದೆ.

-ಪಿ.ಸುಂದರರಾಜ್, ಐಜಿಪಿ, ಬಸ್ತಾರ್ ವಲಯ

ಇತ್ತೀಚಿನ ದಿನಗಳಲ್ಲಿ ಇದು ನಕ್ಸಲೀಯರ ಅತಿ ದೊಡ್ಡ ದಾಳಿಯಾಗಿದೆ. ನಕ್ಸಲರ ತಂಡ ಬಿಜಾಪುರ ದಲ್ಲಿನ ಕುಟ್ರು ಅರಣ್ಯ ಪ್ರದೇಶದ ರಸ್ತೆಯಲ್ಲಿ ಹೊಂಚು ಹಾಕಿ ಕಾದು ಕುಳಿತಿತ್ತು. ಅದೇ ಮಾರ್ಗ ದಲ್ಲಿ ಸಾಗಿಬಂದ ಪೊಲೀಸರ ಬೊಲೆರೊ ವಾಹನ ಗಳನ್ನು ನೆಲಬಾಂಬ್‌ಗಳಿಂದ ಸ್ಫೋಟಿಸಿದೆ. ಸ್ಫೋಟ ದಲ್ಲಿ ವಾಹನದ ಚಾಲಕ ಸೇರಿದಂತೆ 10 ಪೊಲೀಸರು ಹುತಾತ್ಮರಾಗಿದ್ದು, ಹಲವರು ಗಾಯಗೊಂಡಿದ್ದಾರೆ.

ಹೊಂಡ ಬಿದ್ದ ರಸ್ತೆ: ಪೊಲೀಸ್ ವಾಹನಗಳ ಸ್ಫೋಟಕ್ಕೆ ನಕ್ಸಲರು ಐಇಡಿ(ಸುಧಾರಿತ ಸ್ಫೋಟಕ) ಬಳಸಿದ್ದು, ಸ್ಫೋಟದ ತೀವ್ರತೆಗೆ ರಸ್ತೆಯಲ್ಲಿ 10 ಅಡಿಗಳಷ್ಟು ಆಳದ ದೊಡ್ಡ ಹೊಂಡವೇ ನಿರ್ಮಾಣ ವಾಗಿದೆ.

ಸೇಡಿನ ಕ್ರಮ: ಅಬುಜ್ಮದ್ ಪ್ರದೇಶದಲ್ಲಿ ಜಂಟಿ ಭದ್ರತಾ ಪಡೆಗಳು ನಕ್ಸಲರ ಧಮನ ಕಾರ್ಯಾ ಚರಣೆ ನಡೆಸಿ, ಐವರನ್ನು ಕೊಂದುಹಾಕಿದ್ದರು. ಆ ಕಾರ್ಯಾಚರಣೆ ಮುಗಿಸಿದ ಬಳಿಕ 20 ಪೊಲೀಸರಿದ್ದ ವಾಹನಗಳು ಕುಟ್ರು ಬೆದ್ರೆ ರಸ್ತೆಯಲ್ಲಿ ಶಿಬಿರಕ್ಕೆ ವಾಪಸಾಗುತ್ತಿದ್ದವು. ಪೊಲೀಸ್ ವಾಹನ ಗಳನ್ನು ಗುರಿಯಾಗಿಸಿ ನಕ್ಸಲರ ತಂಡ ಯೋಜಿತ ರೀತಿ ದಾಳಿ ನಡೆಸಿದೆ. ಸುಧಾರಿತ ಸ್ಫೋಟಕ ಸಾಧನ ಬಳಸಿ ಪೊಲೀಸ್ ವಾಹನಗಳನ್ನು ಸ್ಫೋಟಿಸಿದೆ.

ಬಸ್ತಾರ್ ವಲಯದಲ್ಲೇ 217 ನಕ್ಸಲರ ಹತ್ಯೆ

2024ನೇ ಸಾಲು ಛತ್ತೀಸ್‌ಗಢದ ನಕ್ಸಲರ ಪಾಲಿಗೆ ಕೆಟ್ಟ ವರ್ಷವಾಗಿತ್ತು. ಕೇಂದ್ರ ಗೃಹ ಸಚಿವಾಲಯ ನಕ್ಸಲ್ ಚಟುವಟಿಕೆಯನ್ನು ದೇಶದಲ್ಲಿ ಇಲ್ಲದಂತೆ ಮಾಡಬೇಕೆಂಬ ದೊಡ್ಡ ಗುರಿ ಇಟ್ಟುಕೊಂಡು 2024 ರಲ್ಲಿ ಸತತ ಕಾರ್ಯಾಚರಣೆ ನಡೆಸಿ ಛತ್ತೀಸ್‌ಗಢದ ಅಬುಹ್‌ಮದ್ ಭಾಗದಲ್ಲೇ 217 ನಕ್ಸಲರನ್ನು ಕೊಂದುಹಾಕಿದೆ. ಜಾರ್ಖಂಡ್, ಛತ್ತೀಸ್‌ಗಢ, ಒಡಿಶಾ ಮತ್ತು ಬಿಹಾರ ಸೇರಿದಂತೆ ನಕ್ಸಲರಿಂದ ಅತಿಹೆಚ್ಚು ಪೀಡನೆಗೆ ಒಳಗಾದ ರಾಜ್ಯಗಳಲ್ಲಿ ಗಮನ ಕೇಂದ್ರೀಕರಿಸಿ ಸ್ಥಳೀಯ ಪೊಲೀಸರ ನಕ್ಸಲ್ ನಿಗ್ರಹ ಪಡೆ ಸಿಬ್ಬಂದಿಯನ್ನೂ ಒಳಗೊಂಡಂತೆ, ಅರೆಸೇನಾ ಪಡೆಗಳನ್ನೂ ಬಳಸಿಕೊಂಡು ಸರಣಿ ಯೋಪಾದಿಯಲ್ಲಿ ನಕ್ಸಲ್ ಧಮನ ಕಾರ್ಯಾ ಚರಣೆ ನಡೆಸಲಾಗಿದೆ. ಛತ್ತೀಸ್‌ಗಢ ರಾಜ್ಯದಲ್ಲಿ 2024ರ ಅಕ್ಟೋಬರ್ 6-7ರಲ್ಲಿ ನಾರಾಯಣಪುರ - ದಾಂತೇವಾಡಾ ಗಡಿ ಭಾಗ ದಲ್ಲಿನ ಮಾದ್ ಪ್ರದೇಶದಲ್ಲಿ ನಡೆಸಿದ ಬೃಹತ್ ಕಾರ್ಯಾಚರಣೆ ಯಲ್ಲಿ 30 ನಕ್ಸಲರನ್ನು ಹೊಡೆದುರುಳಿಸಲಾ ಯಿತು. ಇದೂ ಸೇರಿದಂತೆ 2024ರಲ್ಲಿ 7 ಜಿಲ್ಲೆಗಳ ವ್ಯಾಪ್ತಿಯ ಬಸ್ತಾರ್ ವಲಯವೊಂದ ರಲ್ಲೇ 217 ನಕ್ಸಲರನ್ನು ಕೊಲ್ಲಲಾಗಿದೆ.

ಛತ್ತೀಸ್‌ಗಢದಲ್ಲಿ ನಕ್ಸಲರು ಸೋಮವಾರ ಐಇಡಿ ಸ್ಫೋಟಿಸಿದ್ದು, ದೊಡ್ಡ ಹೊಂಡವಾಗಿದೆ.

ಪ್ರತೀಕಾರದ ದಾಳಿ

ಛತ್ತೀಸ್‌ಗಢದ ಬಸ್ತಾರ್ ಪ್ರದೇಶದಲ್ಲಿ 4 ಜಿಲ್ಲೆಗಳ ಪೊಲೀಸರನ್ನು ಒಳಗೊಂಡ ಜಂಟಿ ಭದ್ರತಾ ಪಡೆ ನಾರಾಯಣಪುರ ಮತ್ತು ದಾಂತೇವಾಡ ಜಿಲ್ಲೆಗಳ ಗಡಿಯಲ್ಲಿನ ದಕ್ಷಿಣ ಅಬುಜ್ಮಾದ್‌ನ ಅರಣ್ಯದಲ್ಲಿ ಶನಿವಾರ ಸಂಜೆಯಿಂದ ಭಾನುವಾರ ಸಂಜೆವರೆಗೂ ಮಹತ್ವದ ಕಾರ್ಯಾಚರಣೆ ನಡೆಸಿ ಐವರು ನಕ್ಸಲರನ್ನು ಕೊಂದು ಹಾಕಿ, ಅಪಾರ ಪ್ರಮಾಣದ ಶಸ್ತ್ರಾಸ್ತ್ರ ವಶಪಡಿಸಿಕೊಂಡಿತ್ತು. ಇದೇ ಕಾರ್ಯಾಚರಣೆಯಲ್ಲಿ ದಾಂತೇವಾಡದ ಡಿಆರ್‌ಜಿ ಹೆಡ್ ಕಾನ್‌ಸ್ಟೆಬಲ್ ಸನ್ನು ಕರಮ್ ಹುತಾತ್ಮರಾಗಿ ದ್ದರು. ಐವರು ಸದಸ್ಯರನ್ನು ಕೊಂದ ಜಂಟಿ ಭದ್ರತಾ ಪಡೆ ವಿರುದ್ಧ ಆಕ್ರೋಶಗೊಂಡಿದ್ದ ನಕ್ಸಲರು, ಸೇಡಿನ ಕ್ರಮವಾಗಿ ಈ ದಾಳಿ ನಡೆಸಿದ್ದಾರೆ ಎನ್ನಲಾಗಿದೆ.

ಪೊಲೀಸರು ಹುತಾತ್ಮ

ಛತ್ತೀಸ್‌ಗಢದಲ್ಲಿ ಒಂದೆಡೆ ಭದ್ರತಾ ಪಡೆಗಳು ನಕ್ಸಲರ ಸರ್ವನಾಶಕ್ಕೆ ಪಣತೊಟ್ಟು ಸತತ ಕಾರ್ಯಾಚರಣೆ ನಡೆಸಿದ್ದರೆ, ಇನ್ನೊಂದೆಡೆ ನಕ್ಸಲರೂ ಭದ್ರತಾ ಪಡೆಗಳ ಮೇಲೆ ಹೊಂಚು ಹಾಕಿ ದಾಳಿ ನಡೆಸುತ್ತಿದ್ದರು. 2024ರಲ್ಲಿ ಹಲವಾರು ಭದ್ರತಾ ಪಡೆ ಯೋಧರು ನಕ್ಸಲರ ಗುಂಡೇಟಿಗೆ, ಬಾಂಬ್ ಸ್ಫೋಟಕ್ಕೆ ಬಲಿಯಾಗಿದ್ದಾರೆ. ಬಸ್ತಾರ್ ವಲಯದಲ್ಲೇ ಬಿಜಾಪುರ ಜಿಲ್ಲೆಯಲ್ಲಿ 2024ರ ಜು.16 ರಂದು ನಕ್ಸಲರು 'ಐಇಡಿ' ಸ್ಫೋಟಿಸಿದ್ದರಿಂದ ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್‌ಗಳು ಹುತಾತ್ಮರಾದರು. ಮತ್ತಿಬ್ಬರು ಗಾಯಗೊಂಡರು. 2024ರ ಅ.19ರಂದು ನಾರಾಯಣಪುರ ಜಿಲ್ಲೆಯಲ್ಲಿಯೂ ನಕ್ಸಲರು ಐಇಡಿ ಸ್ಫೋಟಿಸಿ ಇಂಡೋ- ಟಿಬೆಟನ್ ಬಾರ್ಡರ್ ಪೊಲೀಸ್ ಪಡೆಯ ಇಬ್ಬರು ಯೋಧರನ್ನು ಕೊಂದಿದ್ದರು. ಛತ್ತೀಸ್‌ಗಢ ಇಬ್ಬರು ಕಾನ್‌ಸ್ಟೆಬಲ್ ಗಾಯ ಗೊಂಡಿದ್ದರು.

ಬುಲೆಟ್ ಟ್ರೇನ್ ಸಮಯ ಸಮೀಪಿಸಿದೆ

ದೆಹಲಿ: ಭಾರತದಲ್ಲಿ ಶೀಘ್ರವೇ ಮೊದಲ ಬುಲೆಟ್ ರೈಲು ಸಂಚಾರ ಆರಂಭಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ. ಜಮ್ಮು-ಕಾಶ್ಮೀರ, ಒಡಿಶಾ, ತೆಲಂಗಾಣದಲ್ಲಿನ ವಿವಿಧ ರೈಲ್ವೆ ಇಲಾಖೆಯ ಯೋಜನೆಗಳನ್ನು ದೆಹಲಿಯಿಂದಲೇ ವಿಡಿಯೋ ಕಾನ್ಫರೆನ್ಸ್ ಮೂಲಕ ಸೋಮವಾರ ಉದ್ಘಾಟಿಸಿದ ಪ್ರಧಾನಿ ಮೋದಿ, ಮುಂಬೈ-ಅಹಮದಾಬಾದ್ ಹೈಸ್ಪೀಡ್ ರೈಲು ಕಾರಿಡಾರ್ ಕಾಮಗಾರಿ ವೇಗವಾಗಿ ಸಾಗುತ್ತಿದ್ದು, 2026ರ ವೇಳೆಗೆ ಬುಲೆಟ್ ರೈಲು ಕಾರ್ಯಾಚರಣೆ ಪ್ರಾರಂಭಿಸುವ ಸಾಧ್ಯತೆ ಇದೆ. ಗಂಟೆಗೆ 200 ಮೈಲು ವೇಗದಲ್ಲಿ ಸಂಚರಿಸುವ ಸಾಮರ್ಥ್ಯದ ಬುಲೆಟ್ ರೈಲು ದೇಶದಲ್ಲಿ ಸಂಚರಿಸುವ ದಿನಗಳು ಹೆಚ್ಚು ದೂರವಿಲ್ಲ ಎಂದು ಹರ್ಷದಿಂದ ಹೇಳಿದರು.

ದೂರದ ಪ್ರಯಾಣದ ಸಮಯವನ್ನು ಆದಷ್ಟೂ ಕಡಿಮೆ ಮಾಡುವ ಸರಕಾರದ ಪ್ರಯತ್ನಕ್ಕೆ ಜನರು ಹೆಚ್ಚು ಮನ್ನಣೆ ನೀಡುತ್ತಿದ್ದಾರೆ. ಹಾಗಾಗಿಯೇ ಹೆಚ್ಚು ವೇಗದ ರೈಲು ಸೇವೆಗಳ ಬೇಡಿಕೆಯೂ ಹೆಚ್ಚುತ್ತಿದೆ. 136ಕ್ಕೂ ಹೆಚ್ಚು ವಂದೇ ಭಾರತ್ ರೈಲುಗಳು ಈಗ ದೇಶದಲ್ಲಿ 50ಕ್ಕೂ ಹೆಚ್ಚು ಮಾರ್ಗಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ವಂದೇ ಭಾರತ್ ಸ್ಲೀಪರ್ ರೈಲು ಗಂಟೆಗೆ 180 ಕಿ.ಮೀ.ಗಳಷ್ಟು ಗರಿಷ್ಠ ವೇಗವನ್ನು ಸಾಧಿಸಿದೆ. ಇದು ಭಾರತೀಯ ರೈಲ್ವೆಯ ಇತ್ತೀಚಿನ ಯಶಸ್ವಿ ಪ್ರಯೋಗ ಎಂದು ಪ್ರಧಾನಿ ಹರ್ಷ ವ್ಯಕ್ತಪಡಿಸಿದರು.

ರಾಯಗಡ ರೈಲ್ವೆ ವಿಭಾಗದಲ್ಲಿನ ಬೃಹತ್ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿದ ಮೋದಿ, ತೆಲಂಗಾಣದ ಚಾರ್ಲಪಲ್ಲಿ ರೈಲ್ವೆ ಟರ್ಮಿನಲ್ ಉದ್ಘಾಟಿಸಿದರು. ಈ ಸಂದರ್ಭ ತೆಲಂಗಾಣ, ಒಡಿಶಾ ಮತ್ತು ಜಮ್ಮು-ಕಾಶ್ಮೀರದ ಮುಖ್ಯಮಂತ್ರಿಗಳು, ರೈಲ್ವೆ ಸಚಿವರು ವಿಡಿಯೋ ಕಾನ್ಫರೆನ್ಸ್ ಮೂಲಕ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

12ವರೆಗೂ ತೀವ್ರ ಚಳಿ-ಮಳೆ

ದೆಹಲಿ: ಹಿಮಾಚಲ ಪ್ರದೇಶದಲ್ಲಿ ಭಾರೀ ಹಿಮಪಾತದೊಂದಿಗೆ ಮಳೆ ಸುರಿಯುವ ಸಾಧ್ಯತೆಯಿದೆ. ಜಮ್ಮು-ಕಾಶ್ಮೀರದ ಮುಜಫರಾಬಾದ್, ಲಡಾಖ್, ಬಾಲ್ಟಿಸ್ತಾನ್, ಗಿಲಿಗಿಟ್ ಮತ್ತು ಹಿಮಾಚಲ ಪ್ರದೇಶದೆಲ್ಲೆಡೆ ಹಗುರದಿಂದ ಸಾಧಾರಣ ಮಳೆ ಸಾಧ್ಯತೆಯಿದೆ ಎಂದು ಹವಾ ಮಾನ ಇಲಾಖೆ ಮುನ್ಸೂಚನೆ ನೀಡಿದೆ. ದೇಶದ ಬಹಳಷ್ಟು ರಾಜ್ಯಗಳಲ್ಲಿ ತೀವ್ರ ಚಳಿಯಿದೆ. ಇದರ ನಡುವೆಯೇ ಹಲವೆಡೆ ಮಳೆಯಾಗಿದೆ. ಮುಂದಿನ 6 ದಿನ ಈ ಭಾಗಗಳಲ್ಲಿ ಭಾರೀ ಮಳೆ ಸುರಿಯುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜನವರಿ ಮೊದಲ ವಾರದಲ್ಲೇ ಚಳಿ ಪ್ರಮಾಣ ದಿನೇದಿನೇ ಹೆಚ್ಚುತ್ತಲೆ ಇದೆ. ಭಾರತೀಯ ಹವಾಮಾನ ಇಲಾಖೆ ಪ್ರಕಾರ, ಜ.12ರ ವರೆಗೆ ವಾಯುವ್ಯ ಭಾರತದಲ್ಲಿ ಹಲವೆಡೆ ಭೀಕರ ಚಳಿ, ದಟ್ಟ ಮಂಜು ವಾತಾವರಣ ವಿರಲಿದೆ. ಇದರ ನಡುವೆಯೇ ಮಳೆಯಾಗಲಿದೆ. ಜ.7-8ರಂದು ಈಶಾನ್ಯ ರಾಜ್ಯಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಉತ್ತರ ಭಾರತದ ಕೆಲವೆಡೆ ಜ.9ರವರೆಗೆ ತಡರಾತ್ರಿ ಮತ್ತು ಮುಂಜಾನೆ ದಟ್ಟ ಮಂಜು ಮುಂದುವರಿಯಲಿದೆ. ಪರಿಣಾಮ ವಿಮಾನ ಹಾರಾಟಕ್ಕೆ ಅಡಚಣೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಪ್ರಯಾಗ್‌ರಾಜ್ ಕುಂಭಮೇಳ ಬಗ್ಗೆ ಮೌಲ್ವಿ ರಿಜ್ವಿ ಸಂಶಯ: ಸಿಎಂ ಯೋಗಿಗೆ ಪತ್ರ

ಮುಸ್ಲಿಮರ ಸಾಮೂಹಿಕ ಮತಾಂತರ ಯತ್ನ

ಲಖನೌ: ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ಸದ್ಯದಲ್ಲೇ ನಡೆಯಲಿರುವ ಮಹಾ ಕುಂಭಮೇಳ ಸಂದರ್ಭ ಮುಸ್ಲಿಮರ ಸಾಮೂಹಿಕ ಮತಾಂತರ ನಡೆಯಲಿದೆ ಎಂಬ ಮಾಹಿತಿ ಸಿಕ್ಕಿದೆ ಎಂದು ಮುಸ್ಲಿಂ ಮೌಲ್ವಿಯೊಬ್ಬರು ಸೋಮವಾರ ಆತಂಕ ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲದೇ, ಇದೇ ವಿಚಾರವಾಗಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಪತ್ರವನ್ನೂ ಬರೆದಿದ್ದಾರೆ.

ಮೂರು ನದಿಗಳ ಸಂಗಮ ಸ್ಥಳವಾಗಿರುವ ಪ್ರಯಾಗರಾಜ್ ನಗರದಲ್ಲಿ 12 ವರ್ಷಗಳಿಗೊಮ್ಮೆ ಮಹಾಕುಂಭಮೇಳ ನಡೆಯುತ್ತದೆ. ಈ ಬಾರಿಯ ಮಹಾ ಕುಂಭಮೇಳ ಜ.13 ರಿಂದ ಫೆ.26ರವರೆಗೆ ನಡೆಯಲಿದೆ. ಅಖಿಲ ಭಾರತ ಮುಸ್ಲಿಂ ಜಮಾತ್ ಅಧ್ಯಕ್ಷ ಮೌಲಾನಾ ಶಹಾಬುದ್ದೀನ್ ರಜ್ವಿ ಬರೇಲ್ವಿ ಅವರು ಸಿಎಂ ಯೋಗಿ ಅವರಿಗೆ ಪತ್ರ ಬರೆದಿದ್ದು, ಸಾಮೂಹಿಕ ಮತಾಂತರ ನಡೆಯದಂತೆ ಕ್ರಮ ಕೈಗೊಳ್ಳುವಂತೆಯೂ ಆಗ್ರಹಿಸಿದ್ದಾರೆ.

ಮಹಾ ಕುಂಭಮೇಳದಲ್ಲಿ ಮುಸ್ಲಿಮರು ಭಾಗಿಯಾಗಬಾರದು ಎಂದು ತಮ್ಮ ಧರ್ಮದವರಿಗೆ ಮೌಲ್ವಿ ಸಲಹೆಯನ್ನೂ ನೀಡಿದ್ದಾರೆ. ಕುಂಭಮೇಳದ ಸಂದರ್ಭ ನೂರಾರು ಮುಸ್ಲಿಮರ ಮತಾಂತರ ಯೋಜನೆ ಹಾಕಿಕೊಂಡಿದ್ದಾರೆ. ಈ ಬಗ್ಗೆ ನಂಬಲರ್ಹ ಮೂಲಗಳಿಂದ ತಮಗೆ ಮಾಹಿತಿ ಸಿಕ್ಕಿದೆ. ಸರಕಾರ ಈ ಯೋಜನೆ ವಿಫಲಗೊಳಿಸಬೇಕು. ಅದರ ಹೊಣೆ ರಾಜ್ಯ ಸರಕಾರದ್ದು ಎಂದು ಮುಖ್ಯಮಂತ್ರಿಗೆ ಜವಾಬ್ದಾರಿಯುತ ನಾಗರಿಕನಾಗಿ ಪತ್ರ ಬರೆದಿದ್ದೇನೆ ಎಂದು ಸುದ್ದಿಸಂಸ್ಥೆ ತಿಳಿಸಿದ್ದಾರೆ.

2023ರ ನವೆಂಬರ್‌ನಲ್ಲಿ ಅಖಾರ ಪರಿಷತ್ ಮತ್ತು ನಾಗಾ ಸಾಧುಗಳು ಸಭೆ ನಡೆಸಿದಾಗ, ಪ್ರಯಾಗ್‌ರಾಜ್‌ನಲ್ಲಿನ ಮಹಾ ಕುಂಭಮೇಳ ಸಂದರ್ಭ ಮುಸ್ಲಿಮರು ಅಂಗಡಿ ಇಡುವುದನ್ನು ನಿಷೇಧಿಸುವ ಬಗ್ಗೆ ಚರ್ಚಿಸಿದ್ದಾರೆ. ಹಾಗಾಗಿಯೇ ತೊಂದರೆಯಾಗುವುದನ್ನು ತಪ್ಪಿಸಲು ಮಹಾಕುಂಭಮೇಳಕ್ಕೆ ಹೋಗದಂತೆ ನಮ್ಮ ಧರ್ಮದವರಿಗೆ ಸಲಹೆ ನೀಡಿದ್ದೇನೆ ಎಂದೂ ಹೇಳಿದ್ದಾರೆ.

ಚರ್ಚೆ ಇದೇ ಮೊದಲು

2023ರ ಅಖಿಲ ಭಾರತೀಯ ಅಖಾಡ ಪರಿಷತ್ ಸನಾತನ ಧರ್ಮದ ನಿಜವಾದ ಅನುಯಾಯಿಗಳೆಂದು ಸಾಬೀತು ಮಾಡಲು ಹಿಂದೂಗಳ ಅಂಗಡಿಗಳಿಂದ ಮಾತ್ರ ಮಹಾಕುಂಭ ಮೇಳಕ್ಕಾಗಿ ಸರಕುಗಳನ್ನು ಖರೀದಿಸಿ ಎಂದು ಕರೆ ನೀಡಿತ್ತು. ಮಹಾ ಕುಂಭಮೇಳ ಹಿಂದೂಗಳ ಅತಿದೊಡ್ಡ ಧಾರ್ಮಿಕ ಕಾರ್ಯಕ್ರಮ. ಅದು ಮುಸ್ಲಿಮರು ಚರ್ಚೆಯ ಕೇಂದ್ರವಾಗಿರುವುದು ಇದೇ ಮೊದಲು ಎಂದು ಜಮಿಯತ್ ಉಲಮಾ-ಎ-ಹಿಂದ್ ಉತ್ತರ ಪ್ರದೇಶ ಘಟಕ ಕಾನೂನು ಸಲಹೆಗಾರ ಮೌಲಾನಾ ಕಾಬ್ ರಶೀದಿ ಹೇಳಿದ್ದಾರೆ.

ಭಾರತ ಜತೆ ಸಂಘರ್ಷಕ್ಕಿಳಿದಿದ್ದ ಜಸ್ಟಿನ್ ಟ್ರುಡೊ ನಾಳೆ ರಾಜೀನಾಮೆ ಸಾಧ್ಯತೆ

ಕೆನಡಾ ಪ್ರಧಾನಿ ಜಸ್ಟಿನ್ ಸದ್ಯವೇ ಜಸ್ಟ್‌ಔಟ್

ಟೊರಂಟೊ: ತಮ್ಮ ದೇಶದಲ್ಲಿರುವ ಖಲಿಸ್ತಾನಿಗಳನ್ನು ಬೆಂಬಲಿಸುತ್ತಾ ಭಾರತದ ಜತೆ ಸದಾ ಸಂಘರ್ಷಕ್ಕೆ ಇಳಿದಿದ್ದ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅಧಿಕಾರ ಕೊನೆಗೊಳ್ಳುವ ದಿನ ಸಮೀಪಿಸುತ್ತಿದೆ. 9 ವರ್ಷಗಳಿಂದ ಅಧಿಕಾರದಲ್ಲಿರುವ ಟ್ರುಡೊ ಸದ್ಯದಲ್ಲೇ (ಈ ವಾರ) ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಲಿದ್ದಾರೆ ಎಂದು ಅಧಿಕೃತ ಮೂಲಗಳಿಂದ ತಿಳಿದು ಬಂದಿದೆ.

ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಬುಧವಾರ ನಡೆಯಲಿದ್ದು, ಅದಕ್ಕೂ ಮೊದಲೇ ಟ್ರುಡೊ ರಾಜೀನಾಮೆ ನೀಡಲಿದ್ದಾರೆ ಎಂದು ವರದಿಯಾಗಿದೆ. ಲಿಬರಲ್ ಪಕ್ಷದ ನಾಯಕರೂ ಆಗಿರುವ ಪ್ರಧಾನಿ ಜಸ್ಟಿನ್ ಟ್ರುಡೊ, ಈ ವಾರ ಎರಡೂ ಹುದ್ದೆಗಳಿಗೆ ರಾಜೀನಾಮೆ ನೀಡುವ ಸಾಧ್ಯತೆಯಿದೆ ಎಂದು ಲಿಬರಲ್ ಪಕ್ಷದ ಮೂಲಗಳನ್ನು ಉಲ್ಲೇಖಿಸಿ 'ಗ್ಲೋಬ್ ಅಂಡ್ ಮೇಲ್' ಮಾಧ್ಯಮ ಸಂಸ್ಥೆ ವರದಿ ಮಾಡಿದೆ.

ಟ್ರುಡೊ ನೇತೃತ್ವದ ಸಚಿವ ಸಂಪುಟದಲ್ಲಿ ಹಣಕಾಸು ಸಚಿವೆಯಾಗಿದ್ದ ಕ್ರಿಸ್ಟಿಯಾ ಫ್ರೀಲ್ಯಾಂಡ್ ಅವರು ಡಿ.16ರಂದು ರಾಜೀನಾಮೆ ನೀಡಿದ ಬಳಿಕ ಸರಕಾರ ಮತ್ತು ಲಿಬರಲ್ ಪಕ್ಷದೊಳಗಿನ ಆಂತರಿಕ ಕಲಹ ಹೆಚ್ಚುತ್ತಲೇ ಇದೆ. ಪರಿಸ್ಥಿತಿ ಈಗ ಬಿಗಡಾಯಿಸಿದ್ದು, ಲಿಬರಲ್ ಪಕ್ಷದ ಸಂಸದರೇ ಟ್ರುಡೊ ರಾಜೀನಾಮೆಗೆ ಒತ್ತಾಯಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ. 2015ರಲ್ಲಿ ಎಡಪಂಥೀಯ ಧೋರಣೆಯ ಟ್ರುಡೊವನ್ನು ಅಧಿಕಾರಕ್ಕೇರಿಸಿದ ದೇಶದ ಜನತೆ ಈಗ ಆಡಳಿತ ವೈಖರಿ ಬಗ್ಗೆ ಭ್ರಮನಿರಸನಗೊಂಡಿದ್ದಾರೆ. ಇದೇ ಕಾರಣವಾಗಿ ಅಕ್ಟೋಬರ್‌ನಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಲಿಬರಲ್ ಪಕ್ಷ ಹಿನ್ನಡೆ ಅನುಭವಿಸಲಿದೆ ಎಂಬ ಸಮೀಕ್ಷಾ ವರದಿ ಆಧರಿಸಿ ಪಕ್ಷದ ಇತರೆ ನಾಯಕರೆಲ್ಲಾ ಟ್ರುಡೊ ಪದತ್ಯಾಗಕ್ಕೆ ಒತ್ತಡ ಹೇರುತ್ತಿದ್ದಾರೆ. ಟ್ರುಡೊ ನೇತೃತ್ವದಲ್ಲೇ ಚುನಾವಣೆಗೆ ಹೋದರೆ ಹೀನಾಯ ಸೋಲು ಕಾಣಬೇಕಾಗುತ್ತದೆ ಎಂಬ ಭಯ ಪಕ್ಷದ ನಾಯಕರಲ್ಲಿದೆ ಎಂದು ವರದಿಯಾಗಿದೆ.

ಖಲಿಸ್ತಾನಿ ಓಲೈಕೆ: ಭಾರತದ ಜತೆ ಜಸ್ಟಿನ್ ಟ್ರುಡೊ ಕಿರಿಕಿರಿ

ಕೆನಡಾದಲ್ಲಿ ಸಿಖ್ ಧರ್ಮೀಯರು ಗಣನೀಯ ಸಂಖ್ಯೆಯಲ್ಲಿರುವುದರಿಂದ ಅವರನ್ನು ಓಲೈಕೆ ಮಾಡುವ ಸಲುವಾಗಿ ಪ್ರಧಾನಿ ಜಸ್ಟಿನ್ ಟ್ರುಡೊ, ತಮ್ಮ ಅಧಿಕಾರವಧಿಯ ಮೊದಲ ದೆಸೆಯಿಂದಲೇ 'ಖಲಿಸ್ತಾನ್ ಪರ' ನಿಲುವು ತಳೆದಿದ್ದರು. ಅದು ಭಾರತದ ಜತೆಗಿನ ಅನುಗಾಲದ ಮೈತ್ರಿಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬುದು ತಿಳಿದಿದ್ದರೂ ಟ್ರುಡೊ ವಿದೇಶಾಂಗ ನೀತಿಯಲ್ಲಿ ಬದಲಾವಣೆ ಮಾಡಿಕೊಂಡಿದ್ದರು. ಇದು ಎರಡೂ ದೇಶಗಳ ನಡುವಿನ ಸುದೀರ್ಘ ಸಂಬಂಧಕ್ಕೆ ಹುಳಿ ಹಿಂಡಿತು. ಅದರಲ್ಲೂ ಖಲಿಸ್ತಾನಿ ಉಗ್ರನೆಂದೇ ಭಾರತ ಘೋಷಿಸಿರುವ ಹರದೀಪ್ ಸಿಂಗ್ ನಿಜ್ಜರ್, ಕೆನಡಾದ ಸರ್ರೆಯಲ್ಲಿ 2023ರ ಜೂನ್ 18ರಂದು ಕೊಲೆಯಾದ ಬಳಿಕವಂತೂ ಜಸ್ಟಿನ್ ಟ್ರುಡೊ ಭಾರತದ ವಿರುದ್ಧ ಸರಣಿಯೋಪಾದಿಯಲ್ಲಿ ಆರೋಪ ಮಾಡುತ್ತಾ ಬಂದರು. ನಿಜ್ಜರ್ ಹತ್ಯೆಯಲ್ಲಿ ಭಾರತದ ರಾಜತಾಂತ್ರಿಕರ, ರಾಷ್ಟ್ರೀಯ ಭದ್ರತಾ ಅಧಿಕಾರಿಗಳ ಕೈವಾಡವಿದೆ ಎಂಬ ಗಂಭೀರ ಆರೋಪವನ್ನೂ ಮಾಡಿದರು. ಇದೇ ವಿಚಾರವಿಟ್ಟುಕೊಂಡು ಭಾರತದ ವಿರುದ್ಧ ಅಮೆರಿಕ, ಬ್ರಿಟನ್, ಯೂರೋಪ್ ದೇಶಗಳು ಹಾಗೂ ಆಸ್ಟ್ರೇಲಿಯ ಬಳಿಯೂ ದೂರು ಕೊಂಡೊಯ್ದರು.

ನಾಳೆ ಲಿಬರಲ್ ಪಕ್ಷದ ಕಾರ್ಯಕಾರಿಣಿ ಸಭೆ

ಲಿಬರಲ್ ಪಕ್ಷದ ಕಾರ್ಯಕಾರಿಣಿ ಬುಧವಾರ ನಿಗದಿಯಾಗಿದೆ. ಈ ವೇಳೆ ಟ್ರುಡೊ ಪ್ರಧಾನಿ ಹುದ್ದೆ ಮತ್ತು ಪಕ್ಷದ ನಾಯಕತ್ವಕ್ಕೆ ರಾಜೀನಾಮೆ ಘೋಷಿಸಲಿದ್ದಾರೆ. ಪಕ್ಷದ ಮುಂದಿನ ನಾಯಕತ್ವದ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಲಿಬರಲ್ ಪಕ್ಷದ ಮೂರು ಅಧಿಕೃತ ಮೂಲಗಳನ್ನು ಉಲ್ಲೇಖಿಸಿ 'ಗ್ಲೋಬ್ ಅಂಡ್ ಮೇಲ್' ಪತ್ರಿಕೆ ವರದಿ ಪ್ರಕಟಿಸಿದೆ. ಲಿಬರಲ್ ಪಕ್ಷದಲ್ಲಿ ಆಂತರಿಕ ಕಲಹ ಹೆಚ್ಚುತ್ತಿದೆ. ಪಕ್ಷದ ಹಲವು ನಾಯಕರು ಟ್ರುಡೊ ನಾಯಕತ್ವದ ಬಗ್ಗೆ ನಂಬಿಕೆ ಕಳೆದುಕೊಂಡಿದ್ದಾರೆ. ಹಾಗಾಗಿ, ಟ್ರುಡೊ ರಾಜೀನಾಮೆ ನೀಡುವುದು ಅನಿವಾರ್ಯವಾಗಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಅಫ್ಘಾನಿಸ್ತಾನ ವೈಮಾನಿಕ ದಾಳಿ ಬಗ್ಗೆ ಭಾರತ ಪ್ರತಿಕ್ರಿಯೆ

ನೆರೆಹೊರೆ ದೂಷಿಸುವುದು ಪಾಕಿಸ್ತಾನದ ಹಳೇ ಚಾಳಿ

ದೆಹಲಿ: ಅಫ್ಘಾನಿಸ್ತಾನದ ಮೇಲೆ ಪಾಕಿಸ್ತಾನದ ವೈಮಾನಿಕ ದಾಳಿಯನ್ನು ಭಾರತ ತೀವ್ರವಾಗಿ ಖಂಡಿಸಿದೆ. ಪಾಕ್‌ನ ಆಡಳಿತಗಾರರು ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳುವುದಕ್ಕಾಗಿ ನೆರೆಹೊರೆ ದೇಶಗಳನ್ನು ದೂಷಿಸುತ್ತಾರೆ. ಅದು ಆ ದೇಶದ ನಾಯಕರ ಹಳೆಯ ಚಾಳಿಯಾಗಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಸೋಮವಾರ ಟೀಕಾ ಪ್ರಹಾರ ನಡೆಸಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಉಗ್ರರ ಅಡಗುತಾಣಗಳ ಮೇಲಿನ ದಾಳಿ ಎಂದು ಹೇಳಿಕೊಂಡು ಪಾಕ್ ವಾಯು ಪಡೆ, ಅಫ್ಘಾನಿಸ್ತಾನದ ಗಡಿ ಭಾಗದ ಜನವಸತಿ ಪ್ರದೇಶ ಗಳ ಮೇಲೆಯೇ ವೈಮಾನಿಕ ದಾಳಿ ನಡೆಸಿದೆ. ಇದರಿಂದ ಮಹಿಳೆಯರು, ಮಕ್ಕಳು ಸೇರಿದಂತೆ ಆಫ್ಘನ್ ನಾಗರಿಕರು ಜೀವ ಕಳೆದುಕೊಂಡಿದ್ದಾರೆ. ಈ ಕುರಿತ ಮಾಧ್ಯಮ ವರದಿಗಳನ್ನು ಭಾರತ ಗಮನಿಸಿದೆ. ಅಮಾಯಕ ನಾಗರಿಕರ ಮೇಲಿನ ಯಾವುದೇ ದಾಳಿಯನ್ನು ಬಲವಾಗಿ ಖಂಡಿಸುತ್ತೇವೆ ಎಂದು ಹೇಳಿದ್ದಾರೆ. ಇದೇ ವಿಷಯವಾಗಿ ಅಫ್ಘಾನಿಸ್ತಾನ ಸರಕಾರದ ವಕ್ತಾರರ ಪ್ರತಿಕ್ರಿಯೆಯನ್ನೂ ಗಮನಿಸಿದ್ದೇವೆ. ಪಾಕ್ ತನ್ನ ಕೆಟ್ಟ ಚಾಳಿಯನ್ನು ಮೊದಲು ನಿಲ್ಲಿಸಲಿ ಎಂದು ಕಿಡಿಕಾರಿದ್ದಾರೆ.

76 ಯಾನಿಗಳಿದ್ದ ವಿಮಾನಕ್ಕೆ ಬೆಂಕಿ: ತುರ್ತು ಭೂಸ್ಪರ್ಶ

ಕಠ್ಮಂಡು: ನೇಪಾಳದ ಬುದ್ಧ ವಿಮಾನದ ಎಡ ಭಾಗದ ಇಂಜಿನ್‌ನಲ್ಲಿ ಸೋಮವಾರ ಬೆಳಗ್ಗೆ ಬೆಂಕಿ ಕಾಣಿಸಿಕೊಂಡ ಪರಿಣಾಮ ಕಠ್ಮಂಡುವಿನ ತ್ರಿಭುವನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿಸಲಾಗಿದೆ. ವಿಮಾನ ಕಠ್ಮಂಡುವಿನಿಂದ ಭದ್ರಾಪುರಕ್ಕೆ ತೆರಳುತ್ತಿದ್ದಾಗ ಎಂಜಿನ್‌ನಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದು, ಬೆಂಕಿಗೆ ಕಾರಣವಾಗಿದೆ. ವಿಮಾನದಲ್ಲಿ ಸಿಬ್ಬಂದಿ ಸೇರಿ 76 ಮಂದಿ ಇದ್ದರು. ವಿಮಾನ ಸಂಖ್ಯೆ 953 ಕಠ್ಮಂಡುವಿನಿಂದ ಭದ್ರಾಪುರಕ್ಕೆ ತೆರಳುತ್ತಿತ್ತು. ಬೆಂಕಿಗೆ ತುತ್ತಾಗಿದ್ದ ವಿಮಾನವನ್ನು ಸುರಕ್ಷಿತವಾಗಿ ಸೋಮವಾರ ಬೆಳಗ್ಗೆ 11.15ಕ್ಕೆ ಕೆಳಗಿಳಿಸಲಾಗಿದೆ. ಪ್ರಯಾಣಿಕರನ್ನು ಭದ್ರಾಪುರಕ್ಕೆ ಬೇರೊಂದು ವಿಮಾನದಲ್ಲಿ ಕಳುಹಿಸಿಕೊಡಲು ವ್ಯವಸ್ಥೆ ಮಾಡಲಾಗಿದೆ ಎಂದು ಬುದ್ಧ ಏರ್ ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರಗೀತೆಗೆ ಅವಮಾನ: ರಾಜ್ಯಪಾಲರ ಸಭಾತ್ಯಾಗ

ಚೆನ್ನೈ: ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಅವರು ಸೋಮವಾರ ವಿಧಾನಸಭಾ ಅಧಿವೇಶನದಲ್ಲಿ ಸಾಂಪ್ರದಾಯಿಕ ಭಾಷಣ ಮಾಡಲು ನಿರಾಕರಿಸಿದರು. ತಮ್ಮ ಭಾಷಣದ ಆರಂಭದಲ್ಲಿ ರಾಷ್ಟ್ರಗೀತೆ ಹಾಡದೇ ಇರುವುದನ್ನು ಖಂಡಿಸಿ ಪ್ರತಿಭಟಿಸಿದರು. ರಾಷ್ಟ್ರಗೀತೆಗೆ ಬದಲು ರಾಜ್ಯಗೀತೆ ಹಾಡಲಾಗಿದೆ. ತಮಿಳುನಾಡು ವಿಧಾನಸಭೆಯಲ್ಲಿ ಇಂದು ಭಾರತ ಸಂವಿಧಾನ ಮತ್ತು ರಾಷ್ಟ್ರಗೀತೆಗೆ ಮತ್ತೊಮ್ಮೆ ಅಪಮಾನ ಮಾಡಲಾಗಿದೆ ಎಂದು ರವಿ ಆರೋಪಿಸಿದ್ದಾರೆ. 2025 ರಲ್ಲಿ ವಿಧಾನಸಭೆ ಮೊದಲ ವಿಧಾನಸಭೆ ಅಧಿವೇಶನ ಇಂದಿನಿಂದ ಆರಂಭವಾಗಿದೆ. ರಾಜ್ಯಗೀತೆ ಹಾಡಿದ ಬಳಿಕ ರಾಷ್ಟ್ರಗೀತೆ ಹಾಡುವಂತೆ ಒತ್ತಡ ಕೇಳಿ ಬಂದಿತ್ತು. ಆದರೆ ಅವರ ಬೇಡಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳದ ಕಾರಣ ಬೇಸರಗೊಂಡ ಭಾಷಣ ಮಾಡದೇ ಸದನದಿಂದ ಹೊರನಡೆದರು.

ಬಿಹಾರ ಪರೀಕ್ಷೆ ವಿವಾದ: ನಿರಶನ ನಿರತ ಪಿಕೆ ಸೆರೆ

ಪಟನಾ: ಬಿಹಾರ ರಾಜ್ಯದ ಪಿಎಸ್‌ಸಿ ಪರೀಕ್ಷೆ ರದ್ದುಗೊಳಿಸಲು ಆಗ್ರಹಿಸಿ ಪಟನಾ ನಗರದ ಗಾಂಧಿ ಮೈದಾನದಲ್ಲಿ ಆಮರಣಾಂತ ಉಪವಾಸ ನಡೆಸುತ್ತಿರುವ 'ಜನ ಸುರಾಜ್ ಪಕ್ಷ'ದ ಸಂಸ್ಥಾಪಕ, ಚುನಾವಣಾ ರಾಜಕೀಯ ತಂತ್ರಗಾರ ಪ್ರಶಾಂತ್ ಕಿಶೋರ್ ಅವರನ್ನು ಸೋಮವಾರ ಪೊಲೀಸರು ಬಂಧಿಸಿದ್ದಾರೆ. ಬಿಹಾರ ಲೋಕಸೇವಾ ಆಯೋಗ ನಡೆಸಿದ್ದ 70ನೇ ಸಂಯುಕ್ತ (ಪ್ರಿಲಿಮಿನರಿ) ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದ್ದು, ಪರೀಕ್ಷೆ ರದ್ದುಪಡಿಸಿ ಹೊಸದಾಗಿ ಪರೀಕ್ಷೆ ನಡೆಸಬೇಕು ಎಂದು ಆಗ್ರಹಿಸಿ ಉದ್ಯೋಗಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆಗೆ ಪ್ರಶಾಂತ್ ಕಿಶೋರ್ ಬೆಂಬಲಿಸಿದ್ದಾರೆ. ಜ.2ರಿಂದ ಅನಿರ್ದಿಷ್ಟಾವಧಿ ಉಪವಾಸವನ್ನೂ ಆರಂಭಿಸಿದ್ದಾರೆ. ವೈದ್ಯರು, ಕಿಶೋರ್ ಪೂರ್ಣ ಆರೋಗ್ಯವಾಗಿದ್ದಾರೆಂದು ಹೇಳಿದ್ದಾರೆ.

ಮಿಜೋರಾಂನಲ್ಲಿ ಪ್ರಥಮ ಜನರೇಶನ್ ಬೇಟಾ ಜನ್ಮ!

ಐಜ್ವಾಲ್: 2025ರಿಂದ ಮತ್ತೊಂದು ಹೊಸ ಪೀಳಿಗೆ 'ಜನರೇಶನ್ ಬೇಟಾ'(ಜೆನ್ ಬೇಟಾ) ಅಸ್ತಿತ್ವಕ್ಕೆ ಬಂದಿದೆ. ಭಾರತದಲ್ಲಿ ಹೊಸ ತಲೆಮಾರಿನ ಪ್ರಥಮ ಮಗು ಮಿಜೋರಾಂನ ಐಜ್ವಾಲ್‌ನ ಡರ್‌ಟ್ಲಾಂಗ್‌ನಲ್ಲಿನ ಸಿನೊಡ್ ಆಸ್ಪತ್ರೆಯಲ್ಲಿ ಜನವರಿ 1ರ ನಸುಕಿನ ಸಮಯ 12 ಗಂಟೆ 03 ನಿಮಿಷದಲ್ಲಿ ಜನಿಸಿದೆ. ಮಗು 3.12 ಕಿಲೊ ತೂಕವಿದ್ದು, ಆರೋಗ್ಯವಾಗಿದೆ. ಯಾವುದೇ ಆರೋಗ್ಯ ಸಮಸ್ಯೆ ಇಲ್ಲ ಎಂದು ಆಸ್ಪತ್ರೆ ದೃಢೀಕರಿಸಿದೆ. ಪೋಷಕರಾದ ಜೆಡಿ ರೆಮ್ರುತಸಂಗ-ರಾಮಜೀರ್‌ಮಾವಿ ಹಸುಗೂಸಿಗೆ 'ಫ್ರಾಂಕಿ' ಎಂದು ಹೆಸರಿಸಿಟ್ಟಿದ್ದಾರೆ. ಫ್ರಾಂಕಿಗೆ ಒಬ್ಬ ಅಕ್ಕ ಕೂಡ ಇದ್ದಾಳೆ. ಸಮಾಜಶಾಸ್ತ್ರಜ್ಞ ಮಾರ್ಕ್ ಮೆಕ್ಕ್ರಿಂಡಲ್ 'ಜೆನ್ ಬೇಟಾ' ಸೃಷ್ಟಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಎರಡು ತಿಂಗಳು ಉಚಿತ ಚಿಕಿತ್ಸಾ ಶಿಬಿರ

ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯದಲ್ಲಿ ಜ. 7 ರಿಂದ ಮಾರ್ಚ್ 7ರ ವರೆಗೆ ಎರಡು ತಿಂಗಳ ಕಾಲ ಕಿಡ್ನಿ ಫೆಲ್ಯುರ್ ಮತ್ತು ಕಿಡ್ನಿಗೆ ಸಂಬಂಧಿಸಿದ ಇತರೆ ರೋಗಗಳಿಗೆ ವಿಶೇಷವಾಗಿ ಹೆಚ್ಚಿನ ಕ್ರೀಯಾಟೆನಿನ್ ಹೋಂದಿರುವ ರೋಗಿಗಳಿಗೆ ವಿಶೇಷ ಸಲಹೆ ಹಾಗೂ ಉಚಿತ ಚಿಕಿತ್ಸಾ ಶಿಬಿರ ನಡೆಯಲಿದೆ. ಪ್ರತಿದಿನ ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಈ ಶಿಬಿರ ನಡೆಯಲಿದ್ದು, ಕಿಡ್ನಿ ಸಂಬಂಧಿತ ಸಮಸ್ಯೆ ಎದುರಿಸುತ್ತಿರುವ ರೋಗಿಗಳು ಈ ಉಚಿತ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಕಾಲೇಜಿನ ಪ್ರಾಚಾರ್ಯ ಡಾ.ಸಂಜಯ ಕಡ್ಲಿಮಟ್ಟಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿ ಮತ್ತು ಪೂರ್ವ ನೋಂದಣಿಗಾಗಿ ಡಾ. ಆಶ್ವಿನಿ ಸಜ್ಜನವರ- ಮೊಬೈಲ್ ನಂ. 7406737888 ಮತ್ತು 8073853981 ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಪಿತ್ತ ರೋಗಗಳಿಗೆ ಉಚಿತ ಚಿಕಿತ್ಸೆ ಶಿಬಿರ

ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯದಲ್ಲಿ ಜನೇವರಿ 8 ರಿಂದ ಜನೇವರಿ 10ರ ವರೆಗೆ ಮೂರು ದಿನಗಳ ಕಾಲ ಆಮ್ಲಪಿತ್ತ(ಅಸಿಡಿಟಿ) ಅಂದರೆ ಸಾಮಾನ್ಯ ಲಕ್ಷಣಗಳಾದ ಎದೆ ಉರಿ, ಹುಳಿತೇಗು, ಅಜೀರ್ಣ, ಪಿತ್ತವಾಂತಿ, ತಲೆ ನೋವು, ಅರುಚಿ ಮುಂತಾದ ಪಿತ್ತದ ತೊಂದರೆಗಳಿಗೆ ಸಂಬಂಧಿಸಿದ ರೋಗಗಳ ಉಚಿತ ತಪಾಸಣೆ ಮತ್ತು ಚಿಕಿತ್ಸೆ ಶಿಬಿರ ನಡೆಯಲಿದೆ. ಈ ನಿಗದಿತ ದಿನಗಳಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯ ವರೆಗೆ ತಪಾಸಣೆ ಮತ್ತು ಚಿಕಿತ್ಸೆ ನಡೆಯಲಿದ್ದು, ಸಾರ್ವಜನಿಕರು ಈ ಉಚಿತ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಾಲೇಜಿನ ಪ್ರಾಚಾರ್ಯ ಡಾ. ಸಂಜಯ ಕಡ್ಲಿಮಟ್ಟಿ ಅವರು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮತ್ತು ಪೂರ್ವ ನೋಂದಣಿಗಾಗಿ ಡಾ.ಕಿರಣ ಸಿ. ಎಂ, ಮೊಬೈಲ್ ನಂ. 8095808011 ಮತ್ತು 7204748422 ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

ಕೌಶಲ್ಯ ತರಬೇತಿಗೆ ಅರ್ಜಿ ಆಹ್ವಾನ

ಸಿಂದಗಿ: ಕೇಂದ್ರ ಸರಕಾರದ ಸಮರ್ಥ ಜವಳಿ ಇಲಾಖೆಯಲ್ಲಿನ ಯೋಜನೆಯಾದ ಉಚಿತ ಹೋಲಗೆ ತರಬೇತಿ ಹಾಗೂ ಕೌಶಲ ತರಬೇತಿಗೆ ಪಟ್ಟಣದ ವಿಜಯಪುರ ರಸ್ತೆಯ ಎನ್.ಎಸ್ .ಹಿರೇಮಠ ಬಿಲ್ಡಿಂಗ್‌ನಲ್ಲಿರುವ ಓಜೋನ್ ಸಲ್ಯುಶನ್ ಕೇಂದ್ರದ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗುತ್ತಿದೆ. 18-40ರ ವಯೋಮಾನದ ಎಲ್ಲಾ ವರ್ಗದ ಯುವಕ ಯುವತಿಯರಿಗೆ ಯಾಂತ್ರೀಕೃತ ಹೊಲಿಗೆ ಯಂತ್ರ ತರಬೇತಿ, ವ್ಯಕ್ತಿತ್ವ ವಿಕಸನ ತರಬೇತಿ, ಹಾಗೂ ಇನ್ನಿತರ ಕೌಶಲ ತರಬೇತಿ ಪ್ರಾರಂಭ ಮಾಡಲಾಗುತ್ತಿದೆ. ತರಬೇತಿ ಮುಗಿದ ನಂತರ ಪ್ರಮಾಣ ಪತ್ರ ನೀಡುವುದರ ಜತೆಗೆ ಉದ್ಯೋಗ ಅವಕಾಶ ಕಲ್ಪಿಸಲಾಗುವುದು. ತರಬೇತಿ ಅವಧಿಯಲ್ಲಿ ಪಠ್ಯಪುಸ್ತಕ ಸೇರಿದಂತೆ ಇನ್ನಿತರ ಹೋಲಿಗೆ ಸಾಮಗ್ರಿಗಳನ್ನು ನೀಡಲಾಗುತ್ತದೆ. ಆಸಕ್ತ ಅಭ್ಯರ್ಥಿಗಳು ಆಧಾರ್ ಕಾರ್ಡ್, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, 4ಭಾವಚಿತ್ರದ ಜೊತೆಗೆ ಜಾತಿ ಮತ್ತು ಆದಾಯ ಪ್ರಮಾಣಪತ್ರ ನೀಡಬೇಕು. ಕನಿಷ್ಠ 7ನೇ ತರಗತಿ ಪಾಸಾಗಿರಬೇಕು. ಮೇಲೆ ತಿಳಿಸಿದ ಎಲ್ಲ ದಾಖಲಾತಿಗಳನ್ನು ದ್ವಿಪ್ರತಿಯಲ್ಲಿ ಖುದ್ದಾಗಿ ಕಾರ್ಯಾಲಯಕ್ಕೆ ಬಂದು ಅರ್ಜಿ ಸಲ್ಲಿಸಬೇಕು. ಮತ್ತು ಹೆಚ್ಚಿನ ಮಾಹಿತಿಗಾಗಿ 9472974160 ಸಂಖ್ಯೆಗೆ ಸಂಪರ್ಕಿಸಬೇಕು ಎಂದು ಸಂಸ್ಥೆಯ ಮುಖ್ಯಸ್ಥ ರಾಮ ಮೇತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ .

ಚಿರತೆ ಪ್ರತ್ಯಕ್ಷ, ನಿವಾಸಿಗಳು ಆತಂಕ

ವಿಜಯಪುರ: ನಗರದ ಸಿಂದಗಿ ಬೈಪಾಸ್ ಬಳಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಚಿರತೆ ಓಡಾಟ ನಡೆಸಿದ್ದು, ಮುನೇಶ್ವರ ನಗರದಲ್ಲಿ

ಚಿರತೆ ಓಡಾಟ ಸಿಸಿ ಕೆಮರಾದಲ್ಲಿ ಸೆರೆಯಾಗಿದೆ. ಮುನೇಶ್ವರ ನಗರದ ಆನಂದ ಮಂಗಳವೇಡೆಯವರ ಮನೆ ಬಳಿ ಚಿರತೆ ಓಡಾಡಿರುವ ವಿಡಿಯೋ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ನಗರದಲ್ಲಿ ಚಿರತೆ ಪ್ರತ್ಯಕ್ಷ ಸುದ್ದಿ ಹರಡುತ್ತಲೇ ನಿವಾಸಿಗಳಲ್ಲಿ ಆತಂಕ ಮನೆ ಮಾಡಿದ್ದು, ಜನರು ಭಯದಿಂದ ಮನೆಯಿಂದ ಹೊರ ಬರುತ್ತಿಲ್ಲ. ಜನರು ಸುರಕ್ಷಿತ ಕ್ರಮ ತೆಗೆದುಕೊಳ್ಳುವಂತೆ ಅರಣ್ಯಾಧಿಕಾರಿಗಳ ಸೂಚನೆ ನೀಡಿದ್ದು, ಚಿರತೆ ಸೆರೆ ಹಿಡಿಯಲು ಪ್ರಯತ್ನ ಮುಂದುವರೆಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಸತೀಶ್ ಜಾರಕಿಹೊಳಿ} ಸಚಿವ

ಮುಂಜಾನೆ ಎದ್ದು ಹತ್ತು ಆರೋಪ ಅವರು ಹೇಳುತ್ತಾರೆ, ನಾವು ಹೇಳುತ್ತೇವೆ ಎಂದಾದಾಗ ಆರೋಪಕ್ಕೆ ಗಟ್ಟಿಯಾದ ಕಾರಣ ಬೇಕಲ್ಲವೆ. ಗುತ್ತಿಗೆದಾರ ಸಚೀನ್ ಆತ್ಮಹತ್ಯೆ ಪ್ರಕರಣ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಜೀನಾಮೆ ಯಾಕೆ ಕೊಡಬೇಕು.

ಗುತ್ತಿಗೆದಾರ ಆತ್ಮಹತ್ಯೆ, ಬಾಣಂತಿಯರ ಸರಣಿ ಸಾವು, ಬಸ್ ಟಿಕೆಟ್ ದರ ಏರಿಕೆಗೆ ಖಂಡನೆ

ರಾಜ್ಯ ಸರಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

ವಿಜಯಪುರ: ರಾಜ್ಯದಲ್ಲಿ ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ, ಬಸ್ ಟಿಕೆಟ್ ದರ ಏರಿಕೆ, ಬಾಣಂತಿಯರ ಸರಣಿ ಸಾವಿನ ಪ್ರಕರಣ ವಿಚಾರಗಳಿಗೆ ರಾಜ್ಯ ಸರಕಾರದ ವಿರುದ್ಧ ಜಿಲ್ಲಾ ಬಿಜೆಪಿಯಿಂದ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಎಸ್. ಪಾಟೀಲ ಕೂಚಬಾಳ ಮಾತನಾಡಿ, ಗುತ್ತಿಗೆದಾರ ಸಚಿನ ಪಂಚಾಳ ಅವರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ದೇಶಾದ್ಯಂತ ಸುದ್ದಿಯಾಗಿದೆ. ಸಚಿವ ಪ್ರಿಯಾಂಕ್ ಖರ್ಗೆ ಆಪ್ತ ರಾಜು ಕಪನೂರ ಸೋಲಾಪುರದ ಸುಪಾರಿ ಹಂತಕರನ್ನು ಕರೆತಂದು ನಮ್ಮ ಪಕ್ಷದ ಮುಖಂಡರು ಹಾಗೂ ಒಬ್ಬ ಸ್ವಾಮೀಜಿಯವರ ಹತ್ಯೆಗೆ ಸಂಚು ರೂಪಿಸಿರುವುದು ಬಹಿರಂಗವಾಗಿದೆ. ಆತನ ಹೆಸರು ಉಲ್ಲೇಖವಾಗಿದೆ. ಆದರೂ ಸಚಿವರು ನನ್ನ ಹೆಸರು ಡೆತ್ ನೋಟ್‌ನಲ್ಲಿ ಇಲ್ಲ ಎಂದು ವಾದಿಸುತ್ತಿದ್ದಾರೆ. ಪ್ರಕರಣದ ಸಂಬಂಧ ಸಚಿವ ಪ್ರಿಯಾಂಕ್ ಖರ್ಗೆಯವರು ರಾಜೀನಾಮೆ ನೀಡಿ ನಿಸ್ಪಕ್ಷಪಾತ ತನಿಖೆಗೆ ಸಹಕರಿಸಬೇಕೆಂದು ಆಗ್ರಹಿಸಿದರು.

ಅಲ್ಲದೇ ಸಾರಿಗೆ ಇಲಾಖೆ ಬಸ್ ಗಳ ಟಿಕೇಟ್ ದರ ಪರಿಷ್ಕರಣೆಗೊಳಿಸಿದ್ದು ಶೇ.15 ರಷ್ಟು ದರ ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ. ಬಸ್ ಪ್ರಯಾಣಿಕರಿಗೆ ಹೊಸ ಟಿಕೇಟ್ ದರದ ಬಿಸಿ ತಟ್ಟಿದ್ದು ಎಲ್ಲೆಡೆ ರಾಜ್ಯ ಸರ್ಕಾರದ ವಿರುದ್ಧ ಜನಸಾಮಾನ್ಯರು ಸರ್ಕಾರದ ಗ್ಯಾರಂಟಿಗಳ ವೈಫಲ್ಯದ ಪ್ರಭಾವ ಬೆಲೆ ಏರಿಕೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ರಾಜ್ಯ ಸರ್ಕಾರ ತಕ್ಷಣ ಬಸ್ ಟಿಕೇಟ್ ದರ ಇಳಿಸಬೇಕೆಂದು ಆಗ್ರಹಿಸಿದರು.

ಈ ವೇಳೆ ಜಿಲ್ಲಾ ಬಿಜೆಪಿ ಮುಖಂಡರಾದ ವಿಜುಗೌಡ ಪಾಟೀಲ, ಕಾಸುಗೌಡ ಬಿರಾದಾರ, ಉಮೇಶ ಕಾರಜೋಳ, ಗೋಪಾಲ ಘಟಕಾಂಬಳೆ, ಉಮೇಶ ಕೊಳಕೂರ, ಮಲ್ಲಿಕಾರ್ಜುನ ಜೋಗೂರ, ಶಂಕರ ಹೂಗಾರ, ಚಿದಾನಂದ ಚಲವಾದಿ, ಮಳುಗೌಡ ಪಾಟೀಲ, ಈರಣ್ಣ ರಾವೂರ, ಸಾಬು ಮಾಶ್ಯಾಳ, ಚಂದ್ರಶೇಖರ ಕವಟಗಿ, ಸಂಧ್ಯಾ ಪಾಟೀಲ ಕನಮಡಿ, ಪಾಲಿಕೆ ಸದಸ್ಯರಾದ ಶಿವರುದ್ರ ಬಾಗಲಕೋಟ, ಪ್ರೇಮಾನಂದ ಬಿರಾದಾರ, ರಾಜು ಮಗಿಮಠ, ರಾಹುಲ ಜಾಧವ ಇತರರಿದ್ದರು.

ರಾಜ್ಯದಲ್ಲಿ ಮುಂದುವರೆದಿರುವ ಬಾಣಂತಿಯರ ಸರಣಿ ಸಾವುಗಳ ಹಿನ್ನೆಲೆ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ವತಿಯಿಂದ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಯಿತು.

ಬಾಣಂತಿಯರ ಸರಣಿ ಸಾವು: ಬಿಜೆಪಿ ಮಹಿಳಾ ಘಟಕ ಆಕ್ರೋಶ:

ರಾಜ್ಯದಲ್ಲಿ ಮುಂದುವರೆದಿರುವ ಬಾಣಂತಿಯರ ಸರಣಿ ಸಾವುಗಳ ಹಿನ್ನೆಲೆ ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯ ಧೋರಣೆ ಎಂದು ಆರೋಪಿಸಿ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ವತಿಯಿಂದ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಯಿತು. ನಗರದ ಅಂಬೇಡ್ಕರ್ ಸರ್ಕಲ್‌ದಿಂದ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಎಡಿಸಿ ಸೋಮಲಿಂಗ ಗೆಣ್ಣೂರ ರವರಿಗೆ ಮನವಿ ಸಲ್ಲಿಸಲಾಯಿತು.

> **ರಾಜ್ಯದಲ್ಲಿ ಬಾಣಂತಿಯರ ಸರಣಿ ಸಾವುಗಳಾಗುತ್ತಿದ್ದರೂ ಇದಕ್ಕೂ ತಮಗೂ ಸಂಬಂಧವಿಲ್ಲದಂತೆ ನಿರ್ಲಕ್ಷವಹಿಸಿರುವ ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ ಅವರನ್ನು ಮುಖ್ಯಮಂತ್ರಿಗಳು ಕೂಡಲೇ ಸಚಿವ ಸಂಪುಟದಿಂದ ವಜಾಗೊಳಿಸಬೇಕು.**
> ಶಿಲ್ಪಾ ಕುದುರಗೊಂಡ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷೆ

ಈ ವೇಳೆ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಸ್ವಪ್ನಾ ಕಣಮುಚನಾಳ ಮಾತನಾಡಿ, ಸರಕಾರಿ ಆಸ್ಪತ್ರೆಗಳಲ್ಲಿ ಸಾವನಪ್ಪಿರುವ ಬಾಣಂತಿಯರಿಗೆ ರಾಜ್ಯ ಸರ್ಕಾರ ಕೂಡಲೇ 25 ಲಕ್ಷ ರೂಪಾಯಿ ಪರಿಹಾರ ನೀಡಬೇಕು. ರಾಜ್ಯಾದ್ಯಂತ ಬಡ ಕುಟುಂಬಗಳ ತಾಯಂದಿರು, ಹಸುಗೂಸುಗಳ ಸಾವುನೋವುಗಳು ನಿರಂತರವಾಗಿ ಸಂಭವಿಸುತ್ತಿವೆ. ಇದರ ವಿರುದ್ಧ ಜನಸಾಮಾನ್ಯರು ಬೀದಿಗಿಳಿದು ಪ್ರತಿಭಟಿಸಿದರೂ ರಾಜ್ಯ ಸರಕಾರ ಎಚ್ಚೆತ್ತು ಕ್ರಮ ಕೈಗೊಳ್ಳದೇ ತಾತ್ಸಾರ ಧೋರಣೆ ಅನುಸರಿಸುತ್ತಿದೆ. ಕಾಂಗ್ರೆಸ್ ಸರಕಾರಕ್ಕೆ ಜನಸಾಮಾನ್ಯರು, ಬಡವರ ಶಾಪ ತಟ್ಟಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಮಹಿಳಾ ಮುಖಂಡರಾದ ಸುಷ್ಮಿತಾ ವಾಂಡಕರ, ಸಾಮಿ ಹಿಕ್ಕನಗುತ್ತಿ, ಮಧು ಪಾಟೀಲ, ಗೀತಾ ಚೌಧರಿ, ವಿಜಯಲಕ್ಷ್ಮೀ ರೂಗಿಮಠ, ಅನುಸೂಯಾ ಮದರಿ, ಭಾರತಿ ಶಿವಣಗಿ, ಲಕ್ಷ್ಮೀ ಕನ್ನೊಳ್ಳಿ, ನೀಲಮ್ಮ ಯಡ್ರಾಮಿ, ಸುವರ್ಣಾ ಯಡ್ರಾಮಿ, ಮಾಮವ್ವ ಉಪ್ಪಾರ, ದಿಶಾ ಚಿಕ್ಕನಾಥ, ಸ್ಮಿತಾ ಹುಣಶ್ಯಾಳ, ಪ್ರೇಮಾ ಕರಡಿ, ರಾಜಲಕ್ಷ್ಮೀ ಪರವತ್ತನೂರ, ಛಾಯಾ ಬಿ.ಎಮ್., ಭಾರತಿ ಪೂತದಾರ, ಸುನಂದಾ ಗಿರಣಿವಡ್ಡರ, ಬೋರಮ್ಮ ನಾವಿ, ಶಾಮಲಾ ಬಗಲಿ, ರೇಣುಕಾ ಗುನ್ನಾಪೂರ ಹಾಗೂ ಇತರರು ಉಪಸ್ಥಿತರಿದ್ದರು.

ರಾಜ್ಯ ಸರಕಾರದ ವಿರುದ್ಧ ಜಿಲ್ಲಾ ಬಿಜೆಪಿಯಿಂದ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಜೆಎಸ್‌ಎಸ್ ಆಸ್ಪತ್ರೆಗೆ ಡಿಎಸ್, ಡಿವೈಎಸ್ಪಿ ಭೇಟಿ

ಆರೋಗ್ಯ ಭಾಗ್ಯ ಯೋಜನೆ' ಮಾನ್ಯತೆಗಾಗಿ ಜೆ.ಎಸ್.ಎಸ್ ಆಸ್ಪತ್ರೆಗೆ ಡಿಎಸ್, ಡಿವೈಎಸ್ಪಿ ಭೇಟಿ

ವಿಜಯಪುರ: ನಗರದ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸುಪರ್ ಸ್ಪೇಶಾಲಿಟಿ ಆಸ್ಪತ್ರೆಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಅಧಿಕಾರಿಗಳು/ ಸಿಬ್ಬಂದಿಗಳಿಗೆ ಹಾಗೂ ಅವರ ಅವಲಂಬಿತರಿಗೆ 'ಆರೋಗ್ಯ ಭಾಗ್ಯ ಯೋಜನೆ' ಯಡಿ ವೈದ್ಯಕೀಯ ಚಿಕಿತ್ಸೆ ಕಲ್ಪಿಸಲು ಮಾನ್ಯತೆ ನೀಡುವ ಹಿನ್ನೆಲೆಯಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ಶಿವಾನಂದ ಮಾಸ್ತಿಹೊಳಿ ಹಾಗೂ ಡಿ.ವೈ. ಎಸ್.ಪಿ ಬಸವರಾಜ ಯಲಗಾರ ಅವರು ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿ, ಪರಿಶೀಲಿಸಿದರು.

ಆಸ್ಪತ್ರೆಯ ಆಪರೇಶನ್ ಥಿಯೇಟರ್, ಡಯಾಲಸಿಸ್ ಸೆಂಟರ್, ಪ್ರಯೋಗಾಲಯ ಸೇರಿದಂತೆ ಪ್ರತಿಯೊಂದು ವಿಭಾಗಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ಆಸ್ಪತ್ರೆಯಲ್ಲಿರುವ ಆಧುನಿಕ ಚಿಕಿತ್ಸಾ ಸೌಲಭ್ಯಗಳು, ನುರಿತ ವೈದ್ಯರ ತಂಡ, ಶುಚಿತ್ವ ಅತ್ಯುತ್ತಮ ವಾತಾವರಣ ಕಂಡು ಶ್ಲಾಘನೀಯ ವ್ಯಕ್ತಪಡಿಸಿದರು.

ಆಸ್ಪತ್ರೆಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಶರಣ ಮಳಖೇಡ್, ಈಗಾಗಲೇ ನಮ್ಮ ಆಸ್ಪತ್ರೆಯಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನೌಕರರಿಗೆ ಹಾಗೂ ಅವಲಂಬಿತರಿಗೆ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಪಡೆದುಕೊಳ್ಳಲು ಮಾನ್ಯತೆ ನೀಡಲಾಗಿದೆ. ಅಲ್ಲದೆ, ಆಸ್ಪತ್ರೆಯಲ್ಲಿ ಇ.ಎಸ್.ಐ, ಜ್ಯೋತಿ ಸಂಜೀವಿನಿ, ಎಲ್ಲಾ ವಿಮೆ ಸೌಲಭ್ಯಗಳ ಅಡಿಯಲ್ಲಿ ಉತ್ತಮ ದರ್ಜೆಯ ವೈದ್ಯಕೀಯ ಚಿಕಿತ್ಸೆ ಲಭ್ಯ ಇರುತ್ತವೆ ಎಂದು ಮಾಹಿತಿ ನೀಡಿದರು.

ನಗರ ಶಾಸಕರ ಆಪ್ತ ಸಹಾಯಕರಾದ ಉಮೇಶ ಕೋರೆ, ಅಂತರರಾಷ್ಟ್ರೀಯ ಯೋಗಿಕ್ ನ್ಯೂರೋ ಸರ್ಜನ್ ಡಾ.ಮಯೂರ್ ಕಾಕು, ಎಚ್.ಆರ್ ಹೆಡ್ ಲೀಲಾವತಿ, ವ್ಯವಸ್ಥಾಪಕ ಅರುಣ, ವೀರಣ್ಣ ಮತ್ತಿತರರು ಇದ್ದರು.

'ಸಿದ್ಧೇಶ್ವರ ರತ್ನ' ಪ್ರಶಸ್ತಿ ಘೋಷಣೆ

ಸುದ್ದಿಗೋಷ್ಠಿಯಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿದರು.

ವಿಜಯಪುರ: ಶತಮಾನೋತ್ಸವ ಕಂಡ ಇಲ್ಲಿನ ಪ್ರತಿಷ್ಠಿತ ಶ್ರೀ ಸಿದ್ಧೇಶ್ವರ ಸಂಸ್ಥೆಯ ವತಿಯಿಂದ ಪ್ರತೀ ವರ್ಷ ಶ್ರೀ ಸಿದ್ಧೇಶ್ವರ ಸಂಕ್ರಮಣ ಜಾತ್ರೆಯ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಕೊಡಮಾಡುತ್ತಿದ್ದ ಸಿದ್ಧೇಶ್ವರ ರತ್ನ ಪ್ರಶಸ್ತಿಯನ್ನು ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಮೂರ್ನಾಲ್ಕು ವರ್ಷಗಳಿಂದ ಸ್ಥಗಿತಗೊಳಿಸಲಾಗಿದ್ದು, ಮುಂದಿನ ವರ್ಷದಿಂದ ಮತ್ತೆ ಈ ಪ್ರಶಸ್ತಿ ನೀಡಲು ಪ್ರಾರಂಭಿಸಲಾಗುವುದು ಎಂದು ಸಂಸ್ಥೆಯ ಅಧ್ಯಕ್ಷರಾದ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸಿದ್ಧೇಶ್ವರ ಸಂಕ್ರಮಣ ಜಾತ್ರೆಯ ವಿಷಯವಾಗಿ ರವಿವಾರ ಸಿದ್ಧೇಶ್ವರ ಕಲಾಭವನದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋವಿಡ್ ಗಿಂತ ಮುಂಚೆ ಪ್ರತೀ ವರ್ಷವೂ ಸಿದ್ಧೇಶ್ವರ ಸಂಸ್ಥೆಯಿಂದ ಸಿದ್ಧೇಶ್ವರ ರತ್ನ ಪ್ರಶಸ್ತಿ ನೀಡುತ್ತ ಬರಲಾಗುತಿತ್ತು. ಈ ಹಿಂದೆ ಹಲವಾರು ಜನ ಸಾಧಕರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಕಾರಣಾಂತರದಿಂದ ಪ್ರಶಸ್ತಿ ನೀಡುವುದನ್ನು ನಿಲ್ಲಿಸಲಾಗಿದ್ದು, ಮುಂದಿನ ವರ್ಷದಿಂದ ಮತ್ತೆ ಸಿದ್ಧೇಶ್ವರ ರತ್ನ ಪ್ರಶಸ್ತಿ ನೀಡಲಾಗುವುದು ಎಂದರು.

ಈ ಹಿಂದೆ ಸಿದ್ಧೇಶ್ವರ ರತ್ನ ಪ್ರಶಸ್ತಿಯ ಜತೆಗೆ 25 ಸಾವಿರ ರೂ. ನಗದು ಪುರಸ್ಕಾರ ನೀಡಲಾಗುತ್ತಿತ್ತು. ಮುಂದಿನ ವರ್ಷದಿಂದ ಪ್ರಶಸ್ತಿಯ ನಗದು ಮೊತ್ತವನ್ನು ಒಂದು ಲಕ್ಷ ರೂಪಾಯಿಗೆ ಹೆಚ್ಚಿಸಲಾಗುವುದು ಎಂದು ಅವರು ಘೋಷಿಸಿದರು.

ತೊಗರಿಗೆ 12 ಸಾವಿರ ರು.ಬೆಂಬಲ ಬೆಲೆ ನೀಡಿ

ವಿಜಯಪುರ: ರೈತರು ಬೆಳೆದಿರುವ ತೊಗರಿ ಬೆಳೆಗೆ ಪ್ರತಿ ಕ್ವಿಂಟಾಲ್ ಗೆ ರು.12 ಸಾವಿರ ಇದ್ದ ದರ ಏಕಾಏಕಿ ರು. 7,550 ಕ್ಕೆ ಇಳಿಕೆ ಮಾಡಿ ಖರೀದಿಸುವಂತೆ ಕೇಂದ್ರ ಸರಕಾರ ಆದೇಶಿಸಿರುವುದು ಖಂಡನೀಯ, ಕೂಡಲೇ ಪ್ರತಿ ಕ್ವಿಂಟಾಲ್ ತೊಗರಿಗೆ ರು.12 ಸಾವಿರ ಬೆಂಬಲ ಬೆಲೆ ಘೋಷಣೆ ಮಾಡಿ ವರ್ಷಪೂರ್ತಿ ಖರೀದಿಸಬೇಕು ಎಂದು ಅಖಂಡ ಕರ್ನಾಟಕ ರೈತ ಸಂಘ ಮತ್ತು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಆಗ್ರಹಿಸಿದವು.

ರೈತ ಸಂಘಗಳ ಪದಾಧಿಕಾರಿಗಳು ನಗರದ ಅಂಬೇಡ್ಕರ್ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ನೆಲದ ಮೇಲೆ ತೊಗರಿ ಸುರಿದು ಆಕ್ರೋಶ ವ್ಯಕ್ತಪಡಿಸಿದರು. ನಂತರ ಜಿಲ್ಲಾಧಿಕಾರಿ ಟಿ.ಬೂಬಾಲನ್ ಅವರ ಮೂಲಕ ರಾಜ್ಯ ಹಾಗೂ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಈ ವೇಳೆ ಅಖಂಡ ಕರ್ನಾಟಕ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ಸದಾ ರೈತರ ಪರ ಎಂದು ರೈತರ ಮತ ಪಡೆದ ಜನ ಪ್ರತಿನಿಧಿಗಳು ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಳಿಕ ರೈತರನ್ನು ಕಡೆಗಣಿಸಿ ಬೀದಿಗೆ ತಳ್ಳುತ್ತಿವೆ, ಸಬ್ ಕೆ ಸಾತ್, ಸಬ್ ಕೆ ವಿಕಾಸ್'', '' ಅಚ್ಛೆ ದಿನ ಆಯೇಗೆ'' ಎಂದು ಬೋಗಳೆ ಬೀಡುತ್ತಿದ್ದು, ಇವರಿಗೆ ರೈತರ ಬಗ್ಗೆ ಕಿಂಚಿತ್ತು ಕಾಳಜಿ ಇಲ್ಲ, ರೈತರಿಗೆ ಒಳ್ಳೆಯ ದಿನ ಬರಲೇ ಇಲ್ಲ, ರೈತರು ತಮ್ಮ ಜಮೀನುಗಳಿಗೆ ಮಾಡಿರುವ ಖರ್ಚಿನಷ್ಟು ಆದಾಯವಾಗದಿದ್ದರೆ ಆತ್ಮಹತ್ಯೆ ಒಂದೇ ದಾರಿಯಾಗುತ್ತದೆ. ಕೇಂದ್ರ ಸರ್ಕಾರವೇ ಇದಕ್ಕೆ ನೇರ ಹೊಣೆಯಾಗುತ್ತದೆ. ಸರಕಾರ ತೊಗರಿಗೆ ಕೂಡಲೇ 12 ಸಾವಿರ ಬೆಂಬಲ ಬೆಲೆ ಕೊಟ್ಟು ತೊಗರಿ ಖರೀಧಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಮಾತನಾಡಿ, ಕಳೆದ ಮೂರ್ನಾಲ್ಕು ವರ್ಷಗಳಿಂದ ಸರಿಯಾದ ಮಳೆಯಾಗದೇ ಅತೀವೃಷ್ಠಿ, ಅನಾವೃಷ್ಠಿ ಸೇರಿದಂತೆ ಕಳಪೆ ಬೀಜ, ಹವಾಮಾನದ ವೈಪರಿತ್ಯ ಇಂತಹ ಅನೇಕ ಕಾರಣಗಳಿಂದ ರೈತರು ಸಾಕಷ್ಟು ಬೆಳೆ ನಷ್ಟ ಅನುಭವಿಸಿದ್ದಾರೆ. ಅಲ್ಪಸ್ವಲ್ಪ ತೊಗರಿ ಬೆಳೆದಿರುವ ರೈತರಿಗೆ ಬೆಲೆ ಸಿಗದೇ ನಷ್ಟ ಅನುಭವಿಸುವಂತಾಗಿದೆ, ಸ್ವಲ್ಪ ದಿನಗಳ ಹಿಂದೆ ರು.200 ಕಿಲೋ ಲೆಕ್ಕದಲ್ಲಿ ತೊಗರಿ ಬೇಳೆ ಮಾರಾಟ ಮಾಡಿರುವುದು ನಾವೂ ನೋಡಿದ್ದೇವೆ, ಈಗ ರೈತರ ಬೆಳೆ ಬಂದಾಗ ರು.75 ಕ್ಕೆ ಗೆ ಒಂದು ಕಿಲೋ ತೊಗರಿ ಮಾಡಿರುವುದು ಖಂಡನೀಯ. ಕೇಂದ್ರ ಮತ್ತು ರಾಜ್ಯ ಸರಕಾರಗಳು ರೈತ ವಿರೋಧಿ ಎಂದು ಇದರಿಂದ ಸ್ಪಷ್ಟವಾಗಿ ಕಾಣುತ್ತದೆ, ಈ ಕಳ್ಳಾಟ ಬಿಟ್ಟು ತೊಗರಿಗೆ ಪ್ರತಿ ಕ್ವಿಂಟಲ್‌ಗೆ 12 ಸಾವಿರ ಕೊಟ್ಟು ಖರೀದಿಸಬೇಕು, ಇಲ್ಲವಾದಲ್ಲಿ ರಾಜ್ಯಾದ್ಯಂತ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ತೊಗರಿಗೆ ರು.12 ಸಾವಿರ ಬೆಂಬಲ ಬೆಲೆ ಘೋಷಣೆ ಮಾಡಬೇಕೆಂದು ಅಖಂಡ ಕರ್ನಾಟಕ ರೈತ ಸಂಘ ಮತ್ತು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಆಗ್ರಹಿಸಿದವು.

> **ಕೇಂದ್ರ ಮತ್ತು ರಾಜ್ಯ ಸರಕಾರಗಳು ರೈತ ವಿರೋಧಿ ಎಂದು ಇದರಿಂದ ಸ್ಪಷ್ಟವಾಗಿ ಕಾಣುತ್ತದೆ, ಈ ಕಳ್ಳಾಟ ಬಿಟ್ಟು ತೊಗರಿಗೆ ಪ್ರತಿ ಕ್ವಿಂಟಲ್‌ಗೆ 12 ಸಾವಿರ ಕೊಟ್ಟು ಖರೀದಿಸಬೇಕು, ಇಲ್ಲವಾದಲ್ಲಿ ರಾಜ್ಯಾದ್ಯಂತ ಹೋರಾಟ ಮಾಡಲಾಗುವುದು.**
> ಸಂಗಮೇಶ ಸಗರ, ಹಸಿರು ಸೇನೆಯ ಜಿಲ್ಲಾಧ್ಯಕ್ಷ

ಈ ವೇಳೆ ರೈತ ಸಂಘದ ಜಿಲ್ಲಾ ಸಂಚಾಲಕರುಗಳಾದ ಪಾಂಡು ಹ್ಯಾಟಿ, ಬಾಲಪ್ಪಗೌಡ ಲಿಂಗದಳ್ಳಿ, ಈರಣ್ಣ ದೇವರಗುಡಿ, ರಾಮನಗೌಡ ಪಾಟೀಲ, ಮಹಾದೇವಪ್ಪ ತೇಲಿ, ವೀರಣ್ಣ ಸಜ್ಜನ, ಜಕರಾಯ ಪೂಜಾರಿ, ಗಿರಿಮಲ್ಲಪ್ಪ ದೊಡಮನಿ, ನಾಗಪ್ಪ ಬೂದಗೋಲಿ, ಶಿವಪ್ಪ ಸುಯ್ಯಾಳ, ರಾಜೇಸಾ ವಾಲಿಕಾರ, ಹಣಮಂತ ಮುರಾಳ, ಬಸಯ್ಯ ಮಠ, ಲಾಲಸಾಬ ಹಳ್ಳೂರ, ಶ್ರೀನಿವಾಸ ಗೊಟಗುಣಕಿ, ಪ್ರಭುಗೌಡ ಬಿರಾದಾರ, ಬಂದಗಿಸಾಬ ಹಳ್ಳೂರ, ಶೇಖು ಮುರಡಿ, ರಮೇಶ ಹಂದ್ರಾಳ, ಬಸು ಬಡಗೇರ, ಹಣಮೇಶ ಹಂದ್ರಾಳ, ಭೀಮಣ್ಣ ಮಾದರ, ಆಸೀಫ ಹಳ್ಳೂರ, ಆಕಾಶ ಬಿರಾದಾರ, ಮಹದೇವಪ್ಪ ಬಿರಾದಾರ, ಸಾಹೇಬಗೌಡ ಪಾಟೀಲ, ಬಾಬು ಹಡಪದ ಸೇರಿದಂತೆ ಅನೇಕರು ಇದ್ದರು.

ಜನರ ಕಷ್ಟಗಳಿಗೆ ಸ್ಪಂದಿಸಿ ಪರಿಹಾರ ಒದಗಿಸಿ:ಶಾಸಕ

ಸಿಂದಗಿ: ತಮ್ಮ ತಮ್ಮ ಕ್ಷೇತ್ರದಲ್ಲಿ ಶಾಸಕರು ಗ್ರಾಪಂ ವ್ಯಾಪ್ತಿಯಲ್ಲಿ ಜನಸಂಪರ್ಕ ಸಭೆಯನ್ನು ಮಾಡಿ ಜನರ ಕಷ್ಟಗಳಿಗೆ ಸ್ಪಂದಿಸಿ ಸ್ಥಳದಲ್ಲಿಯೇ ಪರಿಹಾರ ಒದಗಿಸಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ಈ ಸಭೆಗಳನ್ನು ಮಾಡಲಾಗುತ್ತಿದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು. ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಬಂದಾಳ ಗ್ರಾಮದಲ್ಲಿ ಹಮ್ಮಿಕೊಂಡ ಜನಸಂಪರ್ಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಜೆಜೆಎಮ್ ಯೋಜನೆಯಡಿಯಲ್ಲಿ ಮನೆ ಮನೆಗಳಿಗೆ ಸರಿಯಾಗಿ ನೀರು ಬರುತ್ತಿಲ್ಲವೆಂದು ಗ್ರಾಮಸ್ಥರು ತಮ್ಮ ಅಹವಾಲನ್ನು ನೀಡುತ್ತಿದ್ದಾರೆ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಓವರ್ ಹೆಡ್ ಟ್ಯಾಂಕಿಗೆ ನೀರು ಸರಬರಾಜಾಗುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಪಂ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯ ಕ್ರಿಯಾ ಯೋಜನೆಯನ್ನು ಹಾಕಿಕೊಂಡು ಪ್ರಾಥಮಿಕ, ಪ್ರೌಢಶಾಲೆಗೆ ನೀರಿನ ಸೌಲಭ್ಯ, ಶೌಚಾಲಯ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಹಾಕಿಕೊಳ್ಳುವಂತೆ ಸಲಹೆ ನೀಡಿದರು. ಚಿಕ್ಕಸಿಂದಗಿ ವಾರ್ಡ್ ಸಂಖ್ಯೆ 2ರಲ್ಲಿ ಸಮುದಾಯ ಶೌಚಾಲಯ ನಿರ್ಮಿಸುವಂತೆ ಚಿಕ್ಕ ಸಿಂದಗಿ ಗ್ರಾಮದ ಮಹಿಳೆಯರು ಶಾಸಕರಿಗೆ ಮನವಿ ಮಾಡಿದರು. ಸಾರ್ವಜನಿಕರ ಸಹಕಾರ ಇರದೇ ಇರುವುದರಿಂದ ಕೆಲಸ ನಿಂತಿದ್ದು, ತಾವು ಸಹಕರಿಸಿದರೆ ಕಾಮಗಾರಿ ಬೇಗ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ತಿಳಿಸುತ್ತೇನೆ ಎಂದು ಶಾಸಕರು ತಿಳಿಸಿದರು. ಈ ವೇಳೆ ರಾಮು ಅಗ್ನಿ ಪ್ರದೀಪಕುಮಾರ ಹಿರೇಮಠ್, ಗ್ರಾಮ ಪಂಚಾಯತ್ ಅಧ್ಯಕ್ಷ ಯಮನಪ್ಪ ಹೊಸಮನಿ, ಸರೋಜನಿ ನಾಗಪ್ಪ,ಸಶ್ರೀಶೈಲ್ ಕವಲಗಿ, ಟಿಅರವಿಂದ ಡೊಣೂರ,ನಿತ್ಯಾನಂದ ಯಲಗೋಡ, ಪಿಡಿಒ ರಾಘವೇಂದ್ರ ಚಕ್ರವರ್ತಿ ಇದ್ದರು.

ಜನಸಂಪರ್ಕ ಸಭೆಯನ್ನು ಉದ್ಘಾಟಿಸಿ ಶಾಸಕ ಅಶೋಕ ಮನಗೂಳಿ ಉದ್ಘಾಟಿಸಿದರು.

ಅಮಿತ್ ಶಾ ಹೇಳಿಕೆ ಖಂಡಿಸಿ ಮೆರವಣಿಗೆ

ಬಸವನಬಾಗೇವಾಡಿ: ಸಂಸತ್ತಿನಲ್ಲಿ ಕೇಂದ್ರ ಸಚಿವ ಅಮಿತ ಶಾ ಹೇಳಿಕೆ ಖಂಡಿಸಿ ವಿವಿಧ ದಲಿತಪರ ಸಂಘಟನೆ ಕಾರ್ಯಕರ್ತರು ಸೋಮವಾರ ಅರೆಬೆತ್ತಲೆ ಮೆರವಣಿಗೆ ಮೂಲಕ ಬೃಹತ್ ಪ್ರತಿಭಟನೆ ನಡೆಸಿದರು. ಪಟ್ಟಣದ ಡಾ, ಬಿ ಆರ್ ಅಂಬೇಡ್ಕರ ವೃತ್ತದಿಂದ ಅರೆಬೆತ್ತಲೆಯಾಗಿ ಬಸವೇಶ್ವರ ವೃತ್ತದ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಬಸವೇಶ್ವರ ವೃತ್ತದಲ್ಲಿ ಅಮಿತ ಶಾ ಅವರ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು ನಂತರ ತಹಶೀಲ್ದಾರ ಯಮನಪ್ಪ ಸೋಮನಕಟ್ಟಿ ಅವರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ತಮ್ಮಣ್ಣ ಕಾನಾಗಡ್ಡಿ, ಮಹಾಂತೇಶ ಚಕ್ರವರ್ತಿ, ಅಶೋಕ ಕರೇಕಲ್, ಯನೂರಿ ಛಲವಾದಿ, ರಾಜು ದಿಂಡವಾರ, ಕಾಮೇಶ ಭಜಂತ್ರಿ, ಯಮನಪ್ಪ ಮ್ಯಾಗೇರಿ, ಅಶೋಕ ಕರೆಕಲ್, ಮುತ್ತುರಾಜ ಬಾಗೇವಾಡಿ, ಗಂಗಾಧರ ಆರೇರ, ಯಮನಪ್ಪ ಚಲವಾದಿ, ವಿದ್ಯಾದರ ದೊಡಮನಿ, ಬಸವರಾಜ ದೊಡಮನಿ, ವಿನೋದ ನಾಗಾವಿ, ಮುತ್ತು ಬಿದರಿ, ಚಂದ್ರಶೇಕರ ನಾಲತವಾಡ, ವಿದ್ಯಾದರ ದೊಡಮನಿ, ಶಿವಾನಂದ ಮಸಬಿನಾಳ, ಮಲಕಪ್ಪ ಚಲವಾದಿ, ಶಂಕರ ಇವಾಣಗಿ, ಮಹಾಂತೇಶ ಚಲವಾದಿ, ಲಕ್ಷ್ಮಣ ಹಾಲಿಯಾಳ, ಸಂಜೀವ ಕಲ್ಯಾಣಿ, ಪ್ರಶಾಂತ ಚಲವಾದಿ, ಪರಶುರಾಮ ಬೆಕಿನಾಳ, ಶಿವನಂದ ಮೂರಮಾನ, ರಮೇಶ ಮ್ಯಾಗೇರಿ, ಶ್ರೀಶೈಲ ಹೆಬ್ಬಾಳ, ಪವಡೆಪ್ಪ ಆರ್ಯೆರ, ಶೇಖರ ಕಾಣಿ, ಯಮನಪ್ಪ ಅಂಗಡಗೇರಿ, ಸೇರಿದಂತೆ ಮುಂತಾದವರು ಇದ್ದರು.

ಉಚಿತ ನೇತ್ರ ತಪಾಸಣಾ ಶಿಬಿರ ಯಶಸ್ವಿ

ತಾಳಿಕೋಟಿ: ತಾಲೂಕಿನ ಮೂಕಿಹಾಳ ಗ್ರಾಮದಲ್ಲಿ ಹಜರತ್ ಲಾಡ್ಲೆ ಮಶ್ಯಾಕ್ ದರ್ಗಾ ಜಾತ್ರಾ ಮಹೋತ್ಸವ ಅಂಗವಾಗಿ ಅನುಗ್ರಹ ಕಣ್ಣಿನ ಆಸ್ಪತ್ರೆ, ಅನುಗ್ರಹ ವಿಷನ್ ಫೌಂಡೇಶನ್ ಟ್ರಸ್ಟ್ ಮತ್ತು ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ವಿಜಯಪುರ ಇವರ ಸಹಯೋಗದಲ್ಲಿ ರವಿವಾರ ಹಮ್ಮಿಕೊಂಡ ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರ ಯಶಸ್ವಿಯಾಯಿತು.

ತಾಳಿಕೋಟಿ ತಾಲೂಕಿನ ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ಸಾರ್ವಜನಿಕರು ಶಿಬಿರದ ಸದುಪಯೋಗವನ್ನು ಪಡೆದುಕೊಂಡರು. ಶಿಬಿರವನ್ನು ಉದ್ಘಾಟಿಸಿ ಅನುಗ್ರಹ ಕಣ್ಣಿನ ಆಸ್ಪತ್ರೆ ಮುಖ್ಯಸ್ಥ ಖ್ಯಾತ ನೇತ್ರ ತಜ್ಞ ಡಾಟ ಪ್ರಭುಗೌಡ ಲಿಂಗದಳ್ಳಿ ಅವರು ಮಾತನಾಡಿ, ಕಣ್ಣಿನ ಆರೋಗ್ಯದ ಕುರಿತು ನಿರ್ಲಕ್ಷ್ಯ ತೋರಬಾರದು ಕಣ್ಣು ನಮ್ಮ ದೇಹದ ಅಮೂಲ್ಯ ಅಂಗವಾಗಿದೆ, ಆರ್ಥಿಕ ತೊಂದರೆ ಇರುವವರು ಯಾವ ಕಾರಣಕ್ಕೂ ತಮ್ಮ ಅಂದತ್ವ ಕಳೆದುಕೊಳ್ಳಬಾರದು ಎಂಬ ಉದ್ದೇಶದಿಂದ ಕಳೆದ 25 ವರ್ಷಗಳಿಂದ ಅನುಗ್ರಹ ಆಸ್ಪತ್ರೆ ವಿಜಯಪುರ ಹಾಗೂ ಗುಲ್ಬರ್ಗ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದೆ ಸುಮಾರು 10 ಲಕ್ಷ ಕ್ಕೂ ಹೆಚ್ಚು ಹೊರ ರೋಗಿಗಳ ತಪಾಸಣೆಯನ್ನು ನಾವು ನಡೆಸಿದ್ದೇವೆ, 3 ಲಕ್ಷಕ್ಕೂ ಹೆಚ್ಚು ಜನರ ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿದೆ ಎಂದ ಅವರು ವಿಜಯಪುರ ಜಿಲ್ಲೆಯ ಎಲ್ಲ ತಾಲೂಕು ಕೇಂದ್ರಗಳಲ್ಲಿ ಇಂದು ಕಣ್ಣಿನ ಪ್ರಾಥಮಿಕ ತಪಾಸಣಾ ಆಸ್ಪತ್ರೆಗಳನ್ನು ತೆರೆದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗಿದೆ.

ಕಳೆದ15 ವರ್ಷಗಳಿಂದ ಈ ಜಾತ್ರೆಯಲ್ಲಿ ಉಚಿತ ಶಿಬಿರಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ ಇದಕ್ಕೆ ಜಾತ್ರಾ ಕಮಿಟಿಯವರ ಸಹಕಾರ ನಮ್ಮೊಂದಿಗೆ ಇದೆ. ಇಂದಿನ ಶಿಬಿರದ ಸದುಪಯೋಗವನ್ನು ತಾವೆಲ್ಲರೂ ಮಾಡಿಕೊಳ್ಳಬೇಕು ಎಂದರು. ಶಿಬಿರದಲ್ಲಿ ಒಟ್ಟು 350 ಜನರು ತಪಾಸಣೆ ಮಾಡಿಕೊಂ ಡರು, ಅದರಲ್ಲಿ 125 ಜನರನ್ನು ಶಸ್ತ್ರ ಚಿಕಿತ್ಸೆಗೆ ಆಯ್ಕೆ ಮಾಡಲಾಯಿತು.

ಶಿಬಿರ ಉದ್ಘಾಟಿಸಿ ಸಮಾರಂಭದಲ್ಲಿ ಜಾತ್ರಾ ಸಮಿತಿ ಅಧ್ಯಕ್ಷ ಕಾಸೀಮ ಪಟೇಲ ಪಾಟೀಲ, ಡಾ.ಪ್ರಿಯಂಕಾ, ಡಾ.ಅಕ್ಬರ್ ಪಟೇಲ ಬಿರಾದಾರ, ಅಬ್ದುಲ್ ರಜಾಕ ಕೂಚಬಾಳ, ಮಲ್ಲನಗೌಡ ಬಿರಾದಾರ, ಪ್ರವೀಣ ರೆಡ್ಡಿ, ಮಹಾಂತೇಶ್, ಜುನೇದ ನದಾಫ್, ಸಮೀರ ಪಟೇಲ ಬಿರಾದಾರ, ನಬಿ ಕೊಂಡಗೂಳಿ, ಅನುಗ್ರಹ ಆಸ್ಪತ್ರೆ ಸಿಬ್ಬಂದಿಗಳು ಹಾಗೂ ಜಾತ್ರಾ ಸಮಿತಿ ಸದಸ್ಯರು ಇದ್ದರು.

ವಿಜಯಪುರ ಇವರ ಸಹಯೋಗದಲ್ಲಿ ರವಿವಾರ ಹಮ್ಮಿಕೊಂಡ ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರ ಯಶಸ್ವಿಯಾಯಿತು.

ಮಾಹಿತಿ ಹಕ್ಕು ವೇದಿಕೆ ಪದಾಧಿಕಾರಿ ನೇಮಕ

ವಿಜಯಪುರ: ಬೆಂಗಳೂರಿನ ಗಾಂಧಿಭವನದಲ್ಲಿ ಡಿ.15 ರಂದು ನಡೆದ ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವೇದಿಕೆ ಪ್ರಥಮ ವರ್ಷದ ವಾರ್ಷಿಕೋತ್ಸವ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಹೇಮಂತ್ ನಾಗರಾಜು ನೇತೃತ್ವದಲ್ಲಿ, ವೇದಿಕೆಯ ಕೊಪ್ಪಳ ಜಿಲ್ಲಾಧ್ಯಕ್ಷ ಪಿ. ಶಿವನಾರಾಯಣ ಉಸ್ತುವಾರಿಯಲ್ಲಿ ವಿಜಯಪುರ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳು ನೇಮಕಗೊಳಿಸಿ ಪದಗ್ರಹಣ ಮಾಡಲಾಯಿತು.

ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವೇದಿಕೆಯ ವಿಜಯಪುರ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ಅಜೇಯಕುಮಾರ ಕೋಟಿಖಾನಿ, ಪ್ರಧಾನ ಕಾರ್ಯದರ್ಶಿಯಾಗಿ ಅರುಣ್ ಬಡಿಗೇರ, ಗೌರವಾಧ್ಯಕ್ಷರಾಗಿ ಗುರುರಾಜ ಬಡಿಗೇರ, ಜಿಲ್ಲಾ ಉಪಾಧ್ಯಕ್ಷರುಗಳಾಗಿ ಅನಿಲ ಹಟ್ಟಿ, ಗುರುರಾಜ ಚೆಟ್ಟರ್, ಕಾನೂನು ಸಲಹೆಗಾರರಾಗಿ ಲಾಲಸಾಬ್ ಮೋಮಿನ್, ಸಹ ಕಾರ್ಯದರ್ಶಿಯಾಗಿ ಸಂಗಯ್ಯ ಹಿರೇಮಠ, ಜಿಲ್ಲಾ ಖಜಾಂಚಿಯಾಗಿ ಕಾಶಿನಾಥ ಕಟ್ಟಿಮನಿ ಹಾಗೂ ಜಿಲ್ಲಾ ಸದಸ್ಯರಾಗಿ ಮಲ್ಲನಗೌಡ ಪಾಟೀಲ್, ಪರಶುರಾಮ್ ಚಲವಾದಿ, ಸೋಮೇಶ ಸಾಲಿಮಠ, ಮಲ್ಲು ಬಡಿಗೇರ, ಶರಣಪ್ಪ ರಕ್ಕಸಗಿ ಮತ್ತು ಪವಾಡಬಸಯ್ಯ ಹಿರೇಮಠ ಪದಗ್ರಹಣ ಮಾಡಿದರು.

ಸರಳತೆಯಲ್ಲಿ ಸೌಂದರ್ಯ

ಇತ್ತೀಚಿನ ದಿನಗಳಲ್ಲಿ ನೆಲಮೂಲದ ಸಂಸ್ಕೃತಿಯಿಂದ ದೂರಕ್ಕೆ ಸರಿಯುತ್ತಿದ್ದೇವೆ. ಎಲ್ಲ ಜೀವಿಗಳಿಗೆ ಪ್ರಕೃತಿಯ ಜೊತೆ ಕರುಳುಬಳ್ಳಿಯ ಗಾಢವಾದ ಸಂಬಂಧ ಬೆಸೆದುಕೊಂಡಿದೆ. ನಾಗರಿಕತೆಯ ನೆಪದಲ್ಲಿ ನಾವೆಲ್ಲ ನಮ್ಮತನಕ್ಕೆ ಏನಾಗಿ ಹೋಗುತ್ತದೆಯೋ ಎನ್ನುವ ಭಯ- ಭೀತಿಯಲ್ಲಿ ಸುತ್ತಣದ ಸಹಜವಾದ ಸಂಬಂಧಗಳಿಂದ ಒಂದು ರೀತಿಯ ಅಂತರವನ್ನು ಕಾಪಾಡಿಕೊಳ್ಳುತ್ತೇವೆ. ನಮ್ಮ ಸುತ್ತಲಿನ ಬದುಕಿನ ಸಂತಸವನ್ನು ಕಳೆದುಕೊಂಡು ಬಿಡುತ್ತೇವೆ. ಇದು ಬದುಕಿನಲ್ಲಿ ಏಕತಾನತೆಯನ್ನು, ನಿರಸ ಭಾವವನ್ನು ಉಂಟುಮಾಡಿ ಶೋಚನೀಯ ಸ್ಥಿತಿಯನ್ನು ನಮಗೆ ಅರಿವಿಲ್ಲದಂತೆ ತಂದು ಬಿಡುತ್ತದೆ.

ರಾಜನೊಬ್ಬ ಕೆಲವು ಬಾರಿ ಯಾರಿಗೂ ಹೇಳದೆ ಒಂದೆರಡು ದಿನ ಕಾಣೆಯಾಗಿ ಬಿಡುತ್ತಿದ್ದ. ಮರಳಿ ಬಂದಾಗ ಅವನಲ್ಲಿ ಹೊಸತನದ ಭಾವ, ಲವಲವಿಕೆ ಕಾಣುತ್ತಿತ್ತು. ಇದು ಎಲ್ಲರಿಗೂ ಸಂತಸವನ್ನು ಮೂಡಿಸುತ್ತಿತ್ತಾದರೂ ರಾಜ ಎಲ್ಲಿಗೆ ಹೋಗುತ್ತಿದ್ದ ಎಂಬ ಸಂಗತಿ ಮಾತ್ರ ರಾಜ್ಯದ ಜನತೆಗೆ ಬಹುಕಾಲ ತುಂಬ ಕೂತುಹಲಕಾರಿಯಾದ ವಿಷಯವಾಗಿಯೇ ಉಳಿದಿತ್ತು. ಒಂದೊಮ್ಮೆ ಯುವ ರಾಜನಿಗೆ ಪಟ್ಟಾಭಿಷೇಕ ಮಾಡಿ ತಾನು ವಾನಪ್ರಸ್ಥಾಶ್ರಮಕ್ಕೆ ತೆರಳಲು ನಿರ್ಧರಿಸಿದ. ಆ ಸಂದರ್ಭದಲ್ಲಿ ರಾಜ ಆಗಾಗ ಎಲ್ಲಿಗೆ ಹೋಗುತ್ತಿದ್ದ ಎಂಬ ಪ್ರಶ್ನೆಯನ್ನು ಜನತೆ ಕೇಳಿದರು. ರಾಜ 'ನಾನು ಆಗಾಗ ರಾಜತ್ವ ಎಲ್ಲ ಭಾವನೆಗಳನ್ನು, ವ್ಯಕ್ತಿತ್ವವನ್ನು ಇಲ್ಲಿಯೇ ಕಳಚಿಟ್ಟು ಕಾಡಿಗೆ ಹೋಗುತ್ತಿದ್ದೆ. ಜನಸಾಮಾನ್ಯರೊಂದಿಗೆ ಮಾರುವೇಷದಲ್ಲಿ ಬೆರೆಯುತ್ತಿದ್ದೆ. ಬದುಕಿನ ಮೂಲ ಉದ್ದೇಶವನ್ನು ಸಾಕಾರಗೊಳಿಸಲು, ಸಹಜ ಬದುಕಿನಲ್ಲಿರುವ ನೈಜ ಆನಂದವನ್ನು ಅನುಭವಿಸಲು ಇದರಿಂದ ನನಗೆ ಸಾಧ್ಯವಾಗುತ್ತಿತ್ತು. ಇದು ನನ್ನಲ್ಲಿ ನವಚೈತನ್ಯವನ್ನು ಮೂಡಿಸುತ್ತಿತ್ತು. ನನ್ನ ಯಶಸ್ವಿ ಬದುಕಿನ ಬದುದೊಡ್ಡ ರಹಸ್ಯ ಇದೇ ಆಗಿತ್ತು' ಎಂದು ಹೇಳಿದ.

ನಾವು ಸಾಧ್ಯವಾದಷ್ಟು ಸಹಜ ಬದುಕಿನ ಸೌಂದರ್ಯದ ಜೊತೆ ಸಾಗಬೇಕು. ನಮ್ಮ ಸುತ್ತಣ ಒಲವಿನೊಂದಗೆ, ಚೆಲುವಿನೊಂದಿಗೆ, ನಲಿವಿನೊಂದಿಗೆ ಬೆರೆಯುವುದನ್ನು ರೂಢಿಸಿಕೊಳ್ಳಬೇಕು. ಇದು ಬದುಕಿನ ಬಣ್ಣ ತುಂಬಿ ನಮ್ಮ ಉತ್ಸಾಹವನ್ನು, ಸಂಭ್ರಮವನ್ನು ನೂರ್ಮಡಿಗೊಳಿಸಬಲ್ಲದು.

• ಮಹಾದೇವ ಬಸರಕೋಡ

ಅವಕಾಶಗಳ ಬೆನ್ನೇರಿ

ಬದುಕು ಹಲವು ಅವಕಾಶಗಳ ಕಂತೆ. ಅವಕಾಶ ಎಂದರೆ ಅದೊಂದು ಅಪರೂಪದ ವರ. ಹಾಗೆಯೇ ಅವಕಾಶ ಎಂಬುವುದು ಎಲ್ಲರ ಪಾಲಿನ ಅನರ್ಘ್ಯ ರತ್ನ. ಇಂತಹ ಅವಕಾಶಗಳನ್ನು ಚೆನ್ನಾಗಿ ಬಳಸಿಕೊಂಡವನು ಯಶಸ್ಸು ಸಾಧಿಸಬಲ್ಲ. ಮನುಷ್ಯ ತನ್ನನ್ನು ತಾನು ರೂಪಿಸಿಕೊಳ್ಳಲು ಅವಕಾಶಗಳು ತುಂಬಾನೇ ಸಹಕಾರಿಯಾಗುತ್ತವೆ. ಅವಕಾಶಗಳು ನಮಗೆ ಕಣ್ಣು ಇದ್ದಂತೆ. ಕಣ್ಣುಗಳನ್ನು ತೆರೆದು ನೋಡಿದಾಗಲೇ ನಮ್ಮ ಮುಂದಿನ ಭವ್ಯ ಭವಿಷ್ಯ ಕಾಣಿಸುವುದು. ನಮ್ಮ ಕಾಲಬುಡದ ಬಳಿಗೆ ಅವಕಾಶಗಳು ಬರುವುದಿಲ್ಲ. ನಾವು ಅವಕಾಶಗಳತ್ತ ಸದಾಕಾಲ ಒಂದು ಕಣ್ಣು ನೆಟ್ಟುಕೊಂಡು, ಸ್ವತಃ ನಾವೇ ಅವುಗಳನ್ನು ಹುಡುಕುತ್ತಾ ಹೋಗಬೇಕು. ಅವಕಾಶಗಳು ಆಗಾಗ ಬಂದು ಹೋಗುವಂಥವಲ್ಲ. ಬಂದಾಗ ಸೂಕ್ತ ರೀತಿಯಲ್ಲಿ ಬಳಸಿ, ಎರಡೂ ಕೈಗಳ ಚಾಚಿ,ಬಾಚಿಕೊಳ್ಳುವ ಚಾಕಚಕ್ಯತೆ ನಮ್ಮಲ್ಲಿರಬೇಕು.

ಆಶಾವಾದಿ ಅವಕಾಶಗಳನ್ನು ಹುಡುಕುತ್ತಾನೆ. ಅದೇ ನಿರಾಶಾವಾದಿ ಕೈಚೆಲ್ಲುತ್ತಾನೆ. ಕಳೆದು ಹೋದ ಸಮಯ, ಕಳೆದು ಹೋದ ಅವಕಾಶ ನಮ್ಮ ಬದುಕಿನಲ್ಲಿ ಒಮ್ಮೆ ಕಳೆದು ಹೋದರೆ ಅವು ಮತ್ತೆಂದೂ ಮರಳಿ ಬಾರವು. ಯಶಸ್ಸು ಸೂಕ್ತವಾಗಿ ಕಾಣದೇ ಇರುವ ಬಹುಮುಖ್ಯ ಕಾರಣವೆಂದರೆ ಕೈಯಲ್ಲಿನ ಅವಕಾಶಗಳನ್ನು ಸರಿಯಾಗಿ ಸದುಪಯೋಗ ಮಾಡಿಕೊಳ್ಳದೇ ಇರುವುದು. ನಮ್ಮ ಸುತ್ತಮುತ್ತೆಲ್ಲ ಅವಕಾಶಗಳ ಸಾಲೇ ನಿಂತಿದೆ. ಅವುಗಳನ್ನು ಗುರುತಿಸಬೇಕು, ಗುರುತಿಸಿ ಸರಿಯಾಗಿ ವಿನಿಯೋಗಿಸಿಕೊಳ್ಳಬೇಕು. ಅವಕಾಶಗಳ ಬೆನ್ನೇರಿ ವಿಜಯದ ಪತಾಕೆಯನ್ನು ಹಾರಿಸುವ ಭರವಸೆ, ಆತ್ಮಸ್ಥೈರ್ಯ ನಮಗಿರಬೇಕು. ಸ್ವಾಮಿ ವಿವೇಕಾನಂದರು 'ಅದೃಷ್ಟವಂತ ಎಂದರೆ ಅವಕಾಶವನ್ನು ಪಡೆಯುವವನು, ಬುದ್ಧಿವಂತ ಎಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವವನು' ಎಂದು ಹೇಳಿದ್ದಾರೆ. ಒಳ್ಳೆಯ ಅವಕಾಶಗಳಿಂದ ಉತ್ತಮ ಬದುಕನ್ನು ಕಟ್ಟಿಕೊಳ್ಳೋಣ, ನಮ್ಮೊಳಗಿನ ಅಗಾಧ ಪ್ರತಿಭೆಯನ್ನು ಹೊರಹಾಕೋಣ.

• ರಂಗನಾಥ್ ಗುಡಿಮನಿ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ವಿಶ್ವವಾಣಿ
@vishwavaninews
ಬೆಂಗಳೂರು
ಮಂಗಳವಾರ
07 | 01 | 2025

ವಿರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ದಶಾನನ ಸ್ವಪ್ನ ಸಿದ್ಧಿ

• ಸವಿತಾ ಗುರುಪ್ರಸಾದ್

ಮನುಷ್ಯನ ಆಸೆ, ಅನುಮಾನ, ಹೆದರಿಕೆ, ಕನವರಿಕೆ, ನೆನಪುಗಳು, ಅನುಭವಗಳು ಸುಪ್ತಾವಸ್ಥೆಯಲ್ಲಿ ಪ್ರಕಟವಾಗುತ್ತದೆ. ನಿದ್ರೆಯಲ್ಲಿ ಕನಸಿನ ಮೂಲಕ ಅಥವಾ ಕೆಲವು ಸಂಕೇತಗಳ ಮೂಲಕ ಪ್ರಕಟಗೊಳ್ಳುತ್ತವೆ. ನಾಳೆ ಎಂದರೆ ನಿರ್ಣಾಯಕ ಘಟ್ಟದ ಯುದ್ಧ. ತನ್ನ ಮೂಲ ಬಲ ನಶಿಸಿದೆ. ರಾವಣ ಹತಾಶನಾಗಿದ್ದಾನೆ. ದೇವಿಯ ವರ ಮಾತ್ರ ತನ್ನ ಕಾಯಬಲ್ಲುದು ಎಂಬ ಅರಿವಿನಿಂದ ಶಿವ ಮಂದಿರ ಹೊಕ್ಕು ಕಾಳಿಗಾಗಿ ಪ್ರಾರ್ಥಿಸುತ್ತಾನೆ. ಒಲಿಯದ ಆಕೆಗೆ ತನ್ನ ಶಿರವನ್ನೇ ಒಂದೊಂದಾಗಿ ಕೊಡಲು ಹೊರಟಾಗ.ಆಕೆ



ಕುವೆಂಪು ಅವರ ಮಹಾಕಾವ್ಯ ಆಧಾರಿತ ಈ ನಾಟಕವು ಹಳೆಗನ್ನಡದಲ್ಲಿ ಪ್ರಸ್ತುತಗೊಂಡಿರುವುದು ವಿಶೇಷ.

ಒಲಿದಳಾದರೂ ಜಾಣ್ಮೆಯಿಂದ ಮಾಯವಾಗುತ್ತಾಳೆ. ಆಗ ರಾವಣ ಜಾರುವುದು ಅತ್ಯಂತ ವಿಕ್ಷಿಪ್ತವಾದ ಸ್ವಪ್ನ ಲೋಕಕ್ಕೆ!

ಇದು ಕುವೆಂಪು ಅವರ ರಚಿಸಿದ ಮಹಾಕಾವ್ಯ ಶ್ರೀ ರಾಮಾಯಣ ದರ್ಶನಂನ ಭಾಗ 'ದಶಾನನ ಸ್ವಪ್ನ' ಸಿದ್ಧಿಯ ನಾಟಕ ಆರಂಭ. ಮಂಜು ಕೊಡಗು ಎಂಬ ಸಮರ್ಥ ನಿರ್ದೇಶಕನ ಗರಡಿಯ ಭಳಿರೆ ವಿಚಿತ್ರಂ ತಂಡದ ಈ ನಾಟಕ ಅತ್ಯಂತ ವಿನೂತನ ಪ್ರಯೋಗ. ಇದು ಶ್ರೀ ರಾಮಾಯಣ ದರ್ಶನಂನ ಒಂದು ಅಧ್ಯಾಯ. ರಾವಣನಿಗೆ ಸೀತೆಯ ಬಗೆಗಿದ್ದ ಕಾಮ ಭಾವ ನಾಶವಾಗಿ ಮಾತೃ ಭಾವ ಜಾಗೃತವಾಗುವ ಬಗೆಯನ್ನು ಪರಿಣಾಮಕಾರಿಯಾಗಿ ನಾಟಕದಲ್ಲಿ ಚಿತ್ರಿಸಿದ್ದಾರೆ.

ನಮ್ಮ ಊಹೆಗೂ ನಿಲುಕದ ರಾವಣನನ್ನು ನಾವಿಲ್ಲಿ ಕಾಣಬಹುದು. ಯುದ್ಧದ ಹಿಂದಿನ ಆ ಅಮಾವಾಸ್ಯೆಯ ರಾತ್ರಿ ಕಾಳಿ ಮರೆಯಾದಾಗ ರಾವಣನು ಒಂದು ಸ್ವಪ್ನಾವಸ್ಥೆಗೆ ಜಾರುತ್ತಾನೆ, ಆ ಮೂರು ಹಂತದ ಕನಸಿನ ಪ್ರಯಾಣವನ್ನು ಇಲ್ಲಿ ಪ್ರಸ್ತುತ ಪಡಿಸುತ್ತಾ ಹೋಗುತ್ತಾರೆ. ಕನಸಿನ ಲೋಕದಿಂದ ಎಚ್ಚೆತ್ತುಕೊಳ್ಳುವಷ್ಟರಲ್ಲಿ ರಾವಣನಿಗೆ ತನ್ನ ಇಡೀ ಹೋರಾಟದ ಮೇಲಿನ ದೃಷ್ಟಿಕೋನ ಸಂಪೂರ್ಣವಾಗಿ ಬದಲಾಗಿಬಿಡುತ್ತದೆ.

ಪಾಪಕೃತ್ಯಗಳ ಅರಿವಾಗಿ, ಅವನಲ್ಲಾಗುವ ಪರಿವರ್ತನೆಯ ನೋಟ ಗಾಢವಾಗಿ ಮನಸ್ಸಿಗೆ ತಾಗುತ್ತದೆ. ಪ್ರತ್ಯಕ್ಷಗೊಂಡ ದೇವಿ ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ ಸೀತೆ ಆಲಂಗಿಸುವಳು, ರಾಮನ ಸೋಲಿಸುವೆ ಎಂಬ ವರದಂತೆ, ರಾವಣ ಕುಂಭಕರ್ಣರು ಶಿಶುಗಳಾಗಿ ವರ ನಿಜವಾದ ಕಥೆಯ ಪ್ರಸ್ತುತಿಯನ್ನು ನೋಡಿಯೇ ಆಸ್ವಾದಿಸಬೇಕು.

ರಾವಣನ ಪಾತ್ರದಲ್ಲಿ ಅವಿನಾಶ್ ರೈ ಅವರ ಅಭಿನಯ ನೈಜವಾಗಿ ಮೂಡಿಬಂದೆ. ಶ್ವೇತಾ ಅರೆಹೊಳೆ, ಕಾಳಿ, ಲಂಕಿಣಿ, ದುರ್ಗೆ, ಸೀತೆ ಮತ್ತು ಮಂಡೋದರಿಯಾಗಿ ಪಂಚ ಪಾತ್ರ ನಿರ್ವಹಣೆ ಮೂಲಕ ಈ ನಾಟಕಕ್ಕೆ ಕಳೆಕಟ್ಟಿದ್ದಾರೆ. ಮಂಜು ಕೊಡಗು ಅವರ ನಿರ್ದೇಶನ ಪರಿಣಾಮಕಾರಿ ಎನಿಸಿದೆ. ನಾಟಕ ನಡುಗನ್ನಡದಲ್ಲಿ ಸಾಗುವುದರಿಂದ ಪೂರ್ವ ತಯಾರಿ ಇರದ ಹಾಗೂ ನಡುಗನ್ನಡದ ಬಳಕೆ ನಶಿಸುತ್ತಿರುವ ಈ ಕಾಲದಲ್ಲಿ ಪ್ರೇಕ್ಷಕನಿಗೆ ಪೂರ್ತಿ ನಾಟಕವನ್ನು ಅರ್ಥೈಸಿಕೊಳ್ಳಲು ಸ್ವಲ್ಪ ಕಷ್ಟವಾಗುತ್ತದೆ. ಈ ಅಂಶದ ಬಗ್ಗೆ ನಿರ್ದೇಶಕರು ಗಮನಹರಿಸಬಹುದೇನೋ.

ಇಚ್ಛಾಶಕ್ತಿ ಕ್ರಿಯಾಶಕ್ತಿಯ ಸಮ್ಮಿಳನ

• ಡಾ. ಎನ್ ಜಯರಾಮ ಶೆಟ್ಟಿ

ಯಾವುದೇ ಸಾಧನೆಯಿರಲಿ ಅದರ ಸಾಫಲ್ಯ ಮನಸ್ಸಿನ ಶಕ್ತಿಯ ಪ್ರತಿಫಲ ಮತ್ತು ಪ್ರತಿರೂಪವೆಂದೇ ನಾವು ಅರ್ಥೈಸಬಹುದು. ಮನಸ್ಸು ಮುಟ್ಟದ ಮಾತು, ಮನಸ್ಸು ಇಲ್ಲದ ಕೃತಿ ಇದ್ದೂ ಇಲ್ಲದಂತೆ ಅಲ್ಲವೆ? ಪ್ರಬಲ ಮಾನಸಿಕ ನಿರ್ಧಾರ ನಮ್ಮ ಇಚ್ಛಾಶಕ್ತಿಯಾದರೆ, ಅದು ಕಾರ್ಯರೂಪಕ್ಕೆ ಬರುವುದು ಕ್ರಿಯಾ ಶಕ್ತಿಯಿಂದಲೇ. ಇವುಗಳ ಜೊತೆ ಬುದ್ಧಿಶಕ್ತಿ ಸೇರಿದಾಗ ನಮ್ಮ ಸಾಧನೆಯ ಹಾದಿ ಇನ್ನಷ್ಟು ಸುಗಮವಾಗುವುದು. ಈ ಮೂರು ಮೂಲಭೂತ ಸಂಪನ್ಮೂಲಗಳಿಂದ ನಾವು ಸಂಪನ್ನರು ಮತ್ತು ಶ್ರೀಮಂತರು. ಶಾಸ್ತ್ರ, ಪುರಾಣ, ಪ್ರವಚನಗಳಲ್ಲಿ ಈ ಮೂರು ಶಕ್ತಿಗಳ ಬಗ್ಗೆ ಕೇಳಿಯೇ ಇರುತ್ತೇವೆ. ಮನೋವೈಜ್ಞಾನಿಕ ಮತ್ತು ಪ್ರೇರಣಾತ್ಮಕವಾಗಿ, ಒಂದು ಮಾಡೆಲ್ ಮೂಲಕ ಪ್ರಸ್ತುತಿಪಡಿಸುವುದರಲ್ಲಿ, ಪಾಶ್ಚಿಮಾತ್ಯ ಪಂಡಿತರು ಒಂದು ಹೆಜ್ಜೆ ಮುಂದೆ.

ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿಯ ಮೇಲೆ ಸಾಕಷ್ಟು ಅಧ್ಯಯನ ನಡೆಸಿ ಅವುಗಳು ನಮ್ಮ ವೈಯಕ್ತಿಕ ಗುರಿ ಸಾಧನೆಗೆ ಹೇಗೆ ಪೂರಕವಾಗಬಲ್ಲವು ಎನ್ನುವುದರ ಬಗ್ಗೆ ತಿಳಿಸಿಕೊಟ್ಟವರು ಚಾರ್ಲ್ಸ್ ರಿಚಾರ್ಡ್ ಸ್ನೈಡರ್‌ರವರು. ಅವರ 'ದಿ ಸೈಕಾಲಜಿ ಆಫ್ ಹೋಪ್', ಪ್ರಸ್ತುತ ವಿಷಯವನ್ನು ಸಾರುವ ಉತ್ತಮ ಕೃತಿಯಾಗಿದೆ. ಇಚ್ಛಾಶಕ್ತಿ ಮತ್ತು ಕ್ರಿಯಾ ಶಕ್ತಿಗಳನ್ನು ಕ್ರಮವಾಗಿ 'ವಿಲ್ ಪವರ್' ಮತ್ತು 'ವೇ ಪವರ್' ಎಂದು ಅವರು ಕರೆದರು.ಅವರ ಪ್ರಕಾರ ಬದುಕಿನ ನಿರೀಕ್ಷೆ (ಹೋಪ್) ಎನ್ನುವುದು ವಿಲ್ ಪವರ್ ಮತ್ತು ವೇ ಪವರ್‌ಗಳ ಸೂಕ್ತ ಸಮ್ಮಿಶ್ರಣವಾಗಿರಬೇಕು. ಎರಡೂ ಸತ್ವಯುತ ಮತ್ತು ಕಾರ್ಯಕಾರಿಯಾಗಿರಲೇಬೇಕು.

ವಿಲ್ ಪವರ್: ಇದನ್ನು ಮುಂದುವರಿದು, ಏಜೆನ್ಸಿ ಥಿಂಕಿಂಗ್ ಎಂತಲೂ ಹೆಸರಿಸಿದರು. ನಮ್ಮ ಬದುಕಿನ ಗುರಿಗಳನ್ನು ಮುಟ್ಟುವಲ್ಲಿ, ಇಚ್ಛಾಶಕ್ತಿ (ವಿಲ್ ಪವರ್) ನಮ್ಮ ಮುಂದೆ ನಡೆದು ಹಿಂಬಾಲಿಸುವಂತೆ ಪ್ರೇರೇಪಿಸುವ ಸತ್ವ ಮತ್ತು ಶಕ್ತಿ ಹೊಂದಿರಬೇಕು. ಆ ದಿಕ್ಕಿನಲ್ಲಿ ನಮ್ಮ ನಂಬುಗೆ ಕಾರ್ಯರೂಪದಲ್ಲಿ ಚಿಮ್ಮುತ್ತಿರಬೇಕು. ಮನಸ್ಸಿನ ಆಂತರಿಕ ಉತ್ಸಾಹ ಉತ್ಸವ ರೂಪದಲ್ಲಿ ಕಾಣಿಸಿಕೊಳ್ಳಬೇಕು. ವಿಲ್ ಪವರ್ ಹೊಂದಿದ್ದ ವ್ಯಕ್ತಿಯ ಮನಸ್ಸು, ಮಾತು ಮತ್ತು ಕೃತಿ ಒಂದೇ ದಿಕ್ಕಿನಲ್ಲಿ ಪ್ರವಹಿಸುವಂತೆ ಕಾಣಬೇಕಂತೆ.

ವೇ ಪವರ್: ಇದನ್ನು ಸ್ನೈಡರ್ ಪಾಥ್ ವೇ ಥಿಂಕಿಂಗ್ ಕರೆದರು. ಇಚ್ಛೆಯಷ್ಟೇ ಸಾಲದು ಗುರಿಮುಟ್ಟಲು. ಯೋಚನೆಗಳು ಸಕಾರಾತ್ಮಕವಾಗಿ ಸ್ಫುರಿಸಬೇಕು, ಉಡುಗಿದ ಶಕ್ತಿಯನ್ನು ತುಂಬಿಸಿಕೊಡುತ್ತಿರಬೇಕು. ಸಾಧನಗಳ ಬಗ್ಗೆ, ಮಾರ್ಗೋಪಾಯಗಳ ಕುರಿತು ಚಿಂತನ-ಮನನ-ನಿಧಿಧ್ಯಾಸನ ನಡೆಯ ಬೇಕು. ಸೋಲುವುದು ಅಸಾಧ್ಯವೆನ್ನುವ ಪರಿಕಲ್ಪನೆ ಸುತ್ತ ಮುತ್ತ ಎದ್ದು ಮೂಡಬೇಕು.

ಸೃಜನಶೀಲತೆಯ ಗುರು ಡಿ ಬೋನೋರವರು ಇದನ್ನು 'ಲ್ಯಾಟರಲ್ ಥಿಂಕಿಂಗ್' ಅಂತ ಕರೆದರು. ಯೋಚನೆ ಯೋಜನೆಯಾಗಿ ಅನುಷ್ಠಾನ ಮೊದಲು ಮನಸ್ಸಿನಲ್ಲಿ ಮೂಡಬೇಕು ಮತ್ತು ತದನಂತರ ಕಾರ್ಯಕ್ಷೇತ್ರದಲ್ಲಿ. ಸ್ನೈಡರ್ ಮಾದರಿ ವೈಯಕ್ತಿಕ ಗುರಿ ಸಾಧನೆಗಷ್ಟೇ ಅಲ್ಲ ಹಲವು ಬೇರೆ ಕ್ಷೇತ್ರಗಳಲ್ಲಿ ಉಪಯುಕ್ತವಾಗಿ ನಾವು ಬಳಸಬಹುದು.

ವೈಯಕ್ತಿಕ ಬೆಳವಣಿಗೆ: ಬದುಕಿನ ಬಗೆಗಿನ ಧ್ಯೆಯೋದ್ದೇಶ ಕಳೆದುಕೊಂಡವರಿಗೆ ಈ ಮಾಡೆಲ್ ಒಂದು ಸೂತ್ರದಂತೆ ಸಹಾಯಕಾರಿಯಾಗಬಹುದು. ಬುದ್ಧಿಶಕ್ತಿ-ಇಚ್ಛಾಶಕ್ತಿ-ಕ್ರಿಯಾಶಕ್ತಿ ಒಂದುಗೂಡಿದಾಗ ಯಾವ ಶಕ್ತಿ ನಮ್ಮೆದುರು ನಿಂತೀತು?

ಭರವಸೆಯೇ ಬೆಳಕು: ಬದುಕಿನಲ್ಲಿ ಭರವಸೆಯನ್ನು ಕಳೆದುಕೊಂಡರೆ ಮತ್ತೇನುಳಿಯಿತು ಹೇಳಿ? ತ್ರಿಮೂರ್ತಿಯಂತಿರುವ ಬುದ್ಧಿಶಕ್ತಿ-ಇಚ್ಛಾಶಕ್ತಿ-ಕ್ರಿಯಾಶಕ್ತಿ ನಮ್ಮಲ್ಲೇ ಮೂರ್ತಗೊಂಡಾಗ ಯಾವುದೇ ಗುರಿ ಎಷ್ಟು ದೂರ? ಈ ಮೂರು ಮೂಲ ದ್ರವ್ಯಗಳಲ್ಲಿ ಯಾವುದು ಮೇಲು ಯಾವುದು ಕಡಿಮೆಯದ್ದು ಹೇಳಲಾಗದು. ಆದಾಗ್ಯೂ ಇಚ್ಛೆಯೆನ್ನುವ ವಾಂಛೆ ನಮ್ಮನ್ನು ಸುತ್ತಿಕೊಂಡೇ ಇರಲಿ. ಈ ಮೇಲಿನ ಮೂರೂ ವಿಭಾಗಗಳಲ್ಲಿ ಮಿಂಚುವವರು ಸಾಧಕರಾಗುವುದು ಒಂದಾದರೆ ಸಾಧನೆಯ ಜೊತೆ ಜೊತೆಗೆ ವಿನಯತೆ ಮತು ವಿಧೇಯತೆ ರೂಢಿಸಿಕೊಳ್ಳುವುದು ಒಂದು ಸವಾಲೇ ಸರಿ.

ಸ್ನೈಡರ್ ಸೂಚಿಸಿದಂತೆ, ನಾವು ವಿಲ್ ಪವರ್ ಮತ್ತು ವೇ ಪವರ್ ಈ ಎರಡರಲ್ಲೂ ಸಮಾನ ಆಸಕ್ತಿ ಮತ್ತು ಶಕ್ತಿಯನ್ನು ಹೊಂದಿರಬೇಕು. ವಿಲ್ ಪವರ್ ಇದ್ದು ವೇ ಪವರ್ ಕೊರತೆ ಇರುವವರು, ಪ್ರೇರೇಪಣೆ ಹೊಂದಬಹುದು ಆದರೆ ಮಾರ್ಗದರ್ಶನದಿಂದ ವಂಚಿತರಾಗುತ್ತಾರೆ. ವೇ ಪವರ್ ಇದ್ದು ವಿಲ್ ಪವರ್ ಹೊಂದದಿದ್ದರೆ, ಅವರು ಕ್ರಿಯಾ ಸಾಮರ್ಥ್ಯವಿದ್ದೂ ಸೋಲಬೇಕಾಗಿಬರಬಹುದು; ಕಾರಣ ಅಂತಹವರಿಕೆ ಇಚ್ಛಾಬಲದ ಕೊರತೆಯಿರುತ್ತದೆ. ಈ ಎರಡೂ ಬಲಗಳನ್ನು ರೂಢಿಸಿಕೊಂಡಾಗ ಯಶಸ್ಸು ದೊರಕುತ್ತದೆ.

ನಗಿಸುವ ರೇಖೆಗಳು

• ಈರಣ್ಣ ಬೆಂಗಾಲಿ



ಕಳೆದ ಇಪ್ಪತ್ತೈದು ವರ್ಷಗಳಿಂದ ನಿರಂತರವಾಗಿ ವ್ಯಂಗ್ಯಚಿತ್ರಗಳನ್ನು ಬಿಡಿಸುತ್ತಿರುವ ಉತ್ತರ ಕನ್ನಡದ ಶಿರಸಿಯ ಬೊಮ್ನಳ್ಳಿಯ ನಿವಾಸಿಯಾಗಿದ್ದಾರೆ. ಜಿ.ಎಂ.ಬೊಮ್ನಳ್ಳಿ ಇವರ ಕಾವ್ಯನಾಮ; ಇವರ ನಿಜನಾಮ ಗಣಪತಿ ಮಹಾಬಲೇಶ್ವರ. ಬಿ.ಕಾಂ ಪದವಿದರ ಹಾಗು ಧಾರವಾಡ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ಡಿಪ್ಲೊಮಾ ಪಡೆದ ಇವರು ಹಳ್ಳಿಗಾಡಿನ ಕಲಾವಿದ. ಇವರ ವ್ಯಂಗ್ಯಚಿತ್ರಗಳು ನಾಡಿನ ಬಹುತೇಕ ಪತ್ರಿಕೆಗಳಲ್ಲಿ ಅಲ್ಲದೆ ಹೊರ ನಾಡಿನಲ್ಲೂ ಕೂಡ ಅಚ್ಚಾಗಿವೆ. 1993 ರಿಂದ ಈವರೆಗೆ ಇಪ್ಪತ್ತೈದು ಸಾವಿರಕ್ಕಿಂತ ಹೆಚ್ಚು ವ್ಯಂಗ್ಯಚಿತ್ರಗಳನ್ನು ರಚಿಸಿದ್ದಾರೆ! ಶಿರಸಿ ತಾಲೂಕಿನ ಬೊಮ್ನಳ್ಳಿಯಲ್ಲಿ ಕೃಷಿ ವೃತ್ತಿ ಮಾಡುತ್ತಿದ್ದಾರೆ. ಕೃಷಿಯ ಜೊತೆ ವ್ಯಂಗ್ಯಚಿತ್ರ ಕೃಷಿಯನ್ನು ಮಾಡುತ್ತಿರುವ ಬೊಮ್ನಳ್ಳಿರವರು ಬಿಡುವಿನ ಸಮಯದಲ್ಲಿ ವ್ಯಂಗ್ಯಚಿತ್ರ ರಚಿಸುತ್ತಾರೆ.

ಅಲ್ಲದೆ ಈ ವರೆಗೆ ಸುಮಾರು 200ಕ್ಕೂ ಅಧಿಕ ವ್ಯಂಗ್ಯಚಿತ್ರ ತರಬೇತಿ ಶಿಬಿರಗಳಲ್ಲಿ ಭಾಗವಹಿಸಿ ತರಬೇತಿ ನೀಡಿದ್ದಾರೆ. ಮಕ್ಕಳಿಗಾಗಿ ಸೊನ್ನೆ ಎಂಬ ಚಿತ್ರ ಕಲಿಕಾ ಪುಸ್ತಕ ಪ್ರಕಟಿಸಿದ್ದಾರೆ. ಇದರಲ್ಲಿ ಸುಲಭವಾಗಿ ಚಿತ್ರರಚನೆ ಮಾಡುವ ವಿಧಾನವನ್ನು ಮಕ್ಕಳಿಗೆ ಹೇಳಿದ್ದಾರೆ. ಇಷ್ಟಲ್ಲದೆ ವಿವಿಧ ಶಾಲೆಗಳಲ್ಲಿ ಅತಿಥಿ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರ ವ್ಯಂಗ್ಯಚಿತ್ರಗಳು ಹೆಚ್ಚಾಗಿ ರಾಜಕೀಯ, ಕೃಷಿ, ವಾಣಿಜ್ಯ, ಸಾಮಾಜಿಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ವಿಶಿಷ್ಟ, ಅತ್ಯುತ್ತಮ ವ್ಯಂಗ್ಯಚಿತ್ರಕಾರರಾಗಿರುವ ಜಿ.ಎಂ.ಬೊಮ್ಮಳ್ಳಿ ಅವರು ಮನೆಯ ಜವಾಬ್ದಾರಿಯೊಂದಿಗೆ ಕೃಷಿ, ಚಿತ್ರಕಲೆ, ಕಲಾವಿಮರ್ಶೆ, ಲೇಖನ, ಛಾಯಗ್ರಹಣ, ಗಣೇಶ ಮೂರ್ತಿ ತಯಾರಿಕೆ, ಕಲಾವಿದರ, ಕಲಾಸಂಘದ ಒಡನಾಟಹೊಂದಿದ್ದಾರೆ. ಇವರ ವ್ಯಂಗ್ಯಚಿತ್ರಗಳು ನಾಡಿನ ಜನರ ಮನ ತಣಿಸಿರುವುದು, ಮೊಗದಲ್ಲಿ ನಗು ಮೂಡಿಸಿರುವುದು ವಿಶೇಷ.

ಗೌರವಗಳು

ಅರವತ್ತೇಳನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರ ವ್ಯಂಗ್ಯಚಿತ್ರಕ್ಕೆ ಪ್ರಥಮ ಬಹುಮಾನ, ಶಿರಸಿ ಕಥಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ ಹಾಗು ರಾಜ್ಯ ಸಾರಿಗೆ ಇಲಾಖೆಯ ಸಹಯೋಗದಲ್ಲಿ ನಡೆದ ವ್ಯಂಗ್ಯಚಿತ್ರ ಸ್ಪರ್ಧೆಯಲ್ಲಿ ಬಹುಮಾನ, ಮಣಿಪಾಲದಲ್ಲಿ ಕಲಾಕುಟೀರ ಸಂಸ್ಥೆ ನಡೆಸಿದ ರಾಜ್ಯ ಮಟ್ಟದ ವ್ಯಂಗ್ಯಚಿತ್ರ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ, ಶ್ರೀ ಸಾಮಾನ್ಯ ಕನ್ನಡಿಗ ಚಿತ್ರ ರಚನೆ ಸ್ಪರ್ಧೆಯಲ್ಲಿ ರಾಜ್ಯಕ್ಕೆ ಪ್ರಥಮ ಬಹುಮಾನ ಇಷ್ಟೇ ಅಲ್ಲದೆ ಹಲವಾರು ಕಡೆ ಆತ್ಮೀಯವಾಗಿ ಸನ್ಮಾನಿತರಾಗಿದ್ದಾರೆ.

• ಮಂಜುನಾಥ ಡಿ. ಎಸ್.

ಚಳಿಗಾಲದಲ್ಲಿ ಅಮೆರಿಕ ರಜೆಯ ಸಂಭ್ರಮದ ಉತ್ತುಂಗದಲ್ಲಿರುತ್ತದೆ. ಈ ಅವಧಿಯಲ್ಲಿ ಅಮೆರಿಕನ್ನರು ಅನೇಕ ಮನರಂಜನಾತ್ಮಕ ಹಾಗು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ವಾರ್ಷಿಕ ಜಿಂಜರ್-ಬ್ರೆಡ್ ಸ್ಪರ್ಧೆ ಇಂತಹ ಚಟುವಟಿಕೆಗಳಲ್ಲಿ ಒಂದು. ಜಿಂಜರ್-ಬ್ರೆಡ್ ಎನ್ನುವುದು ಬೇಕರಿ ಉತ್ಪನ್ನ; ಒಂದು ಮಾದರಿಯ ಬಿಸ್ಕತ್ ಎಂದರೂ ಆದೀತು. ಮಾನವಾಕೃತಿಯ ಬಿಸ್ಕತ್ ಜಿಂಜರ್-ಬ್ರೆಡ್ ಮ್ಯಾನ್ ಎಂದು ಜನಪ್ರಿಯವಾಗಿದೆ. ಅಮೆರಿಕದಲ್ಲಿ ಜಿಂಜರ್-ಬ್ರೆಡ್ ಸ್ಪರ್ಧೆ ರಾಷ್ಟ್ರ ಮಟ್ಟದಲ್ಲಿ ಮಾತ್ರವಲ್ಲದೆ ದೇಶದಾದ್ಯಂತ ಅನೇಕ ನಗರಗಳಲ್ಲಿಯೂ ಆಯೋಜಿಸಲ್ಪಡುತ್ತದೆ.

ದಕ್ಷಿಣ ಕ್ಯಾಲಿಫೋರ್ನಿಯದ ಆರೆಂಜ್ ಕೌಂಟಿಯಲ್ಲಿರುವ ಡಿಸ್ಕವರಿ ಕ್ಯೂಬ್ 2024ರ ಡಿಸೆಂಬರ್ 7ರಂದು, ತನ್ನ ಸಂಸ್ಥೆಯ ಆವರಣದಲ್ಲಿ, ಇಂತಹ ಸ್ಪರ್ಧೆಯೊಂದನ್ನು ಆಯೋಜಿಸಿತ್ತು. ಕಿರಿಯರಿಂದ ಹಿರಿಯರವರೆಗೆ ಇನ್ನೂರಕ್ಕೂ ಹೆಚ್ಚು ಕಲಾಸಕ್ತರು ಈ ಸ್ಪರ್ಧೆಯಲ್ಲಿ ಅಮಿತೋತ್ಸಾಹದಿಂದ ಪಾಲ್ಗೊಂಡಿದ್ದರು. ಹವ್ಯಾಸಿ ಕಲಾವಿದರೂ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದುದು ವಿಶೇಷವಾಗಿತ್ತು. ಈ ಕಲಾವಿದರು ತಂಡಗಳನ್ನು ರಚಿಸಿಕೊಂಡು,

ಇದನ್ನು ತಿನ್ನಬಹುದು!

ಸ್ಯಾಂಟ ಮಾನಕ ಹಡಗು ಕಟ್ಟೆ, ಸ್ನೂಪಿಯ ನಾಯಿ ಮನೆ, ಗ್ರಿಫಿತ್ ವೀಕ್ಷಣಾಲಯ, ರಷ್ಯಾದ ಹಿಮಾವೃತ ಸೇಂಟ್ ಬೇಸಿಲ್ ಕೆಥೆಡ್ರಲ್, ಐಫೆಲ್ ಗೋಪುರ, ಮುಂತಾದುವು ಸೇರಿದಂತೆ ಅನೇಕ ಪ್ರಖ್ಯಾತ ರಚನೆಗಳ ಪ್ರತಿಕೃತಿಗಳನ್ನು ನಿರ್ಮಿಸಿದ್ದರು. ಲೆಪೋರ್ಟ-ನ ಸಾಂಸ್ಕೃತಿಕ ತಾಣ, ಚಳಿಗಾಲದ ವೈಜ್ಞಾನಿಕ ಮೇಳ, ಮುಂತಾದ ವಿಷಯಾಧಾರಿತ ರಚನೆಗಳನ್ನೂ ಅವರು ನಿರ್ಮಿಸಿದ್ದರು. ಹವ್ಯಾಸಿ ಕಲಾವಿದರೂ ಸಹ ತಮ್ಮ ತಮ್ಮ ಆಸಕ್ತಿಗನುಗುಣವಾಗಿ ಕಲಾಕೃತಿಗಳನ್ನು ರಚಿಸಿದ್ದರು. ಈ ಎಲ್ಲ ಕಲಾಕೃತಿಗಳೂ ಜಿಂಜರ್-ಬ್ರೆಡ್ ಹಾಗು ಇತರ ಖಾದ್ಯ ಪದಾರ್ಥಗಳಿಂದ ರಚಿಸಲ್ಪಟ್ಟಿದ್ದವು.

ಬಹುಮಾನಿತ ರಚನೆಗಳೂ ಸೇರಿದಂತೆ, ಈ ಸ್ಪರ್ಧೆಯಲ್ಲಿ ನಿರ್ಮಿಸಲ್ಪಟ್ಟ ನೂರಾರು ಕಲಾಕೃತಿಗಳನ್ನು ಡಿಸ್ಕವರಿ ಕ್ಯೂಬ್ ಆವರಣದಲ್ಲಿ ಪ್ರದರ್ಶಿಸಲಾಗಿತ್ತು. ಈ ಕಲಾಕೃತಿಗಳು ವೀಕ್ಷಕರನ್ನು ಮಂತ್ರಮುಗ್ಧರನ್ನಾಗಿಸುವಂತಿದ್ದವು. ಹಾಂಟೆಡ್ ಹೌಸ್ ರಚನೆ ಮತ್ತೆ ಮತ್ತೆ ನೋಡಬೇಕೆಂಬ ಹಂಬಲ ಮೂಡಿಸುವಂತಿದ್ದರೆ ಚಿಕ್ಕ ಕ್ಯಾಂಡಿ ಮನೆ ಚಿತ್ತ ಅಪಹರಿಸುವಂತಿತ್ತು. ಪ್ರದರ್ಶನಗೊಂಡಿದ್ದ ಖಾದ್ಯ ಕಲಾಕೃತಿಗಳು ಮಕ್ಕಳನ್ನು ಹರ್ಷಿತರನ್ನಾಗಿಸುವಲ್ಲಿ ಸಫಲವಾಗಿದ್ದವು.

ಈ ಕಲಾಕೃತಿಗಳನ್ನು ವೀಕ್ಷಿಸುತ್ತಿದ್ದಾಗ, ಹಲವು ದಶಕಗಳ ಹಿಂದೆ ಬೆಂಗಳೂರಿನಲ್ಲಿ ಆಯೋಜಿಸಲ್ಪಟ್ಟಿದ್ದ ಕೇಕ್ ಪ್ರದರ್ಶನದ ಭೇಟಿಯ ಸವಿನೆನಪುಗಳು ಮರುಕಳಿಸಿದವು.

ಆಂತರಿಕ ಪ್ರಯಾಣಕ್ಕಾಗಿ ಸುಸಂಬದ್ಧ ಬುದ್ಧಿಮತ್ತೆ

• ಕೆ.ಶಿವಪ್ರಸಾದ್

ನಿತ್ಯಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ನಮ್ಮ ಅಂತರಾತ್ಮ ಮತ್ತು ಬಾಹ್ಯ ಆತ್ಮಗಳ ಸಂಯೋಗವೇ ಯೋಗ. ಕರ್ಮ, ಭಕ್ತಿ, ಸಾಂಖ್ಯ, ಬುದ್ಧಿ ಮುಂತಾದ ಹಲವಾರು ಮಾರ್ಗಗಳಿಂದ ಇದನ್ನು ಸಾಧಿಸಬಹುದು. ವ್ಯಕ್ತಿಯ ಸ್ವಭಾವಕ್ಕನುಗುಣವಾಗಿ ತನಗೆ ಸರಿಯಾದ ಮಾರ್ಗದಲ್ಲಿ ಇದನ್ನು ಸಾಧಿಸಬಹುದು.

ಬುದ್ಧಿಯನ್ನು ನಾವು ಆಶ್ರಯಿಸಬೇಕು ಯಾಕೆಂದರೆ ಪ್ರೇರಿತ ಕರ್ಮ ಬುದ್ಧಿಯೋಗಕ್ಕಿಂತ ಎಷ್ಟೋ ಕೆಳಮಟ್ಟದ್ದೆಂದು ಕೃಷ್ಣ ಅರ್ಜುನನಿಗೆ ಹೇಳುತ್ತಾನೆ. ಕರ್ಮಫಲದ ಬಯಕೆ ಹೊಂದಿದವರು ದುಃಖಿಗಳಾಗುತ್ತಾರೆ. (2.49) ಕರ್ಮಯೋಗದಲ್ಲಿ ಬುದ್ಧಿಯು ಸುಸಂಬದ್ಧವಾಗಿರುತ್ತದೆ ಮತ್ತು ದೃಢ ನಿಶ್ಚಯ ಹೊಂದಿದವರ ಬುದ್ಧಿಯು ಬಹುಮುಖಿಯಾಗಿರುತ್ತದೆ ಎಂದು ಕೃಷ್ಣ ಈ ಮೊದಲು ಹೇಳಿರುತ್ತಾನೆ (2.41)

ಒಮ್ಮೆ ಬುದ್ಧಿಯು ಸ್ಥಿರವಾದರೆ (ಪ್ರಕಾಶವನ್ನು ಕೇಂದ್ರೀಕರಿಸುವ ಮಸೂರದಂತೆ) ಅದು ಯಾವುದೇ ಬೌದ್ಧಿಕ ಪ್ರಯಾಣವನ್ನು ಕೈಗೊಳ್ಳುವ ಸಾಮರ್ಥ್ಯ ಹೊಂದಿರುತ್ತದೆ. ಅಂತರಾತ್ಮನ ಕಡೆಗಿನ ಪಯಣವನ್ನೊಳಗೊಂಡಂತೆ ಯಾವುದೇ ಪಯಣದಲ್ಲಿ ದಿಕ್ಕು ಮತ್ತು ಚಲನೆ ಇರುತ್ತದೆ. ಅಂತರಾತ್ಮನೆಡೆಗಿನ ನಮ್ಮ ಪಯಣದ ದಿಕ್ಕಿನ ಬಗ್ಗೆ ಬುದ್ಧಿಯೋಗದಲ್ಲಿ ಉಲ್ಲೇಖಿಸುತ್ತಾನೆ. ಸಾಮಾನ್ಯವಾಗಿ ಬಾಹ್ಯ (ಭೌತಿಕ) ಜಗತ್ತಿನಲ್ಲಿ ನಮ್ಮ ಆಸೆಗಳನ್ನು ಪೂರೈಸಿಕೊಳ್ಳಲು ನಾವು ಸುಸಂಭದ್ಧ ಬುದ್ಧಿಯನ್ನು ಉಪಯೋಗಿಸುತ್ತೇವೆ. ಆದರೆ ಅದನ್ನು ನಾವು ಅಂತರಾತ್ಮನೆಡೆಗಿನ ನಮ್ಮ ಪಯಣ ಮುಂದುವರಿಸಲು ಉಪಯೋಗಿಸ ತಕ್ಕದ್ದು.

ನಮ್ಮ ಆಳವಾದ ನಂಬಿಕೆಗಳು ಭಾವನೆಗಳು, ಊಹೆಗಳು, ವಿಚಾರಗಳು, ಕ್ರಿಯೆಗಳು ನಾವು ಆಡುವ ಮಾತುಗಳನ್ನು ಕೂಡ ನಾವು ಪ್ರಶ್ನಿಸಲು ಪ್ರಾರಂಭ ಮಾಡಿದಾಗ ನಮ್ಮ ಸುಸಂಭದ್ಧ ಬುದ್ಧಿಯನ್ನು ಅಂತರಾತ್ಮ ನಡೆಗಿನ ಪ್ರಯಾಣದಲ್ಲಿ ಉಪಯೋಗಿಸುತ್ತಿದ್ದೇವೆ ಎಂದು ಅರ್ಥ. ಜ್ಞಾನದ ಪರಿಧಿಯನ್ನು ವಿಸ್ತರಿಸಲು ವಿಜ್ಞಾನವು ಪ್ರತಿಯೊಂದನ್ನು ಪ್ರಶ್ನಿಸುವಂತೆ ಅದೇ ರೀತಿಯ ಪ್ರಶ್ನಿಸುವಿಕೆ ಪರಮ ಶ್ರೇಷ್ಠ ಸತ್ಯವನ್ನು ಅನಾವರಣ ಗೊಳಿಸುವಲ್ಲಿ ಮುನ್ನಡೆಯುತ್ತದೆ.

ಕೃಷ್ಣ ಮುಂದುವರಿದು ಹೇಳುತ್ತಾನೆ : ಕರ್ಮಫಲದ ಆಸೆಯನ್ನು ಹೊಂದಿದವರು ನಿಜವಾಗಿ ದುಃಖಿಗಳು.

ಕರ್ಮಫಲವು ನಮಗೆ ಸಂತೋಷ ನೀಡುವುದರಿಂದ ನಾವು ಈ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತೇವೆ.

ಆದರೆ ಈ ದ್ವಂದ್ವಯುತ ಜಗತ್ತಿನಲ್ಲಿ ಕಾಲಕ್ರಮೇಣ ಪ್ರತಿ ಸಂತೋಷವೂ ನೋವನ್ನುಂಟು ಮಾಡುತ್ತದೆ ಇದು ನಮ್ಮ ದುಃಖವನ್ನು ಹೆಚ್ಚಿಸುತ್ತದೆ.

ದ್ವಂದ್ವಗಳಿಂದ ನಮ್ಮನ್ನು ತಾನು ರಕ್ಷಿಸುತ್ತೇನೆಂದು ಕೃಷ್ಣ ಎಲ್ಲಿಯೂ ಹೇಳಿಲ್ಲ. ಆದರೆ ಬುದ್ಧಿಯನ್ನು ಅವುಗಳನ್ನು ಆತ್ಮವಾನ್ (ಆತ್ಮದಲ್ಲಿ ಸ್ಥಿರ) ಆಗಿ ಪರಿವರ್ತಿಸಬೇಕೆಂದು ಹೇಳಿದ್ದಾನೆ. ಇದು ತಿಳಿಯುವದೂ ಅಲ್ಲ. ಮಾಡುವದೂ ಅಲ್ಲ. ಕೇವಲ ಇರುವದು.

ರುಚಿಕರ ಚಟ್ನಿ

• ಬೆಂ. ಮು. ಮಾರುತಿ

ಬೇಕಾಗುವ ಸಾಮಗ್ರಿಗಳು

- ಕೊತ್ತಂಬರಿ ಸೊಪ್ಪು
- ಹಸಿ ಮೆಣಸಿನಕಾಯಿ
- ಬೆಳ್ಳುಳ್ಳಿ
- ಶುಂಠಿ
- ಹುಣಸೆಹಣ್ಣು
- ಉಪ್ಪು
- ಕಾಯಿ ತುರಿ(ಬೇಕಿದ್ದರೆ)

ಕೊತ್ತಂಬರಿ ಸೊಪ್ಪು ಅಥವಾ ಧನಿಯಾ ಎಂದು ಕರೆಯಲ್ಪಡುವ ಈ ಸೊಪ್ಪು ಭಾರತೀಯ ಅಡುಗೆಯ ಅವಿಭಾಜ್ಯ ಅಂಗವಾಗಿದೆ. ಇದರ ಸುವಾಸನೆ ಮತ್ತು ರುಚಿ ಆಹಾರಕ್ಕೆ ವಿಶೇಷ ರುಚಿಯನ್ನು ನೀಡುವುದಷ್ಟೇ ಅಲ್ಲದೆ, ಆರೋಗ್ಯಕ್ಕೂ ಅನೇಕ ಪ್ರಯೋಜನಗಳನ್ನು ನೀಡುತ್ತದೆ. ಇದರಿಂದ ತಯಾರಿಸಿದ ಚಟ್ನಿಯು ಬಹು ರುಚಿಕರ ಮತ್ತು ವ್ಯಂಜನವಾಗಿ ಉಪಯೋಗಕ್ಕೆ ಬರುತ್ತದೆ.

ತಯಾರಿಸುವ ವಿಧಾನ: ಕೊತ್ತಂಬರಿ ಸೊಪ್ಪನ್ನು ಚೆನ್ನಾಗಿ ತೊಳೆದುಕೊಳ್ಳಿ. ಹಸಿ ಮೆಣಸಿನಕಾಯಿ, ಬೆಳ್ಳುಳ್ಳಿ ಮತ್ತು ಶುಂಠಿಯನ್ನು ಸಿಪ್ಪೆ ಸುಲಿದು ತುಂಡು ಮಾಡಿ. ಹುಣಸೆಹಣ್ಣನ್ನು ನೀರಿನಲ್ಲಿ ನೆನೆಸಿ ಮೃದು ಮಾಡಿ. ಎಲ್ಲಾ ಸಾಮಗ್ರಿಗಳನ್ನು ಮಿಕ್ಸಿಯಲ್ಲಿ ಸ್ವಲ್ಪ ನೀರು ಹಾಕಿ ರುಬ್ಬಿಕೊಳ್ಳಿ. ಕಾಯಿತುರಿಯನ್ನು ಸಹ ಮಿಕ್ಸಿಯಲ್ಲಿ ಹಾಕಿ ರುಬ್ಬಬಹುದು. ರುಚಿಗೆ ತಕ್ಕಷ್ಟು ಉಪ್ಪು ಸೇರಿಸಬಹುದು. ಬೆಳ್ಳುಳ್ಳಿ ಇಲ್ಲದೆಯೂ ಇದನ್ನು ತಯಾರಿಸಬಹುದು. ಈ ಚಟ್ನಿಯನ್ನು ಇಡ್ಲಿ, ರೊಟ್ಟಿ, ದೋಸೆಯೊಂದಿಗೆ ಸೇವಿಸಿದರೆ ಬಹು ರುಚಿ. ಅನ್ನದೊಂದಿಗೂ ಸೇವಿಸಬಹುದು.

ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
07.01.2025 ಮಂಗಳವಾರ
vishwavani.news

ದಿನ ದರ್ಶಿಕೆ

ಪುಷ್ಯ ಮಾಸ, ಶುಕ್ಲ ಪಕ್ಷ, ಅಷ್ಟಮಿ ತಿಥಿ, ರೇವತಿ ನಕ್ಷತ್ರ, ಶಿವ ಯೋಗ, ಬಾವ ಕರಣ, ಮೀನ ಲಗ್ನ, ಧನು ರಾಶಿ, ಶಿಶಿರ ಋತು, ಉತ್ತರಾಯಣ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮ ಶಕ ಸಂವತ್ಸರ

ಮನೆಮದ್ದು

ಪುದೀನಾ ಎಣ್ಣೆಯನ್ನು ತಂಪಾದ, ಒದ್ದೆಯಾದ ಬಟ್ಟೆಯ ಮೇಲೆ ಹಾಕಿ ಮತ್ತು ಕುತ್ತಿಗೆಗೆ 30 ನಿಮಿಷಗಳ ಕಾಲ ಇಟ್ಟುಕೊಳ್ಳುವುದರಿಂದ ಕೀಮೋಥೆರಪಿ ನಂತರ ವಾಕರಿಕೆ ನಿವಾರಿಸಲು ಸಹಾಯ ಮಾಡುತ್ತದೆ. ಪುದೀನಾವನ್ನು ಮೌಖಿಕವಾಗಿ ತೆಗೆದುಕೊಳ್ಳುವುದರಿಂದ ಕೀಮೋಥೆರಪಿ ನಂತರ ವಾಕರಿಕೆ ಶಮನಗೊಳಿಸಲು ಸಹಾಯ ಮಾಡುತ್ತದೆ.

ಸೌಂದರ್ಯ ಸೂತ್ರ

ನೆತ್ತಿಗೆ ಅಗತ್ಯಕ್ಕಿಂತ ಹೆಚ್ಚಿನ ಉತ್ಪನ್ನಗಳನ್ನು ಬಳಸುವುದರಿಂದ ತಲೆಹೊಟ್ಟಿನ ಜೊತೆಗೆ ಇನ್ನಿತರ ನೆತ್ತಿಯ ಸಮಸ್ಯೆಗೆ ಆಹ್ವಾನ ನೀಡಿದಂತಾಗಬಹುದು. ಲೀವ್ ಆನ್ ಕಂಡೀಷನರ್‌ಗಳು, ಜೆಲ್‌ಗಳು ಅಥವಾ ಹೇರ್ ಸ್ಪ್ರೇಗಳಂತಹ ಹೇರ್ ಕೇರ್ ಉತ್ಪನ್ನಗಳನು ಅತಿಯಾಗಿ ಬಳಸುವುದರಿಂದ ನೆತ್ತಿಯ ಮೇಲೆ ಬೇಡವಾದ ವಸ್ತುಗಳ ಸಂಗ್ರಹಕ್ಕೆ ಕಾರಣವಾಗಬಹುದು.

ದಿನ ಭವಿಷ್ಯ

ಮೇಷ: ಹೊಸ ಅವಕಾಶಗಳು ಎದುರಾಗಲಿವೆ; ಧೈರ್ಯದಿಂದ ಮುಂದೆ ಹೋಗಿ ಯಶಸ್ಸು ಸಾಧಿಸಿ.

ವೃಷಭ: ಹಣಕಾಸು ಲಾಭಕ್ಕೆ ಅವಕಾಶವಿದೆ; ಹಣವನ್ನು ಸರಿಯಾಗಿ ಉಪಯೋಗಿಸಿ. ಸ್ನೇಹಿತರಿಂದ ಬೆಂಬಲ ಸಿಗುವ ಸಾಧ್ಯತೆ ಇದೆ.

ಮಿಥುನ: ಬುದ್ಧಿಮತ್ತೆ ಹೆಚ್ಚಿಸಲು ಉತ್ತಮ ದಿನ; ಹೊಸತನ್ನು ಕಲಿಯಲು ಸಮಯ ಬಳಸಿ. ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿ.

ಕಟಕ: ಕುಟುಂಬದೊಂದಿಗೆ ಸಮಯ ಕಳೆಯಿರಿ; ಇಂದಿನ ದಿನ ಶಾಂತಿಯುವಾಗಿರಲಿದೆ. ಆರ್ಥಿಕ ವಿಷಯಗಳಲ್ಲಿ ಹೆಚ್ಚು ಜಾಗರೂಕರಾಗಿರಿ.

ಸಿಂಹ: ಉದ್ಯೋಗದಲ್ಲಿ ನಿಮ್ಮ ಶ್ರಮಕ್ಕೆ ಮೆಚ್ಚುಗೆ ಸಿಗುತ್ತದೆ; ಹೊಸ ಹೊಣೆಗಾರಿಕೆಗಳಿಗೆ ಸಿದ್ಧರಾಗಿ. ದೈಹಿಕ ಆರೋಗ್ಯ ಗಮನದಲ್ಲಿ ಇರಲಿ.

ಕನ್ಯಾ: ಹೊಸ ಯೋಜನೆಗಳನ್ನು ಯಶಸ್ವಿಯಾಗಿ ಪ್ರಾರಂಭಿಸಲು ಉತ್ತಮ ದಿನ. ಸ್ನೇಹಿತರಿಂದ ಪ್ರೇರಣೆ ಮತ್ತು ಬೆಂಬಲ ಸಿಗುವ ಸಾಧ್ಯತೆ.

ತುಲಾ: ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಿ. ಸಮತೋಲನವನ್ನು ಕಾಪಾಡಿ ಮತ್ತು ಮುಖ್ಯ ನಿರ್ಧಾರಗಳನ್ನು ಸ್ವತಃ ತೆಗೆದುಕೊಳ್ಳಿ.

ವೃಶ್ಚಿಕ: ನಿಮ್ಮ ಶಕ್ತಿ ನಿಮ್ಮ ಲಕ್ಷ್ಯಗಳಿಗೆ ಉತ್ತೇಜನ ನೀಡಲಿದೆ. ನಿರ್ಧಾರಗಳನ್ನು ಬುದ್ಧಿವಂತಿಕೆಯಿಂದ ತೆಗೆದುಕೊಳ್ಳಿ.

ಧನು: ಪ್ರವಾಸ ಯಾತ್ರೆಗಳಿಗೆ ಯೋಜನೆ ರೂಪಿಸಿ; ಹೊಸ ಅನುಭವಗಳು ನಿರೀಕ್ಷಿತ. ನಿಮ್ಮ ಸುತ್ತಮುತ್ತ ಜನರ ಜೊತೆ ಸಹಕಾರ ರೂಪಿಸಿ.

ಮಕರ: ಶ್ರಮ ಫಲಪ್ರದವಾಗುತ್ತದೆ; ಯಶಸ್ಸು ನಿಮ್ಮನ್ನು ಹುಡುಕುವುದು. ಹಣಕಾಸು ವಿಷಯಗಳಲ್ಲಿ ಜಾಗರೂಕರಾಗಿರಿ. ಶಾಂತ ಮನಸ್ಸು ಕಾಪಾಡಿ.

ಕುಂಭ: ಹೊಸ ಪರಿಚಯಗಳು ನಿಮ್ಮ ಬದುಕಿನಲ್ಲಿ ಹೊಸ ಬೆಳವಣಿಗೆ ತರಬಹುದು. ಅವಕಾಶ ಸ್ವೀಕರಿಸಿ ಮತ್ತು ಯಶಸ್ಸಿಗೆ ತಯಾರಾಗಿರಿ.

ಮೀನ: ಧೈರ್ಯದಿಂದ ಕಾರ್ಯ ನಿರ್ವಹಿಸಿ; ಪ್ರಗತಿ ಕಾಣುವಿರಿ. ಶ್ರೇಷ್ಠ ಯೋಜನೆಗಳು ನಿಮ್ಮ ಮುಂದಿನ ಪ್ರಯತ್ನಗಳಿಗೆ ದಾರಿ ಒದಗಿಸುತ್ತದೆ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



• ಖ್ಯಾತ ನಟಿ ಬಿಪಾಷಾ ಬಸು ಹುಟ್ಟುಹಬ್ಬ

• 1610: ಇಟಲಿಯ ಬಾಹ್ಯಾಕಾಶ ಸಂಶೋಧಕ ಗೆಲಿಲಿಯೊ ಗೆಲಿಲಿ ಗುರು ಗ್ರಹದ ಉಪಗ್ರಹಗಳನ್ನು ಕಂಡುಹಿಡಿದರು

• 2015: ಇಬ್ಬರು ಭಯೋತ್ಪಾದಕರು ಪ್ಯಾರಿಸ್‌ನ ಚಾರ್ಲೀ ಹೆಬ್ಡೊ ಪತ್ರಿಕೆಯ ಕಚೇರಿಯಲ್ಲಿನ 12 ಜನರನ್ನು ಕೊಂದು ಹಾಕಿದರು.

ಚಿತ್ರಸ್ಫೂರ್ತಿ

ಚಿತ್ರಕೃಪೆ: ದಿ ಗಾರ್ಡಿಯನ್

ಭಾರತೀಯರು ಬೆಂಕಿಯನ್ನು ದೇವರಿಗೆ ಹೋಲಿಸುತ್ತೇವೆ. ಎಷ್ಟೋ ಕಡೆ ಸ್ನಾನ ಮಾಡದೆ, ಪೂಜೆ ಮಾಡದೇ ಅಡುಗೆಯನ್ನೂ ಮಾಡುವುದಿಲ್ಲ. ಹಾಗೇ ಇನ್ನೂ ಕೆಲವು ದಿನಗಳಲ್ಲಿ ಶುರುವಾಗುವ ಮಹಾಕುಂಭಮೇಳಕ್ಕೆ ಸೇರಿರುವ ಅಘೋರಿಗಳ ಗಣ ಜ್ವಾಲೆಯನ್ನು ಉಗುಳುತ್ತಾ ತಮ್ಮ ಭಕ್ತಿ, ಶಕ್ತಿಯನ್ನು ತೋರ್ಪಡಿಸಿದ್ದು ಹೀಗೆ!

ನಾವು ಶೇಖರಿಸಿಕೊಳ್ಳುವ ಕೆಟ್ಟ ನೆನಪುಗಳ ದುರ್ಗಂಧ

ಶಾಲೆಯಲ್ಲಿ ಶಿಕ್ಷಕಿ ಪಾಠ ಮಾಡುತ್ತಿದ್ದರು. ಮಕ್ಕಳು ಕೀಟಲೆ ಮಾಡಿಕೊಳ್ಳುತ್ತಿದ್ದವು. ಚಿವುಟುವುದು, ಹೊಡೆಯುವುದು, ಕೂತಲ್ಲೇ ತಳ್ಳುವುದು.. ಹೀಗೆ. ಕೇಳಿದರೆ ಆ ಮಕ್ಕಳು ನೆನ್ನೆ ಅವನು ನನಗೆ ಹೀಗೆ ಹೊಡೆದಿದ್ದ ಅದಕ್ಕೆ ನಾನು ಇಂದು ಹೊಡೆದೆ ಚಿವುಟಿದೆ ಎಂದು ದೂರು ಹೇಳುತ್ತಿದ್ದರು. ಒಬ್ಬರು ಮಾಡಿದರೆಂದು ಮತ್ತೊಬ್ಬರು ಅವರಿಗೆ ಕೀಟಲೆ ಮಾಡುವುದು ಮುಂದುವರೆದಿತ್ತು. ಶಿಕ್ಷಕಿ ಯೋಚಿಸಿದರು ಈ ಮಕ್ಕಳಿಗೆ ಹೇಳಿದರೆ ಅರ್ಥ ಆಗುವುದಿಲ್ಲ, ಕೇಳುವುದಿಲ್ಲ, ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗುವುದೇ ಈಗಲೇ ಇದನ್ನು ಸರಿ ಮಾಡಬೇಕು ಎಂದು ನಿರ್ಧರಿಸಿದರು.

'ನಾಳೆ ದಿನ ನೀವು ಬರುವಾಗ ಒಂದಷ್ಟು ಆಲೂಗಡ್ಡೆಯನ್ನು ಕೈ ಚೀಲದಲ್ಲಿ ಹಿಡಿದುಕೊಂಡು ಬನ್ನಿ' ಎಂದರು ಶಿಕ್ಷಕಿ . ಮಕ್ಕಳಿಗೆ ಇದು ಯಾಕೆ ಎಂದು ಅರ್ಥವಾಗಲಿಲ್ಲ. ಶಿಕ್ಷಕಿ ಹೇಳಿದಂತೆ ಒಂದು ಕೈಚೀಲದಲ್ಲಿ ಐದಾರು ಆಲೂಗಡ್ಡೆ ತುಂಬಿ ತಂದು ಟೀಚರಿಗೆ ತೋರಿಸಿದವು. ಅದನ್ನು 'ನೋಡಿ ಮಕ್ಕಳೇ ನಾಳೆಯಿಂದ, ಈ ಆಲೂಗಡ್ಡೆ ಚೀಲವನ್ನು ಮನೆಯಿಂದ ಬರುವಾಗ ತರಬೇಕು, ಹೋಗುವಾಗ ತೆಗೆದುಕೊಂಡು ಹೋಗಬೇಕು' ಎಂದರು. ಇದನ್ನು ಕೇಳಿದ ಮಕ್ಕಳಿಗೆ ಆಶ್ಚರ್ಯವಾಯಿತು. ಶಿಕ್ಷಕಿ ಹೇಳಿದ ಮಾತನ್ನು ಕೇಳಲೇಬೇಕು ಅಲ್ಲವೇ? ಅವರು ಹೇಳಿದಂತೆ ಪಠ್ಯಪುಸ್ತಕದ ಜೊತೆ ನಿತ್ಯವೂ ಆಲೂಗಡ್ಡೆ ಚೀಲವನ್ನು ಹೊತ್ತು ತರುತ್ತಿದ್ದವು ಮನೆಗೆ ಹೋಗುವಾಗ ತೆಗೆದುಕೊಂಡು ಹೋಗುತ್ತಿದ್ದವು. ಮನೆಯಿಂದ ಬರುವಾಗ ಶಾಲಾ ಪಠ್ಯಪುಸ್ತಕದ ಚೀಲದ ಜೊತೆ, ಆಲೂಗಡ್ಡೆ ಚೀಲ ತರುವುದು ಹೋಗುವಾಗ ತೆಗೆದುಕೊಂಡು ಹೋಗುವುದು. ಎರಡು ಮೂರು ದಿನ ಏನೂ ಅನ್ನಿಸಲಿಲ್ಲ. ಕ್ರಮೇಣ ಅದು ಭಾರ ಎನಿಸಿತು. ಒಂದು ವಾರವಾದರೂ ಶಿಕ್ಷಕಿ ಬೇಡ ಅನ್ನಲಿಲ್ಲ. ಎಂಟು ಹತ್ತು ದಿನ ಕಳೆಯಿತು. ಚೀಲದಲ್ಲಿದ್ದ ಆಲೂಗಡ್ಡೆ ಕೊಳೆಯಲು ಆರಂಭಿಸಿತು. ಮತ್ತೆರಡು ದಿನ ಕಳೆದ ಮೇಲೆ ಕೊಳೆತು ದುರ್ಗಂಧ ಬರಲು ಶುರುವಾಯಿತು. ಕಷ್ಟಪಟ್ಟು ಹೇಗೋ ಎರಡು ದಿನ ತಂದವು ಆಮೇಲೆ ಆಗಲಿಲ್ಲ.

ನೇರವಾಗಿ ಶಿಕ್ಷಕಿ ಬಳಿ ಬಂದು, 'ಟೀಚರ್ ಇನ್ನು ಮೇಲೆ ಈ ಆಲೂಗಡ್ಡೆ ಹೊತ್ತು ತರಲು ನಮ್ಮಿಂದ ಆಗುವುದಿಲ್ಲ. ಕೆಟ್ಟು ಹೋಗಿ ಕೆಟ್ಟ ವಾಸನೆ ಬರುತ್ತಿದೆ, ಮೂಗು ಮುಚ್ಚಿಕೊಂಡು ಬರಬೇಕು. ನಮಗೆ ಸಹಿಸಲು ಆಗುತ್ತಿಲ್ಲ' ಎಂದವು.

ಇದೆ ಸರಿಯಾದ ಸಮಯ ಎಂದು ಶಿಕ್ಷಕಿ ಹೇಳಿದರು. 'ಮಕ್ಕಳೇ ಆಲೂಗಡ್ಡೆ ಚೆನ್ನಾಗಿರುವಷ್ಟು ದಿನ ಜೊತೆಯಲ್ಲೇ ಇಟ್ಟುಕೊಳ್ಳಬಹುದು. ಆದರೆ ಅದು ಕೆಟ್ಟ ಮೇಲೆ, ಹತ್ತಿರ ಇಟ್ಟುಕೊಳ್ಳಲು ಆಗುವುದಿಲ್ಲ. ಅದರ ದುರ್ಗಂಧವನ್ನು ಸಹಿಸಲು ಆಗುತ್ತದೆಯೇ? ಒಂದೇ ತರಗತಿಯ ಮಕ್ಕಳಾದ ನೀವು, ಸಹಪಾಠಿಗಳೊಂದಿಗೆ ಆಡುವ ಸಮಯದಲ್ಲಿ, ಕೀಟಲೆ ಮಾಡಿ ಜಗಳಾಡಿಕೊಂಡು ಆ ಸಿಟ್ಟನ್ನು ಎಷ್ಟು ದಿನ ತಲೆಯಲ್ಲಿ ಇಟ್ಟುಕೊಳ್ಳುವಿರಿ. ಹೀಗೆ ಮುಂದುವರೆದರೆ ಆಲೂಗಡ್ಡೆ ಕೊಳೆತಂತೆ, ಅದೇ ವಿಚಾರಗಳು ನಿಮ್ಮ ತಲೆಯಲ್ಲಿ ಕೊಳೆತು ದುರ್ಗಂಧ ಬೀರುತ್ತದೆ. ಇಂಥ ದುರ್ಗಂಧವನ್ನು ನಿಮ್ಮಿಂದ ಸಹಿಸಲು ಸಾಧ್ಯವಿಲ್ಲ ಅಲ್ಲವೇ? ನಿಮಗೆ ಪರಿಮಳ ಭರಿತ ಸುಗಂಧ ಬೇಕೆಂದರೆ, ನಿಮ್ಮ ಗೆಳೆಯರ ಜೊತೆ ನಡೆದ, ಸಣ್ಣಪುಟ್ಟ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಳ್ಳದೆ, ಅಂದಿನ ಘಟನೆಯನ್ನು ಅಲ್ಲಿಗೆ ಮರೆತು, ನಿಮ್ಮ ನಡುವೆ ನಡೆವ ಒಳ್ಳೆಯ ವಿಚಾರಗಳನ್ನು ಮೆಲಕು ಹಾಕಿ ಮುಂದೆ ಸಾಗಬೇಕು.

ಪಾಠದ ಕಡೆ ಗಮನ ಕೊಡಿ, ಎಲ್ಲರ ಜೊತೆಯಲ್ಲೂ ಸ್ನೇಹದಿಂದಿರಿ. ಈ ಸಂಗತಿಗಳಿಂದ ನಿಮ್ಮ ಭವಿಷ್ಯದಲ್ಲಿ ಕಠಿಣ ಸಮಸ್ಯೆಗಳು ಎದುರಾದರೆ ಅದನ್ನು ದಾಟಿ ಮುಂದೆ ಸಾಗುವ ಮನೋಸ್ಥೈರ್ಯ ಬರುತ್ತದೆ' ಎಂದರು.

ದೊಡ್ಡವರಾಗಿ ನಾವು ಕೂಡ ದ್ವೇಷ, ಅಸೂಯೆ, ಈ ಭಾವನೆಗಳ ದುರ್ಗಂಧವನ್ನು ಹೃದಯದಲ್ಲಿ ಇಟ್ಟುಕೊಂಡು ತಿರುಗುವ ಬದಲು, ಅದನ್ನು ಅಲ್ಲಲ್ಲೇ ಮರೆತು, ಒಳ್ಳೆಯ ನೆನಪುಗಳನ್ನು ಶೇಖರಿಸಿಕೊಳ್ಳುತ್ತಾ ನಿಷ್ಕಲ್ಮಶ ಮನಸ್ಸಿನಿಂದ ಬದುಕುವುದು ಒಳ್ಳೆಯದಲ್ಲವೇ?

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಭಾರತದ ಹವಾಮಾನ ಕ್ರಮ ಮತ್ತು ಹೊರಸೂಸುವಿಕೆ

ತಿಳಿಯೋಣ

• ಎಲ್.ಪಿ.ಕುಲಕರ್ಣಿ

ಭಾರತದ ಅಷ್ಟೇ ಏಕೆ ಜಗತ್ತಿನ ಬಹುಪಾಲು ರಾಷ್ಟ್ರಗಳ ಹವಾಮಾನ ಕೆಡುತ್ತಿದೆ. ಹಸಿರುಮನೆ ಅನಿಲ (ಜಿಎಚ್‌ಜಿ: ಗ್ರೀನ್‌ಹೌಸ್‌ಗ್ಯಾಸ್) ಹೊರಸೂಸುವಿಕೆಯನ್ನು ಕಡಿಮೆ ಮಾಡುವಲ್ಲಿ ಮತ್ತು ಸುಸ್ಥಿರ ಬೆಳವಣಿಗೆಯನ್ನು ಉತ್ತೇಜಿಸುವಲ್ಲಿ ಭಾರತವು ದಾಪುಗಾಲು ಹಾಕಿದೆ. 2019 ಕ್ಕೆ ಹೋಲಿಸಿದರೆ 2020 ರಲ್ಲಿ ಭಾರತದ ಜಿಎಚ್‌ಜಿ ಹೊರಸೂಸುವಿಕೆಯು ಶೇ.7.93 ರಷ್ಟು ಕಡಿಮೆಯಾಗಿದೆ ಎಂದು ಇತ್ತೀಚಿನ ವರದಿಗಳು ಸೂಚಿಸುತ್ತವೆ. ದೇಶದ ಅರಣ್ಯ ಮತ್ತು ಮರಗಳ ಹೊದಿಕೆಯು ಸರಿಸುಮಾರು 522 ಮಿಲಿಯನ್ ಟನ್‌ಗಳಷ್ಟು ಇಙ2 ಅನ್ನು ಪ್ರತ್ಯೇಕಿಸಿದೆ, ಇದು ಒಟ್ಟು ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಯ ಶೇ.22 ರಷ್ಟು ಪರಿಣಾಮಕಾರಿಯಾಗಿ ಕಡಿಮೆಯಾಗಿದ್ದು ಮೇಲ್ನೋಟಕ್ಕೆ ಕಂಡುಬರುತ್ತದೆ. ಈ ಪ್ರಗತಿಯು ಪರಿಸರ ಸುಸ್ಥಿರತೆಗೆ ಭಾರತದ ಬದ್ಧತೆಯ ಭಾಗವಾಗಿದೆ ಮತ್ತು ಅದರ ರಾಷ್ಟ್ರೀಯ ಅಭಿವೃದ್ಧಿ ಗುರಿಗಳೊಂದಿಗೆ ಹೊಂದಿಕೆಯಾಗುತ್ತದೆ.

ಹೊರಸೂಸುವಿಕೆಯ ತೀವ್ರತೆಯು ಕಡಿಮೆ ಆಗಿರುವಿಕೆ: 2005 ಮತ್ತು 2020 ರ ನಡುವೆ, ಭಾರತವು ತನ್ನ ಒಟ್ಟು ದೇಶೀಯ ಉತ್ಪನ್ನಕ್ಕೆ (ಜಿಡಿಪಿ) ಹೋಲಿಸಿದರೆ ಹೊರಸೂಸುವಿಕೆಯ ತೀವ್ರತೆಯಲ್ಲಿ ಶೇ.36 ಕಡಿತವನ್ನು ಸಾಧಿಸಿದೆ. ಕಡಿಮೆ ಕಾರ್ಬನ್-ಇಂಟೆನ್ಸಿವ್ ಆಗುತ್ತಿರುವಾಗ ಆರ್ಥಿಕತೆಯು ಬೆಳೆಯುತ್ತಿದೆ ಎಂದು ಇದು ಸೂಚಿಸುತ್ತದೆ. ಜಿ ಎಚ್ ಜಿ ಹೊರಸೂಸುವಿಕೆಯಿಂದ ಆರ್ಥಿಕ ಬೆಳವಣಿಗೆಯನ್ನು ಬೇರ್ಪಡಿಸುವ ಗಮನವು ಸುಸ್ಥಿರ ಅಭಿವೃದ್ಧಿಗೆ ಭಾರತದ ಬದ್ಧತೆಯನ್ನು ತೋರಿಸುತ್ತದೆ.

★ **ಹೊರಸೂಸುವಿಕೆಗೆ ವಲಯಗಳ ಕೊಡುಗೆ:** 2020 ರಲ್ಲಿ, ಇಂಧನ ವಲಯವು ಭಾರತದ ಜಿ ಎಚ್ ಜಿ ಹೊರಸೂಸುವಿಕೆಗೆ ಶೇ.75.66 ನಷ್ಟು ದೊಡ್ಡ ಕೊಡುಗೆಯನ್ನು ನೀಡಿದೆ. ಇತರ ಕ್ಷೇತ್ರಗಳಲ್ಲಿ ಕೃಷಿ (ಶೇ.13.72), ಕೈಗಾರಿಕಾ ಪ್ರಕ್ರಿಯೆಗಳು ಮತ್ತು ಉತ್ಪನ್ನ ಬಳಕೆ (ಶೇ.8.06), ಮತ್ತು ತ್ಯಾಜ್ಯ ನಿರ್ವಹಣೆ (ಶೇ.2.56) ಸೇರಿವೆ.

ಅರಣ್ಯ ಮತ್ತು ಮರಗಳ ಹೊದಿಕೆಯ ಪರಿಣಾಮ: ಭಾರತದ ಅರಣ್ಯ ಮತ್ತು ಮರಗಳ ಹೊದಿಕೆಯು ಸತತವಾಗಿ ಹೆಚ್ಚುತ್ತಿದೆ, ಪ್ರಸ್ತುತ ದೇಶದ ಭೌಗೋಳಿಕ ಪ್ರದೇಶದ ಶೇ.25.17 ಅನ್ನು ಒಳಗೊಂಡಿದೆ. 2005 ರಿಂದ 2021 ರವರೆಗೆ, 2.29 ಶತಕೋಟಿ ಟನ್ ಗಳಷ್ಟು ಕಾರ್ಬನ್ ಡೈ ಆಕ್ಸೈಡ್ ಅನಿಲದ ಸಮಾನತೆಯ ಹೆಚ್ಚುವರಿ ಕಾರ್ಬನ್ ಸಿಂಕ್ ಅನ್ನು ರಚಿಸಲಾಗಿದೆ. ಹವಾಮಾನ ಬದಲಾವಣೆಯನ್ನು ತಗ್ಗಿಸುವಲ್ಲಿ ಅರಣ್ಯೀಕರಣ ಮತ್ತು ಸುಸ್ಥಿರ ಭೂ ಬಳಕೆಯ ಅಭ್ಯಾಸಗಳ ಪ್ರಾಮುಖ್ಯತೆಯನ್ನು ಇದು ಗುರುತಿಸುತ್ತದೆ.

ನವೀಕರಿಸಬಹುದಾದ ಶಕ್ತಿ ಸಾಮರ್ಥ್ಯ: ಅಕ್ಟೋಬರ್ 2024 ರ ಹೊತ್ತಿಗೆ, ಪಳೆಯುಳಿಕೆಯಲ್ಲದ ಮೂಲಗಳು ಭಾರತದ ಸ್ಥಾಪಿತ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಶೇ.46.52 ರಷ್ಟಿದೆ. ದೊಡ್ಡ ಜಲವಿದ್ಯುತ್ ಸೇರಿದಂತೆ ನವೀಕರಿಸಬಹುದಾದ ಶಕ್ತಿಯ ಒಟ್ಟು ಸ್ಥಾಪಿತ ಸಾಮರ್ಥ್ಯವು 203.22 ಗಿಗಾ ವ್ಯಾಟ್ ತಲುಪಿದೆ. ಇದಲ್ಲದೆ, ನವೀಕರಿಸಬಹುದಾದ ಶಕ್ತಿಯ (ದೊಡ್ಡ ಜಲವಿದ್ಯುತ್ ಹೊರತುಪಡಿಸಿ) ಸಂಚಿತ ಸಾಮರ್ಥ್ಯವು ಮಾರ್ಚ್ 2014 ರಲ್ಲಿ 35 ಗಿಗಾ ವ್ಯಾಟ್ ನಿಂದ ಈಗ 156.25 ಗಿಗಾ ವ್ಯಾಟ್ ಗೆ ಏರಿತು. ಈ ಬೆಳವಣಿಗೆಯು ಶುದ್ಧ ಇಂಧನ ಮೂಲಗಳ ಕಡೆಗೆ ಪರಿವರ್ತನೆಗೊಳ್ಳುವ ಭಾರತದ ಬದ್ಧತೆಯನ್ನು ತೋರಿಸುತ್ತದೆ.

ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆಗಳು (ಎನ್ ಡಿ ಸಿ) ಗುರಿಗಳು: ಭಾರತದ ಪೂರ್ವಭಾವಿ ಕ್ರಮಗಳು ಪ್ಯಾರಿಸ್ ಒಪ್ಪಂದದ ಅಡಿಯಲ್ಲಿ ಭಾರತವು ತನ್ನ ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆಗಳೊಂದಿಗೆ (ಎನ್ ಡಿ ಸಿ) ಹೊಂದಿಕೆಯಾಗುತ್ತವೆ. ದೇಶವು ತನ್ನ ಅಭಿವೃದ್ಧಿಯ ಆಕಾಂಕ್ಷೆಗಳನ್ನು ಪರಿಹರಿಸುವಾಗ ಹೊರಸೂಸುವಿಕೆಯನ್ನು ಕಡಿಮೆ ಮಾಡುವ ಗುರಿಯನ್ನು ಇಟ್ಟುಕೊಂಡಿದೆ. ಇಕ್ವಿಟಿ ಮತ್ತು ಸಾಮಾನ್ಯ ಆದರೆ ವಿಭಿನ್ನ ಜವಾಬ್ದಾರಿಗಳ ತತ್ವಗಳು ಈ ಪ್ರಯತ್ನಗಳಿಗೆ ಮಾರ್ಗದರ್ಶನ ನೀಡುತ್ತವೆ, ಭಾರತವು ತನ್ನ ಕಡಿಮೆ ಐತಿಹಾಸಿಕ ಹೊರಸೂಸುವಿಕೆಯ ಹೊರತಾಗಿಯೂ ಜಾಗತಿಕ ಹವಾಮಾನ ಕ್ರಿಯೆಗೆ ಬದ್ಧವಾಗಿದೆ ಎಂದು ಖಚಿತಪಡಿಸುತ್ತದೆ.

ಆಕ್ಸಿ-4 - UNFCCಇಗೆ ಭಾರತದ ನಾಲ್ಕನೇ ದ್ವೈವಾರ್ಷಿಕ ನವೀಕರಣ ವರದಿ:

LULUCF - ಭೂ ಬಳಕೆ, ಭೂ-ಬಳಕೆ ಬದಲಾವಣೆ ಮತ್ತು ಅರಣ್ಯವನ್ನು ಸೂಚಿಸುತ್ತದೆ.

CBDR-RC- ಸಾಮಾನ್ಯ ಆದರೆ ವಿಭಿನ್ನ ಜವಾಬ್ದಾರಿಗಳು ಮತ್ತು ಆಯಾ ಸಾಮರ್ಥ್ಯಗಳು.

GW- ಗಿಗಾವ್ಯಾಟ್, ಒಂದು ಬಿಲಿಯನ್ ವ್ಯಾಟ್‌ಗಳಿಗೆ ಸಮಾನವಾದ ಶಕ್ತಿಯ ಘಟಕ.

NDC- ಪ್ಯಾರಿಸ್ ಒಪ್ಪಂದದ ಅಡಿಯಲ್ಲಿ ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆಗಳು.

ಹವಾಮಾನ ನೀತಿಯಲ್ಲಿ ಭವಿಷ್ಯದ ನಿರ್ದೇಶನಗಳು: ಭಾರತದ ಹವಾಮಾನ ನೀತಿಯು ನವೀಕರಿಸಬಹುದಾದ ಇಂಧನವನ್ನು ಹೆಚ್ಚಿಸುವುದು, ಇಂಧನ ದಕ್ಷತೆಯನ್ನು ಸುಧಾರಿಸುವುದು ಮತ್ತು ಸುಸ್ಥಿರ ಭೂ ಬಳಕೆಯನ್ನು ಉತ್ತೇಜಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ಇಂಧನ ಉತ್ಪಾದನೆಯಲ್ಲಿ ಪಳೆಯುಳಿಕೆಯೇತರ ಇಂಧನ ಮೂಲಗಳ ಪಾಲನ್ನು ಮತ್ತಷ್ಟು ಹೆಚ್ಚಿಸುವ ಗುರಿಯನ್ನು ಸರಕಾರ ಇಟ್ಟುಕೊಂಡಿದೆ. ಈ ಗುರಿಗಳನ್ನು ಸಾಧಿಸಲು ತಂತ್ರಜ್ಞಾನ ಮತ್ತು ಸಾಮರ್ಥ್ಯ-ವರ್ಧನೆಯಲ್ಲಿ ನಿರಂತರ ಹೂಡಿಕೆ ಅತ್ಯಗತ್ಯ.

ಪ ದ ಬಂ ಧ



ಎಡದಿಂದ ಬಲಕ್ಕೆ

1. ಕಷ್ಟ ಅಥವಾ ತೊಂದರೆ (2)
5. ಅಂಕೆಇಲ್ಲದೆ ಬಂದ ಅನುಮಾನ (2)
6. ನೀರಿನ ಚಿಲುಮೆ (3)
7. ಕಾಪಾಡುವವನು (3)
8. ಶಕ್ತಿಗೆಇನ್ನೊಂದು ಹೆಸರು (2)
9. ತೆರಳುವಾಗ ಕೋಪಗೊಳ್ಳು (3)
11. ವಾರದಲ್ಲಿ ಕೇಳಿದ ಸದ್ದು (2)
15. ಮೋಹಕನಗೆ ಉಳ್ಳವಳು (4)
16. ಆತನಧೈರ್ಯ (4)
18. ಪುರದಲ್ಲಿ ದೊರೆತ ಶತ್ರು (2)
20. ರಭಸ ಅಥವಾ ವೇಗ (3)
22 . ದೇಹದ ಭಾಗ (2)
23. ವಾದ ವಿವಾದಗಳಿಂದ ಉಂಟಾದ ರಂಪ (3)
24. ಗತಿಯ ಮಧ್ಯೆ ಇರುವಪತಿವ್ರತೆ (3)
25. ತಾವೇ ನಡೆಸಬೇಕಾದ ದೋಣಿ (2)
26. ಬರೆಯುವ ಶಾಯಿ (2)

ಎಡದಿಂದ ಬಲಕ್ಕೆ

2. ಸರಿಯಾದ ಸಮಯ (3)
3. ಆಕೆಗೆ ಹೆದರಿಕೆ (3)
4. ಒರಳುತರುವಾಗ ನೋವಾದಕುತ್ತಿಗೆ (3)
5. ಕಿಂಕರನ ಜೊತೆಯಾಗಿ ಬಂದ ಶಿವ (3)
8. ಹತ್ತಿರವಲ್ಲದ ಹಾದಿ (5)
10. ಸೂರ್ಯನ ಕಿರಣ (2)
12. ಕೊಟ್ಟ ಮಾತಿಗೆ ತಪ್ಪುವುದು (5)
13. ಮಲಗಲು ಬಳಸುವ ಮೆತ್ತನೆಯ ಸಾಧನ (3)
14. ಏರುತಗ್ಗಿಲ್ಲದಿಲ್ಲದಿರುವುದು (3)
17. ಅಕ್ಕನ ಗಂಡ (2)
19. ದೂರದಲ್ಲಿ ನಾವೇ ಕೊಡಬೇಕಾದಸಾಕ್ಷಿ (3)
20. ಜನರಮಧ್ಯೆ ಜೋಪಾನ (3)
21. ಕೈಯಲ್ಲಿರುವ ಹಣ (3)
22. ಆರಂಭದ್ದಲ್ಲಕೊನೆಯದ್ದು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಬಾಯಾರಿಕೆ 4. ರಜತಾದ್ರಿ 6. ಶಕಟ 7. ಮಣಿಸು 10. ಕರಿ 11. ಶಿಲೀಂಧ್ರ 12. ತಡ 13. ಬಾಲ 14. ಜನಕ 15. ಕಾಡು 16. ಲಿಲಾವು 18. ಬಾಲಿಶ 22. ತಕಾರರು 23. ತಾರತಮ್ಯ

ಎಡದಿಂದ ಬಲಕ್ಕೆ: 2. ಯಾತ್ರಿಕ 3. ಕೆನೆ 4. ರಮಣಿ 5. ತಾಪ 6. ಶರಪಂಜರ 7. ಮರಿ 8. ಸುಶೀಲ 9. ಆಂಧ್ರಪ್ರದೇಶ 10. ಕಡ 12. ತಕಲಿ 13. ಬಾಡು 15. ಕಾವು 17. ಲಾಚಾರು 19. ಲಿಖಿತ 20. ಸಂಕ 21. ಯಿತಾ

• ಸಿ. ರವಿಶಂಕರ ಶಾಸ್ತ್ರಿ ದಂಬೆ

ದಿನಕ್ಕೊಂದು ಮಾಹಿತಿ

ಚೀನಾದ ಗೋಡೆ!

ಚೀನಾದ ಮಹಾ ಗೋಡೆ, ವಿಶ್ವದಲಕ್ಕೇ ಅತ್ಯಂತ ಉದ್ದವಾದ ಗೋಡೆ. ಮನುಷ್ಯ ಮಾಡಿದ ಅತಿ ದೊಡ್ಡ ರಚನೆಗಳಲ್ಲಿ ದಿ ಗ್ರೇಟ್ ವಾಲ್ ಆಫ್ ಚೀನಾ ಸಹ ಒಂದು. ಇದು 21 ಸಾವಿರ ಕಿಮಿ ನಷ್ಟು ಉದ್ದವಾಗಿದೆ. ಇದೆಲ್ಲ ಒಂದೇ ಸಮಯದಲ್ಲಿ ಕಟ್ಟಿಸಿದ್ದಲ್ಲ, ಬದಲಿಗೆ ಕ್ವಿನ್, ಹಾನ್ ಹಾಗೂ ಮಿಂಗ್ ಸಾಮಾಜ್ರ್ಯಗಳು ತಮಗೆ ಬೇಕಾದಾಗ ಕಟ್ಟಿಸಿಕೊಂಡಿದ್ದು.



ಇದೆಲ್ಲವನ್ನು ಕಟ್ಟಲಿಕ್ಕೆ ಹಲವಾರು ಶತಕಗಳೇ ಬೇಕಾದವು. ಹಾಗೇ ಚೀನಾದ ಗೋಡೆಯ ಬಗ್ಗೆ ಎಲ್ಲರಲ್ಲೂ ಒಂದು ತಪ್ಪು ತಿಳಿವಳಿಕೆ ಇದೆ, ಅದೇನೆಂದರೆ, ಇಡೀ ಗೋಡೆ ಒಂದೇ ವಿಸ್ತಾರದಲ್ಲಿದೆ ಎಂದು. ಆದರೆ, ಅದು ಹಾಗಿಲ್ಲ, ಗೋಡೆಯ ಅಲ್ಲಲ್ಲಿ ಅಂತರ್‌ಸಂಪರ್ಕಿತ ಗೋಡೆಗಳು, ಮತ್ತು ಕೋಟೆಗಳೂ ಇದ್ದಾವೆ. ಈ ಗೋಡೆಯನ್ನು ಮಂಗೋಲಿಯಾ, ನೊಮಾದಿಕ್‌ನ ಬುಡಕಟ್ಟು ಜನಾಂಗದವರು ಚೀನಾದ ಮೇಲೆ ದಾಳಿ ಮಾಡದೆ ಇರಲಿ ಎಂದು ಈ ರೀತಿ ಕಟ್ಟಲಾಗಿದೆ. ಎಲ್ಲದಕ್ಕಿಂತ ಹೆಚ್ಚಾಗಿ ಇದು ಬಾಹ್ಯಾಕಾಶದಿಂದ ಕಾಣುತ್ತದೆ.

ಪುಸ್ತಕ ಲೋಕ

ಜಿಪ್ಸಿ ಜೀತು

ಇದು ಪ್ರಸಾದ್ ನಾಯ್ಕ್ ಅವರ ಕಾದಂಬರಿಯಾಗಿದೆ. ಇಲ್ಲಿ ಗೆಳೆತನ, ಸಾಹಸ, ಸಮಯಪ್ರಜ್ಞೆ, ತಂತ್ರಜ್ಞಾನ ಇತ್ಯಾದಿಗಳ ಸುತ್ತ ತೆರೆದುಕೊಳ್ಳುವ ಜೀತು ಮತ್ತು ಗೆಳೆಯರ ರೋಚಕವಾದ ಕಥನಕ ತೆರೆದುಕೊಳ್ಳುತ್ತದೆ. ಕರ್ನಾಟಕದ ಪುಟ್ಟ ಹಳ್ಳಿಯಾದ ಮಲ್ಲಿಗೆಪೇಟೆಯಲ್ಲಿ ನಾಪತ್ತೆ ಪ್ರಕರಣವೊಂದು ಅಚಾನಕ್ಕಾಗಿ ಸದ್ದು ಮಾಡುತ್ತದೆ ಎನ್ನುವುದರಿಂದ ಹಿಡಿದು, ಕಾದಂಬರಿಯ ಕಥಾನಾಯಕನಾದ, ತನ್ನ ಗೆಳೆಯರ ಬಳಗದಲ್ಲಿ ಜೀತೂ ಎಂದೇ ಕರೆಯಲ್ಪಡುವ 11 ವರ್ಷ ಪ್ರಾಯದ ಅಜಿತ್ ಏಕಾಏಕಿ ಕಾಣೆಯಾಗುತ್ತಾನೆ.



ಅಷ್ಟಕ್ಕೂ ಈ ಜೀತು ಎಲ್ಲಿ ಮಾಯವಾಗಿದ್ದ? ಅವನು ಅಪಾಯದಲ್ಲಿದ್ದನೇ? ಕಾಣೆಯಾಗಿದ್ದ ಜೀತೂನನ್ನು ಹುಡುಕಲು ಅವನ ಗೆಳೆಯರಾದ ಸಬಾ, ರಿಷಿ ಮತ್ತು ಚಿಂಟು ಯಶಸ್ವಿಯಾದರೇ? ತಮ್ಮ ಗೆಳೆಯನ ಪತ್ತೆಗಾಗಿ ಮಲ್ಲಿಗೆಪೇಟೆಯ ಈ ಮೂವರು ಗೆಳೆಯರು ಸ್ಥಳೀಯ ಪೋಲೀಸರೊಂದಿಗೆ ಹೇಗೆ ತನಿಖೆಯಲ್ಲಿ ತೊಡಗಿಸಿಕೊಂಡರು? ಇಂಟರ್ನೆಟ್ ಮತ್ತು ಸೋಷಿಯಲ್ ಮೀಡಿಯಾಗಳೆಂಬ ಹೊಸ ಹಾದಿಗಳನ್ನು ಈ ಮಿಸ್ಸಿಂಗ್ ಪ್ರಕರಣದಲ್ಲಿ ಮಲ್ಲಿಗೆಪೇಟೆಯ ಪೋಲೀಸರು ಮತ್ತು ಚಿಣ್ಣರು ಹೇಗೆ ಬಳಸಿಕೊಂಡರು? ಎಂಬೆಲ್ಲ ಕಥನಕಗಳು ಒಟ್ಟಾಗಿ ಒಂದು ಸುಂದರ ಕತೆಯಾಗಿ ಈ ಕೃತಿಯು ಹೊರಬಂದಿದೆ.

ಮಂಗಳ ದ್ರವ್ಯಗಳನ್ನು ತುಳಿಯುವುದು ತರವೇ?

ವೆಂಕಟೇಶ ಬೈಲೂರು

ಇತ್ತೀಚಿಗೆ ನಡೆಯುತ್ತಿರುವ ಮದುವೆಗಳಲ್ಲಿ ನಾನು ಗಮನಿಸಿದ ಕೆಟ್ಟ ಸಂಪ್ರದಾಯಗಳ ಬಗ್ಗೆ ಇಲ್ಲಿ ಹಂಚಿಕೊಳ್ಳಬಯಸುತ್ತೇನೆ. ಹೂವುಗಳಿಂದ ಅಲಂಕರಿಸಿದ ಮದುವೆ ಮಂಟಪದಲ್ಲಿ ಮಂಗಳ ದ್ರವ್ಯಗಳು, ಅಕ್ಷತೆ, ಕಲಶಗಳೆಲ್ಲ ಇರುತ್ತವೆ. ಮದುವೆಗೆಂದು ಬಂದ ಜನರಿಗೆ ಮದುವೆ ಮುಗಿಯುತ್ತಲೇ ವೇದಿಕೆಯ ಮೇಲೆ ಹೋಗಿ ವಧುವರರಿಗೆ ಹರಸಿ ಊಟಕ್ಕೆ ಹೋಗುವ ಕಾತುರ. ಈ ಕಾತುರದಿಂದಾಗಿ ವೇದಿಕೆಯ ಮೇಲೆ ಹೋಗುವ ಮೊದಲು ತಾವು ಧರಿಸಿದ ಚಪ್ಪಲಿ, ಶೂಗಳನ್ನು ಕೆಳಗೆ ಕಳಚಿಡದೆ ಅದನ್ನು ಧರಿಸಿಕೊಂಡೆ ವೇದಿಕೆಗೆ ಧಾವಿಸಿ ಅಲ್ಲಿದ್ದ ಮಂಗಳ ದ್ರವ್ಯ, ಅಕ್ಷತೆ, ಹೂವುಗಳನ್ನು ತುಳಿಯುತ್ತ ಮದು ಮಕ್ಕಳಿಗೆ ಹರಸಿ ಫೋಟೋ, ವಿಡಿಯೋಗೆ ಪೋಸ್ ಕೊಡುತ್ತಾರೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ನಮ್ಮ ಅನ್ನದ ಮೂಲವಾದ ಅಕ್ಕಿಯನ್ನು ಪಾದರಕ್ಷೆ ಧರಿಸಿದ ಕಾಲಿನಲ್ಲಿ ತುಳಿಯುವುದು. ನಮ್ಮ ಸನಾತನ ಪದ್ಧತಿಯಲ್ಲಿ ಅನ್ನ ಲಕ್ಷ್ಮಿಗೆ ಸಮಾನ. ಲಕ್ಷ್ಮಿಯನ್ನು ನಾವು ದೇವರೆಂದು ಪೂಜಿಸುತ್ತೇವೆ. ಹೀಗಿರುವಾಗ ವಿದ್ಯಾವಂತರು ಎನಿಸಿಕೊಂಡ ನಾವು ಈ ರೀತಿ ಮಾಡುವುದು ಎಷ್ಟು ಸರಿ? ವೇದಿಕೆ ಏರುವ ಮೊದಲು ಪಾದರಕ್ಷೆಯನ್ನು ಕಳಚಿಟ್ಟು ಹೋದರೂ ಬರಿಗಾಲಿನಲ್ಲಿ ಅಲ್ಲಿರುವ ಮಂಗಳದ್ರವ್ಯಗಳೆನಿಸಿಕೊಂಡ ಅಕ್ಷತೆಯನ್ನು ತುಳಿಯಬೇಕಾಗುತ್ತದೆ ನಮ್ಮ ಸನಾತನ ಪದ್ಧತಿಯಲ್ಲಿ ಮಂಗಳ ದ್ರವ್ಯಗಳಿಗೆ ಅದರದೇ ಆದ ಗೌರವವಿದೆ ಅಲ್ಲವೇ?

ಇದರ ಜೊತೆಗೆ ಇನ್ನೂ ಒಂದು ಅನಿಷ್ಟ ಪದ್ಧತಿ ಶುರುವಾಗಿದೆ ಅದೇನೆಂದರೆ ವಧು-ವರರು ಪರಸ್ಪರ ಹಾರ ಬದಲಾಯಿಸುವ ಸಮಯದಲ್ಲಿ ಹಾರ ಬದಲಾಯಿಸಲು ಸಾಧ್ಯವಾಗದಂತೆ ವಧು ಅಥವಾ ವರನನ್ನು ಮೇಲಕ್ಕೆತ್ತಿ ಹಿಡಿಯುವುದು. ಹಾರ ಬದಲಾಯಿಸಿಕೊಳ್ಳುವುದು ಅತಿ ಮುಖ್ಯವಾದ ಶಾಸ್ತ್ರ ನಮ್ಮ ಹಿಂದುಗಳಲ್ಲಿ. ಕೆಲವು ಸಂಪ್ರದಾಯಗಳಲ್ಲಿ ಹಾರ ಬದಲಾವಣೆಯೇ ಅತಿ ಮುಖ್ಯವಾದ ಶಾಸ್ತ್ರ ಇದರ ಸಲುವಾಗಿ ಮುಹೂರ್ತ ಇಟ್ಟಿರುತ್ತಾರೆ. ಮುಹೂರ್ತಕ್ಕೆ ಸರಿಯಾಗಿ ಹಾರ ಬದಲಾಯಿಸಿದಂತೆ ಮಾಡುವುದು ಮಾಡುವುದು ಎಷ್ಟು ಸಮಂಜಸ? ಈ ಅನಿಷ್ಟದಿಂದ ಒಂದೆರಡು ಮದುವೆಯಲ್ಲಿ ನಾನು ನೋಡಿದಂತೆ ಹಾರ ಬದಲಾಯಿಸುವ ಸಂದರ್ಭದಲ್ಲಿ ವರನನ್ನು ಎತ್ತಿ ಹಿಡಿದಾಗ ವಧು ಮಾಲೆ ಹಾಕುವಾಗ ವರನ ಬಾಸಿಂಗ ಕಳಚಿ ಬಂದ ಘಟನೆ ನಡೆದಿದೆ. ಹೀಗಾದರೆ ಅದು ಮಂಗಳ ಕಾರ್ಯದಲ್ಲಿ ಅಪಶಕುನವಲ್ಲವೇ?

ಅಲ್ಲದೆ ಇನ್ನೂ ಒಂದು ಕೆಟ್ಟ ಚಾಳಿ ಇತ್ತೀಚಿಗೆ ಶುರುವಾಗಿದೆ. ಅದೇನೆಂದರೆ ಪಂಕ್ತಿಯಲ್ಲಿ ಊಟಕ್ಕೆ ಕುಳಿತವರು ಊಟ ಮುಗಿಸಿ ಏಳುವ ಮೊದಲೇ ಸೀಟು ಕಾದಿರಿಸಲು ಅವರ ಹಿಂದೆ ಹೋಗಿ ನಿಲ್ಲುವುದು. ಇದರಿಂದ ಊಟಕ್ಕೆ ಕುಳಿತವರಿಗೆ ಮುಜುಗರ. ಅದರಲ್ಲೂ ಬಾಯಲ್ಲಿ ಹಲ್ಲಿಲ್ಲದ ಹಿರಿಯ ನಾಗರಿಕರ ಪಾಡು ಹೇಳತೀರದು. ಇತ್ತ ಪೂರ್ತಿ ಉಣ್ಣುವಂತೆಯೂ ಇಲ್ಲ. ಬಿಡುವಂತೆಯೂ ಇಲ್ಲ. ಎಲ್ಲರೂ ಗಬಗಬ ತಿಂದು ಮುಗಿಸಿದರೆ ಇವರು ನಾಚಿಕೆಯಿಂದ ಆಹಾರ ಎಲೆಯಲ್ಲಿ ಬಿಟ್ಟು ಏಳುವ ಪರಿಸ್ಥಿತಿ. ಆಹಾರದ ಪೋಲು. ತುಂಬದ ಹೊಟ್ಟೆ. ಇದೆಲ್ಲ ಅಪಸೌವ್ಯಗಳಿಗೆ ಕೊನೆ ಎಂದು.

ಕಳೆದ ತಿಂಗಳು ಊರಿನಲ್ಲಿ ನಡೆದ ಒಂದು ಮದುವೆಗೆ ಹೋಗಿದ್ದೆ. ಓರ್ವ ಮುಖ್ಯ ಪುರೋಹಿತರು ಇನ್ನೋರ್ವರು ಸಹಾಯಕರು. ಅವರ ಕೈಯಲ್ಲಿ ಮೈಕು. ವಧು ವರರ ತಾಯಿ ತಂದೆ ಮತ್ತು ಕಳಶಗಿತ್ತಿಯರ ಹೊರತಾಗಿ ಬೇರೆ ಯಾರೂ ಮಂಟಪದಲ್ಲಿ ಇರಬೇಡಿ ಕೆಳಗೆ ಹೋಗಿ ಎಂದು ಖಡಕ್ಕಾಗಿ ಹೇಳಿದರು. ಅಷ್ಟೇ ಅಲ್ಲದೆ ಹಾರ ಬದಲಾಯಿಸುವ ಸಂದರ್ಭ ಬಂದಾಗ ಯಾರೂ ವಧು-ವರರನ್ನು ಮೇಲಕ್ಕೆ ಎತ್ತಬಾರದು ಎಂದು ಕಟ್ಟಪ್ಪಣೆ ಮಾಡಿದರು. ಇದಕ್ಕೆ ಸಜ್ಜಾಗಿ ನಿಂತವರು ಹೆಚ್ಚು ಮೋರೆ ಹಾಕಿಕೊಂಡರು. ಮಂಟಪದ ಕಾರ್ಯಕ್ರಮಗಳೆಲ್ಲವೂ ಶಾಸ್ತ್ರೋಕ್ತವಾಗಿ ನೆರವೇರಿತು. ಪುರೋಹಿತರೇ ಹೀಗೆ ಹೇಳಿದ್ದರಿಂದ ಅಲ್ಲಿ ಯಾರೂ ಏನೂ ತಕರಾರು ಮಾಡುವಂತೆಯೂ ಇರಲಿಲ್ಲ. ನಮ್ಮ ಸಂಪ್ರದಾಯದಂತೆ ಮದುವೆ ಸಾಂಗವಾಗಿ ನೆರವೇರಿತು.



ಸಮಾಚಾರ ಸಣ್ಣದಲ್ಲ

ರಾಷ್ಟ್ರೀಯ ಚೆಸ್: ಪಳನಿ ಶುಭಾರಂಭ

ಮೈಸೂರು: ಕರ್ನಾಟಕದ ಆಟಗಾರ ಜಿ. ಪಳನಿ ಇಲ್ಲಿನ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ಭಾನುವಾರ ಆರಂಭಗೊಂಡ ಶ್ರವಣದೋಷವುಳ್ಳವರ 25ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಶಿಪ್‌ನ ಮೊದಲ ದಿನದಂದು ಶುಭಾರಂಭ ಮಾಡಿದರು. ಮುಕ್ತ ವಿಭಾಗದ ಮೊದಲ ಸುತ್ತಿನಲ್ಲಿ ಟೂರ್ನಿಯ 2ನೇ ಶ್ರೇಯಾಂಕಿತ ಜಿ. ಪಳನಿ, ಮುಜಿಬ್ ರೆಹಮಾನ್ ವಿರುದ್ಧ ಗೆಲುವು ಸಾಧಿಸಿದರು. ಆದರೆ, ಅಗ್ರ ಶ್ರೇಯಾಂಕದ ಆಟಗಾರ ತಮಿಳುನಾಡಿನ ಸ್ಪೆನ್ಸರ್ ಅಲೆಗ್ಸಾಂಡರ್ ಗಿಲ್ಬರ್ಟ್, ಮಿತೇಶ್ಬಾಯ್ ಪಟೇಲ್ ಎದುರು ಮಣಿದರು. 3ನೇ ಶ್ರೇಯಾಂಕದ, ಮಹಾರಾಷ್ಟ್ರದ ದೇವೇಂದ್ರ ಶ್ರೀಹರಿ ವೈದ್ಯ, ನಜಿನಿನ್ ರಫಿ ವಿರುದ್ಧ ಜಯ ಗಳಿಸಿದರು. ಟೂರ್ನಿಯಲ್ಲಿ ವಿವಿಧ ರಾಜ್ಯಗಳ 180 ಆಟಗಾರರು ಪಾಲ್ಗೊಂಡಿದ್ದಾರೆ. 18 ವರ್ಷದ ಒಳಗಿನ ಬಾಲಕ-ಬಾಲಕಿಯರು ಹಾಗೂ ಮುಕ್ತ ವಿಭಾಗದಲ್ಲಿ ಸ್ಪರ್ಧೆ ನಡೆದಿದೆ.

ಎಂಟರ ಘಟ್ಟಕ್ಕೆ ಕರ್ನಾಟಕ ತಂಡ

ಬೆಂಗಳೂರು: ಮಯಂಕ್ ಅಗರವಾಲ್ ಅಮೋಘ ಶತಕದ ಬಲದಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಕೊನೆಯ ಪಂದ್ಯದಲ್ಲಿ ಜಯಿಸಿತು.

ಇದರೊಂದಿಗೆ ನೇರವಾಗಿ ಎಂಟರ ಘಟ್ಟಕ್ಕೆ ಪ್ರವೇಶಿಸಿತು. ಕರ್ನಾಟಕ ತಂಡದ ನಾಯಕ ಮಯಂಕ್ (ಔಟಾಗದೆ 116; 119ಎ) ಟೂರ್ನಿಯಲ್ಲಿ ನಾಲ್ಕನೇ ಶತಕ ದಾಖಲಿಸಿದರು. ಅಲ್ಲದೇ ಅವರು ಒಟ್ಟು ಏಳು ಪಂದ್ಯಗಳಿಂದ 613 ರನ್ ಗಳಿಸಿದರು. ಕರ್ನಾಟಕ 9 ವಿಕೆಟ್‌ಗಳಿಂದ ಜಯಿಸಿತು. ಗುಜರಾತ್ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಗಾಲ್ಯಾಂಡ್ ತಂಡದ ನಾಯಕ ರಾಂಗ್ಸೆನ್ ಜೊನಾಥನ್ (51; 73ಎ) ಮತ್ತು ಚೇತನ್ ಬಿಷ್ಟ್ (ಔಟಾಗದೆ 77; 73ಎ) ಅವರಿಬ್ಬರೂ ಅರ್ಧಶತಕ ಗಳಿಸಿದರು. ಇದರಿಂದಾಗಿ ತಂಡವು 48.3 ಓವರ್‌ಗಳಲ್ಲಿ 206 ರನ್ ಗಳಿಸಿತು. ಕರ್ನಾಟಕದ ಸ್ಪಿನ್ನರ್ ಶ್ರೇಯಸ್ ಗೋಪಾಲ್ (24ಕ್ಕೆ4) ಮತ್ತು ಅಭಿಲಾಷ್ ಶೆಟ್ಟಿ (42ಕ್ಕೆ2) ಎದುರಾಳಿ ತಂಡವನ್ನು ಕಟ್ಟಿಹಾಕಿದರು. ಸಾಧಾರಣ ಗುರಿ ಬೆನ್ನಟ್ಟಿದ ಕರ್ನಾಟಕ ತಂಡದ ಆರಂಭಿಕ ಬ್ಯಾಟರ್ ನಿಕಿನ್ ಜೋಸ್ (1 ರನ್) ನಾಲ್ಕನೇ ಓವರ್‌ನಲ್ಲಿ ವಿಕೆಟ್ ಕಳೆದುಕೊಂಡರು. ಆದರೆ ಉತ್ತಮ ಫಾರ್ಮ್‌ನಲ್ಲಿರುವ ಮಯಂಕ್ ಮತ್ತು ಕೆ.ವಿ. ಅನೀಶ್ (ಔಟಾಗದೆ 82; 95ಎ) ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 198 ರನ್ ಸೇರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಇನ್ನಿತರ ಗುಂಪುಗಳಿಂದ ಗುಜರಾತ್, ಮಹಾರಾಷ್ಟ್ರ, ವಿದರ್ಭ ಮತ್ತು ಬರೋಡಾ ತಂಡಗಳೂ ಕ್ವಾರ್ಟರ್‌ಫೈನಲ್ ಪ್ರವೇಶಿಸಿದವು.

ಭಾರತ ಐರ್ಲೆಂಡ್ ವಿರುದ್ಧದ ಪಂದ್ಯಕ್ಕೆ ಆಟಗಾರರ ಪಟ್ಟಿ ಬಿಡುಗಡೆ | ಹರ್ಮನ್‌ಪ್ರೀತ್‌ಗೆ ವಿಶ್ರಾಂತಿ

ಮಹಿಳಾ ತಂಡಕ್ಕೆ ಸ್ಮೃತಿ ನಾಯಕಿ

ದೆಹಲಿ: ಅನುಭವಿ ಆರಂಭ ಆಟಗಾರ್ತಿ ಸ್ಮೃತಿ ಮಂದಾನಾ ಅವರನ್ನು ಐರ್ಲೆಂಡ್ ವಿರುದ್ಧ ಶುಕ್ರವಾರ ಆರಂಭವಾಗುವ ಮೂರು ಪಂದ್ಯಗಳ ಏಕದಿನ ಸರಣಿಗೆ ಭಾರತ ತಂಡದ ನಾಯಕಿಯನ್ನಾಗಿ ನೇಮಕ ಮಾಡಲಾಗಿದೆ. ತಂಡದ ಪೂರ್ಣಾವಧಿ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ಕೌರ್ ಜೊತೆ ವೇಗದ ಬೌಲರ್ ರೇಣುಕಾ ಸಿಂಗ್ ಠಾಕೂರ್ ಅವರಿಗೂ ವಿಶ್ರಾಂತಿ ನೀಡಲಾಗಿದೆ. ಜನವರಿ 10, 12 ಮತ್ತು 15ರಂದು ಈ ಮೂರು ಪಂದ್ಯಗಳನ್ನು ಆಡಲಾಗುವುದು. ಮೂರೂ ಪಂದ್ಯಗಳು ರಾಜಕೋಟ್‌ನಲ್ಲೇ ನಡೆಯಲಿವೆ.

ವೆಸ್ಟ್ ಇಂಡೀಸ್ ವಿರುದ್ಧ ತವರಿನಲ್ಲಿ ನಡೆದ ಸರಣಿಯ ವೇಳೆ ಹರ್ಮನ್‌ಪ್ರೀತ್ ಕೌರ್ ಮೊಣಕಾಲಿಗೆ ಗಾಯವಾಗಿದ್ದು, ಅವರು ಕೊನೆಯ ಎರಡು ಟಿ20 ಪಂದ್ಯಗಳನ್ನು ಕಳೆದುಕೊಂಡಿದ್ದರು. ಆದರೆ 35 ವರ್ಷ ವಯಸ್ಸಿನ ಆಟಗಾರ್ತಿ ಮೂರು ಪಂದ್ಯಗಳ ಏಕದಿನ ಸರಣಿ ವೇಳೆ ತಂಡಕ್ಕೆ ಮರಳಿದ್ದರು.

ರೇಣುಕಾ ಸಿಂಗ್, ವೆಸ್ಟ್ ಇಂಡೀಸ್ ವಿರುದ್ಧ ಏಕದಿನ ಪಂದ್ಯಗಳ ಸರಣಿಯಲ್ಲಿ 10 ವಿಕೆಟ್‌ಗಳನ್ನು ಪಡೆದು ಸರಣಿಯ ಆಟಗಾರ್ತಿ ಗೌರವಕ್ಕೆ ಪಾತ್ರರಾಗಿದ್ದರು. ಕಾರ್ಯದೊತ್ತಡ ನಿರ್ವಹಣೆಯ ಭಾಗವಾಗಿ ವಿಶ್ರಾಂತಿ ನೀಡಲಾಗಿದೆ.

ಭಾರತ ತಂಡ: ಸ್ಮೃತಿ ಮಂದಾನ (ನಾಯಕಿ), ದೀಪ್ತಿ ಶರ್ಮಾ (ಉಪ ನಾಯಕಿ), ಪ್ರತಿಕಾ ರಾವಲ್, ಹರ್ಲೀನ್ ಡಿಯೊಲ್, ಜೆಮಿಮಾ ರೋಡ್ರಿಗಸ್, ಉಮಾ ಚೆಟ್ರಿ (ವಿಕೆಟ್ ಕೀಪರ್), ರಿಚಾ ಘೋಷ್ (ವಿಕೆಟ್ ಕೀಪರ್), ತೇಜಲ್ ಹಸಬ್ನಿಸ್, ರಾಘವಿ ಬಿಷ್ಟ್, ಮಿನ್ನು ಮಣಿ, ಪ್ರಿಯಾ ಮಿಶ್ರಾ, ತನುಜಾ ಕನ್ವರ್, ತಿತಾಸ್ ಸಾಧು, ಸೈಮಾ ಠಾಕೂರ್ ಮತ್ತು ಸಯಾಲಿ ಸಾತ್‌ಗರೆ.

ವೆಸ್ಟ್ ಇಂಡೀಸ್ ತಂಡದ ವಿರುದ್ಧ ಕಳೆದ ತಿಂಗಳು 2-1ರಿಂದ ಗೆಲ್ಲುವ ಮೂಲಕ ಐದು ವರ್ಷಗಳಲ್ಲೇ ಮೊದಲ ಬಾರಿಗೆ ಭಾರತ ತಂಡ ತವರಿನಲ್ಲಿ ಟಿ20 ಸರಣಿ ವಶಕ್ಕೆ ಪಡೆದ ಹುರುಪಿನಲ್ಲಿದೆ. ನಂತರ ಅದೇ ತಂಡದ ವಿರುದ್ಧ ಏಕದಿನ ಸರಣಿಯನ್ನು 3-0 ಯಿಂದ ಗೆದ್ದುಕೊಂಡಿತ್ತು.

28 ವರ್ಷದ ಮಂದಾನ ಅಮೋಘ ಲಯದಲ್ಲಿದ್ದು, ಟಿ20 ಸರಣಿಯಲ್ಲಿ ಸತತ ಮೂರು ಅರ್ಧ ಶತಕಗಳನ್ನು ಗಳಿಸಿದ್ದರು. ಏಕದಿನ ಸರಣಿಯಲ್ಲೂ ಎರಡು ಅರ್ಧ ಶತಕ ಬಾರಿಸಿ ಗಮನಸೆಳೆದಿದ್ದರು.

ಖೋಖೊ ತಂಡಕ್ಕೆ ಒಡಿಶಾ ಸರಕಾರ ಪ್ರಾಯೋಜಕತ್ವ

ಭುವನೇಶ್ವರ: ಒಡಿಶಾ ಸರಕಾರವು ರಾಷ್ಟ್ರೀಯ ಖೋಖೊ ತಂಡಗಳಿಗೆ ಮೂರು ವರ್ಷಗಳ ಪ್ರಾಯೋಜಕತ್ವವನ್ನು

ಘೋಷಿಸಿದೆ. ದೇಶದಲ್ಲಿ ಸ್ಥಳೀಯ ಕ್ರೀಡೆಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ.

2025ರ ಜನವರಿ ಯಿಂದ 2027ರ ಡಿಸೆಂಬರ್‌ರವರೆಗೆ ಸರಕಾರವು ವಾರ್ಷಿಕ ತಲಾ ₹5 ಕೋಟಿಯನ್ನು ಪ್ರಾಯೋಜಕತ್ವಕ್ಕಾಗಿ ವಿನಿಯೋಗಿಸಲಿದೆ ಎಂದು ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ತಿಳಿಸಿದ್ದಾರೆ.

ನಮ್ಮ ಸರಕಾರವು ಭಾರತೀಯ ಹಾಕಿ ತಂಡಗಳನ್ನು ಪ್ರೋತ್ಸಾಹಿಸಿದಂತೆ ಖೋಖೊ ಕ್ರೀಡೆಯ ಪುನರುಜ್ಜೀವನಕ್ಕೆ ಕೈಜೋಡಿಸುತ್ತದೆ. ಸ್ಥಳೀಯ ಕ್ರೀಡೆಗಳನ್ನು ಬೆಂಬಲಿಸುವ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವ ಜೊತೆಗೆ ನಮ್ಮ ಕ್ರೀಡಾಪಟುಗಳಿಗೆ ಹೊಸ ಅವಕಾಶ ಸೃಷ್ಟಿಸುತ್ತಿದ್ದೇವೆ ಎಂದು ಮಾಝಿ ಹೇಳಿದ್ದಾರೆ.

ಒಡಿಶಾ ಸರಕಾರದ ಪ್ರಾಯೋಜಕತ್ವವನ್ನು ಭಾರತ ಕೊಕ್ಕೊ ಫೆಡರೇಷನ್ನ ಅಧ್ಯಕ್ಷ ಸುಧಾಂಶು ಮಿತ್ತಲ್ ಸ್ವಾಗತಿಸಿದ್ದಾರೆ. ಇದು ತಂಡದ ಅಭಿವೃದ್ಧಿ, ತರಬೇತಿ, ಮೂಲಸೌಕರ್ಯ ಮತ್ತು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸುವುದನ್ನು ಸುಲಭಗೊಳಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಚೊಚ್ಚಲ ಖೋಖೊ ವಿಶ್ವಕಪ್ ಭಾರತದ ಆತಿಥ್ಯದಲ್ಲಿ ಇದೇ 13ರಿಂದ 19ರವರೆಗೆ ದೆಹಲಿಯಲ್ಲಿ ನಡೆಯಲಿದ್ದು, ಈ ನಿಟ್ಟಿನಲ್ಲಿ ಸಿದ್ಧತೆಗಳು ಭರದಿಂದ ಸಾಗಿದೆ.

ಫೆ.19ರಿಂದ ಶುರುವಾಗಲಿರುವ ಸರಣಿ | ಬುಮ್ರಾ ಉಪನಾಯಕವಾಗುವ ಸಾಧ್ಯತೆ

ಟಿ20ಐ ಸರಣಿ: ಜ.12ಕ್ಕೆ ತಂಡ ಪ್ರಕಟ

ದೆಹಲಿ: ಆಸ್ಟ್ರೇಲಿಯಾ ಎದುರು ಐದು ಪಂದ್ಯಗಳ ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯನ್ನು 1-3 ಅಂತರದಲ್ಲಿ ಸೋತಿರುವ ಭಾರತ ತಂಡ, ಇನ್ನು ಮುಂದೆ 50 ಓವರ್‌ಗಳ ಸ್ವರೂಪದ ಕ್ರಿಕೆಟ್ ಕಡೆಗೆ ಗಮನ ಹರಿಸಲಿದೆ. ಫೆಬ್ರವರಿ 19 ರಂದು ಪಾಕಿಸ್ತಾನದ ಆತಿಥ್ಯದಲ್ಲಿ ಆರಂಭವಾಗುವ 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಟೀಮ್ ಇಂಡಿಯಾ ಸಿದ್ಧವಾಗಲಿದೆ. ಈ ಹಿನ್ನೆಲೆಯಲ್ಲಿ ಜನವರಿ 12 ರಂದು ಅಜಿತ್ ಅಗರ್ಕರ್ ಸಾರಥ್ಯದ ಬಿಸಿಸಿಐ ಆಯ್ಕೆ ಸಮಿತಿಯು ಭಾರತ ತಂಡವನ್ನು ಪ್ರಕಟಿಸಲಿದೆ ಎಂದು ವರದಿಯಾಗಿದೆ.

ಐಸಿಸಿ ಚಾಂಪಿಯನ್ಸ್ ಟ್ರೋಫಿಗೂ ಮುನ್ನ ಟೀಮ್ ಇಂಡಿಯಾ, ಇಂಗ್ಲೆಂಡ್ ಎದುರು ಟಿ20ಐ ಹಾಗೂ ಏಕದಿನ ಸರಣಿಗಳನ್ನು ಆಡಲಿದೆ. ಜನವರಿ 22 ರಂದು ಇಂಗ್ಲೆಂಡ್ ವಿರುದ್ಧದ ವೈಟ್‌ಬಾಲ್ ಸರಣಿ ಆರಂಭವಾಗಲಿದೆ. 5 ಪಂದ್ಯಗಳ ಟಿ20ಐ ಸರಣಿ ಮತ್ತು ಮೂರು ಪಂದ್ಯಗಳ ಏಕದಿನ ಸರಣಿಯನ್ನು ಭಾರತ ಹಾಗೂ ಇಂಗ್ಲೆಂಡ್ ತಂಡಗಳು ಆಡಲಿವೆ.

ಜನವರಿ 12ಕ್ಕೆ ಭಾರತ ತಂಡ ಪ್ರಕಟ: ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ 15 ಸದಸ್ಯರ ತಾತ್ಕಾಲಿಕ ತಂಡವನ್ನು ಪ್ರಕಟಿಸಲು ಎಲ್ಲ ತಂಡಗಳಿಗೂ ಜನವರಿ 12 ಕೊನೆಯ ದಿನಾಂಕವಾಗಿದೆ. ಈ ಹಿನ್ನೆಲೆಯಲ್ಲಿ ಬಿಸಿಸಿಐ ಆಯ್ಕೆ ಸಮಿತಿಯು 12ಕ್ಕೆ ತಂಡವನ್ನು ಪ್ರಕಟಿಸಲಿದೆ. ಆದರೆ, ಫೆಬ್ರವರಿ 13ರವರೆಗೂ ತನ್ನ ತಂಡದಲ್ಲಿನ ಆಟಗಾರರ ಬದಲಾವಣೆಗೆ ಅವಕಾಶವನ್ನು ನೀಡಲಾಗಿದೆ.

ಜಸ್ಪ್ರೀತ್ ಬುಮ್ರಾ ಉಪನಾಯಕ: ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಭಾರತ ತಂಡಕ್ಕೆ ಉಪನಾಯಕನನ್ನಾಗಿ ಜಸ್ಪ್ರೀತ್ ಬುಮ್ರಾ ಅವರನ್ನು ಆಯ್ಕೆ ಮಾಡಲಾಗುತ್ತದೆ ಎಂದು ವರದಿಯಾಗಿದೆ. ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಕೊನೆಯ ಪಂದ್ಯದಲ್ಲಿ ಗಾಯಕ್ಕೆ ತುತ್ತಾಗಿದ್ದ ಜಸ್ಪ್ರೀತ್ ಬುಮ್ರಾ ಅವರು ಸದ್ಯ ಚೇತರಿಸಿಕೊಳ್ಳುವ ಹಾದಿಯಲ್ಲಿದ್ದಾರೆ. ಬಿಸಿಸಿಐ ಸೆಲೆಕ್ಟರ್‌ಗಳು ಹಾರ್ದಿಕ್ ಪಾಂಡ್ಯ ಹಾಗೂ ಕೆಎಲ್ ರಾಹುಲ್ ಅವರ ಬದಲು ಬುಮ್ರಾಗೆ ಉಪ ನಾಯಕನ ಸ್ಥಾನ ನೀಡುವ ಇಂಗಿತವನ್ನು ಹೊಂದಿದ್ದಾರೆ. 2023ರ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡಕ್ಕೆ ಹಾರ್ದಿಕ್ ಪಾಂಡ್ಯ ಉಪ ನಾಯಕರಾಗಿದ್ದರು.

ಬೆನ್ನುನೋವು: ಬುಮ್ರಾಗೆ ವಿಶ್ರಾಂತಿ

ಸಿಡ್ನಿ: ಬೆನ್ನುನೋವಿಗೆ ಒಳಗಾಗಿರುವ ವೇಗದ ಬೌಲರ್ ಜಸ್ಪ್ರೀತ್ ಬುಮ್ರಾ ಅವರಿಗೆ ಇಂಗ್ಲೆಂಡ್ ವಿರುದ್ಧ ಇದೇ ತಿಂಗಳ 22 ರಿಂದ ನಡೆಯುವ ಸೀಮಿತ ಓವರುಗಳ ಕ್ರಿಕೆಟ್ ಸರಣಿಯ ಬಹುತೇಕ ಪಂದ್ಯಗಳಿಗೆ ವಿಶ್ರಾಂತಿ ನೀಡುವ ನಿರೀಕ್ಷೆಯಿದೆ. ಫೆ. 19ರಂದು ಆರಂಭವಾಗುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರಕ್ಕೆ ಬರುವ ಸಾಧ್ಯತೆಯಿದೆ.

ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್ ಕ್ರಿಕೆಟ್ ಮಂಡಳಿಗಳ ಜತೆ ಚರ್ಚೆಗೆ ಸಿದ್ಧತೆ

ಟು ಟಯರ್ ಟೆಸ್ಟ್ ಸರಣಿಗೆ ಯೋಚನೆ

ದೆಹಲಿ: ಟು ಟಯರ್ ಟೆಸ್ಟ್ ಸರಣಿಗಳನ್ನು ಆಯೋಜಿಸಲು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯು(ಐಸಿಸಿ) ಭಾರತ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ದೇಶಗಳ ಕ್ರಿಕೆಟ್ ಮಂಡಳಿಗಳ ಜೊತೆ ಚರ್ಚೆ ನಡೆಸಲು ಉದ್ದೇಶಿಸಿದೆ.

ಈ ಬಿಗ್-3 ದೇಶಗಳ ನಡುವೆ ಮತ್ತಷ್ಟು ಟೆಸ್ಟ್ ಸರಣಿಗಳನ್ನು ಆಯೋಜಿಸುವುದು ಈ ಟು ಟಯರ್ ಮಾದರಿಯ ಉದ್ದೇಶವಾಗಿದೆ.

ಐಸಿಸಿಯ ನೂತನ ಅಧ್ಯಕ್ಷ ಜಯ್ ಶಾ ಅವರು ಕ್ರಿಕೆಟ್ ಆಸ್ಟ್ರೇಲಿಯಾದ ಅಧ್ಯಕ್ಷ ಮೈಕ್ ಬೈರ್ಡ್, ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ಅಧ್ಯಕ್ಷ ರಿಚರ್ಡ್ ಥಾಮ್ಸನ್ ಜೊತೆ ಸರಣಿ ಆಯೋಜಿಸುವ ಸಾಧಕ-ಬಾಧಕಗಳ ಕುರಿತಂತೆ ಈ ತಿಂಗಳಲ್ಲಿ ಮಾತುಕತೆ ನಡೆಸಲಿದ್ದಾರೆ ಎಂದು ದಿ ಏಜ್ ವರದಿ ಮಾಡಿದೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ಟು ಟಯರ್ ಸರಣಿ ಸೇರಿದಂತೆ ಯಾವುದೇ ಯೋಜನೆಯು 2027ರವರೆಗೆ ನಿಗದಿಯಾಗಿರುವ ಸರಣಿಗಳ ಬಳಿಕವೇ ಆಗಲಿದೆ ಎಂದು ಏಜ್ ತನ್ನ ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಿದೆ.

ಸದ್ಯ, ಜನವರಿ 12ರಂದು ಮುಂಬೈನಲ್ಲಿ ನಡೆಯಲಿರುವ ವಿಶೇಷ ಸಾಮಾನ್ಯ ಸಭೆಗೆ (ಎಸ್ಜಿಎಂ) ಬಿಸಿಸಿಐ ಸಜ್ಜಾಗುತ್ತಿದೆ. ಅಲ್ಲಿ ಹಂಗಾಮಿ ಕಾರ್ಯದರ್ಶಿ ದೇವಜಿತ್ ಸೈಕಿಯಾ ಪೂರ್ಣಾವಧಿಯ ಕಾರ್ಯದರ್ಶಿಯಾಗಿ ಆಯ್ಕೆಯಾಗುವ ನಿರೀಕ್ಷೆಯಿದೆ. ಐಸಿಸಿ ಅಧ್ಯಕ್ಷರಾಗಿ ಶಾ ಅಧಿಕಾರ ವಹಿಸಿಕೊಂಡ ಬಳಿಕ ಬಿಸಿಸಿಐ ಹಂಗಾಮಿ ಕಾರ್ಯದರ್ಶಿಯಾಗಿ ದೇವಜಿತ್ ಅವರನ್ನು ನೇಮಕ ಮಾಡಲಾಗಿತ್ತು. 2016ರಲ್ಲಿ ಮೊದಲ ಬಾರಿಗೆ ಟು ಟಯರ್ ಟೆಸ್ಟ್ ಸರಣಿ ಕುರಿತಂತೆ ಐಸಿಸಿ ಅಂಗಳದಲ್ಲಿ ಚರ್ಚೆ ನಡೆದಿತ್ತು ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈಗ ಅಂತಹ ಯಾವುದೇ ಸರಣಿ ಕುರಿತ ಚರ್ಚೆ ಬಗ್ಗೆ ನಮಗೆ ಇನ್ನೂ ಯಾವುದೇ ಮಾಹಿತಿ ಸಿಕ್ಕಿಲ್ಲ. ಪ್ರಸ್ತುತ, ಎಸ್‌ಜಿಎಂಗಾಗಿ ಸಿದ್ಧತೆಗಳನ್ನು ಮಾಡಲಾಗುತ್ತಿದೆ ಎಂದೂ ಅವರು ತಿಳಿಸಿದ್ದಾರೆ.

ಆದಾಯ ತಗ್ಗುವ ಆತಂಕದ ಹಿನ್ನೆಲೆಯಲ್ಲಿ ಈ ಮಾದರಿಯ ಸರಣಿಗೆ ಬಿಸಿಸಿಐ, ಜಿಂಬಾಬ್ವೆ, ಬಾಂಗ್ಲಾದೇಶದ ಕ್ರಿಕೆಟ್ ಮಂಡಳಿಗಳು ವಿರೋಧಿಸಿದ್ದವು. ಅಗ್ರ ತಂಡಗಳ ಜೊತೆ ಆಡುವ ಅವಕಾಶವನ್ನು ಸಣ್ಣ ರಾಷ್ಟ್ರಗಳ ತಂಡಗಳು ಕಳೆದುಕೊಳ್ಳಲಿವೆ ಎಂದೂ ಆಪಾದಿಸಿದ್ದವು.

ರಾಮರಸ ಸವಿದ ಹೆಬ್ಬಾ

ಕುಮಾರಿ 21 ಖ್ಯಾತಿಯ ಹೆಬ್ಬಾ ಪಟೇಲ್ ಈಗ ರಾಮರಸ ಚಿತ್ರತಂಡ ಸೇರಿದ್ದು ಅದ್ದೂರಿಯಾಗಿ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಚಂದನವನದಿಂದ ನಟನೆ ಆರಂಭಿಸಿದ ಹೆಬ್ಬಾ, ಅಧ್ಯಕ್ಷ ಚಿತ್ರದಲ್ಲಿ ನಾಯಕಿಯಾಗಿ ಗಮನಸೆಳೆದರು. ನಂತರ ತೆಲುಗಿನಲ್ಲಿ ಕುಮಾರಿ 21 ಚಿತ್ರದ ಮೂಲಕವೂ ಖ್ಯಾತಿ ಪಡೆದರು. ಈಗ ಗುರು ದೇಶಪಾಂಡೆ ನಿರ್ಮಾಣದ ರಾಮರಸ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಚಿತ್ರಿಕರಣ ಮುಗಿಸಿರುವ ರಾಮರಸ ಚಿತ್ರತಂಡ ಸದ್ಯ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿದೆ. ಹೆಬ್ಬಾ ಹುಟ್ಟುಹಬ್ಬದ ಪ್ರಯುಕ್ತ ಚಿತ್ರದ ಪೋಸ್ಟರ್ ರಿಲೀಸ್ ಮಾಡಿರುವ ಚಿತ್ರತಂಡ ಆ ಮೂಲಕ ಹೆಬ್ಬಾಗೆ ಶುಭಕೋರಿದೆ. ಜಿ.ಸಿನಿಮಾಸ್ ಹಾಗೂ ಸೆವೆನ್ ಸ್ಟಾರ್ ಸ್ಟುಡಿಯೊಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣವಾಗುತ್ತಿದ್ದು, ಬಿ.ಎಂ. ಗಿರಿರಾಜ್ ಕಥೆ, ಚಿತ್ರಕಥೆ ಬರೆದು ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ರಾಮರಸದಲ್ಲಿ ಥ್ರಿಲ್ಲರ್, ಹಾರರ್ ಕಥೆಯೂ ಬೆರೆತಿದೆ. ಬಿಗ್‌ಬಾಸ್ ಖ್ಯಾತಿಯ ಕಾರ್ತಿಕ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಹೊಸ ಚಿತ್ರದಲ್ಲಿ ವಿನಯ್

ದೊಡ್ಮನೆ ಮೊಮ್ಮಗ ವಿನಯ್ ರಾಜ್‌ಕುಮಾರ್ ಭಿನ್ನ ವಿಭಿನ್ನ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ತಮ್ಮ ಹಿಂದಿನ ಚಿತ್ರಗಳಲ್ಲಿ ಲವ್ವರ್ ಬಾಯ್ ಆಗಿ ಕಂಗೊಳಿಸಿದ ವಿನಯ್, ರಾ ಸ್ಟೈಲ್‌ನಲ್ಲಿ ಬಂದ ಪೆಪೆಯಲ್ಲಿ ರಗಡ್ ಆಗಿ ಕಾಣಿಸಿಕೊಂಡು ಎಲ್ಲರ ಹುಬ್ಬೇರಿಸಿದರು. ಈಗ ಗ್ರಾಮಾಯಣ ಚಿತ್ರದ ಮೂಲಕ ಹಳ್ಳಿ ಹೈದನಾಗಿ ತೆರೆಯಲ್ಲಿ ಮಿಂಚಲು ಸಿದ್ಧವಾಗುತ್ತಿದ್ದಾರೆ. ಗ್ರಾಮೀಣ ಸೊಗಡಿನ ಚಿತ್ರ ಇದಾಗಿದ್ದು, ದೇವನೂರು ಚಂದ್ರು ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಈಗಾಗಲೇ ಬಹುತೇಕ ಚಿತ್ರೀಕರಣ ಮುಗಿಸಿರುವ ಗ್ರಾಮಾಯಣ ಈ ವರ್ಷವೇ ತೆರೆಗೆ ಬರಲಿದೆ. ಆ ಬಳಿಕ ವಿನಯ್ ರಾಜ್‌ಕುಮಾರ್, ದುನಿಯಾ ವಿಜಯ್ ನಿರ್ದೇಶನದ ಸಿಟಿಲೈಟ್ಸ್ ಚಿತ್ರದಲ್ಲಿ ನಟಿಸಲಿದ್ದಾರೆ. ಈ ಚಿತ್ರದಲ್ಲಿ ವಿಜಯ್ ಪುತ್ರಿ, ಮೋನೀಷಾ ನಾಯಕಿ ನಟಿಸುತ್ತಿದ್ದು, ಆ ಮೂಲಕ ಚಂದನವನಕ್ಕೆ ಪರಿಚಯವಾಗಲಿದ್ದಾರೆ. ಈ ಚಿತ್ರದ ಬಳಿಕ ವಿನಯ್ ರಾಜ್‌ಕುಮಾರ್, ಮತ್ತೊಂದು ಚಿತ್ರದಲ್ಲಿ ನಟಿಸಲು ಸಮ್ಮತಿಸಿದ್ದಾರೆ. ಬಿಎಸ್‌ಪಿ ವರ್ಮಾ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿರುವ ಚಿತ್ರ ಇದಾಗಿದ್ದು, ವಿನಯ್ ಹಿಂದೆಂದೂ ಕಾಣದ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಆ್ಯಕ್ಷನ್,

ಸೆಂಟಿಮೆಂಟ್, ಲವ್ ಹೀಗೆ ಎಲ್ಲಾ ಅಂಶಗಳು ಚಿತ್ರದಲ್ಲಿ ಬೆರೆತಿದ್ದು, ಇದು ವಿನಯ್ ನಟನಾ ಜೀವನದಲ್ಲಿಯೇ ಅದ್ಭುತ ಸಿನಿಮಾವಾಗಿ ಮೂಡಿಬರಲಿದೆ ಎಂದು ಹೇಳಲಾಗುತ್ತಿದೆ. ಇದು ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಲಿದ್ದು, ಪಂಚಭಾಷೆಯಲ್ಲಿಯೂ ರಿಲೀಸ್ ಆಗಲಿದೆ. ಚಿತ್ರಕ್ಕಾಗಿ ಭರ್ಜರಿ ತಯಾರಿಯೂ ನಡೆದಿದ್ದು ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ಚಿತ್ರ ಸೆಟ್ಟೇರುವ ನಿರೀಕ್ಷೆ ಇದೆ.

ಟಾಕ್ಸಿಕ್ ಬಿಗ್ ಅಪ್ಡೇಟ್

ರಾಕಿಂಗ್ ಸ್ಟಾರ್ ಯಶ್ ಅಭಿನಯದ ಟಾಕ್ಸಿಕ್ ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಇದೇ 8ರಂದು ಯಶ್‌ಗೆ ಹುಟ್ಟುಹಬ್ಬದ ಸಂಭ್ರಮ ಹಾಗಾಗಿ ಅಂದು ಚಿತ್ರದ ಬಗ್ಗೆ ಬಿಗ್ ಅಪ್ಡೇಟ್ ಸಿಗಲಿದೆ. ಈ ಕುರಿತಂತೆ ಚಿತ್ರತಂಡ ಹೊಸ ಪೋಸ್ಟರ್ ರಿಲೀಸ್ ಮಾಡಿದೆ. ಈ ಪೋಸ್ಟರ್‌ನಲ್ಲಿ ಹಳೆಯ ಐಷಾರಾಮಿ ಕಾರಿನ ಮುಂದೆ ಹ್ಯಾಟ್ ಧರಿಸಿ ನಿಂತಿರುವ ಯಶ್ ಸಿಗರೇಟ್ ಸೇದುತ್ತಿದ್ದಾರೆ. ಇದನ್ನು ನೋಡಿ ಸಿನಿಪ್ರಿಯರು ಖುಷಿಯಾಗಿದ್ದಾರೆ. ಟಾಕ್ಸಿಕ್ ಡ್ರಗ್ಸ್ ಮಾಫಿಯಾ ಕುರಿತ ಕಥೆಯಾಗಿದ್ದು ಯಶ್ ಅಂಡರ್ ವರ್ಲ್ಡ್ ಡಾನ್ ಆಗಿ ಕಾಣಿಸಿಕೊಂಡಿದ್ದಾರೆ. ಅವರ ಲುಕ್ ಕೂಡ ಅದ್ಭುತವಾಗಿದ್ದು, ಸ್ಟೈಲಿಶ್ ಆಗಿ ಮಿಂಚಿದ್ದಾರೆ. ಇದು ಚಿತ್ರದ ಬಗ್ಗೆ ಕುತೂಹಲ ದುಪ್ಪಟ್ಟುಗೊಳ್ಳುವಂತೆ ಮಾಡಿದೆ. ಮಲೆಯಾಂಳ ಖ್ಯಾತ ನಿರ್ದೇಶಕಿ ಗೀತು ಮೋಹನ್ ದಾಸ್ ನಿರ್ದೇಶನದ ಚಿತ್ರ ಇದಾಗಿದ್ದು, ಪ್ಯಾನ್ ವರ್ಲ್ಡ್ ಸಿನಿಮಾವಾಗಿ ಮೂಡಿಬರಲಿದೆ. ಬಾಲಿವುಡ್ ನಟಿ ಕಿಯಾರಾ ಅಡ್ವಾಣಿ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ಹುಮಾ ಖುರೇಷಿ, ನಯನತಾರಾ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಟಾಕ್ಸಿಕ್ ಚಿತ್ರಕ್ಕಾಗಿ ಬೆಂಗಳೂರಿನಲ್ಲಿ ಅದ್ದೂರಿ ಸೆಟ್ ನಿರ್ಮಿಸಿ ಚಿತ್ರೀಕರಣ ನಡೆಸಲಾಗುತ್ತಿತ್ತು. ಸದ್ಯ ಮುಂಬೈನಲ್ಲಿ ಬೀಡು ಬಿಟ್ಟಿರುವ ಚಿತ್ರತಂಡ ಅಲ್ಲಿಯೂ ಸೆಟ್ ನಿರ್ಮಿಸಿ ಶೂಟಿಂಗ್ ನಡೆಸುತ್ತಿದೆ. ಬಳಿಕ ಗೋವಾ ಹಾಗೂ ಲಂಡನ್‌ನಲ್ಲಿಯೂ ಚಿತ್ರೀಕರಣ ನಡೆಯಲಿದೆ. ಕೆವಿಎನ್ ಪ್ರೊಡಕ್ಷನ್‌ನಲ್ಲಿ ಚಿತ್ರ ನಿರ್ಮಾಣವಾಗುತ್ತಿದ್ದು, 2026ರಲ್ಲಿ ಟಾಕ್ಸಿಕ್ ತೆರೆಗೆ ಬರುವ ನಿರೀಕ್ಷೆ ಇದೆ.

ಗೆಲುವಿನ ನಿರೀಕ್ಷೆಯಲ್ಲಿ ಅಕ್ಷಯ್

ಬಾಲಿವುಡ್ ನಟ ಅಕ್ಷಯ್ ಕುಮಾರ್ ಕಳೆದ ವರ್ಷ ಸಾಲು ಸಾಲು ಸೋಲುಗಳನ್ನು ಕಂಡರು. ಅಕ್ಕಿ ಅಭಿನಯಿಸಿದ ಬಹುತೇಕ ಸಿನಿಮಾಗಳು ಬಾಕ್ಸ್ ಆಫೀಸ್‌ನಲ್ಲಿ ಸೋತವು, ಹಾಗಾಗಿ ಸೋಲಿನ ಬಗ್ಗೆ ಆತ್ಮಾವಲೋಕನ ಮಾಡಿಕೊಂಡಿರುವ ಅಕ್ಷಯ್ ಹೊಸ ವರ್ಷದಲ್ಲಿ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಈ ವರ್ಷದಲ್ಲಿ ಮಿಷನ್ ಸ್ಕೈ ಫೋರ್ಸ್ ಚಿತ್ರದ ಮಿಂಚಲು ಸಿದ್ಧವಾಗಿರುವ ಅಕ್ಕಿ, ಉತ್ತಮ ಆರಂಭ ಮಾಡುವ ಹುಮ್ಮಸ್ಸಿನಲ್ಲಿದ್ದಾರೆ. ವಾಯುಪಡೆಯ ಸಮವಸ್ತ್ರವನ್ನು ಧರಿಸಿದ್ದು ಭಾವುಕ ಅನುಭವ ಆಗಿತ್ತು. ರಿಯಲ್ ಹೀರೋಗಳ ಪಾತ್ರವನ್ನು ನಿರ್ವಹಿಸಿದ್ದು ಖುಷಿಕೊಟ್ಟಿದೆ ಎಂದು ಅಕ್ಷಯ್ ಸಂತಸದಿಂದ ಹಂಚಿಕೊಂಡಿದ್ದಾರೆ. ಇಂಡೋ-ಪಾಕ್ ಯುದ್ಧದ ವೇಳೆ ನಡೆದ ಭಾರತದ ಮೊದಲ ಏರ್ ಸ್ಟ್ರೈಕ್ ಕುರಿತು ಕಥೆ ಸಿನಿಮಾದಲ್ಲಿದ್ದು, ಭರ್ಜರಿ ಆ್ಯಕ್ಷನ್ ದೃಶ್ಯಗಳಿವೆ. ಸಂದೀಪ್ ಕೆವ್ಲಾನಿ ಮತ್ತು ಅಭಿಷೇಕ್ ಅನಿಲ್ ಕಪೂರ್ ಜಂಟಿಯಾಗಿ ಚಿತ್ರ ನಿರ್ದೇಶನ ಮಾಡಿದ್ದಾರೆ. ದಿನೇಶ್ ವಿಜನ್, ಜ್ಯೋತಿ ದೇಶಪಾಂಡೆ, ಅಮರ್ ಕೌಶಿಕ್ ಒಟ್ಟಾಗಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ವೀರ್ ಪಹಾರಿಯ, ಸಾರಾ ಅಲಿ ಖಾನ್, ನಿಮ್ರತ್ ಕೌರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಸ್ಕೈ ಫೋರ್ಸ್ ಜನವರಿ 24ರಂದು ವಿಶ್ವಾದ್ಯಂತ ತೆರೆಗೆ ಬರಲಿದೆ.

ವಿಟಾಕೀಸ್

ಸ್ನೇಹದ ಮಹತ್ವ ಸಾರುವ ಕುಚುಕು

ಸ್ನೇಹದ ಮಹತ್ವ ಸಾರುವ ಮತ್ತೊಂದು ಚಿತ್ರ ಚಂದನವನದಲ್ಲಿ ನಿರ್ಮಾಣವಾಗಿದ್ದು ತೆರೆಗೂ ಸಿದ್ಧವಾಗಿದೆ. ಮೈಸೂರು ರಾಜು ನಿರ್ದೇಶನದ ಕುಚುಕು ಚಿತ್ರವನ್ನು ಶ್ರೀಚಾಮುಂಡೇಶ್ವರಿ ಪಿಕ್ಚರ್ಸ್ ಲಾಂಛನದಲ್ಲಿ ನಾಗರತ್ನಮ್ಮ ನಿರ್ಮಿಸಿದ್ದಾರೆ. ಸದ್ಯ ಈ ಚಿತ್ರದ ಟೀಸರ್ ಹಾಗೂ ಹಾಡು ಬಿಡುಗಡೆಯಾಗಿದೆ. ಕುಚುಕು ಶೀರ್ಷಿಕೆಯೇ ಹೇಳುವಂತೆ ಇದು ಸ್ನೇಹದ ಮಹತ್ವ ಸಾರುವ ಕಥಾಹಂದರವನ್ನು ಒಳಗೊಂಡಿದೆ. ಜತೆಗೆ ಸೆಂಟಿಮೆಂಟ್ ಸನ್ನಿವೇಶಗಳು ಪ್ರೇಕ್ಷಕರ ಮನಸ್ಸಿಗೆ ಹತ್ತಿರವಾಗಲಿದೆ.

ಅದನ್ನು ಇಂದಿನ ಟ್ರೆಂಡ್‌ಗೆ ಹೊಂದುವಂತೆ ತೆರೆಯಲ್ಲಿ ಕಟ್ಟಿಕೊಡಲಾಗಿದೆ. ಮೈಸೂರು ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ. ಫೆಬ್ರವರಿ 14ರಂದು ಚಿತ್ರ ತೆರೆಗೆ ಬರಲಿದೆ ಎಂದು ನಿರ್ದೇಶಕ ಮೈಸೂರು ರಾಜು ತಿಳಿಸಿದರು. ಅರ್ಜುನ್ ಚೋಹಾನ್ ಹಾಗೂ ಬಸವರಾಜ್ ಕುಮಾರ್ ನಾಯಕರಾಗಿ ನಟಿಸಿದ್ದು, ವಿಲನ್ ಶಿವಾಜಿ ಖಳನಾಗಿ ಕಾಣಿಸಿಕೊಂಡಿದ್ದಾರೆ. ಪ್ರಿದರ್ಶಿನಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಸಿನಿಮಾ ಮೇಲೆ ಪ್ರೀತಿಯಿಂದಾಗಿ ನಿರ್ಮಾಪಕಿ ನಾಗರತ್ನಮ್ಮ ಚಿತ್ರ ನಿರ್ಮಾಣ ಮಾಡಿದ್ದು, ಚಿತ್ರದ ಬಗ್ಗೆ ಅಪಾರ ನಿರೀಕ್ಷೆ ಹೊಂದಿದ್ದಾರೆ. ಚಿತ್ರದಲ್ಲಿ ಐದು ಸುಮಧುರ ಹಾಡುಗಳಿದ್ದು, ಎ.ಟಿ.ರವೀಶ್ ಎ.ಟಿ.ರವೀಶ್ ಸಂಗೀತ ಸಂಯೋಜಿಸಿದ್ದಾರೆ.